ಕರ್ನಾಟಕ ಸರ್ಕಾರ

# ಸಾಹಿತ್ಯ ಸಂಚಲನ

## ಪ್ರಥಮ ಪಿ.ಯು.ಸಿ.

## ಕನ್ನಡ ಪಠ್ಯ ಪುಸ್ತಕ

**2021-22**

ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, ಬೆಂಗಳೂರು.
www.pue.kar.nic.in

## ನಿರ್ದೇಶಕರ ಸಂದೇಶ

**"ಮಗು ಮತ್ತು ವ್ಯಕ್ತಿಯ ಶಾರೀರಿಕ ಮಾನಸಿಕ ಹಾಗೂ ಆಧ್ಯಾತ್ಮಿಕ ಅಂಶಗಳಲ್ಲಿರುವ ಅತ್ಯುತ್ತಮವಾದುದನ್ನು ಸರ್ವತೋಮುಖವಾಗಿ ಹೊರತರುವಂತೆ ಮಾಡುವುದೇ ಶಿಕ್ಷಣ"**

**– ಮಹಾತ್ಮ ಗಾಂಧೀಜಿ**

ಕರ್ನಾಟಕ ಪದವಿ ಪೂರ್ವ ಶಿಕ್ಷಣ ಇಲಾಖೆಯು ವಿಚಾರಣಾ ಮನೋಭಾವ ಮತ್ತು ಸೃಜನಶೀಲತೆಯ ಮೂಲಕ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ.

ನಮ್ಮ ಪಠ್ಯ ಕ್ರಮವು ನಿಮ್ಮ ಕಲಿಕೆಯನ್ನು ಉತ್ಕೃಷ್ಟಗೊಳಿಸಿ ಭವಿಷ್ಯದ ಅಧ್ಯಯನಕ್ಕಾಗಿ ನಿಮ್ಮನ್ನು ಸಜ್ಜುಗೊಳಿಸುವಂತೆ ರೂಪಿಸಲಾಗಿದೆ. ನಿಮ್ಮ ಶೈಕ್ಷಣಿಕ ಪ್ರಯಾಣವು ಸುಗಮವಾಗಿರಲಿ ಹಾಗೂ ನೀವುಗಳು ಉದ್ಯಮಶೀಲ ಮತ್ತು ಸಂಪನ್ಮೂಲಭರಿತ ವ್ಯಕ್ತಿಯಾಗುವುದಲ್ಲದೇ ನಮ್ಮ ರಾಷ್ಟ್ರ ಹಾಗೂ ಸಮಾಜದ ಜವಾಬ್ದಾರಿಯುತ ಪ್ರಜೆಯಾಗಲಿ ಎಂದು ಇಲಾಖೆಯು ಹಾರೈಸುತ್ತದೆ.

Snehal

**ಸ್ನೇಹಲ್. ಆರ್.** ಭಾ ಆ ಸೇ
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

# ಪಠ್ಯ ಪುಸ್ತಕ ರಚನಾ ಸಮಿತಿ

: ಅಧ್ಯಕ್ಷರು :

**ಡಾ. ಎಂ. ಎಲ್. ಶಂಕರಲಿಂಗಪ್ಪ**
ಪ್ರಾಂಶುಪಾಲರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಹೆಸರಘಟ್ಟ, ಬೆಂಗಳೂರು – ೫೬೦ ೦೮೯

**: ಸಂಚಾಲಕರು :**

**ಆರ್. ಆನಂದ ಪ್ರಕಾಶ್**
ಉಪನ್ಯಾಸಕರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಚಿಕ್ಕಬಳ್ಳಾಪುರ–೫೬೨೧೦೧

**ಎಲ್. ಎನ್. ಮುಕುಂದರಾಜ್**
ಉಪನ್ಯಾಸಕರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಅತ್ತಿಗುಪ್ಪೆ, ಬೆಂಗಳೂರು.

**: ಸದಸ್ಯರು :**

**ಎನ್. ನಾಗಪ್ಪ**
ಪ್ರಾಂಶುಪಾಲರು,
ಸರ್ಕಾರಿ ಪ.ಪೂ. ಕಾಲೇಜು,
ಚಿಕ್ಕನಹಳ್ಳಿ, ತುಮಕೂರು ಜಿಲ್ಲೆ.

**ಎಂ.ಎಸ್. ಉಪ್ಪಿನ್**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಹುಮನಾಬಾದ್, ಬೀದರ್ ಜಿಲ್ಲೆ.

**ಜಿ. ರಾಮಚಂದ್ರ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ದೊಡ್ಡಬಳ್ಳಾಪುರ, ಬೆಂ.ಗ್ರಾ. ಜಿಲ್ಲೆ.

**ಎ. ಶ್ರೀಪ್ರಕಾಶ್**
ಉಪನ್ಯಾಸಕರು,
ಅರುಣ ಪ.ಪೂ. ಕಾಲೇಜು,
ಚೇರಂಬಾಣೆ, ಕೊಡಗು ಜಿಲ್ಲೆ.

**ಎಲ್. ಮಹಾಲಿಂಗಪ್ಪ**
ಉಪನ್ಯಾಸಕರು,
ಎಸ್.ಕೆ.ವಿ.ಎಸ್. ಮಹಿಳಾ ಪ.ಪೂ.ಕಾಲೇಜು
ತಿಪಟೂರು, ತುಮಕೂರು ಜಿಲ್ಲೆ.

**ಡಾ. ಪಿ. ಎಂ. ಹುಗ್ಗಿ**
ಉಪನ್ಯಾಸಕರು,
ಸರ್ಕಾರಿ ಪ.ಪೂ.ಕಾಲೇಜು,
ಮುಧೋಳ, ಬಾಗಲಕೋಟೆ ಜಿಲ್ಲೆ.

**ಬಿ. ಮಹೇಶ್ ಹರವೆ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ವೆಂಕಟಯ್ಯನ ಛತ್ರ, ಚಾಮರಾಜನಗರ ಜಿಲ್ಲೆ.

**ಎಸ್. ಸುಮ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಉಡುಪಿ.

**ಕಲೀಮ್ ಉಲ್ಲಾ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬಿ. ಹೆಚ್. ರಸ್ತೆ, ಶಿವಮೊಗ್ಗ.

**ಡಾ. ವಾಸುದೇವ ಬೆಳ್ಳೆ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೊಕ್ಕಪಟ್ಟಣ,ಮಂಗಳೂರು, ದ.ಕ.ಜಿಲ್ಲೆ

**ಕೆಂಪೇಗೌಡ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಪೀಣ್ಯ, ಬೆಂಗಳೂರು.

**ಚಂದ್ರಶೇಖರ**
ಉಪನ್ಯಾಸಕರು,
ವಿಜಯ ಪ.ಪೂ. ಕಾಲೇಜು,
ಜಯನಗರ, ಬೆಂಗಳೂರು.

**ಡಾ. ಕೆ. ಸತ್ಯಪ್ರೇಮ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ರಥಬೀದಿ, ಮಂಗಳೂರು, ದ.ಕ. ಜಿಲ್ಲೆ.

**ಹೊ. ನ. ನೀಲಕಂಠೇಗೌಡ**
ಉಪನ್ಯಾಸಕರು,
ಸರ್ಕಾರಿ ಬಾಲಕಿಯರ ಪ.ಪೂ.
ಕಾಲೇಜು,
ಬಸವನಗುಡಿ, ಬೆಂಗಳೂರು.

**ಎನ್. ಮುನಿರಾಜು**
ಉಪನ್ಯಾಸಕರು,
ಸರ್ಕಾರಿ ಪ.ಪೂ ಕಾಲೇಜು, ಹೆರಸನಹಳ್ಳಿ,
ಕೆ.ಜಿ.ಕೊಪ್ಪಲು, ಮೈಸೂರು ಜಿಲ್ಲೆ

**ರೇಣುಕ ಎನ್. ಬಸರಿಕಟ್ಟಿ**
ಉಪನ್ಯಾಸಕರು,
ಎಸ್.ಆರ್.ವಿ.ಪಿ ಸ.ಪ.ಪೂ. ಕಾಲೇಜು,
ಕಮಡೊಳ್ಳಿ, ಕುಂದಗೋಳ, ಧಾರವಾಡ

**ಡಾ. ಸಿ. ವೆಂಕಟಪ್ಪ**
ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬಳ್ಳೇನಹಳ್ಳಿ, ಕೆ.ಆರ್. ಪೇಟೆ ತಾ॥
ಮಂಡ್ಯ ಜಿಲ್ಲೆ.

## ಪರಿಶೀಲನಾ ಸಮಿತಿ

**ಎಚ್.ಡಿ. ಲಿಂಗರಾಜು**
ಜಿಲ್ಲಾ ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ರಾಮನಗರ, ರಾಮನಗರ ಜಿಲ್ಲೆ,

**ಡಾ. ಸೋ.ಮು. ಭಾಸ್ಕರಾಚಾರ್**
ನಿವೃತ್ತ ಹಿರಿಯ ಉಪನ್ಯಾಸಕರು,
ತುಮಕೂರು.

**ಡಾ. ಶಿವರಾಜ ಕುಲಕರ್ಣಿ**
ಪ್ರಾಂಶುಪಾಲರು,
ಸರ್ಕಾರಿ ಪದವಿ ಪೂರ್ವ ಕಾಲೇಜು,
ಚಿಂಚೋಳಿ, ಗುಲ್ಬರ್ಗಾ ಜಿಲ್ಲೆ

# ಪ್ರಸ್ತಾವನೆ

ಕರ್ನಾಟಕವು ಜಗತ್ತಿನ ಗಮನ ಸೆಳೆದಿರುವ ರಾಜ್ಯ. ಬದಲಾಗುತ್ತಿರುವ ಕಾಲಮಾನದಲ್ಲಿ ಕನ್ನಡವು ಅನ್ಯ ಭಾಷೆಗಳ ಸಂಪರ್ಕಕ್ಕೆ ಬಂದು ಶ್ರೀಮಂತಗೊಳ್ಳುತ್ತಿದೆ. ವಿಜ್ಞಾನ – ತಂತ್ರಜ್ಞಾನ ವಲಯದ ಜೊತೆಗೆ ಇತರೆ ಮೌಲ್ಯಗಳೊಂದಿಗೆ ಬೆಳೆಯುವುದು ತೀರಾ ಅವಶ್ಯವೆನಿಸಿದೆ.

ಮಾತೃಭಾಷೆಯ ಬಳಕೆಯಲ್ಲಿ ಹಿಂಜರಿಕೆ ಪ್ರವೃತ್ತಿ ಕಾಣುತ್ತಿದೆ. ಆದರೆ, ಕನ್ನಡ ಭಾಷೆಯನ್ನು ವಿದ್ಯಾರ್ಥಿಸ್ನೇಹಿಯಾಗಿ ಮಾಡುವ ನಿಟ್ಟಿನಲ್ಲಿ ಪಠ್ಯ ಪುಸ್ತಕಗಳು ರೂಪುಗೊಳ್ಳಬೇಕಿದೆ. ಭಾಷೆಯನ್ನು ಅಭ್ಯಸಿಸುವ ಜೊತೆಗೆ ವೈಚಾರಿಕವಾಗಿ ಚಿಂತನೆ ಮಾಡುವ, ವೈಜ್ಞಾನಿಕವಾಗಿ ಆಲೋಚಿಸುವ ಮತ್ತು ಸಮಾಜವನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ರೂಢಿಸಿಕೊಳ್ಳುವಂತಾಗಬೇಕು.

ವಿದ್ಯಾರ್ಥಿಗಳ ವ್ಯಕ್ತಿತ್ವವರ್ಧನೆಯಲ್ಲಿ ಪ್ರಮುಖ ಹಂತವಾಗಿರುವ ಪದವಿ ಪೂರ್ವ ಶಿಕ್ಷಣ ಪ್ರಮುಖ ಘಟಕವಾಗಿದೆ. ಹದಿಹರೆಯದ ವಯಸ್ಸು ಮತ್ತು ಮನಸ್ಸುಗಳನ್ನು ಸೆಳೆಯುವ ಶಿಕ್ಷಣದೊಂದಿಗೆ, ದೇಶಪ್ರೇಮ ಹಾಗೂ ವಾಸ್ತವಿಕ ಜಗತ್ತಿನ ಕಡೆ ಗಮನ ಸೆಳೆದು ಜಾಗತಿಕ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಛಾತಿ ಬೆಳೆಸಬೇಕು.

ಕನ್ನಡ ಸಾಹಿತ್ಯದ ಹರವು ತುಂಬಾ ವೈವಿಧ್ಯವಾಗಿದೆ. ಚಿಂತನೆಗಳು ಹಲವು ಮಜಲುಗಳನ್ನು ಪಡೆಯುತ್ತಿವೆ. ಮಾಧ್ಯಮಗಳು ಕ್ಷಣ ಮಾತ್ರದಲ್ಲಿ ತಲುಪಿಸುವ ಸುದ್ದಿ ಮತ್ತು ಅವುಗಳ ಬೆಳವಣಿಗೆಗಳು ಇಂದಿನ ಜನಾಂಗದ ಮೇಲೆ ಪರಿಣಾಮ ಬೀರುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರೌಢಶಿಕ್ಷಣ ದಾಟಿ ಬಂದಿರುವ ವಿದ್ಯಾರ್ಥಿಗಳಿಗೆ ಪಠ್ಯದ ಆಯ್ಕೆ ತುಸು ಕಷ್ಟದ ಕೆಲಸವೇ. ಇದಕ್ಕಾಗಿ ಸರ್ಕಾರ ಮತ್ತು ಪದವಿ ಪೂರ್ವಶಿಕ್ಷಣ ಇಲಾಖೆಯು ಪಠ್ಯ ಪುಸ್ತಕ ರಚನೆಯ ಕೆಲಸದ ಜವಾಬ್ದಾರಿಯನ್ನು ಮೊತ್ತ ಮೊದಲ ಬಾರಿಗೆ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಉಪನ್ಯಾಸಕರಿಗೆ ವಹಿಸಿರುವುದು ಸಂತಸದ ವಿಚಾರ. ಹೀಗಾಗಿ, ಪ್ರಥಮ ಪದವಿ ಪೂರ್ವ ತರಗತಿಯ ಕನ್ನಡ ಪಠ್ಯ ಪುಸ್ತಕ ರಚನೆಗಾಗಿ ತುಂಬಾ

ಎಚ್ಚರದಿಂದ ಪಠ್ಯಗಳನ್ನು ಆರಿಸಿದ್ದರೂ ಪೂರ್ಣವಾದ ಸಂತೃಪ್ತಿ ನಮಗಿಲ್ಲ. ಶ್ರೀಮಂತವಾಗಿರುವ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರ, ರಾಜ್ಯದ ಎಲ್ಲಾ ಪ್ರದೇಶಗಳಿಗೆ ಪ್ರಾತಿನಿಧ್ಯ ನೀಡಲು ಶಕ್ತಿ ಮೀರಿ ಪ್ರಯತ್ನಿಸಿದ್ದೇವೆ.

ಭಾಷಾಭ್ಯಾಸ ಹಾಗೂ ರಚನೆಗಳನ್ನು ಒಳಗೊಂಡ ಅಭ್ಯಾಸ ಪುಸ್ತಕವನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಅದರಲ್ಲಿ ಮಾದರಿ ಪ್ರಶ್ನೆಪತ್ರಿಕೆ ಹಾಗೂ ನೀಲನಕ್ಷೆಯನ್ನು ಕೊಡಲಾಗಿದೆ. ಅದನ್ನು ಉಪನ್ಯಾಸಕರು ವಿದ್ಯಾರ್ಥಿಗಳಿಂದ ಬರೆಸಿ ಅಭ್ಯಾಸ ಮಾಡಿಸಬೇಕೆಂದು ವಿನಂತಿಸಲಾಗಿದೆ.

ಈ ಪಠ್ಯ ಪುಸ್ತಕ ರಚನೆಯಲ್ಲಿ ಸಹಕರಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಹಾಗೂ ಪಠ್ಯ ಪುಸ್ತಕವನ್ನು ರೂಪಿಸುವ ಸಂದರ್ಭದಲ್ಲಿ ಶ್ರಮವಹಿಸಿದ ಆನಂದಪ್ರಕಾಶ್, ಮುಖಪುಟ ವಿನ್ಯಾಸಕ್ಕೆ ನೆರವು ನೀಡಿದ ಎಲ್.ಎನ್. ಮುಕುಂದರಾಜ್ ಹಾಗು ಪಠ್ಯಪುಸ್ತಕ ಸಮಿತಿಯ ಎಲ್ಲಾ ಸದಸ್ಯರಿಗೆ ಕೃತಜ್ಞತೆಗಳು.

ಪಠ್ಯದ ಅಕ್ಷರಗಳನ್ನು ತಪ್ಪಿಲ್ಲದಂತೆ ಸುಂದರವಾಗಿ ಜೋಡಿಸಿಕೊಟ್ಟ ಶ್ರೀ ಬಿ.ಎ. ಭಾಸ್ಕರ್, ಶ್ರೀ ವೆಂಕಟಾದ್ರಿ ಡಿಜಿಟಲ್ಸ್, ಚಿಕ್ಕಬಳ್ಳಾಪುರ ಮತ್ತು ಪುಟಗಳ ವಿನ್ಯಾಸವನ್ನು ಕಡಿಮೆ ಕಾಲಾವಧಿಯಲ್ಲಿ ಅಚ್ಚುಕಟ್ಟಾಗಿ ಜೋಡಿಸಿಕೊಟ್ಟಿರುವ ಇವರಿಗೂ ಪಠ್ಯ ಪುಸ್ತಕ ರಚನಾ ಸಮಿತಿಯ ವಂದನೆಗಳು.

**ಡಾ. ಎಂ.ಎಲ್.ಶಂಕರಲಿಂಗಪ್ಪ**
ಅಧ್ಯಕ್ಷರು
ಪಠ್ಯ ಪುಸ್ತಕ ಸಮಿತಿ ಪರವಾಗಿ

# ಪರಿವಿಡಿ

## ಕಾವ್ಯಭಾಗ


| | | |
|---|---|---|
| ೧. ದುರ್ಯೋಧನ ವಿಲಾಪ | ರನ್ನ | ೧–೮ |
| ೨. ವಚನಗಳು: | | ೯–೧೭ |
| ಅ) ಅಲ್ಲಮಪ್ರಭು | | |
| ಆ) ಘಟ್ಟಿವಾಳಯ್ಯ | | |
| ಇ) ಅಕ್ಕಮಹಾದೇವಿ | | |
| ೩. ದೇವನೊಲಿದನ ಕುಲವೇ ಸತ್ಕುಲಂ | ಹರಿಹರ | ೧೮–೨೬ |
| ೪. ಹಲುಬಿದಳ್ ಕಲ್ಮರಂ ಕರಗುವಂತೆ | ಲಕ್ಷ್ಮೀಶ | ೨೭–೩೪ |
| ೫. ತಲ್ಲಣಿಸದಿರು ಕಂಡ್ಯ ತಾಳುಮನವೇ | ಕನಕದಾಸ | ೩೫–೩೭ |
| ೬. ಸಿಸುಮಕ್ಕಳಿಗೊಲಿದ ಮಾದೇವ | ಜನಪದ ಕಾವ್ಯ | ೩೮–೪೩ |
| ೭. ಅಖಂಡ ಕರ್ಣಾಟಕ | ಕುವೆಂಪು | ೪೪–೪೯ |
| ೮. ಎಂದಿಗೆ | ಬಿ.ಸಿ. ರಾಮಚಂದ್ರ ಶರ್ಮ | ೫೦–೫೪ |
| ೯. ಮಗು ಮತ್ತು ಹಣ್ಣುಗಳು | ಎಚ್.ಎಸ್. ಶಿವಪ್ರಕಾಶ್ | ೫೫–೫೮ |
| ೧೦. ನಾ ಬರಿ ಭ್ರೂಣವಲ್ಲ | ಮಾಲತಿ ಪಟ್ಟಣಶೆಟ್ಟಿ | ೫೯–೬೨ |
| ೧೧. ಮತ್ತೆ ಸೂರ್ಯ ಬರುತ್ತಾನೆ | ಲೋಕೇಶ ಅಗಸನಕಟ್ಟೆ | ೬೩–೬೫ |
| ೧೨. ಸುನಾಮಿ ಹಾಡು | ಎಚ್.ಎಲ್. ಪುಷ್ಪ | ೬೬–೬೯ |
| ೧೩. ಹೊಲಿಗೆ ಯಂತ್ರದ ಅಮ್ಮಿ | ಆರಿಫ್‌ರಾಜಾ | ೭೦–೭೩ |
| ೧೪. ದೇವರಿಗೊಂದು ಅರ್ಜಿ | ಲಕ್ಕೂರು ಸಿ. ಆನಂದ | ೭೪–೭೭ |
| ೧೫. ಜೀವಕೆ ಇಂಧನ | ಬಸವರಾಜ ವಕ್ಕುಂದ | ೭೮–೮೦ |

## ಗದ್ಯಭಾಗ


| | | | |
|---|---|---|---|
| ೧. | ಗಾಂಧಿ | ಡಾ. ಬೆಸಗರಹಳ್ಳಿ ರಾಮಣ್ಣ | ೮೨–೯೨ |
| ೨. | ರಾಗಿಮುದ್ದೆ | ಚ.ಹ. ರಘುನಾಥ | ೯೩–೧೦೦ |
| ೩. | ಜ್ಯೋತಿಷ್ಯ ಅರ್ಥಪೂರ್ಣವೋ ಅರ್ಥರಹಿತವೋ | ಡಾ. ಎಚ್. ನರಸಿಂಹಯ್ಯ | ೧೦೧–೧೦೮ |
| ೪. | ಶಾಸ್ತ್ರಿ ಮಾಸ್ತರ ಮತ್ತವರ ಮಕ್ಕಳು | ಡಾ. ಚೆನ್ನಣ್ಣ ವಾಲೀಕಾರ | ೧೦೯–೧೧೭ |
| ೫. | ಬುದ್ಧ ಬಿಸಿಲೂರಿನವನು | ನಾಗತಿಹಳ್ಳಿ ಚಂದ್ರಶೇಖರ್ | ೧೧೮–೧೨೫ |
| ೬. | ಮಹಾತ್ಮರ ಗುರು | ಮುಗಳವಳ್ಳಿ ಕೇಶವ ಧರಣಿ | ೨೬–೧೩೩ |
| ೭. | ನಿರಾಕರಣೆ | ಡಾ. ವೀಣಾಶಾಂತೇಶ್ವರ | ೧೩೪–೧೪೧ |
| ೮. | ಕೃಷಿಸಂಸ್ಕೃತಿ ಮತ್ತು ಜಾಗತೀಕರಣ | ಸಿ.ಎಚ್. ಹನುಮಂತರಾಯ | ೧೪೨–೧೪೯ |
| ೯. | ಚತುರನ ಚಾತುರ್ಯ | ಯಾದವ ಕವಿ | ೧೫೦–೧೫೮ |


## ನಾಟಕ


| | | |
|---|---|---|
| ಬೋಳೇಶಂಕರ | ಚಂದ್ರಶೇಖರ ಕಂಬಾರ | ೧೫೯–೨೩೦ |

# ೧. ದುರ್ಯೋಧನ ವಿಲಾಪ

– ರನ್ನ

ಯುದ್ಧ ಜೀವನಾಶಕ ವಿದ್ಯೆ. ಪ್ರಭುತ್ವ ಕಾಲ ಕಾಲಕ್ಕೆ ಯುದ್ಧಗಳನ್ನು ಸಲಹುತ್ತ ಬಂದಿದೆ. ಆಧುನಿಕ ಸಮಾಜವನ್ನೂ ಈ ಭೂತ ಬಿಟ್ಟಿಲ್ಲ. ಹಿರೋಶಿಮ, ನಾಗಸಾಕಿ ದುರಂತಗಳೇ ಇದಕ್ಕೆ ಸಾಕ್ಷಿ. ಬುದ್ಧನಂಥ ಸಂತರೆಲ್ಲರು ಯುದ್ಧವನ್ನು ವಿರೋಧಿಸಿದವರೆ. ಯುದ್ಧದ ಘೋರ ಪರಿಣಾಮವನ್ನು ಜಗತ್ತಿನ ಅಧಿಕಾರದಾಹಿಗಳು ಅರಿಯಬೇಕಿದೆ. ಅಶೋಕ ಚಕ್ರವರ್ತಿಯಂತೆ ಯುದ್ಧನೀತಿಯನ್ನು ನಿರಾಕರಿಸಬೇಕು.

ಉಡಿದಿರ್ದ ಕಯ್ದು ನೆತ್ತರ
ಕಡಲೊಳಗಡಿಗಡಿಗೆ ತಳಮನುರ್ಚುತ್ತಿರೆ ಕಾ
ಲಿಡಲೆಡೆವಡೆಯದೆ ಕುರುಪತಿ
ದಡಿಗವೆಣಂಗಳನೆ ಮೆಟ್ಟಿ ಮೆಲ್ಲನೆ ನಡೆದಂ ॥೧॥

ಇಭಶೈಲಂಗಳನೇಱಿಯೇಱಿ ರುಧಿರಸ್ರೋತಂಗಳಂ ದಾಂಟಿ ದಾಂ
ಟಿಭದೋರ್ನಿರ್ನೀಲಲತಾಪ್ರತಾನವಿಪಿನವ್ರಾತಂಗಳೊಳ್ ಸಿಲ್ಕಿ ಸಿ
ಲ್ಕಿ ಭರಂಗೆಯ್ದುಱದೆಯ್ದಿ ಸಂಜಯಶಿರಸ್ಕಂಧಾವಲಂಬಂ ಕುರು
ಪ್ರಭು ಕಂಡಂ ಶರಜಾಲಜರ್ಜರಿತಗಾತ್ರತ್ರಾಣನಂ ದ್ರೋಣನಂ ॥೨॥

ವಚನ॥ ಅಂತು ನಿಸರ್ಗದುಷ್ಟಧೃಷ್ಟದ್ಯುಮ್ನ ಕಚನಿಗ್ರಹಕರವಿಲುಳಿತ ಮೌಳಿಯಾಗಿರ್ದ ಭಾರದ್ವಾಜನಿರವಂ ರಾಜರಾಜಂ ನೋಡಿ

ಅಱಿಯೆಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಂ
ನೆಱೆಯನಿದಿರ್ಚೆ ನಿಮ್ಮೊಡನೆ ಕಾದಿ ಗೆಲಲ್ಕದು ನಿಮ್ಮುಪೇಕ್ಷೆಯೆಂ
ದೆಱೆಯೆನಿದೆನ್ನ ಕರ್ಮವಶಮೆಂದೆಱೆಯೆಂ ನಿಮಗಿಂತು ಸಾವುಮೀ
ತೆಱದಿನಕಾರಣಂ ನೆಱೆಯೆ ಸಂಭವಿಸಿರ್ದುದೊ ಕುಂಭಸಂಭವಾ ॥೩॥

ವಚನ॥ ಎಂದು ದುಃಖಂಗೆಯ್ದು ಕುಂಭಸಂಭವನಂ ತ್ರಿಃಪ್ರದಕ್ಷಿಣಂಗೆಯ್ದು ಬರುತ್ತುಮಾ ದಿಶಾಭಾಗದೊಳ್

ಅರೆಮುಗಿದಿರ್ದ ಕಣ್ಮಲರಲರ್ದಮೊಗಂ ಕಡಿವೋದ ಕಯ್ಯುಮಾ
ಸುರತರಮಾಗೆ ಕರ್ಚಿದವುಡುಂ ಬೆರಸನ್ಯಶರಪ್ರಹಾರ ಜ
ರ್ಜರಿತಶರೀರನಾಗಿ ನವಲೋಹಿತವಾರ್ಧಿಯೊಳಟ್ಟು ಬಿಟ್ಟನಂ
ಕುರುಪತಿ ನೋಡಿ ಕಂಡನಭಿಮನ್ಯುಕುಮಾರನನಾಜಿವೀರನಂ ॥೪॥

ವಚನ॥ ಅಂತಾತನನಹಿಕೇತನಂ ನೋಡಿ–

ಗುರುಪಣ್ಣಿದ ಚಕ್ರವ್ಯೂ
ಹರಚನೆ ಪೆಱರ್ಗಱಿದು ಪುಗಲದಂ ಪೊಕ್ಕು ರಣಾ
ಜಿರದೊಳರಿನೃಪರನಿಕ್ಕಿದ
ನರಸುತ ನಿನ್ನೊರೆಗೆ ದೊರೆಗೆ ಗಂಡರುಮೊಳರೇ ॥೫॥

ಅಸಮಬಲ ಭವದ್ವಿಕ್ರಮ
ಮಸಂಭವಂ ಪೆಱರ್ಗೆ ನಿನ್ನನಾನಿನಿತಂ ಪ್ರಾ
ರ್ಥಿಸುವೆನಭಿಮನ್ಯು ನಿಜಸಾ
ಹಸೈಕದೇಶಾನುಮರಣಮೆಮಗಕ್ಕೆ ಗಡಾ ॥೬॥

ವಚನ॥ ಎಂದಾತ್ಮಗತದೊಳೆ ಬಗೆದು ಅಂತಭಿಮನ್ಯುಗೆ ಕಂಬ್ಗಳಂ ಮುಗಿದು ಬರುತ್ತುಂ ತನ್ನ ಮಗನಪ್ಪ ಲಕ್ಷಣಕುಮಾರನಂ ನೆನೆದು ಮನ್ಯೂದ್ಗತಕಂಠನಾಗಿ ತದಾಸನ್ನಪ್ರದೇಶದೊಳ್ ತನ್ನ ಕುಮಾರನಂ ಕಂಡು ಪುತ್ರಸ್ನೇಹಕಾತರಹೃದಯ ನಾಗಿ ಗಾಂಧಾರೀನಂದನಂ ಭಾನುಮತೀನಂದನನ ವದನಾರವಿಂದಮಂ ನೋಡಿ–

ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟೀಗಳ್
ನಿನಗಾಂ ಕುಡುವಂತಾದುದೆ
ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ ॥೭॥

ವಚನ॥ ಎಂದು ಪಶ್ಚಾತ್ತಾಪಂಗೆಯ್ಯೆ ಸಂಜಯಂ ಸಂತೈಸಿ ಮುಂದೊಯ್ಯೆ ಭೀಮಸೇನನ ಗದಾಪರಿಘ ಪ್ರಹರಣದಿಂದ ರುಧಿರ ಪ್ರವಾಹವಶಗತನಾಗಿರ್ದ ಯುವರಾಜನಿರ್ದೆಡೆಯಂ ಕುರುರಾಜನೆಯ್ದೆವಂದಾಗಳ್

ನಿನ್ನಂ ಕೊಂದಂ ಗಡಮೊಳ
ನಿನ್ನುಂ ಕೊಂದವನನಿಕ್ಕಿ ಕೊಲ್ಲದೆ ಮಾಣ್ದಾ
ನಿನ್ನುಂ ಮೊಳೆಂ ಗಡಸಾಲದೆ
ನಿನ್ನಯ ಕೂರ್ಮೆಗಮದೆನ್ನ ಸೌಧರ್ಮ್ಯಕೆಗಂ ॥೮॥

ಜನನೀಸ್ತನ್ಯಮನುಂಡೆನಾಂ ಬೞಿಕೆ ನೀಂ ಸೋಮಾಮೃತಂ ದಿವ್ಯಭೋ
ಜನಮೆಂಬಿಂತಿವನುಂಡೆನಾಂ ಬೞಿಕೆ ನೀಂ ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೊೞ್ತಡಮಾಯ್ತಿದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ ॥೯॥

ವಚನ॥ ಎಂದು ವಿಪ್ರಳಾಪಂಗೆಯ್ದು ತನ್ನ ತಮ್ಮನ ಕಳೇಬರಮಂ ನೋಡಲಾಱದೆ ಅಲ್ಲಿಂ ತಳರ್ದು ದಿನಕರತನೂಜನಂ ರಾಜರಾಜಂ ನೋಡಿ ಭಾಷ್ಪವಾರಿ ಧಾರಾಪೂರಿತಲೋಚನನುಮಾಗಿ

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕೞಿದ ಬೞಿ
ಕ್ಕಾನುಂ ನೀನೆ ದಲೀಗಳ್
ನೀನುಮಗಲ್ದೆತ್ತವೋದೆಯಂಗಾಧಿಪತೀ ॥೧೦॥

ನಿನ್ನ ಕೆಳೆಯಂ ಸುಯೋಧನ
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ
ನೆನ್ನದೆ ಜೀಯೆನ್ನದೆ ದೇ
ವೆನ್ನದೆ ಯೇಕುಸಿರದಿರ್ಪೆ ಯಂಗಾಧಿಪತೀ ॥೧೧॥

ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮೆಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಂಯ್ ॥೧೨॥

ಆನೞಿವೆಂ ಪೃಥೆಯೞಿವಳ್
ದಾನವರಿಪುವೞಿಮನರ್ಕನೞಿವಂ ದಿವ್ಯ
ಜ್ಞಾನಿ ಸಹದೇವನಱಿವಂ
ನೀನಾರ್ಗೆಂದಾರುಮಱಿಯರಂಗಾಧಿಪತೀ ॥೧೩॥

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಂಯ್
ನೀನುಳ್ಳೊಡುಂಟು ಪೀಟೆಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ. ॥೧೪॥

ಹರಿ ಬೇಡೆ ಕವಚಮಂ ನೀ
ನರಿದಿತ್ತಂಯ್ ಕೊಂತಿ ಬೇಡೆ ಬೆಗಡದೆ ಕೊಟ್ಟಂಯ್
ಪುರಿಗಣೆಯಂ ನಿನಗೆಣೆ ಕಸ
ವರಗಲಿ ಮೆಯ್ಗಲಿಯುಮಾವನಂಗಾಧಿಪತೀ ॥೧೫॥

ವಚನ॥ ಎಂದು ಶೋಕಾಂಧಂ ಕರ್ಣವಿರಹಿತನಪ್ಪುದಱಿಂ ಸಂಕ್ರಂದನನಂದನಂಗೆ ಮುಳಿದು ಶರಶಯನಗತನಾಗಿರ್ಪ ನದೀನಂದನನ ಚರಣಾರವಿಂದ ವಂದನಂಗೆಯ್ಯಲೆಂದು ಗಾಂಧಾರೀನಂದನನೆಯ್ದೆವಂದಂ

## ಕಾವ್ಯ–ಕವಿ ಪರಿಚಯ: ರನ್ನ(೯೪೯)

'ರನ್ನ' ರತ್ನತ್ರಯರಲ್ಲೊಬ್ಬನು. ರನ್ನನ ಜನ್ಮಸ್ಥಳ ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಮುಧೋಳ). ತಂದೆ ಜಿನವಲ್ಲಭ. ತಾಯಿ ಅಬ್ಬಲಬ್ಬೆ. ಬಳೆಗಾರ ವೃತ್ತಿಯ ಮನೆತನದ ಇವನು ತೀವ್ರ ವಿದ್ಯಾಕಾಂಕ್ಷೆಯ ತುಡಿತದಿಂದ ಶ್ರವಣಬೆಳ್ಗೊಳದಲ್ಲಿ ತಾತ್ಕಾಲಿಕವಾಗಿ ನೆಲೆ ನಿಲ್ಲುತ್ತಾನೆ.

'ದಾನಚಿಂತಾಮಣಿ' ಬಿರುದಾಂಕಿತ ಅತ್ತಿಮಬ್ಬೆಯ ಪ್ರೋತ್ಸಾಹ ದೊರಕಿತು. ಅಜಿತಸೇನಾಚಾರ್ಯರಿಂದ ವಿದ್ಯೆ ಸಂಪಾದಿಸಿದನು. ಮೊದಲು ಗಂಗರ ಮಂತ್ರಿ ಚಾವುಂಡರಾಯನ ಆಶ್ರಯ ಪಡೆಯುತ್ತಾನೆ. ಗಂಗರ ಪತನಾನಂತರ ಚಾಲುಕ್ಯದೊರೆ ತೈಲಪ ಹಾಗೂ ಸತ್ಯಾಶ್ರಯ ಇಱಿವಬೆಡಂಗ(ಬದ್ದೆಗ)ನ ಆಸ್ಥಾನ ಕವಿಯಾಗಿದ್ದನು.

'ಅಜಿತ ತೀರ್ಥಂಕರ ಪುರಾಣ' ಮತ್ತು 'ಸಾಹಸಭೀಮವಿಜಯಂ' ಇವನ ಉಪಲಬ್ಧ ಕಾವ್ಯಗಳು. ಚಂಪೂ ಶೈಲಿಯ ಕೃತಿಗಳಲ್ಲೊಂದಾದ 'ಸಾಹಸಭೀಮ ವಿಜಯಂ'ನಲ್ಲಿ ರನ್ನನು, ಪಂಪ ಕವಿಯು ಅರಿಕೇಸರಿಯನ್ನು ಸಮೀಕರಿಸಿ ಕಾವ್ಯ ರಚಿಸಿದಂತೆ, 'ಸಾಹಸಭೀಮ' ಬಿರುದಾಂಕಿತ ಇಱಿವಬೆಡಂಗ ಸತ್ಯಾಶ್ರಯನನ್ನು ಭೀಮನೊಂದಿಗೆ ಸಮೀಕರಿಸಿದ್ದಾನೆ. ಮಹಾಭಾರತದ ಕುರುಕ್ಷೇತ್ರ ಯುದ್ಧದ ದೃಶ್ಯವೇ ಮುಖ್ಯ ಕಥಾವಸ್ತುವಾದರೂ, ಇಡೀ ಮಹಾಭಾರತವನ್ನು ಸಿಂಹಾವಲೋಕನ ಕ್ರಮದಲ್ಲಿ ನಿರೂಪಿಸಿದ್ದಾನೆ. ಇವನ ಇಡೀ ಕಾವ್ಯದಲ್ಲಿ ನಾಟಕೀಯ ಶೈಲಿಯನ್ನು ಕಾಣಬಹುದು.

ಮಹಾಭಾರತ ಯುದ್ಧದಲ್ಲಿ ತನ್ನವರೆಲ್ಲರನ್ನೂ ಕಳೆದುಕೊಂಡ ದುರ್ಯೋಧನನು ಯುದ್ಧಭೂಮಿಯಲ್ಲಿ ಶರಶಯ್ಯೆಯಲ್ಲಿದ್ದ ತಾತ ಭೀಷ್ಮನನ್ನು ಭೇಟಿ ಮಾಡಲು ಸಂಜಯನೊಡನೆ ಬರುತ್ತಾನೆ. ಸತ್ತು ಬಿದ್ದಿರುವ ವೈರಿಪಕ್ಷದ ವೀರ ಅಭಿಮನ್ಯುವನ್ನು ಪ್ರಶಂಸಿಸುವ ಅವನ ಮನೋಧರ್ಮ ಮೆಚ್ಚತಕ್ಕದ್ದಾಗಿದೆ. ಗುರು ದ್ರೋಣ, ತಮ್ಮ ದುಶ್ಯಾಸನ, ಮಗ ಲಕ್ಷಣಕುಮಾರ ಮತ್ತು ಪ್ರಾಣ ಸ್ನೇಹಿತ ಕರ್ಣರ ಕಳೇಬರಗಳನ್ನು ಕಂಡು ದುರ್ಯೋಧನ ಪಡುವ ದುಃಖ ದುಮ್ಮಾನ ಹಾಗೂ ಪ್ರಲಾಪಗಳು ಪ್ರಸ್ತುತ ಕಾವ್ಯ ಭಾಗದಲ್ಲಿ ಕರುಳು ಮಿಡಿಯುವಂತೆ ಚಿತ್ರಿತವಾಗಿವೆ.

## ಪದಕೋಶ:

೧. ಉಡಿದಿರ್ದ–ಮುರಿದ; ಕೈದು–ಆಯುಧ; ತಳ–ಪಾದ; ಉರ್ಚು–ಚುಚ್ಚು; ದಡಿಗವೆಣ(ದಡಿಗ+ಪೆಣ)– ಭಾರಿಹೆಣ.

೨. ಇಭಶೈಲ–ಆನೆಗಳ ಬೆಟ್ಟ; ರುಧಿರ–ರಕ್ತ; ಸ್ರೋತ–ನದಿ; ಇಭದೋ–ಆನೆಗಳ ಸೊಂಡಿಲು; ನೀಲಲತಾ–ಕಪ್ಪು ಬಳ್ಳಿ; ಪ್ರತಾನ–ಗುಂಪು; ವ್ರಾತ–ಸಮೂಹ; ಉಱದೆ–ಲೆಕ್ಕಿಸದೆ; ಸ್ಕಂಧ–ಹೆಗಲು; ಗಾತ್ರ–ದೇಹ; ತ್ರಾಣ–ರಕ್ಷಕ(ಕವಚ).

ವ॥ ನಿಸರ್ಗದುಷ್ಟ–ಸ್ವಭಾವತಃ ಕೆಟ್ಟವನಾದ; ಕಚ–ತಲೆಗೂದಲು; ನಿಗ್ರಹ–ಶಿಕ್ಷೆ, ದಂಡನೆ; ವಿಲುಳಿತ–ತಿರುಚಲ್ಪಟ್ಟು; ಮೌಳಿ– ತಲೆ; ಭಾರದ್ವಾಜ–ದ್ರೋಣ.

೩. ಬಿನ್ನಣ–ಚಾತುರ್ಯ, ನೈಪುಣ್ಯ, ಕೌಶಲ್ಯ; ಪಿನಾಕಪಾಣಿ–ಶಿವ; ನೆಱೆಯನ್–ಅಸಮರ್ಥ; ಕುಂಭಸಂಭವ–ದ್ರೋಣ.

೪. ಕಣ್ಮಲರ್(ಕಣ್+ಮಲರ್) –ಕಣ್ಣೆಂಬ ಹೂ; ಅಲರ್ದ–ಅರಳಿದ; ಆಸುರತರ–ಅತಿಭಯಂಕರ; ಲೋಹಿತವಾರ್ಧಿ–ರಕ್ತದ ಕಡಲು; ಅೞ್ದು–ಮುಳುಗಿ; ಆಜಿ–ಯುದ್ಧ.

ವ॥ ಅಹಿಕೇತನ–ಸರ್ಪಧ್ವಜ, ದುರ್ಯೋಧನ.

೫. ಪಣ್ಣು(ಕ್ರಿ) –ರಚಿಸು; ಪುಗಲ್–ಪ್ರವೇಶಿಸಲು; ರಣಾಜಿರ–ಯುದ್ಧಭೂಮಿ; ಅರಿ–ಶತ್ರು; ನರ–ಅರ್ಜುನ; ಒರೆದೊರೆ–ಸರಿಸಮ.

೬. ಭವದ್ವಿಕ್ರಮ (ಭವತ್+ವಿಕ್ರಮ)–ನಿನ್ನ ಶೌರ್ಯ; ನಿಜಸಾಹಸ–ನಿನ್ನ ಪರಾಕ್ರಮ; ಏಕದೇಶ–ಒಂದು ಅಂಶ, ಹೋಲುವ; ಅನುಮರಣ–ಅನುರೂಪವಾದ (ಅನುಗುಣವಾದ) ಮರಣ.

ವ॥ ಮನ್ಯೂದ್ಗತಕಂಠನಾಗಿ–ಶೋಕಭರಿತವಾದ ಧ್ವನಿಯುಳ್ಳವನಾಗಿ; ತದಾಸನ್ನ(ತತ್+ಆಸನ್ನ)–ಅದಕ್ಕೆ ಹತ್ತಿರದ; ಗಾಂಧಾರೀನಂದನ–ದುರ್ಯೋಧನ; ಭಾನುಮತಿನಂದನ–ಲಕ್ಷಣಕುಮಾರ.

೭. ಜಲಾಂಜಲಿ(ಜಲ+ಅಂಜಲಿ)– ತರ್ಪಣ; ಕ್ರಮವಿಪರ್ಯಯ–ಪದ್ಧತಿ ತಪ್ಪುವುದು, ಕ್ರಮ ವ್ಯತ್ಯಾಸ.

ವ॥ ಪರಿಘ–ಆಯುಧ; ಪ್ರಹರ–ಹೊಡೆತ.

೮. ಗಡಮೊಳನಿನ್ನುಂ–ಇನ್ನೂ ಬದುಕಿದ್ದಾನಲ್ಲ; ಇಕ್ಕಿ–ಬಡಿದು, ಹೊಡೆದು; ಮಾಣ್–ಬಿಡು, ಸುಮ್ಮನಿರುವುದು; ಕೂರ್ಮೆ–ಪ್ರೀತಿ; ಸೌಧರ್ಮ–ಸಜ್ಜನಿಕೆ.

೯. ಸೋಮಾಮೃತ–ಸೋಮರಸ; ಮೊನೆಯೊಳ್–ಯುದ್ಧದಲ್ಲಿ; ಸೂೞ್–ಸರದಿ; ಎಡೆ–ಸಮಯ; ಉಲ್ಲಂಘನೆ–ತಪ್ಪುವುದು, ಮೀರುವುದು.

ವ॥ ಕಳೇಬರ–ಶವ; ತಳರ್ದು–ಹೊರಟು;

೧೦. ದಲ್–ದಿಟ, ಅಲ್ಲವೇ; ಕಟಿೞದ–ತೀರಿದ.

೧೧. ಕೆಳೆಯ–ಗೆಳೆಯ, ಸ್ನೇಹಿತ; ಬೆಸನ್–ಆಜ್ಞೆ; ಜೀಯ–ಯಜಮಾನ, ಒಡೆಯ.

೧೨. ಅನೃತ–ಸುಳ್ಳು; ನನ್ನಿ–ಸತ್ಯ; ಚಾಗ–ತ್ಯಾಗ; ಅಣ್ಮು–ಪರಾಕ್ರಮ.

೧೩. ಪೃಥೆ–ಕುಂತಿ; ದಾನವರಿಪು–ಕೃಷ್ಣ; ಅರ್ಕ–ಸೂರ್ಯ.

೧೪. ಬೆಳ್ಗೊಡೆ(ಬೆಳ್+ಕೊಡೆ)–ಬಿಳಿಯಕೊಡೆ; ಪೀಟಿಗೆ–ಸಿಂಹಾಸನ.

೧೫. ಹರಿ–ಇಂದ್ರ; ಪುರಿಗಣೆ–ದಿವ್ಯಾಸ್ತ್ರ; ಕಸವರಗಲಿ(ಕಸವರ+ಕಲಿ)–ದಾನಶೂರ; ಅರಿದು–ಕತ್ತರಿಸಿ; ಮೆಯ್ಗಲಿ–ಪರಾಕ್ರಮಿ.

ವ॥ ಸಂಕ್ರಂದನ–ಇಂದ್ರ; ಶರಶಯನ–ಬಾಣದಮಂಚ; ನದೀನಂದನ– ಭೀಷ್ಮ

## I. ಸಂದರ್ಭ ಸೂಚಿಸಿ ವಿವರಿಸಿ:

೧. ಗಾಂಡಿವಿಯಲ್ತು ಪಿನಾಕಪಾಣಿಯುಂ ನೆಱೆಯನ್

೨. ನಿನ್ನೊರೆಗೆ ದೊರೆಗೆ ಗಂಡರುಮೊಳರೇ

೩. ನೀಂ ಕ್ರಮವಿಪರ್ಯಯಂ ಮಾಡುವುದೇ

೪. ಜನನೀಸ್ತನ್ಯಮನುಂಡೆನಾಂ ಬಱಿಕೆ ನೀಂ

೫. ಈಗಳ್ ನೀನುಮಗಲ್ದೆತ್ತವೋದೆಯಂಗಾಧಿಪತೀ

೬. ಆನಱಿವೆಂ ಪೃಥೆಯಱಿವಳ್

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಕುರುಪತಿ ರಣರಂಗದಲ್ಲಿ ಏನನ್ನು ಮೆಟ್ಟಿ ನಡೆದನು?

೨. ರಣರಂಗದಲ್ಲಿ ಸಾಗುವಾಗ ದುರ್ಯೋಧನ ಯಾರ ನೆರವನ್ನು ಅವಲಂಬಿಸಿದ್ದನು?

೩. ಪಿನಾಕಪಾಣಿ ಎಂದರೆ ಯಾರು?

೪. ಚಕ್ರವ್ಯೂಹವನ್ನು ರಚಿಸಿದವನು ಯಾರು?

೫. ತಂದೆಗೆ ಜಲಾಂಜಲಿಯನ್ನು ಯಾರು ಕೊಡಬೇಕು?

೬. ದಿವ್ಯಜ್ಞಾನಿ ಎಂದು ಯಾರನ್ನು ಕರೆಯಲಾಗಿದೆ?

೭. ಅಂಗಾಧಿಪತಿ ಯಾರು?

೮. ಹರಿಯು ಕರ್ಣನಿಂದ ಬೇಡಿದ್ದೇನು?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ರಣರಂಗದಲ್ಲಿ ಬಿದ್ದಿದ್ದ ಅಭಿಮನ್ಯುವಿನ ಕಳೇಬರ ಯಾವ ರೀತಿ ಕಾಣುತ್ತಿತ್ತು?

೨. ದುರ್ಯೋಧನು ತನ್ನ ಮಗನ ಶವವನ್ನು ಕಂಡು ಹೇಗೆ ವ್ಯಥೆಪಡುತ್ತಾನೆ?

೩. ದುಶ್ಶಾಸನನು ಅಣ್ಣನಿಗೆ ತೋರಿದ್ದ ವಿನಯಶೀಲತೆ ಯಾವುದು?

೪. ಕರ್ಣನ ಜನ್ಮರಹಸ್ಯವನ್ನು ಯಾರು ಯಾರು ಅರಿತಿದ್ದರು?

೫. ದುರ್ಯೋಧನನು ಕರ್ಣನ ದಾನಗುಣವನ್ನು ಹೇಗೆ ಪ್ರಶಂಸಿದ್ದಾನೆ?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ದುರ್ಯೋಧನ ರಣರಂಗದಲ್ಲಿ ನಡೆದು ಬಂದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?

೨. ದ್ರೋಣನ ಕಳೇಬರವನ್ನು ಕಂಡು ದುರ್ಯೋಧನ ಹೇಗೆ ದುಃಖಿಸುತ್ತಾನೆ?

೩. ಅಭಿಮನ್ಯುವಿನ ಶೌರ್ಯ ಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ?

೪. ದುರ್ಯೋಧನನು ದುಶ್ಶಾಸನನನ್ನು ಕಂಡು ವ್ಯಕ್ತಪಡಿಸಿದ ಭಾವನೆಗಳಾವುವು?

೫. ಕರ್ಣನ ಉದಾತ್ತ ಗುಣಗಳನ್ನು ದುರ್ಯೋಧನ ಹೇಗೆ ಕೊಂಡಾಡಿದ್ದಾನೆ?

## V. ಭಾಷಾಭ್ಯಾಸ:

೧. ಬರ್ದುಕು–ಇದು **ಶಿಥಿಲದ್ವಿತ್ವ**. ಇಲ್ಲಿ ವಿಜಾತೀಯ ಒತ್ತಕ್ಷರವನ್ನು ಶಿಥಿಲವಾಗಿ, ತೇಲಿಸಿ ಉಚ್ಚರಿಸುತ್ತಾರೆ. ಇದು ಹಳಗನ್ನಡದ ಒಂದು ಲಕ್ಷಣ. ಅಲರ್ದ, ಎರ್ದೆ... ಮೊದಲಾದ ಶಿಥಿಲದ್ವಿತ್ವಗಳನ್ನು ಗಮನಿಸಿ

೨. **ಕ್ಷಳ ಪ್ರಯೋಗ–** ಸಂಸ್ಕೃತದ 'ಲ' ಕಾರಕ್ಕೆ ಬದಲಾಗಿ ಕನ್ನಡದಲ್ಲಿ ಬಳಸುವ 'ಳ' ಕಾರವನ್ನು ಕ್ಷಳವೆನ್ನುವರು. ಉದಾ: ಜಲ>ಜಳ, ಅನಲ>ಅನಳ **ಇಂತಹ ಪದಗಳನ್ನು ಪಟ್ಟಿ ಮಾಡಿ.**

೩. **ಪ>ಹ ಬದಲಾವಣೆ:** ಹಳಗನ್ನಡದ ಕೆಲವು 'ಪ'ಕಾರ ನಡುಗನ್ನಡದಲ್ಲಿ 'ಹ' ಕಾರಗಳಾಗಿವೆ. ಇದೊಂದು ಪ್ರಮುಖ ಧ್ವನಿ ವ್ಯತ್ಯಾಸ. ಉದಾ. ಪಾಱು> ಹಾರು; ಪೆಸರ್>ಹೆಸರ್(ಹೆಸರು). . . ಇತ್ಯಾದಿ., ಇಂತಹ **ಐದು ಪದಗಳನ್ನು ಸಂಗ್ರಹಿಸಿ.**

**ಆಕರ : ಗದಾಯುದ್ಧ ಸಂಗ್ರಹ – ತೀ.ನಂ.ಶ್ರೀ**

**ಹೆಚ್ಚಿನ ಓದು :** ಗದಾಯುದ್ಧ ನಾಟಕ – ಬಿ.ಎಂ.ಶ್ರೀ
ರನ್ನನ ಸರಳ ಗದಾಯುದ್ಧ – ಸಂ: ಡಾ. ಎಲ್. ಬಸವರಾಜು.
ಶ್ಮಶಾನ ಕುರುಕ್ಷೇತ್ರಂ – ಕುವೆಂಪು

**ಪ್ರಳಯಕಾಲಾಗ್ನಿಯ ತುಡುಕಿ ಪತಂಗದ ಹುಳು ಜೀವಸಹಿತವುಳಿವುದೆ?**
**– ಗೋವಿಂದವೈದ್ಯ. (ಕಂಠೀರವನರಸರಾಜವಿಜಯಂ)**

# ೨. ವಚನಗಳು

–(ಅ) ಅಲ್ಲಮಪ್ರಭು

ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂಬುದು ನಮ್ಮ ಪಾರಂಪರಿಕ ನಂಬಿಕೆ. ಆಧುನಿಕ ಜೀವನ ಶೈಲಿ ಮಹತ್ವಾಕಾಂಕ್ಷೆಯಿಂದ ಕೂಡಿದೆ. ಹೊರ ಜಗತ್ತಿಗೆ ಮನುಷ್ಯ ತನ್ನನ್ನು ತೋರಿಸಿಕೊಳ್ಳುವ ಕ್ರಮಕ್ಕಿಂತಲೂ ಅವನ ಒಳಗು ವಿಭಿನ್ನ. ಅನ್ನ ಕೊಡುವವನು ಪ್ರತ್ಯಕ್ಷ ದೈವ.

ಕಾಲುಗಳೆಂಬವು ಗಾಲಿ ಕಂಡಯ್ಯಾ,
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯಾ.
ಬಂಡಿಯ ಹೊಡೆವವರೈವರು ಮಾನಿಸರು,
ಒಬ್ಬರಿಗೊಬ್ಬರು ಸಮವಿಲ್ಲಯ್ಯ.
ಅದರಿಚ್ಛೆಯನರಿದು ಹೊಡೆಯದಿರ್ದಡೆ,
ಅದರಚ್ಚು ಮುರಿಯಿತ್ತು, ಗುಹೇಶ್ವರಾ. ॥೧॥

ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದಡೇನು?
ಹಸಿವು ಹೋಹುದೇ?
ಅಂಗದ ಮೇಲೆ ಲಿಂಗ ಸ್ವಾಯತವಾದಡೇನು?
ಭಕ್ತನಾಗಬಲ್ಲನೇ?
ಇಟ್ಟ ಕಲ್ಲು ಮೆಳೆಯ ಮೇಲೆ ಸಿಲುಕಿದಡೆ,
ಆ ಕಲ್ಲು ಲಿಂಗವೆ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ?
ಇಂತಪ್ಪವರ ಕಂಡಡೆ ನಾಚುವೆನಯ್ಯಾ, ಗುಹೇಶ್ವರಾ. ॥೨॥

ನಾ ದೇವನಲ್ಲದೆ ನೀ ದೇವನೆ?
ನೀ ದೇವನಾದಡೆ ಎನ್ನನೇಕೆ ಸಲಹೆ?
ಆರೈದು ಒಂದು ಕುಡಿತೆ ಉದಕವನೆರೆವೆ,
ಹಸಿದಾಗ ಒಂದು ತುತ್ತು ಓಗರವನಿಕ್ಕುವೆ.
ನಾ ದೇವ ಕಾಣಾ, ಗುಹೇಶ್ವರಾ. ॥೩॥

**ವಚನ – ವಚನಕಾರ: ಅಲ್ಲಮಪ್ರಭು(೧೧೬೦)**

ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಇವನ ಜನ್ಮಸ್ಥಳ. ಯೌವನದಲ್ಲಿಯೇ ವಿರಕ್ತಿಯತ್ತ ಮುಖ ಮಾಡಿ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಮದ್ದಳೆ ಬಾರಿಸುವ ಸೇವೆ ಮಾಡುತ್ತಿದ್ದನು. ಶಿವನ ಧ್ಯಾನದಲ್ಲಿ ಆಸಕ್ತನಾಗಿ, ಆಳವಾದ ಆತ್ಮಚಿಂತನೆ ನಡೆಸಿ, ತನ್ನ ಕಾಣ್ಕೆಯನ್ನು ವಚನಗಳಲ್ಲಿ ಪ್ರಕಟಿಸಿದ್ದಾನೆ. ಅನುಭವ ಮಂಟಪದ ಅಧ್ಯಕ್ಷನಾಗಿದ್ದ. ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಕಲೇಶಮಾದರಸ ಮುಂತಾದ ಶರಣರಿಗೆ ಮಾರ್ಗದರ್ಶಕನಾಗಿದ್ದನು.

ಅಲ್ಲಮಪ್ರಭುವಿನ ವಚನಗಳು ಪ್ರತಿಭಟನಾತ್ಮಕ, ವಿಚಾರಾತ್ಮಕ ಹಾಗೂ ವಿಮರ್ಶಾತ್ಮಕ ಅಂಶಗಳನ್ನೊಳಗೊಂಡು ಸತ್ಯಾನ್ವೇಷಣೆಯ ದಿಕ್ಕಿಗೆ ಕೊಂಡೊಯ್ಯುತ್ತವೆ. ಇಂತಹ ಸಂದರ್ಭದಲ್ಲಿ ಅವನ ವಾಕ್ಶಕ್ತಿ ಹಾಗೂ ಪದಪ್ರಯೋಗಗಳು ನೇರವಾಗಿರುತ್ತವೆ. ಹೇಳಲಿಚ್ಛಿಸಿದ್ದನ್ನು ಅಳುಕದೆ ಹೇಳುವುದು ಇವನ ವಚನಗಳ ವೈಶಿಷ್ಟ್ಯ. ತಾನು ಪಡೆದ ಲೋಕಾನುಭವವನ್ನು ಇತರರಿಗೆ ಹಂಚುವ ಪ್ರಯತ್ನ ಮಾಡಿದ್ದಾನೆ. ದೇಹವನ್ನು ಬಂಡಿಗೆ ಹೋಲಿಸಿ ಅದನ್ನು ಆಳಲು ಪ್ರಯತ್ನ ಮಾಡುವ ಪಂಚೇಂದ್ರಿಯಗಳನ್ನು ಹದ್ದುಬಸ್ತಿನಲ್ಲಿಡದಿದ್ದರೆ ಅನಾಹುತಕ್ಕೆ ಆಹ್ವಾನವಿತ್ತಂತೆ. ಆಡಂಬರದ ಹಾಗೂ ಯಾಂತ್ರಿಕ ಭಕ್ತಿಯನ್ನು ಪ್ರಶ್ನಿಸುವ ಮನೋಭಾವನೆಯ ಜೊತೆಗೆ ಶರಣ ಮತ್ತು ಆರಾಧನೆಯ ನಡುವಿನ ವ್ಯತ್ಯಾಸವನ್ನು ಖಂಡಿಸುವ ಪ್ರವೃತ್ತಿಯಿದೆ. ದೇವರನ್ನೇ ಪ್ರಶ್ನಿಸುವ ಹಾಗೂ ನಾನೇ ದೇವರೆನ್ನುವ ಧೈರ್ಯ ಇವನ ವಚನಗಳಲ್ಲಿ ಕಂಡುಬರುತ್ತದೆ.

**ಪದಕೋಶ:**

ಐವರು ಮಾನಿಸರು– ಪಂಚೇಂದ್ರಿಯಗಳು; ಅಚ್ಚು–ಆಧಾರ ಭಾಗ; ಓಗರ–ಅನ್ನ; ಸ್ವಾಯತ–ಧರಿಸುವಿಕೆ; ಮೆಳೆ–ಪೊದೆ; ಮೊಟ್ಟೆ–ಗಂಟು; ಆರೈದು–ಹುಡುಕಾಡಿ; ಕುಡಿತೆ–ಗುಟುಕು, ಬೊಗಸೆ.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಬಂಡಿಯ ಹೊಡೆವವರೈವರು ಮಾನಿಸರು.

೨. ಮೆಳೆ ಭಕ್ತನೆ? ಇಟ್ಟಾತ ಗುರುವೆ?

೩, ನೀ ದೇವನಾದಡೆ ಎನ್ನನೇಕೆ ಸಲಹೆ?

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಅಲ್ಲಮಪ್ರಭುವಿನ ಅಂಕಿತ ಯಾವುದು?
೨. ಕಾಲುಗಳನ್ನು ಯಾವುದಕ್ಕೆ ಹೋಲಿಸಲಾಗಿದೆ?
೩. ದೇಹವೆಂಬುದು ಏನು?
೪. ಕಟ್ಟೋಗರದ ಮೊಟ್ಟೆಯನ್ನು ಎಲ್ಲಿ ಕಟ್ಟಲಾಗಿದೆ?
೫. ಇಟ್ಟ ಕಲ್ಲು ಎಲ್ಲಿ ಸಿಕ್ಕರೆ ಲಿಂಗವೆಂದು ಕೇಳುತ್ತಾನೆ?
೬. ಹಸಿದಾಗ ಏನನ್ನು ನೀಡಬೇಕೆಂದು ಅಲ್ಲಮ ಹೇಳುತ್ತಾನೆ?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಕಾಲು ಮತ್ತು ದೇಹವನ್ನು ಯಾವುದಕ್ಕೆ ಹೋಲಿಸಲಾಗಿದೆ?
೨. ಯಾರನ್ನು ಕಂಡರೆ ಅಲ್ಲಮ ನಾಚುವೆನೆಂದು ಹೇಳುವನು?
೩. ಅಲ್ಲಮ ಏನನ್ನು ನೀಡುವುದರಿಂದ ನಾದೇವ ಎಂದು ಹೇಳುತ್ತಾನೆ?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ದೇಹವೆಂಬ ಬಂಡಿಯನ್ನು ಹೇಗೆ ನಡೆಸಬೇಕೆಂದು ತಿಳಿಸಲಾಗಿದೆ?
೨. ಆಡಂಬರದ ಭಕ್ತಿಯನ್ನು ಅಲ್ಲಮ ಹೇಗೆ ಖಂಡಿಸುತ್ತಾನೆ?
೩. ಅಲ್ಲಮಪ್ರಭುವಿನ ವಚನಗಳ ಆಶಯಗಳೇನು?

ಆಕರ : ಅಲ್ಲಮಪ್ರಭು ವಚನಗಳು–ಸಂ : ಡಾ. ವ್ಹಿ.ವ್ಹಿ. ಮಲ್ಲಾಪೂರ
(ವಚನ ಸಂಪುಟ–೨) ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

**ಹೆಚ್ಚಿನ ಓದು:**

**ಅಲ್ಲಮನ ವಚನ ಚಂದ್ರಿಕೆ – ಸಂ: ಡಾ. ಎಲ್. ಬಸವರಾಜು**

**ಗ್ರಾಮದ ಶುನಕ ಗಂಗೆಯನೀಸಾಡಹೋಗಿ ಶುದ್ಧವಾಗಬಲ್ಲುದೇ?**
**– ಮಡಿವಾಳ ಮಾಚಯ್ಯ**

## (ಆ) ಘಟ್ಟಿವಾಳಯ್ಯ

**ಉತ್ತಮರ ಸ್ನೇಹ ಹಿತವಾದುದು. ಪರಸ್ಪರ ಸಂಬಂಧಗಳು ರಾಗ ದ್ವೇಷ ರಹಿತವಾದುದು. ನಿಯಮಗಳ ಇಕ್ಕಟ್ಟಿಗಿಂತ ಮಧುರ ಬಾಂಧವ್ಯಗಳು ಮುಖ್ಯ. ನಡೆನುಡಿ ಪ್ರಮಾಣಬದ್ಧವಾಗಿರುವುದೇ ಜೀವನ.**

ಇರಿವ ಕೈದಿಂಗೆ ದಯಧರ್ಮದ ಮೊನೆ ಉಂಟೆ?
ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ?
ಕೂಟವ ಕೂಡಿ ಸಮಯ ನೊಂದಲ್ಲಿ ಅಜಾತನ ಬಲ್ಲರೆ?
ಎನಗೆ ನಿಮ್ಮೊಳಗಿನ್ನೇತರ ಮಾತು?
ವೇಷಧಾರಿಗಳೆಲ್ಲ ನಿಮ್ಮ ಕೂಟಕ್ಕೆ ಹೊರಗು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೧॥

ತಪವೆಂಬುದು ಬಂಧನ
ನೇಮವೆಂಬುದು ತಗಹು
ಶೀಲವೆಂಬುದು ಸೂತಕ
ಕಟ್ಟಿನ ವ್ರತದ ಭಾಷೆಯೆಂಬುದು ನಗೆಗೆಡೆಯಾಯಿತ್ತು ನೋಡಾ!
ನಗೆ ಹೊಗೆವಣ್ಣಿದಲ್ಲಿ ಹೊಗೆ ಜಗವಾದಡೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು! ಮಾಣು! ॥೨॥

ತನುವ ಮರೆಯಬೇಕೆಂದು ಗುರುವ ತೋರಿ,
ಮನವ ಮರೆಯಬೇಕೆಂದು ಲಿಂಗವ ತೋರಿ,
ಧನವ ಮರೆಯಬೇಕೆಂದು ಜಂಗಮವ ತೋರಿ,
ಲೇಸ ಮರೆತು ಕಷ್ಟಕ್ಕೆ ಕಡಿದಾಡುವ
ಭಾಷೆಹೀನರ ಕಂಡು ನಾಚಿಕೆಯಾಯಿತ್ತು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೩॥

## ವಚನ – ವಚನಕಾರ: ಘಟ್ಟಿವಾಳಯ್ಯ(೧೧೬೦)

ಹನ್ನೆರಡನೇ ಶತಮಾನದ ವಚನಕಾರ ಹಾಗೂ ಶರಣ. ಮುದ್ದಣ್ಣ ಇವನ ಪೂರ್ವನಾಮಧೇಯ. ಶಿವಾನುಭವ ಸಾರುವ ನರ್ತನವೆ ಇವನ ಕಾಯಕ. ಕಪಟಿಗಳು ಇವನ ಸದಾಚಾರ ಪ್ರಭಾವದಿಂದಾಗಿ ನೈಜ ಜಂಗಮರಾದದ್ದು ಇವನ ವೈಶಿಷ್ಟ್ಯ. ಮದ್ದಳೆ ಬಾರಿಸುತ್ತಾ ನರ್ತಿಸುವಾಗಲೇ ಕೊನೆಯುಸಿರೆಳೆದನು.

ಘಟ್ಟಿವಾಳಯ್ಯನು ತನ್ನ ವಚನಗಳಲ್ಲಿ ಡಾಂಭಿಕ ಭಕ್ತರ ನಡವಳಿಕೆಗಳೆಲ್ಲಾ ವ್ಯರ್ಥವೆನ್ನುತ್ತಾನೆ. ವೇಷಧಾರಿಗಳೆಲ್ಲರು ಭಕ್ತರಾಗಲು ಸಾಧ್ಯವಿಲ್ಲ. ಶರಣರ ಗುಂಪಿನಲ್ಲಿ ಅವರು ಸೇರಲು ಅರ್ಹರಲ್ಲವೆಂದು ಹೇಳುತ್ತಾನೆ. ಗುರು ಲಿಂಗ ಜಂಗಮ ಕಲ್ಪನೆಗೆ ಹೊಸ ಆಯಾಮವನ್ನು ನೀಡುವ ಮತ್ತು ಹೊಸ ವ್ಯಾಖ್ಯಾನ ನೀಡುವ ಇವನ ಧೈರ್ಯ ಪ್ರಶಂಸನೀಯ.

### ಪದಕೋಶ:

ಇರಿ–ಕೊಲ್ಲು, ತಿವಿ, ಕತ್ತರಿಸು; ಕೈದು–ಆಯುಧ; ಮೊನೆ– ತುದಿ, ತೀಕ್ಷ್ಣತೆ, ಧೈರ್ಯ; ದಾಡೆ–ಕೋರೆಹಲ್ಲು, ದವಡೆಹಲ್ಲು; ಸುಧೆ– ಹಾಲು, ಅಮೃತ; ಕೂಟ–ಬೆರೆಯುವುದು, ರಾಶಿ, ನೆತ್ತಿ, ಮೋಸ; ಅಜಾತ–ಹುಟ್ಟಿಲ್ಲದವ, ಸ್ವಯಂಭು, ಶಿವ; ತಗಹು– ಕಟ್ಟುಪಾಡು; ಕಟ್ಟು–ನಿರ್ಬಂಧ; ಭಾಷೆಹೀನ–ವಚನಭ್ರಷ್ಟ, ಮಾತಿಗೆ ತಪ್ಪಿದವನು; ಸೂತಕ–ಜನನ ಮರಣದ ಸಂದರ್ಭದಲ್ಲಿ ಆಚರಿಸುವ ಮೈಲಿಗೆ.

### I. ಸಂದರ್ಭ ಸೂಚಿಸಿ ವಿವರಿಸಿ:

೧. ವೇಷಧಾರಿಗಳೆಲ್ಲ ನಿಮ್ಮ ಕೂಟಕ್ಕೆ ಹೊರಗು.

೨. ಶೀಲವೆಂಬುದು ಸೂತಕ.

೩. ಭಾಷೆಹೀನರ ಕಂಡು ನಾಚಿಕೆಯಾಯಿತ್ತು.

### II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ದಯೆ ಧರ್ಮದ ಮೊನೆ ಯಾವುದಕ್ಕೆ ಇರುವುದಿಲ್ಲ?

೨. ತಪವನ್ನು ಘಟ್ಟಿವಾಳಯ್ಯ ಏನೆಂದು ಕರೆಯುತ್ತಾನೆ?

೩. ನಗೆಗೆ ಈಡಾಗುವುದು ಯಾವುದು?

೪. ಭಾಷೆಹೀನರ ಕಂಡಾಗ ಏನಾಯಿತು?

೫. ಘಟ್ಟಿವಾಳಯ್ಯನ ವಚನಗಳ ಅಂಕಿತ ಯಾವುದು?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಕೈದು, ಕಾಳೋರಗಗಳಿಗೆ ಏನೇನು ಇರುವುದಿಲ್ಲ?

೨. ತಗಹು, ಸೂತಕಗಳು ಯಾವುವು?

೩. ತನು ಮನ ಧನಗಳನ್ನು ಮರೆಯಲು ಏನನ್ನು ತೋರುತ್ತಾರೆ?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಘಟ್ಟಿವಾಳಯ್ಯನು ವೇಷಧಾರಿಗಳನ್ನು ಕೂಟದಿಂದ ಹೊರಗು ಎನ್ನಲು ಕಾರಣಗಳೇನು?

೨. ವ್ರತಗಳನ್ನು ಕುರಿತಂತೆ ಘಟ್ಟಿವಾಳಯ್ಯನ ನಿಲುವೇನು?

೩. ಘಟ್ಟಿವಾಳಯ್ಯನ ವಚನಗಳ ಆಶಯಗಳೇನು?

ಆಕರ: ಸಂಕೀರ್ಣ ವಚನಗಳು– ಸಂ: ಡಾ. ಎಸ್.ವಿದ್ಯಾಶಂಕರ್
(ವಚನ ಸಂಪುಟ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**ಒರ್ಮೆ ಕಂಡವರ್ ಮತ್ತೊರ್ಮೆ ಕಂಡೊಡೆ ನಂಟರ್**

**– ದುರ್ಗಸಿಂಹ**

## (ಇ) ಅಕ್ಕಮಹಾದೇವಿ

ಪ್ರತಿ ವ್ಯಕ್ತಿಗೂ ಏಕಾಗ್ರ ಚಿತ್ತತೆ ಅತ್ಯವಶ್ಯಕ. ಬಾಹ್ಯ ಪ್ರಪಂಚದ ಸೆಳೆತಕ್ಕೆ ಸಿಕ್ಕಿ ಬದುಕನ್ನು ಯದ್ವಾತದ್ವಾ ನಡೆಸುವುದು ದುರಂತಕ್ಕೆ ನಾಂದಿ. ಉತ್ತಮರ ಒಡನಾಟದಿಂದ ಜೀವನದ ಗುರಿ ತಲುಪಲು ಸಾಧ್ಯ. ಗುರಿಗಳು ಸರಿ ಇದ್ದರೆ ಸಾಧನೆಗಳು ಮಹತ್ವದ್ದಾಗಿರುತ್ತವೆ.

ರತ್ನದ ಸಂಕೋಲೆಯಾದಡೆ ತೊಡರಲ್ಲವೆ?
ಮುತ್ತಿನ ಬಲೆಯಾದಡೆ ಬಂಧನವಲ್ಲವೆ?
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದಡೆ
ಜನನಮರಣ ಬಿಡುವುದೆ ಚೆನ್ನಮಲ್ಲಿಕಾರ್ಜುನಾ? ||೧||

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ? ||೨||

ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು.
ಕರ್ಣಕ್ಕೆ ಶೃಂಗಾರ ಪುರಾತನರ ಸಂಗೀತಂಗಳ ಕೇಳುವುದು.
ವಚನಕ್ಕೆ ಶೃಂಗಾರ ಸತ್ಯವ ನುಡಿವುದು.
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ.
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ
ಚೆನ್ನಮಲ್ಲಿಕಾರ್ಜುನಾ? ||೩||

## ವಚನ – ವಚನಕಾರ್ತಿ: ಅಕ್ಕಮಹಾದೇವಿ(೧೧೬೦)

ಹನ್ನೆರಡನೆಯ ಶತಮಾನದ ಪ್ರಸಿದ್ಧ ವಚನಕಾರ್ತಿ. ಈಕೆ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಉಡುತಡಿ(ಉಡುಗಣಿ)ಯವಳು. ಬಾಲ್ಯದಿಂದಲೇ ಶಿವನಲ್ಲಿ ಅಪಾರವಾದ ಭಕ್ತಿಯಿದ್ದ ಈಕೆಗೆ ಕೌಶಿಕನೆಂಬ ರಾಜನೊಡನೆ ಬಲವಂತದ ವಿವಾಹವಾಗುತ್ತದೆ. ಶಿವಭಕ್ತಿಗೆ ಅಡ್ಡಿಪಡಿಸಿದ ಅವನನ್ನು ತೊರೆದು ಕಲ್ಯಾಣಕ್ಕೆ ಸಾಗುತ್ತಾಳೆ. ಶರಣರೊಂದಿಗೆ ಆಧ್ಯಾತ್ಮಿಕ ಚರ್ಚೆಯಲ್ಲಿ ಪಾಲ್ಗೊಂಡು ನಂತರ ಶ್ರೀಶೈಲದ ಕದಳಿವನದಲ್ಲಿ ಐಕ್ಯಳಾದಳೆಂದು ಐತಿಹ್ಯ.

ಲೌಕಿಕ ಬಂಧನದಲ್ಲಿ ಸಿಲುಕಿದ ಭಕ್ತನಿಗೆ ಮುಕ್ತಿಯಿಲ್ಲ. ಆತ್ಮ ಪರಮಾತ್ಮನಲ್ಲಿ ಒಂದಾದಾಗ ಅಂತಹ ಭಕ್ತನಿಗೆ ಭವವಿಲ್ಲ, ಶರಣರ ಸಂಗದಿಂದ ಬದುಕು ಸಾರ್ಥಕ ಇಲ್ಲದಿದ್ದರೆ ನಿರರ್ಥಕವೆಂಬ ಆಶಯಗಳನ್ನು ಪ್ರಸ್ತುತ ವಚನಗಳು ವ್ಯಕ್ತಪಡಿಸುತ್ತವೆ.

### ಪದಕೋಶ:

ಸಂಕೋಲೆ–ಬೇಡಿ, ಬಂಧನ; ತೊಡರು–ತೊಂದರೆ; ಚೇಷ್ಟೆ–ಚಟುವಟಿಕೆ; ಕರಣ–ತ್ರಿಕರಣಗಳು(ಕಾಯಾ, ವಾಚಾ, ಮನಸಾ); ಭವ–ಹುಟ್ಟು; ಶೃಂಗಾರ–ಅಲಂಕಾರ, ಭೂಷಣ; ಗಣ–ಶಿವಗಣ; ಮೇಳಾಪ–ಸಮೂಹ; ಬಾತೆ–ಪ್ರಯೋಜನ.

### I. ಸಂದರ್ಭ ಸೂಚಿಸಿ ವಿವರಿಸಿ:

೧. ಮುತ್ತಿನ ಬಲೆಯಾದಡೆ ಬಂಧನವಲ್ಲವೆ?

೨. ಎನಗೆ ಭವವುಂಟೆ?

೩. ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.

### II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಅಕ್ಕನು ಹೇಳುವ ತೊಡರು ಯಾವುದು?

೨. ಲೋಕದ ಚೇಷ್ಟೆಗೆ ಬೀಜವಾದುದು ಯಾವುದು?

೩. ಭವ ಯಾವಾಗ ಕೆಡುವುದು?

೪. ಸತ್ಯವ ನುಡಿವುದು ಯಾವುದರ ಶೃಂಗಾರವಾಗಬೇಕು?

೫. ಅಕ್ಕನ ವಚನಗಳ ಅಂಕಿತ ಯಾವುದು?

### III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ರತ್ನ ಮತ್ತು ಮುತ್ತು ಏನನ್ನು ಸೂಚಿಸುತ್ತವೆ?

೨. ಲೋಕ ಹಾಗೂ ಕರಣಗಳ ಚೇಷ್ಟೆಗೆ ಬೀಜ ಯಾವುದು?

೩. ಕಣ್ಣು ಹಾಗೂ ಕರ್ಣಗಳಿಗೆ ಶೃಂಗಾರ ಯಾವುದು?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಲೋಕದ ಭಜನೆಯಲ್ಲಿ ಸಿಲುಕಿದವರಿಗೆ ಮುಕ್ತಿಯಿಲ್ಲ ಎಂಬುದನ್ನು ಅಕ್ಕ ಹೇಗೆ ನಿರೂಪಿಸಿದ್ದಾಳೆ?

೨. ಹುಟ್ಟು ಸಾವನ್ನು ಮೀರುವುದು ಹೇಗೆಂದು ಅಕ್ಕಮಹಾದೇವಿ ತನ್ನ ವಚನದಲ್ಲಿ ವಿವರಿಸಿದ್ದಾಳೆ?

೩. ಬದುಕು ಸಾರ್ಥಕವಾಗಬೇಕಾದರೆ ಯಾವ ಅಂಶಗಳು ಇರಬೇಕೆಂದು ಅಕ್ಕಮಹಾದೇವಿ ಹೇಳುತ್ತಾಳೆ?

## V. ಭಾಷಾಭ್ಯಾಸ : (ನಾನಾರ್ಥ)

ಒಂದು ಶಬ್ದಕ್ಕೆ ವಿಶಿಷ್ಟ ಸಂದರ್ಭ ಸನ್ನಿವೇಶಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ಅರ್ಥಗಳು ಹೊಮ್ಮುತ್ತವೆ. ಹೀಗಾಗಿ ಅನೇಕ ಸಲ ಒಂದು ಪದದ ನಿರ್ದಿಷ್ಟ ಅರ್ಥವನ್ನು, ಸಂದರ್ಭ ವಿಶೇಷವನ್ನು ಗಮನಿಸಿಯೇ ಹೇಳಬೇಕಾಗುತ್ತದೆ. ಭಾಷಾಪರಿಣತಿ ಹಾಗೂ ಭಾಷೆಯ ತಿಳುವಳಿಕೆಯನ್ನು ಈ ಪದಗಳು ಸಾಬೀತುಪಡಿಸುತ್ತವೆ. ಉದಾ:– **ಗುರು**– ಶಿಕ್ಷಕ, ಗ್ರಹ, ವಾರ, ತೂಕ, ಮುಖ್ಯ. **ಗಣ**–ಗುಂಪು, ಸಮೂಹ, ಜಂಗಮ.

**ಆಕರ: ಶಿವಶರಣೆಯರ ವಚನಗಳು (ವಚನ ಸಂಪುಟ–೫) – ಸಂ: ಡಾ. ವೀರಣ್ಣ ರಾಜೂರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.**

> **ಮಾನವ ಜನ್ಮ ಬಲು ದೊಡ್ಡದು**
> **ಇದ ಹಾನಿ ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರ**
> **–ಪುರಂದರದಾಸರು**

# ೩. ದೇವನೊಲಿದನ ಕುಲವೇ ಸತ್ಕುಲಂ

– ಹರಿಹರ

ಸೃಷ್ಟಿಯಲ್ಲಿ ಭಿನ್ನ ಭೇದಗಳಿರುವುದಿಲ್ಲ. ಮನುಷ್ಯನೇ ತರತಮಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಆಳು–ಅರಸ, ಉಚ್ಚ–ನೀಚ, ಬಡವ–ಬಲ್ಲಿದ, ಮುಂತಾದ ವರ್ಗ ಭೇದಗಳು ಆಧುನಿಕ ಸಮಾಜವನ್ನು ಅತಿಯಾಗಿ ಕಾಡುತ್ತಿವೆ. ಇಂತಹ ತಾರತಮ್ಯವನ್ನು ಮೀರಿ ನಿಲ್ಲಲು ಕನ್ನಡದ ಪ್ರಾಚೀನ ಕಾವ್ಯಗಳು ನಿದರ್ಶನವಾಗಿವೆ.

ಶ್ರೀಶಿವನ ಸೆಜ್ಜೆಯೆನಿಸುವ ಚೋಳದೇಶವದು
ಈಶಭಕ್ತವ್ರಜಕೆ ನಿಜಸುಖನಿವಾಸವದು
ಬೆಳೆಯಿಲ್ಲದಿಳೆಯಿಲ್ಲ ಬನವಿಲ್ಲದೂರಿಲ್ಲ
ನೆಳಲ ತಂಪಿಲ್ಲದಾರವೆಯಿಲ್ಲದೆಡೆಯಿಲ್ಲ
ಕಾವೇರಿ ಸೋಂಕಿದರ ಪಾಪಮಂ ಸೋವೇರಿ
ಕಾವೇರಿ ಸಕಲ ಸಸ್ಯಾಳಿಯಂ ಕಾವೇರಿ
ಹರಿದಳಾ ದೇಶದೊಳು ಹರಭಕ್ತಿರಸದಂತೆ
ಧರಣೀತಳಕ್ಕಮೃತ ವಿಮಲವಾರಿಧಿಯಂತೆ
ಇಂತಪ್ಪ ದೇಶಮಂ ಪಾಲಿಸುವ ಭೂಮಿಪಂ
ಸಂತತಂ ಕರಿಕಾಲ ಚೋಳನೆಂಬಾ ನೃಪಂ ।೧೦।

ಆ ಚೋಳರಾಜನೊಪ್ಪುವ ರಾಜಧಾನಿಯೊಳು
ವಾಚಾಮಗೋಚರವದೆನಿಸಿದಂತವನಿಯೊಳು
ಜಾತಿ ಮಾದರ ಚೆನ್ನನೆಂಬ ನಾಮಂ ತನಗೆ
ಓತಿರ್ಪುದನ್ವರ್ಥವಾಗಿ ಮೆಱೆ ದುರ್ವರೆಗೆ
ಇರ್ದು ಶಂಕರನ ಗುಪ್ತಾರಾಧನೆಗೆ ನಚ್ಚಿ
ಸಾರ್ದು ಶಿವಭಕ್ತಿಯಂ ಬೀಱಿದಿಚ್ಚೆಗೆ ಮೆಚ್ಚಿ
ಭಕ್ತ ಚೋಳನ ತುರಂಗಂ ಬದುಕಬೇಕೆಂದು
ಯುಕ್ತಿಯಿಂ ಕಾಯಕಮನೆಡೆಗೊಂಡನೊಲಿದಂದು
ಕಂಪಣದ ಹುಲ್ಲಕಾಯಕವನೇ ಮಱೆಮಾಡಿ
ಹೆಂಪಿಂದೆ ಶಿವನನರ್ಚಿಸುತಿಪ್ಪನೊಡಗೂಡಿ ।೨೦।

ಒಳಗೆ ಭಕ್ತಿಯತಂಪು ಹೊಱಗೆ ಜನ್ಮದ ಸೊಂಪು
ಒಳಗೆ ಮುಕ್ತಿಯಗುಂಪು ಹೊಱಗೆ ಜಾತಿಯಹೆಂಪು
ತಿಲದ ತೈಲದ ತೆಱದೆ, ಕಾಷ್ಠದಗ್ನಿಯ ತೆಱದೆ
ನೆಲದ ಮಱೆಯೊಳಗೆ ತೊಳಗುವ ನಿಧಾನದ ತೆಱದೆ
ಪೆಱರಱಿಯದಂತೊಳಗೆ ಲಿಂಗಾರ್ಚನೆಯಲಿಪ್ಪ
ಅಱಿವಂತೆ ಹೊಱಗೆ ಕುಲಧರ್ಮಕರ್ಮದೊಳಿಪ್ಪ
ಉದಯ ಸಮಯದೊಳೆದ್ದು ಕಾಂತಾರದೊಳು ಪೊಕ್ಕು
ರಾಗದಿಂ ನಿರ್ಮಳನದೀತೀರದೊಳು ಪೊಕ್ಕು
ನುಣ್ಮಳಲ ದಿಂಟೆಯೊಳು ತಳಿರಹಸೆಯಂ ಹಾಸಿ
ಕಣ್ಮನವನಭವನತ್ತಲು ನಿಲಿಸಿ ಕಯ್ವೀಸಿ ।೩೦।

ತಂದು ಸಿಂಹಾಸನದ ಮೇಲೆ ಬಿಜಯಂಗೆಯಿಸಿ
ಸಂದಣಿಪ ನೇಹದಿಂ ಪೂರಯ್ಸಿ ಹಾರಯಿಸಿ
ಪರಿಮಳದ ತಿರುಳೆನಿಪ ಮೊಲ್ಲೆ ಮಲ್ಲಿಗೆಗಳಿಂ
ಹರವರಿಯ ಕಂಪಿಡುವ ಸಂಪಗೆಯರಳ್ಗಳಿಂ
ಮರುಗ ದವನಂ ಪಚ್ಚೆ ಪಡ್ಡಳಿಯ ಪೂಗಳಿಂ
ಸುರಗಿ ಸುರಹೊನ್ನೆ ಚಂಗಣಿಗಿಲೆಯ ಪೂಗಳಿಂ
ಸಂಗಡಿಸಿ ಸಿಂಗರಿಸಿ ಹೊಂಗಿ ಹೊರೆಯೇಱುತಂ
ಲಿಂಗಪೂಜೆಗಳೊಳಗೆ ಮನವಿಟ್ಟು ಮೀಱುತಂ
ಬಂದು ತೃಣಜಾಲಮಂ ಕೊಯ್ದೆತ್ತಿನೊಳು ಹೇಱಿ
ಸಂದ ಪುಳಕಂಗಳಂ ತನ್ನ ಮೆಯ್ಯೊಳು ಹೇಱಿ ।೪೦।

ನಡೆತಂದು ಚೋಳನ ತುರಂಗ ನಿಳಯದ ಮುಂದೆ
ಒಡನೆಯವರೋಪಾದಿಯಲಿ ನೂಂಕಿ ಭರದಿಂದೆ
ಬಳಲುತ ಬಂದು ನಿಜನಿಳೆಯದೊಳು ಕುಳ್ಳಿರ್ದು
ತೊಳತೊಳಿಪ ಶಿವಲಿಂಗದತ್ತ ಚಿತ್ತಂ ಸಾರ್ದು
ಇರೆ ಬೋನಮಂ ಪಿಡಿದರಲ್ಲಿ ತಮ್ಮರಸಿಯರು
ಹರನಿತ್ತುದಂ ಭಕ್ತಿಯಿಂದ ಕಡುಬಡವೆಯರು
ಲಿಂಗ ಪ್ರಸಾದಮಂ ಸಾದರಂ ಕಯ್ಕೊಂಡು
ಜಂಗಮನಿಧಾನನಿಪ್ಪಂ ಸುಖಮನೆಡೆಗೊಂಡು
ಈ ತೆಱದೊಳಱುವತ್ತು ವತ್ಸರಂ ನಡೆವುತಿರೆ
ಭೂತಳದೊಳತಿಗುಪ್ತಪೂಜೆ ದಳವೇಱುತಿರೆ ।೫೦।

ಹರನೊಲ್ದು ಚೆನ್ನನಂ ಮೇಱಿವೆನೀ ಧರೆಗೆಂದು
ಪುರಹರಂ ಸಲೆ ಸಂತಸಂಬಡುತ್ತಿರಲೊಂದು
ದಿವಸದೊಳು ಎಂದಿನಂದದೊಳು ಹೊಲನಂ ಹೊಕ್ಕು
ಶಿವಲಿಂಗ ಪೂಜೆಯಂ ಮಾಡಿ ಹರುಷಂ ಮಿಕ್ಕು
ಬೇಗದಿಂ ಪುಲುಗೊಯ್ದು ಮೈಲನೊಳು ನೆಱಿಹೇಱಿ
ರಾಗದಿಂ ಗಳಗಳನೆ ನಡೆತರುತ್ತಂ ಮೀಱಿ
ಕಂಪಣದ ತಾಣದೊಳು ಪುಲ್ಲನೊಲವಿಂ ನೂಂಕಿ
ಸೊಂಪೇಱಿ ಚಿತ್ತಜಾರಿಯ ಚಿತ್ತಮಂ ಸೋಂಕಿ
ಮನೆಗೆ ಬಂದನುಮಿಸುತೆ ಕುಳ್ಳಿರ್ದು ನೆನೆವುತಿರೆ
ವನಿತೆ ತಂದಂಬಕಳಮಂ ಮೆಲ್ಲನೀವುತಿರೆ

ಮಧುರಾಮ್ರರುಚಿಯಾಹ ಶಿವಲಿಂಗವಂ ತಾಗೆ
ಸುಧೆಯ ಕಡುಸವಿಯಿಂದೆ ನೂರ್ಮಡಿಸಿ ಸವಿಯಾಗೆ
ಸವಿದು ದಣಿವೆಯ್ದಿಸದೆ ಗುರುಮೂರ್ತಿಯುರವಣಿಸಿ
ಸವಿಸವಿವುತಂಬಕಳವೆಲ್ಲವಂ ಲವಲವಿಸಿ
ಕೊಂಡನೇನೆಂಬೆನಾ ಚೆನ್ನನೊಡನೊಂದಾಗಿ
ಉಂಡನಭವಂ ಸ್ವರ್ಗಮರ್ತ್ಯಕ್ಕೆ ಪೊಸತಾಗಿ
ಇರೆ ನಿತ್ಯನೇಮಕ್ಕೆ ಚೋಳರಾಯಂ ಬಂದು
ಹರನಾಲಯಂಬೊಕ್ಕು ಕಯ್ಮುಗಿವುತಂ ನಿಂದು
ದೇವಾನ್ನ ದಿವ್ಯಾನ್ನವಮೃತಾನ್ನಮಂ ಬಡಿಸಿ
ಓವಿ ಸವಿಸಾಲಿಡುವ ಶಾಕಂಗಳಂ ಬಡಿಸಿ

ಹಪ್ಪಳಂ ಚಿಲುಪಾಲ ಘಟ್ಟಗಳನಲ್ಲಲ್ಲಿ
ತುಪ್ಪಮಂ ಕೆನೆಮೊಸರ ಸಕ್ಕರೆಯನಲ್ಲಲ್ಲಿ
ಬಡಿಸಿ ಹೆಱಸಾರುತಂ ಜವನಿಕೆಯನೋಸರಿಸಿ
ಮೃಡನೆ ಆರಯ್ಯೆಂದು ನಲವಿಂ ನಮಸ್ಕರಿಸಿ
ಹರನಲ್ಲಿ ಏನುವಂ ಮುಟ್ಟದಾರಯ್ಯದಿರೆ
ಪರಿಕಿಸದೆ ವಾಸಿಸದೆ ಲೆಕ್ಕಿಸದೆ ಸುಮ್ಮನಿರೆ
ತೊಟ್ಟನಾ ಜವನಿಕೆಯನೋಸರಿಸಿ ಕಾಣುತಂ
ಕೆಟ್ಟೆನಿಂತೇಕಾಯಿತೆನುತಲುರವಣಿಸುತಂ
ಕಿತ್ತಲಗನೆತ್ತಿಕೊಂಡಮ್ಮಮ್ಮ ಕೊರಳಲ್ಲಿ
ಒತ್ತಿ ಹೂಡುತ್ತಿರಲು ಶಂಕರಂ ಕಂಡಲ್ಲಿ

ಓಹೋ ವಿಚಾರವಿಲ್ಲದೆ ಇಂತು ಮಾಳ್ಪರೇ
ಆಹ ನಿಮ್ಮರಸುತನವೆಮ್ಮಲ್ಲಿ ಮಾಳ್ಪರೇ
ಕಂಡಯ್ಯ ಚೋಳ ನಿನಗಿನಿತು ಸೈರಣೆಯಿಲ್ಲ
ಉಂಡೆವಾ ಚೆನ್ನನೊಡನೆಮಗಿಂದು ಹಸಿವಿಲ್ಲ
ಕೇಳಂಬಕಳದ ಸವಿಯದನೇನನೆಂದಪೆಂ
ಚೋಳಾದಿಗಳು ಪಡೆಯರೇನೆಂದು ಬಣ್ಣಿಪೆಂ
ಎಂದು ಶಿವನಾ ಲಿಂಗದೊಳು ಪುಗಲು ಕಾಣುತಂ
ನಿಂದು ಚೋಳಂ ಕೌತುಕಂ ಮಿಕ್ಕು ನೋಡುತಂ
ಬೆರಗಾಗಿ ಬೆಂಡಾಗಿ ಚೆನ್ನನಂ ಚಿಂತಿಸುತೆ
ಕಱಿಗೊರಳನಿಂತುಂಬರೇ ಎಂದು ಹುರುಡಿಸುತೆ

ಪರಮಂಗೆ ಉಣಲಿತ್ತ ಶರಣನಂ ನೋಡುವೆಂ
ಹರುಷದಿಂದಾನವರ ಕರುಣಮಂ ಸೂಡುವೆಂ
ನಡೆದಱಿಯದಚ್ಚಸುಖಿ ಕಾಲ್ನಡೆಯೊಳೆಯ್ತರುತೆ
ಎಡಬಲದ ಮಕುಟವರ್ಧನರೊಡನೆ ನಡೆತರುತೆ
ಪುರಹರಂಗುಣಲಿತ್ತ ಚೆನ್ನನಂ ತೋಱಿರೇ
ಗುರುಲಿಂಗದೊಡನುಂಡ ಚೆನ್ನನಂ ತೋಱಿರೇ
ಎಂದಲ್ಲಿ ಚಿತ್ತದನುತಾಪದಿಂ ಕೇಳುತಂ
ಅಂದಲ್ಲಿ ದೆಸೆದೆಸೆಗೆ ದೂತರಂ ಕಳುಪುತಂ
ಚೆನ್ನಯ್ಯನಿಪ್ಪ ಗುಡಿಲಿದೆಯೆಂದು ತೋಱುತಿರೆ
ಚೆನ್ನಯ್ಯನೊಳಗೈದನೆಂದು ನೆರೆಪೇಳುತಿರೆ

ಒಳಗೆ ಚೆನ್ನಯ್ಯ ನೆಱೆ ಕಂದುತಂ ಕುಂದುತಂ
ತಿಳಿವೊಡರಿದೇನೆಂದು ಕೋಡುತಂ ಬಾಡುತಂ
ಅರಮನೆಯ ಚಾರರೇಕಾನೇಕೆ ಶಂಕರಾ
ಅರಸನೇಕೆನ್ನ ಮನೆಯೇಕೆ ಶಶಿಶೇಖರಾ
ಭಕ್ತನೆಂದಱಿಯದಿರ್ದೊಡೆ ಲೇಸು ಬದುಕುವೆಂ
ಭಕ್ತನೆಂದಱಿದ ಬಳಿಕಾನೆಂತು ಬದುಕುವೆಂ
ಎನುತಮಿರಲಲ್ಲಿ ಗುಡಿಲಂ ಸುತ್ತಿ ಮುತ್ತುತ್ತೆ
ತನತನಗೆ ಜಯ ಜೀಯ ಎನುತೆ ಕಯ್ಮುಗಿವುತ್ತೆ
ಇರೆ ಚೋಳರಾಜನತಿ ಭಕ್ತಿಯಿಂದ ಬರುತಿರ್ದ
ನರರೆ ಸಮ್ಯಗ್‌ಜ್ಞಾನಿ ಸತ್ಯನಿಧಿ ಬರುತಿರ್ದ

ಗಳಗಳನೆ ನಡೆತಂದು ಚೆನ್ನಯ್ಯನಂ ಕಂಡು
ಬಳಸಿ ಗಣಪದವಿ ಬಂದೆಳಸಿರ್ದನಂ ಕಂಡು
ಇಳಿಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳು
ತೊಳತೊಳಗೆ ಮುಕುಟಮಣಿಕಾಂತಿ ಪದಭೂಮಿಯೊಳು
ಪಾದರಜಮಂ ಕಣ್ಗಳೊಳಗೊತ್ತಿ ದಣಿವುತಿರೆ
ಪಾದಮಂ ಬಲ್ವಿಡಿದು ಬಿಡೆನೆಂದು ಪೆಣಗುತಿರೆ
ಏನಯ್ಯ ಚೋಳನೃಪ ನೀನಿಂತು ಬಪ್ಪರೇ
ಭಾನುಕುಲದರ್ಪಣನೆ ನೀನಿಂತು ಮಾಳ್ಪರೇ
ಎನ್ನ ಕುಲಮಂ ನೋಡದೆಯ್ತಪ್ಪರೇ ಚೋಳ
ಎನ್ನ ಜಾತಿಯನಱಿಯದಿಂತು ಮಾಳ್ಪರೆ ಚೋಳ ।೧೨೦।

ಎನೆ ದೇವದೇವನೊಲಿದನ ಕುಲವೆ ಸತ್ಕುಲಂ
ಘನಮಹಿಮನೊಲಿದ ಜಾತಿಯೆಜಾತಿ ನಿರ್ಮಲಂ
ಸರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ
ಸರ್ವಜ್ಞ ನಿನ್ನ ಕೆರ್ಪಿಂಗೆನ್ನ ಶಿರಸರಿಯೆ
ಬಿಡೆನಯ್ಯ ನಿಮ್ಮ ಪದಮಂ ಬಿಟ್ಟು ಬಾಳ್ವೆನೇ
ಮೃಡಮೂರ್ತಿಯಂ ಬಿಟ್ಟು ನರಕದೊಳಗಾಳ್ವೆನೇ
ನಡೆಯಿಮೆಂದಲ್ಲಿ ಗಜಮಸ್ತಕವನೇಱಿಸುತೆ
ಗುಡಿಗಟ್ಟ ಹೇಳೆಂದು ಪುರದೊಳಗೆ ಸಾಱಿಸುತೆ
ನಡೆತಂದು ಮೃಡನಾಲಯದ ಮುಂದೆ ನಿಂದಿರ್ದು
ಕಡುನೇಹದಿಂ ಗಜದ ಮಗ್ಗುಲತ್ತಂ ಸಾರ್ದು ।೧೩೦।

ಆನೆಯಿಂದಿಳಿಪಿ ಮೆಲ್ಲನೆ ಬಂದು ಕಯ್ಗೊಟ್ಟು
ದಾನನಿಧಿ ಚೆನ್ನನಂ ಹರುಷದಿಂದ ಮುಂದಿಟ್ಟು
ಒಡಗೊಂಡು ಬಂದೊಳಗೆ ಶಿವಲಿಂಗಮಂ ತೋಱೆ
ಮೃಡನೊಡನೆ ತಾರ್ಕಣೆಗೊಡುತ್ತ ಚೋಳಂ ತೋಱೆ
ಕಂಡು ಚೆನ್ನಯ್ಯನಭವಂಗೆ ಕಡುಮಳಿವುತಂ
ಕಂಡಯ್ಯ ಇಂತು ದೂಱುವರೆ ನೀನನಗತಂ
ಚೋಳನಿಂ ಪಿಡಿತರಿಸಿದೇಂ ತಪ್ಪಮಾಡಿದೆನೆ
ಹೇಳಯ್ಯ ನಿನ್ನಲ್ಲಿ ಪದವಿಯಂ ಬೇಡಿದೆನೆ
ಅಱಿಯದಂಬಲಿಯನರ್ಪಿಸಿದೊಡಿಂತಿಱುವರೆ
ಹೆಜೆಯ ಸೂಡಿದ ಶಿವನೆ ನೀನಿಂತು ದೂಱುವರೆ ।೧೪೦।

ಮೇದಿನಿಗೆ ಬೀದಿಗಱುವಾದುದೆನ್ನಯ ಭಕ್ತಿ
ವಾದೇಕೆ ಹಱಲೆಯನು ತಂದಿಕ್ಕಿತೀ ಭಕ್ತಿ
ಇನ್ನಿಳೆಯೊಳಿರೆನೆನುತಲತಿ ಭಾಷೆಯಂ ಮಾಡೆ
ಚೆನ್ನಯ್ಯನಿರದಲಗ ಕಿತ್ತು ಕೊರಳೊಳುಹೂಡೆ
ಶಿವಲಿಂಗದಿಂದ ಶಿವನೆಯ್ತಂದು ನೆಱೆಪಿಡಿದು
ಅವಿಚಾರದಿಂದಿಂತು ಮಾಳ್ಪರೇ ನೀನಱಿದು
ಮಱೆದು ಚೋಳಂಗೆ ಪೇಳ್ದೊಡೆ ಕೋಪವಿನಿತೇಕೆ
ಅಱಿಯದೆಂದೆವು ಚೆನ್ನಸೈರಿಸಾತುರವೇಕೆ
ಎಂದು ಮೃಡಮೂರ್ತಿ ಚೆನ್ನಂಗೆ ನೇಹಮನೆಂದು
ನಿಂದು ಚೋಳಂಗೆ ಚೆನ್ನನ ತೋಱುತಂ ನುಡಿದು ।೧೫೦।

ನೋಡಯ್ಯ ಚೋಳ ಗುಪ್ತಾರ್ಚನೆಯ ಮೋನಿಯಂ
ಆಡಂಬರವನಳಿದ ಲಿಂಗಾಭಿಮಾನಿಯಂ
ಎಂದು ಕೊಂಡಾಡುತಿರೆ ಹೂಮಳೆಗಳೆಱೆಗಿದವು
ನಿಂದು ದುಂದುಭಿಕುಳಂ ಗಗನದೊಳು ಮೊಳಗಿದವು
ಬಂದ ಪುಷ್ಪಕದೊಳಗೆ ಚೆನ್ನನಂ ಕುಳ್ಳಿರಿಸಿ
ಇಂದುಧರನಾನಂದದಿಂದೊಲಿದು ಸಡಗರಿಸಿ
ಕೈಲಾಸಮಂ ಪೊಕ್ಕು ಸಿಂಹಾಸನಮನೇಱಿ
ಶೈಲಜೆಗೆ ಚೆನ್ನನಂ ಸಂತೋಷದಿಂ ತೋಱಿ
ಚೆನ್ನಂಗೆ ಗಣಪದವಿಯಂ ಕೊಟ್ಟು ರಾಗದಿಂ
ಪನ್ನಗಾಭರಣನೊಪ್ಪಿದನಖಿಳಯೋಗದಿಂ ।೧೬೦।

## ರಗಳೆ–ಕವಿ : ಹರಿಹರ (೧೧೯೦–೧೨೫೦)

'ರಗಳೆಕವಿ' ಎಂದು ಪ್ರಸಿದ್ಧನಾಗಿರುವ ಹರಿಹರ ದ್ವಾರಸಮುದ್ರದ ಹೊಯ್ಸಳ ವೀರನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ಕರಣಿಕನಾಗಿದ್ದನು. ರಾಜಾಶ್ರಯವನ್ನು ತಿರಸ್ಕರಿಸಿ ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಕಾವ್ಯ ರಚನೆಗೆ ತೊಡಗಿದನು. ಶಿವ ಮತ್ತು ಶಿವಭಕ್ತರನ್ನೇ ಕುರಿತು ಕಾವ್ಯ ರಚಿಸುವ ದಿಟ್ಟ ನಿಲುವನ್ನು ತಳೆದ ಇವನು ನೂರಕ್ಕೂ ಹೆಚ್ಚು ರಗಳೆಗಳು ಹಾಗೂ 'ಗಿರಿಜಾಕಲ್ಯಾಣ'ವೆಂಬ ಚಂಪೂಕಾವ್ಯವನ್ನು ರಚಿಸಿದ್ದಾನೆ. 'ಪಂಪಾಶತಕ', 'ರಕ್ಷಾಶತಕ', 'ಮುಡಿಗೆಯ ಅಷ್ಟಕ'ಗಳನ್ನೂ ರಚಿಸಿದ್ದಾನೆ.

ಹರಿಹರನ ರಗಳೆಗಳ ಮೂಲದ್ರವ್ಯ ಹರಭಕ್ತಿ. ಶಿವಭಕ್ತರು ಇವನ ಕಥಾನಾಯಕರು. ಇವರು ಒಂದಲ್ಲಾ ಒಂದು ರೀತಿ ಗುಪ್ತಭಕ್ತಿಯಿಂದ ಶಿವನನ್ನು ಆರೋಗಿಸುವವರೇ ಆಗಿರುತ್ತಾರೆ. ಭಕ್ತರ ಗುಪ್ತಭಕ್ತಿಯನ್ನು ಇತರರಿಗೆ ತಿಳಿಸುವ ಸಲುವಾಗಿ ಶಿವ ಮಾರುವೇಷದ

ಮೂಲಕ ಭಕ್ತರನ್ನು ಪರೀಕ್ಷಿಸುವುದರ ಜೊತೆಗೆ ಅವರ ಭಕ್ತಿಯನ್ನು ಪ್ರಕಟಗೊಳಿಸುವುದೇ ಆಗಿದೆ.

ಪ್ರಸ್ತುತ ರಗಳೆಯಲ್ಲಿ ಚೆನ್ನಯ್ಯನ ಶಿವಭಕ್ತಿಯನ್ನು ಅನಾವರಣಗೊಳಿಸುತ್ತಾನೆ. ಚೋಳನಾಡಿನಲ್ಲಿ ಹರಿಯುತ್ತಿರುವ ಕಾವೇರಿಯ ವರ್ಣನೆಯನ್ನು ಕಾಣಬಹುದು. ಅರಸನ ಮತ್ತು ಆಳಿನ ಮುಖಾಮುಖಿಯ ಜೊತೆಗೆ ಸರಳಭಕ್ತಿಯೇ ಶ್ರೇಷ್ಠವೆಂದು ಸಾರುವ ವಿಚಾರ ಇಲ್ಲಿದೆ.

**ಪದಕೋಶ:**

೧–೫೦ : ಸೆಜ್ಜೆ–ಲಿಂಗವಸ್ತ್ರ, ನೆಲೆ, ಶಯನ; ವ್ರಜ–ಗುಂಪು, ಸಮೂಹ; ಆರವೆ(ಆರಮೆ)–ಉದ್ಯಾನ; ಕಾವೇರಿ(ಕಾವ+ಏರಿ)– ಕಾಪಾಡುವ ನೀರು; ಸೋವೇರಿ(ಸೋವ+ಏರಿ)–ಪಾಪ ನಿವಾರಿಸುವ ತೀರ್ಥ; ವಾಚಾಮಗೋಚರ–ಮಾತಿಗೆ ನಿಲುಕದ; ಓತು–ಒಂದಾಗಿ, ಒಲಿದು; ಬೀಱದ–ಪ್ರಕಟಗೊಳ್ಳದ; ಕಂಪಣ (ಕಂಪಣ–ಕವಳ)–ಮೇವು; ಸೊಂಪು– ಸೊಗಸು; ತಿಲ–ಎಳ್ಳು; ಕಾಷ್ಠ–ಕಟ್ಟಿಗೆ; ನಿಧಾನ–ಸಂಪತ್ತು; ಕಾಂತಾರ–ಕಾಡು; ದಿಂಟೆ(ದಿಣ್ಟೆ)–ದಿಣ್ಣೆ; ಅಭವ–ಶಿವ; ಹರವರಿ–ಹರವು, ವಿಸ್ತಾರ; ಹೊರೆಯೇಱು–ಉಬ್ಬು; ಪಡ್ಡಲಿ–ಕೆಂಜಾಜಿ, ಪಾದರಿ ; ಓವು– ಉಪಚರಿಸು; ಇಂಬು–ಪ್ರೀತಿ; ತುರಗ–ಕುದುರೆ; ಸಾದರ–ಆದರ; ವತ್ಸರ–ವರ್ಷ.

೫೧–೧೦೦: ದಳವೇಱು–ಉತ್ಸಾಹ; ಮೈಲ(ಕಪ್ಪು)–ಬೂದುಬಣ್ಣದ ಎತ್ತು; ಅಂಬಕಳ–ಅಂಬಲಿ, ರಾಗಿಗಂಜಿ; ಕಪ್ಪರ–ಮಣ್ಣಿನ ತಟ್ಟೆ; ಆಮ್ರ–ಮಾವು; ಅಡ್ಡಣಿಗೆ–ಊಟದ ತಟ್ಟೆಯನ್ನು ಇಡುವ ಪೀಠ; ಚಿಲುಪಾಲು–ಕೆನೆಹಾಲು; ಘಟ್ಟ–ಮಣ್ಣಿನಪಾತ್ರೆ; ಹೆಱಸಾರು–ಹಿಂದೆ ಸರಿದು; ಜವನಿಕೆ–ಪರದೆ; ಅಲಗು–ಕತ್ತಿ; ಪಡಿ–ಸಮಾನ; ಕಱೆಗೊರಳ–ನೀಲಕಂಠ; ಹುರುಡು– ಪೈಪೋಟಿ, ಹೊಟ್ಟೆಕಿಚ್ಚು.

೧೦೧–೧೬೦: ಸೂಡು–ತಲೆಯ ಮೇಲೆ ಧರಿಸು; ಅನುತಾಪ–ಸಂತಾಪ; ಕೋಡು–ನಡುಗು; ಸಮ್ಯಗ್‌ಜ್ಞಾನಿ–ಸಂಪೂರ್ಣಜ್ಞಾನಿ; ಅಂಘ್ರಿ–ಪಾದ; ರಜ–ಧೂಳು; ದರ್ಪಣ–ಕನ್ನಡಿ; ಕೆರ್ಪು–ಚಪ್ಪಲಿ; ಗುಡಿ–ಬಾವುಟ, ಧ್ವಜ, ತೋರಣ; ತಾರ್ಕಣೆ– ಪ್ರತ್ಯಕ್ಷವಾದ, ಋಜುವಾತು; ಹೆಱೆ–ಚಂದ್ರ; ಬೀದಿಗಱು–ಬಯಲಾಗು; ಹಱಲೆ–ವೃಥಾಪವಾದ; ಮೋನಿ–ಮೌನಿ;

## I. ಸಂದರ್ಭ ಸೂಚಿಸಿ ವಿವರಿಸಿ:

೧. ಕಾವೇರಿ ಸೋಂಕಿದರ ಪಾಪಮಂ ಸೋವೇರಿ.
೨. ನೆಲದ ಮಱೆಯೊಳಗೆ ತೊಳಗುವ ನಿಧಾನದ ತೆಱದೆ.
೩. ಸೊಂಪೇಱ ಚಿತ್ತಜಾರಿಯ ಚಿತ್ತಮಂ ಸೋಂಕಿ.
೪. ಉಂಡನಭವಂ ಸ್ವರ್ಗಮರ್ತ್ಯಕ್ಕೆ ಪೊಸತಾಗಿ.
೫. ಆಹ ನಿಮ್ಮರಸುತನವೆಮ್ಮಲ್ಲಿ ಮಾಳ್ಪರೇ.
೬. ನಿಂದು ಚೋಳಂ ಕೌತುಕ ಮಿಕ್ಕು ನೋಡುತಂ.
೭. ಇಳಿಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳು.
೮. ದೇವದೇವನೊಲಿದನ ಕುಲವೆ ಸತ್ಕುಲಂ.
೯. ಮೇದಿನಿಗೆ ಬೀದಿಗಱುವಾದುದೆನ್ನಯ ಭಕ್ತಿ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಚೋಳದೇಶವು ಯಾರಿಗೆ ನೆಲೆಯಾಗಿತ್ತು?
೨. ಚೋಳದೇಶವನ್ನು ಆಳುತ್ತಿದ್ದ ದೊರೆ ಯಾರು?
೩. ಚೆನ್ನಯ್ಯನು ಮಾಡುತ್ತಿದ್ದ ಕಾಯಕ ಯಾವುದು?
೪. ಚೆನ್ನಯ್ಯನು ಹುಲ್ಲನ್ನು ಯಾವುದರ ಮೇಲೆ ಹೇರಿಕೊಂಡು ಬರುತ್ತಿದ್ದನು?
೫. ಶಿವನು ಯಾರ ಜೊತೆ ಊಟ ಮಾಡಿದನು?
೬. ಚೆನ್ನಯ್ಯನನ್ನು ಹುಡುಕಲು ಚೋಳರಾಜನು ಯಾರನ್ನು ಕಳುಹಿಸಿದನು?
೭. ಚೋಳರಾಜನು ಚೆನ್ನಯ್ಯನನ್ನು ಶಿವಾಲಯಕ್ಕೆ ಹೇಗೆ ಕರೆತಂದನು?
೮. ಕೈಲಾಸದಲ್ಲಿ ಚೆನ್ನಯ್ಯನಿಗೆ ಯಾವ ಪದವಿ ಲಭಿಸಿತು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಕಾವೇರಿ ನದಿಯ ಮಹಿಮೆ ಎಂತಹುದು?
೨. ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು?
೩. ಶಿವಲಿಂಗವನ್ನು ಯಾವ ಯಾವ ಹೂಗಳಿಂದ ಚೆನ್ನಯ್ಯ ಸಿಂಗರಿಸುತ್ತಿದ್ದನು?
೪. ಚೋಳರಾಜ ಚೆನ್ನಯ್ಯನ ಪಾದಗಳನ್ನು ಹಿಡಿದಾಗ ಅವನ ಪ್ರತಿಕ್ರಿಯೆ ಏನು?
೫. ಶಿವನ ಮೇಲೆ ಚೆನ್ನಯ್ಯನು ಮುನಿಸಿಕೊಳ್ಳಲು ಕಾರಣವೇನು?
೬. ಶಿವನು ಚೆನ್ನಯ್ಯನನ್ನು ಹೇಗೆ ಸಮಾಧಾನ ಪಡಿಸಿದನು?

## IV. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಚೆನ್ನಯ್ಯ ತನ್ನ ಕಾಯಕವನ್ನು ಹೇಗೆ ಮಾಡುತ್ತಿದ್ದನು?

೨. ಶಿವನು ಚೆನ್ನಯ್ಯನ ಮನೆಯಲ್ಲಿ ಊಟ ಮಾಡಿದ ಪ್ರಸಂಗವನ್ನು ವಿವರಿಸಿ.

೩. ಕರಿಕಾಲ ಚೋಳ ಶಿವನನ್ನು ಅರ್ಚಿಸುತ್ತಿದ್ದ ರೀತಿಯನ್ನು ವರ್ಣಿಸಿ.

೪. ಚೋಳರಾಜ ಚೆನ್ನಯ್ಯನನ್ನು ಹುಡುಕಿದ ಬಗೆ ಹೇಗೆ?

೫. ಚೆನ್ನಯ್ಯನಿಗೆ ಶಿವನು ಗಣಪದವಿಯನ್ನು ನೀಡಿದ ಪ್ರಸಂಗವನ್ನು ನಿರೂಪಿಸಿ.

## V. ಭಾಷಾಭ್ಯಾಸ:

**ಱ**>**ರ** (ಶಕಟರೇಫ>ರೇಫವಾಗಿರುವುದು), **ೞ**>ಳ (ರಳ>ಕುಳವಾಗಿರುವುದು): ಇದು ಕನ್ನಡದ ಒಂದು ಪ್ರಮುಖ ಧ್ವನಿ ವ್ಯತ್ಯಾಸ. ಈ ಅಕ್ಷರಗಳ ಧ್ವನಿಗಳು ಉಚ್ಚಾರಣಾ ಭಿನ್ನತೆಯನ್ನು ಕಳೆದುಕೊಂಡುದರ ಫಲವಾಗಿ ಹಳಗನ್ನಡದ ಈ ಅಕ್ಷರಗಳು ನಡುಗನ್ನಡದ ವೇಳೆಗೆ ತಮ್ಮ
ಪ್ರತ್ಯೇಕ ರೂಪವನ್ನು ಕಳೆದುಕೊಂಡವು. ಉದಾ: ಬಾೞ್>ಬಾಳು, ಅಱವಟ್ಟಿಗೆ> ಅರವಟ್ಟಿಗೆ. ಇಂತಹ ಐದು ಪದಗಳನ್ನು ಬರೆಯಿರಿ.

**ಆಕರ: ಐದು ರಗಳೆಗಳು–ಸಂ. ಹೆಚ್. ದೇವಿರಪ್ಪ.**

## ಚಟುವಟಿಕೆ:

೧. ಮಾದರ ಚೆನ್ನಯ್ಯನ ರಗಳೆಯನ್ನು ನಿಮ್ಮ ಮಾತುಗಳಲ್ಲಿ ಸಂಗ್ರಹಿಸಿ ಬರೆಯಿರಿ:

೨. ಪ್ರಸ್ತುತ ರಗಳೆಯಲ್ಲಿ ಶಿವ, ಮಾದರ ಚೆನ್ನಯ್ಯ ಹಾಗೂ ಚೋಳರಾಜ– ಇವರುಗಳ ನಡುವೆ ನಡೆಯುವ ಮಾತುಕತೆಯನ್ನು ನಾಟಕ ರೂಪಕ್ಕೆ ತನ್ನಿ.

೩. ಚೆನ್ನಯ್ಯನ ಚರಿತೆಯನ್ನು ನೃತ್ಯರೂಪಕ್ಕೆ ಅಳವಡಿಸಲು ಪ್ರಯತ್ನಿಸಿ.

**ಹೆಚ್ಚಿನ ಓದು: ಹರಿಹರನ ರಗಳೆಗಳು–ಫ.ಗು. ಹಳಕಟ್ಟಿ**

**ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ।**
**ಜಾತಿ ವಿಜಾತಿ ಎನಬೇಡ ದೇವ**
**ನೊಲಿದಾತನೇ ಜಾತ ಸರ್ವಜ್ಞ ॥**

# ೪. ಹಲುಬಿದಳ್ ಕಲ್ಮರಂ ಕರಗುವಂತೆ

–ಲಕ್ಷ್ಮೀಶ

ಶತಮಾನಗಳು ಕಳೆದರೂ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆಗಳು ನಿಂತಿಲ್ಲ. ಇವು ಕಾಲದೇಶಗಳನ್ನು ಮೀರಿ ನಡೆಯುತ್ತಿವೆ. ಹೊಸ ಕಾಲದಲ್ಲೂ ಇದರ ರೂಪಗಳು ಸ್ಥಿತ್ಯಂತರಗೊಂಡಿವೆ. ನಿಸರ್ಗದಿಂದ ಕಲಿಯಬೇಕಾದ ಮಾನವೀಯ ಅಂಶಗಳನ್ನು ಅರಿಯುವುದು ಸೂಕ್ತ.

ಅರಸ ಕೇಳ್ಸೌಮಿತ್ರಿ ವೈದೇಹಿಯಂ ಕೊಂಡು
ತೆರಳುವ ರಥಾಗ್ರದೊಳ್ಚಲಿಸುವ ಪತಾಕೆ ರಘು
ವರನಂಗನೆಯನುಳಿದನಹಹಯೆಂದಡಿಗಡಿಗೆ ತಲೆಗೊಡಹುವಂತಿರಲ್ಕೆ
ಪರಮದಾರುಣಮಾಯ್ತಿದೆಂದಯೋಧ್ಯಾಪುರದ
ನೆರವಿಯ ಜನಂ ಗುಜುಗುಜಿಸಿ ಮನದಿ ಕರಗಿ ಕಾ
ತರಿಸುತಿರೆ ಪರಿಸಿದಂ ಕಾಳ್ಬಟ್ಟೆಗೊಂಡನಿಲವೇಗದಿಂದಾ ರಥವನು ೧

ಇಳಿದು ರಥದಿಂದ ಮಂದಾಕಿನಿಗೆ ಪೊಡಮಟ್ಟು
ಬಳಿಕ ನಾವಿಕರೊಡನೆ ನಾವದೊಳ್ಗಂಗೆಯಂ
ಕಳೆದು ನಿರ್ಮಲ ತೀರ್ಥದೊಳ್ಮಿಂದು ಸೌಮಿತ್ರಿ ಮತ್ತೆ ಭೂಜಾತೆ ಸಹಿತ
ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುವ ಮುಂ
ದಳೆದುಗ್ರ ಮೃಗ ಪಕ್ಷಿಗಣದಿಂದ ಘೂರ್ಮಿಸುವ
ಹಳುವಮಂ ಪೊಕ್ಕನಡಿಯಿಡು ವೊಡಸದಳಮೆಂಬ ಕರ್ಕಶದ ಮಾರ್ಗದಿಂದ ೨

ಇರುಳಂತೆ ಪಗಲಂತೆ ಮಖದಂತೆ ದಿವದಂತೆ
ವರ ಪಯೋನಿಧಿಯಂತೆ ಕೈಲಾಸಗಿರಿಯಂತೆ
ನಿರುತಮಂ ಸೋಮಾರ್ಕ ಶಿಖಿ ಸಹಸ್ರಾಕ್ಷ ಹರಿನುತ ಶಿವಾವಾಸಮಾಗಿ
ಧುರದಂತೆ ಕೊಳದಂತೆ ಕಡಲಂತೆ ನಭದಂತೆ
ಶರಪುಂಡರೀಕ ವಿದ್ರುಮ ಋಕ್ಷಮಯದೊಳಿಡಿ
ದಿರುತಿರ್ದುದಾ ಮಹಾಟವಿ ಜಾನಕಿಯ ಕಣ್ಗೆ ಘೋರತರಮಾಗಿ ಮುಂದೆ ೩

ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗ
ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗ
ಳೆಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆದಗ್ನಿಹೋತ್ರದ ಕುಟೀರಂಗಳು
ಎಲ್ಲಿ ಪರಿಚಿತವಾದ ವೇದಶಾಸ್ತ್ರಧ್ವನಿಗ
ಳಲ್ಲಿಗೊಯ್ಯದೆ ದಾರುದಾರುಣದ ಕಟ್ಟಡವಿ
ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು ೪

ನರನಾಥ ಕೇಳವನಿಸುತೆ ನುಡಿದ ಮಾತಿಗು
ತ್ತರವನಾಡದೆ ಮನದೊಳುರೆ ನೊಂದು ರಾಘವೇ
ಶ್ವರನೆಂದ ಕಷ್ಟಮಂ ಪೇಳ್ದಪೆನೊ ಮೇಣುಸಿರದಿರ್ದಪೆನೊ ನಿಷ್ಠುರದೊಳು
ತರಣಿಕುಲಸಾರ್ವಭೌಮನ ರಾಣಿಯಂ ಬನದೊ
ಳಿರಿಸಿ ಪೋದಪೆನೆಂತೊ ಪೋಗದಿರ್ದೊಡೆ ಸಹೋ
ದರನದೇನೆಂದಪನೊ ಹಾಯೆಂದು ಲಕ್ಷ್ಮಣಂ ಬೆಂದು ಬೇಗುದಿಗೊಂಡನು ೫

ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ
ಮಾವರಿಸೆ ನಿನ್ನನೊಲ್ಲದೆ ರಘುಕುಲೋದ್ಭವಂ
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ
ಆ ವಿಭುವಿನಾಜ್ಞೆಯಂ ಮೀರಲರಿಯದೆ ಮೆಲ್ಲ
ನೀ ವಿಪಿನಕೊಡಗೊಂಡು ಬಂದೆನಿನ್ನೊಯ್ಯೊಯ್ಯ
ನಾವಲ್ಲಿಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು ೬

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳೆದು ಪತ್ರದಿಂ ಕೊಡೆವಿಡಿದು
ಸೆರಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು ೭

ಬಿಟ್ಟನೆ ರಘೂದ್ವಹಂ ನನ್ನನಕಟಕಟ ತಾ
ಮುಟ್ಟನೆ ನೆಗಳ್ದ ಬಾಳ್ಕೆಗೆ ಸಂಚಕಾರಮಂ
ಕೊಟ್ಟನೆ ಸುಮಿತ್ರಾತನುಜ ಕಟ್ಟರಣ್ಯದೊಳ್ಕಳುಹಿಬಾಯೆಂದು ನಿನಗೆ
ಕೊಟ್ಟನೆ ನಿರೂಪಮಂ ತಾನೆನ್ನ ಕಣ್ಬಟ್ಟೆ
ಗೆಟ್ಟನೆ ಮನೋವಲ್ಲಭನನಗಲ್ದಡವಿಯೊ
ಳ್ನೆಟ್ಟನೆ ಪಿಶಾಚದವೊಲೆಂತಿಹೆನೋ ಕೆಟ್ಟೆನಲ್ಲಾಯೆಂದೊರಲ್ದಳಬಲೆ ೮

ಎಂದು ಕೌಶಿಕಮುನಿಪನೊಡನೆ ಮಿಥಿಲಾಪುರಕೆ
ಬಂದು ಹರಧನುವ ಮುರಿದೆನ್ನಂ ಮದುವೆಯಾದ
ನಂದುಮೊದಲಾಗಿ ರಮಿಸಿದನೆನ್ನೊಳಾನಗಲ್ದೊಡೆ ತಾಂ ನವೆದನಲ್ಲದೆ
ವೊಂದಿದನೆ ಸೌಖ್ಯಮಂ ರಾಮನೆನಗಾಗಿ ಕಪಿ
ವೃಂದಮಂ ನೆರಪಿ ಕಡಲಂ ಕಟ್ಟಿ ದೈತ್ಯರಂ
ಕೊಂದಗ್ನಿಮುಖದೊಳ್ಪರೀಕ್ಷಿಸಿದನೆನ್ನೊಳಪರಾಧಮಂ ಕಾಣಿಸಿದನೆ ೯

ಏಕೆ ನಿಂದಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು
ಲೋಕದರಸೇಗೈದೊಡಂ ತನ್ನ ಕಿಂಕರ
ರ್ಬೇಕುಬೇಡೆಂದು ಪೇಳರೆ ಭರತ ಶತ್ರುಘ್ನ
ರೀ ಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ೧೦

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಜನಿಸಿ ತ
ನ್ನೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು
ನಡೆ ಪೋಗು ನಿಲ್ಲದಿರ್ನಿನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಮೆಂದು ಸೀತೆ ಕಂಬನಿಗಳಂ
ಮಿಡಿದಾರ್ತೆಯಾಗಿರಲ್ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ ೧೧

ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗಂ
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ
ಸಲಹಿಕೊಂಬುದು ತನ್ನ ಮಾತೆಯಂ ಜಾನಕಿಯ
ನೆಲೆ ತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು ೧೨

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗ
ಳ್ಧರಣಿಸುತೆಯಂ ಬಳಸಿ ನಿಂದು ಮೈಯುಡಗಿ ಜೋ
ಲ್ದಿರದೆ ಕಂಬನಿಗರೆದು ನಿಜವೈರಮಂ ಮರೆದು ಪುಲ್ಮೇವುಗಳನೆ ತೊರೆದು
ಕೊರಗುತಿರ್ದುವು ಕೂಡೆ ವೃಕ್ಷಲತೆಗಳ್ಬಾಡಿ
ಸೊರಗುತಿರ್ದುವು ಶೋಕಭಾರದಿಂ ಕಲ್ಲುಗಳುಂ
ಕರಗುತಿರ್ದುವು ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ ೧೩

ಪೃಥಿವಿಯಾತ್ಮಜೆ ಬಳಿಕ ಚೇತರಿಸಿ ತನಗಿನ್ನು
ಪಥಮಾವುದೆಂದು ದೆಸೆದೆಸೆಗಳಂ ನೋಡಿ ಸಲೆ
ಶಿಥಿಲಮಾದವಯವದ ಧೂಳಿಡಿದ ಮೆಯ್ಯ ಬಿಡುಮುಡಿಯಂ ವಿಕೃತಿಯನೆಣಿಸದೆ
ಮಿಥಿಲೇಂದ್ರವಂಶದೊಳ್ಜನಿಸಿ ರಘುಕುಲದ ದಶ
ರಥನೃಪನ ಸೊಸೆಯಾಗಿ ತನಗೆ ಕಟ್ಟಡವಿಯೊಳ್
ವ್ಯಥಿಸುವಂತಾಯ್ತಕಟ ವಿಧಿಯೆಂದು ಹಲುಬಿದಳ್ ಕಲ್ಮರಂ ಕರಗುವಂತೆ ೧೪

ಅನ್ನೆಗಂ ಮಖಕೆ ಯೂಪವನರಸುತಾ ಬನಕೆ
ಸನ್ನುತ ತಪೋಧನಂ ವಾಲ್ಮೀಕಿ ಮುನಿವರಂ
ತನ್ನ ಶಿಷ್ಯರ್ವೆರಸಿ ನಡೆತಂದು ಕಾಡೊಳೊರ್ವಳೆ ಪುಗಲ್ದೆಸೆಗಾಣದೆ
ಬನ್ನದಿಂ ಬಗೆಗೆಟ್ಟು ಪಾಡಳಿದು ಗ್ರೀಷ್ಮಋತು
ವಿನ್ನವೆವ ಕಾಂತಾರದಧಿದೇವಿ ತಾನೆನಲ್
ಸನ್ನಗದ್ಗದಕಂಠೆಯಾಗಿ ರೋದಿಸುತಿರ್ದ ವೈದೇಹಿಯಂ ಕಂಡನು ೧೫

ದೇವಿ ಬಿಡು ಶೋಕಮಂ ಪುತ್ರಯುಗಮಂ ಪಡೆವೆ
ಭಾವಿಸದಿರಿನ್ನು ಸಂದೇಹಮಂ ಜನಕಂಗೆ
ನಾವನ್ಯರಲ್ಲ ನಮ್ಮಾಶ್ರಮಕೆ ಬಂದು ನೀಂ ಸುಖದೊಳಿರ್ದೊಡೆ ನಿನ್ನನು
ಆವಾವ ಬಯಕೆಯುಂಟೆಲ್ಲಮಂ ಸಲಿಸಿ ತಾ
ನೋವಿಕೊಂಡಿರ್ಪೆನಂಜದಿರೆಂದು ಸಂತೈಸಿ
ರಾವಣಾರಿಯ ರಾಣಿಯಂ ನಿಜತಪೋವನಕೆ ವಾಲ್ಮೀಕಿ ಕರೆತಂದನು ೧೬

## ಕಾವ್ಯ–ಕವಿ : ಲಕ್ಷ್ಮೀಶ (೧೫೫೦)

ಲಕ್ಷ್ಮೀಶನ ಜನ್ಮಸ್ಥಳ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರು. ವಿದ್ವಾಂಸರಲ್ಲಿ ಇವನ ಜನ್ಮಸ್ಥಳದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇವನಿಗೆ 'ಕರ್ನಾಟಕ ಕವಿಚೂತವನಚೈತ್ರ' ಮತ್ತು 'ಉಪಮಾಲೋಲ'ಎಂಬ ಬಿರುದುಗಳಿವೆ. ವಾರ್ಧಕ ಷಟ್ಪದಿ ಇವನ ಕಾವ್ಯದ ಛಂದಸ್ಸು.

ಬಂಧು–ಮಿತ್ರರನ್ನು ಕೊಂದ ಪಾಪವನ್ನು ಪರಿಹಾರ ಮಾಡಿಕೊಳ್ಳುವ ಸಲುವಾಗಿ ಪಾಂಡವರು ಅಶ್ವಮೇಧಯಾಗವನ್ನು ಮಾಡಿದ ಪ್ರಸಂಗವೇ ಜೈಮಿನಿ ಭಾರತದ ಕಥಾವಸ್ತು. ವೈಶಂಪಾಯನನ ಶಿಷ್ಯನಾದ ಜೈಮಿನಿಮುನಿಯು ಜನಮೇಜಯ ರಾಜನಿಗೆ ಈ ಕಥೆಯನ್ನು ಹೇಳುತ್ತಾನೆ.

ಮಹಾಭಾರತದಲ್ಲಿ ಅಶ್ವಮೇಧ ಯಜ್ಞದ ಕುದುರೆಯನ್ನು ಕಟ್ಟಿ ಹಾಕಿದ ಬಬ್ರುವಾಹನ ಅರ್ಜುನನೊಡನೆ ಯುದ್ಧಕ್ಕೆ ನಿಲ್ಲುತ್ತಾನೆ. ಈ ಸಂದರ್ಭದಲ್ಲಿ ತಂದೆ–ಮಕ್ಕಳ ನಡುವೆ

ನಡೆದ ಯುದ್ಧಗಳನ್ನು ದಾಖಲಿಸುವ ಕವಿ, ಲವ-ಕುಶರ ಯುದ್ಧವನ್ನು ವರ್ಣಿಸುತ್ತಾನೆ. ಆಗ ಉಲ್ಲೇಖಿತವಾದ ಸೀತಾ ಪರಿತ್ಯಾಗದ ಸನ್ನಿವೇಶ ಪ್ರಸ್ತುತ ಪದ್ಯಭಾಗ. ಗೂಢಚಾರರ ಮಾತು ಕೇಳಿದ ರಾಮ, ಮನೋವ್ಯಾಕುಲಗೊಂಡು ಸೀತೆಯನ್ನು ಕಾಡಿಗೆ ಬಿಟ್ಟು ಬರುವಂತೆ ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ. ರಾಮ ತನ್ನನ್ನು ಪರಿತ್ಯಾಗ ಮಾಡಿದ ವಿಷಯ ತಿಳಿದ ಸೀತೆಯ ದುಃಖ-ದುಗುಡಗಳು ಹಾಗೂ ಲಕ್ಷ್ಮಣನ ಸಂದಿಗ್ಧತೆಗಳು ಇಲ್ಲಿವೆ. ಸೀತೆಯ ದುಃಖದಲ್ಲಿ ಪ್ರಕೃತಿ, ಪ್ರಾಣಿ ಪಕ್ಷಿಗಳು ಹೇಗೆ ಭಾಗಿಯಾಗುತ್ತವೆಂಬುದನ್ನು ಕಾಣಬಹುದು.

**ಪದಕೋಶ:**

೧. ಸೌಮಿತ್ರಿ-ಲಕ್ಷ್ಮಣ; ಪತಾಕೆ-ಬಾವುಟ, ಧ್ವಜ; ನೆರವಿ-ಗುಂಪು; ಪರಿಸು-ಮುನ್ನಡೆಸು; ಕಾಳ್ಬಟ್ಟೆ- ಕಾಡುದಾರಿ.

೨. ಮಂದಾಕಿನಿ-ಗಂಗಾನದಿ; ಪೊಡಮಡು-ನಮಸ್ಕರಿಸು; ನಾವೆ-ದೋಣಿ; ಘೂರ್ಮಿಸು-ಗರ್ಜಿಸು; ಹಳು-ಕಾಡು; ಕರ್ಕಶಮಾರ್ಗ-ಕಠಿಣದಾರಿ.

೩. ಮಖ-ಯಜ್ಞ; ದಿವ- ಸ್ವರ್ಗ; ಪಯೋನಿಧಿ- ಹಾಲ್ಗಡಲು; ನಿರುತ-ನಿರಂತರ, ಸತತ; ಸೋಮ-ಸೋಮಲತೆ, ಚಂದ್ರ; ಅರ್ಕ-ಸೂರ್ಯ, ಎಕ್ಕೆಗಿಡ; ಶಿಖಿ-ಅಗ್ನಿ, ನವಿಲು; ಸಹಸ್ರಾಕ್ಷ-ಇಂದ್ರ, ನವಿಲು; ಹರಿ-ವಿಷ್ಣು, ಸಿಂಹ; ಶಿವ-ಶಂಕರ, ಮುಳ್ಳು; ಧುರ-ಯುದ್ಧ; ನಭ-ಆಕಾಶ; ಶರ-ಹುಲ್ಲು, ಬಾಣ; ಪುಂಡರೀಕ-ಹುಲಿ, ಕಮಲ; ವಿದ್ರುಮ-ಮರ, ಹವಳ; ಋಕ್ಷ-ಕರಡಿ, ನಕ್ಷತ್ರ.

೪. ಸುಹವಿ-ಹವಿಸ್ಸು; ದಾರುದಾರುಣದ-ಅತಿಭಯಂಕರವಾದ; ಅಗ್ನಿಹೋತ್ರ-ಯಜ್ಞಕುಂಡ.

೫. ಉರೆ-ಬಹಳ; ತರಣಿ-ಸೂರ್ಯ; ಬೇಗುದಿ-ಸಂತಾಪ.

೬. ಸೀವರಿಸು-ಸಹಿಸಲಾರದೆ; ವಿಭು-ರಾಜ; ವಿಪಿನ-ಕಾಡು; ಒಯ್ಯೊಯ್ಯನೆ-ಮೆಲ್ಲಮೆಲ್ಲನೆ.

೭. ಫಲಿತ ಕದಳಿ-ಗೊನೆಯಿರುವ ಬಾಳೆಗಿಡ; ಹಮ್ಮೈಸು-ಪ್ರಜ್ಞೆತಪ್ಪು.

೮. ರಘೂದ್ವಹಂ-ರಘುವಂಶ ಶ್ರೇಷ್ಠ; ನೆಗಳ್ದ-ಶ್ರೇಷ್ಠವಾದ; ನಿರೂಪ-ಆಜ್ಞೆ; ಕಣ್ಬಟ್ಟೆ-ಮುಂದಿನ ದಾರಿ.

೯. ಕೌಶಿಕ-ವಿಶ್ವಾಮಿತ್ರ

೧೦. ಕಾಕುತ್ಸ್ಥ-ರಾಮ; ತಳುವು-ತಡಮಾಡು.

೧೧. ಪಾತಕ-ಪಾಪ; ಆರ್ತೆ-ದುಃಖಿತೆ.

೧೨. ತೃಣ-ಹುಲ್ಲು; ಗುಲ್ಮ-ಪೊದೆ.

೧೩. ಧರಣಿಸುತೆ–ಸೀತೆ; ಮೈಯುಡುಗಿ–ದೇಹವನ್ನು ಕುಗ್ಗಿಸಿ; ನಿಜವೈರ–ತಮ್ಮ ತಮ್ಮಲ್ಲಿನ ವೈರ.

೧೪. ಪಥ–ದಾರಿ; ಹಲುಬು–ದುಃಖಿಸು.

೧೫. ಯೂಪ–ಯಜ್ಞಪಶುವನ್ನು ಕಟ್ಟುವ ಕಂಬ; ಸನ್ನುತ–ಪ್ರಸಿದ್ಧ; ಬನ್ನ–ದುಃಖ; ಬಗೆಗೆಟ್ಟು–ದಿಕ್ಕುತೋಚದೆ; ಪಾಡಳಿದು–ಅನಾಥವಾಗಿ, ನೆಲೆಗೆಟ್ಟು.

೧೬. ಯುಗಳ–ಅವಳಿ; ಓವು–ರಕ್ಷಿಸು; ರಾವಣಾರಿ(ರಾವಣ+ಅರಿ)–ರಾಮ.

## I. ಸಂದರ್ಭ ಸೂಚಿಸಿ ವಿವರಿಸಿ:

೧. ಅಹಹಯೆಂದಡಿಗಡಿಗೆ ತಲೆಗೊಡಹುವಂತಿರಲ್.
೨. ಇಲ್ಲಿಗೇಕೈತಂದೆ ತಂದೆ ಸೌಮಿತ್ರಿ.
೩. ಮೆಲ್ಲನೀ ವಿಪಿನಕೊಡಗೊಂಡು ಬಂದೆಂ.
೪. ರಾಮನ ಸೇವೆ ಸಂದುದೇ ತನಗೆ.
೫. ಹರಧನುವನುಡಿದೆನ್ನಂ ಮದುವೆಯಾದಂ.
೬. ಲೋಕದರಸೇಗೈದೊಡಂ ತನ್ನ ಕಿಂಕರರ್ ಬೇಕುಬೇಡೆಂದು ಪೇಳರೆ.
೭. ಸಲಹಿಕೊಂಬುದು ತನ್ನ ಮಾತೆಯಂ.
೮. ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ.
೯. ಹಲುಬಿದಳ್ ಕಲ್ಮರಂ ಕರಗುವಂತೆ.
೧೦. ಜನಕಂಗೆ ನಾವನ್ಯರಲ್ಲ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಸೌಮಿತ್ರಿ ಸೀತೆಯನ್ನು ಎಲ್ಲಿಗೆ ಕರೆದುಕೊಂಡು ಹೋದನು?
೨. ರಾಮನ ಆಜ್ಞೆ ಏನು?
೩. ಲಕ್ಷ್ಮಣನ ಮಾತು ಕೇಳಿದ ಸೀತೆ ಭೂಮಿಗೆ ಹೇಗೆ ಬಿದ್ದಳು?
೪. ಕಾಡಿನಲ್ಲಿ ತನಗೆ ಯಾರ ನೆರವುಂಟೆಂದು ಸೀತೆ ಹೇಳುತ್ತಾಳೆ?
೫. ಸೀತೆ ಯಾರಲ್ಲಿ ತಪ್ಪಿಲ್ಲವೆಂದು ಹೇಳುತ್ತಾಳೆ?
೬. ಸೀತೆ ಲಕ್ಷ್ಮಣನಿಗೆ ಏನೆಂದು ಹಾರೈಸಿ ಬೀಳ್ಕೊಡುತ್ತಾಳೆ?
೭. ಭೂದೇವಿಯ ಮಗಳು ಯಾರು?
೮. ವಾಲ್ಮೀಕಿ ಏನನ್ನು ಹುಡುಕುತ್ತಾ ವನಕ್ಕೆ ಬಂದನು?
೯. ರಾವಣಾರಿ ಎಂದರೆ ಯಾರು?
೧೦. ಸೀತೆಯನ್ನು ಆಶ್ರಮಕ್ಕೆ ಕರೆತಂದವರು ಯಾರು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಸೀತೆ ಪ್ರವೇಶಿಸಿದ ಕಾಡು ಹೇಗಿತ್ತು?

೨. ಲಕ್ಷ್ಮಣ ದುಃಖಿತನಾಗಲು ಕಾರಣವೇನು?

೩. ಮೂರ್ಛಿತಳಾದ ಸೀತೆಯನ್ನು ಲಕ್ಷ್ಮಣ ಹೇಗೆ ಉಪಚರಿಸಿದನು?

೪. ಸೀತೆಗೆ ಸೌಮಿತ್ರಿಯು ಹಿಂತಿರುಗಿ ಹೋಗೆಂದು ಏಕೆ ಹೇಳಿದಳು?

೫. ಸೀತೆಯನ್ನು ಕಾಡಿನ ಪ್ರಾಣಿಗಳು ಹೇಗೆ ಉಪಚರಿಸಿದವು?

## IV. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಸೀತೆ-ಲಕ್ಷ್ಮಣರು ಮಹಾರಣ್ಯವನ್ನು ಪ್ರವೇಶಿಸಿದ ಸನ್ನಿವೇಶವನ್ನು ವಿವರಿಸಿ.

೨. ಕಾಡಿನಲ್ಲಿ ಜಾನಕಿ ಏನೇನು ಕಾಣಲು ಬಯಸಿದಳು?

೩. ಸೀತೆಯನ್ನು ಕಾಡಿನಲ್ಲಿ ಬಿಡಲು ಬಂದ ಲಕ್ಷ್ಮಣನ ಬೇಗುದಿ ಹೇಗಿತ್ತು?

೪. ರಾಮನ ಆಜ್ಞೆಯನ್ನು ಲಕ್ಷ್ಮಣನು ಸೀತೆಗೆ ಹೇಗೆ ತಿಳಿಸಿದ?

೫. ಸೀತೆ ಹಿಂದಿನ ಘಟನೆಗಳನ್ನು ನೆನಪಿಸಿಕೊಂಡು ಹೇಗೆ ದುಃಖಿಸುತ್ತಾಳೆ?

೬. ಕಾಡಿನಲ್ಲಿ ಸೀತೆಯನ್ನು ರಕ್ಷಿಸುವ ಜವಾಬ್ದಾರಿಯನ್ನು ಲಕ್ಷ್ಮಣನು ಯಾರಿಗೆ, ಹೇಗೆ ವಹಿಸುತ್ತಾನೆ?

೭. ಸೀತೆ ಕಲ್ಮರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ.

೮. ವಾಲ್ಮೀಕಿ ಸೀತೆಯನ್ನು ಹೇಗೆ ಸಂತೈಸುತ್ತಾನೆ?

೯. 'ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಎಂಬ ಸೀತೆಯ ನಿಲುವನ್ನು ವಿಶ್ಲೇಷಿಸಿ.

## V. ಭಾಷಾಭ್ಯಾಸ: ಕೂಡಿಸಿ/ ಬಿಡಿಸಿ ಬರೆಯುವ ಪ್ರಕ್ರಿಯೆ:

ಹಳಗನ್ನಡ ಕವಿಗಳಲ್ಲಿ ಹಾಗೂ ಆಡು ಭಾಷೆಯಲ್ಲಿ ನಾವು ಸಾಮಾನ್ಯವಾಗಿ ಒಂದಕ್ಕಿಂತ ಹಲವು ಪದಗಳನ್ನು ಒಟ್ಟಿಗೆ ಕೂಡಿಸಿ ಬಳಸುವ ಪರಿಪಾಠವಿದೆ. ಅದು ಒಂದು ಸಮೂಹ ಪದವಾಗುತ್ತದೆ. ಕಾವ್ಯಗಳನ್ನು ಓದುಗರು ಸುಲಭವಾಗಿ ಅರ್ಥೈಸಿ ಕೊಳ್ಳಲು ಈ ಸಮೂಹ ಪದಗುಚ್ಚ ಗಳನ್ನು ಬಿಡಿಸಿ ಕೊಳ್ಳಬೇಕಾಗುತ್ತದೆ. ಉದಾ: ಕಲ್ಮರಂ= ಕಲ್+ಮರಂ, ಜಗಜ್ಜನನಿ= ಜಗತ್ + ಜನನಿ. **ಪಠ್ಯದಲ್ಲಿ ಬರುವ ಕೂಡುಪದಗಳನ್ನು ಗುರುತಿಸಿ, ಬಿಡಿಸಿ ಬರೆಯುವುದನ್ನು ಅಭ್ಯಾಸ ಮಾಡಿ.**

**ಆಕರ:** ಕನ್ನಡ ಜೈಮಿನಿ ಭಾರತ – ಸಂ: ದೇವುಡು ನರಸಿಂಹಶಾಸ್ತ್ರಿ
ಬಿ. ಶಿವಮೂರ್ತಿ ಶಾಸ್ತ್ರಿ

ಜೈಮಿನಿ ಭಾರತ ಸಂಗ್ರಹ – ದೇಜಗೌ

ಹೆಚ್ಚಿನ ಓದು: ರಾಮಾಶ್ವಮೇಧ – ಮುದ್ದಣ

ಜೈಮಿನಿ ಭಾರತ – ಅ.ರಾ. ಸೇತುರಾಮರಾವ್

ವಾಲ್ಮೀಕಿಯ ಭಾಗ್ಯ – ಕುವೆಂಪು

ಮಾನಿಷಾದ – ಗಿರೀಶ್ ಕಾರ್ನಾಡ್

**ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ**
**– ನಾಗಚಂದ್ರ**

# ೫. ತಲ್ಲಣಿಸದಿರು ಕಂಡ್ಯ ತಾಳು ಮನವೇ

–ಕನಕದಾಸರು

ಸಮಸ್ಯೆಗಳು ಸಹಜ. ಯಾವುದಕ್ಕೂ ಆತಂಕಪಡುವ ಅಗತ್ಯವಿಲ್ಲ. ಪ್ರತಿ ಸಮಸ್ಯೆಗೂ ಉತ್ತರ ಇದ್ದೇ ಇರುತ್ತದೆ. ಸಂಕೀರ್ಣ ಬದುಕಿನಲ್ಲಿ ತಾಳ್ಮೆ ತುಂಬಾ ಮುಖ್ಯ. ಪ್ರತಿ ಕ್ಷಣದ ಸಂತಸವನ್ನು ಅನುಭವಿಸಬೇಕು. ಜಗತ್ತಿನ ಚರಾಚರಗಳ ಬದುಕು ಇದಕ್ಕೆ ಹೊರತಲ್ಲ.

ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥ಪ॥

ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ ೧

ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ ೨

ನವಿಲಿಗೆ ಚಿತ್ರ ಬರೆದವರು ಯಾರು
ಪವಳದ ಲತೆಗೆ ಕೆಂಪಿಟ್ಟವರು ಯಾರು
ಸವಿಮಾತಿನರಗಿಳಿಗೆ ಹಸುರು ಬರೆದವರು ಯಾರು
ಅವನೆ ಸಲಹುವನು ಇದಕೆ ಸಂಶಯವಿಲ್ಲ ೩

ಕಲ್ಲಿನಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರ ತಂದೀವರಾರು
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ೪

## ಕೀರ್ತನೆ– ಕೀರ್ತನಕಾರ: ಕನಕದಾಸರು(೧೫೦೯–೧೬೦೭)

ಕನಕದಾಸರು ಪ್ರಮುಖ ಕೀರ್ತನಕಾರರಲ್ಲಿ ಒಬ್ಬರು. ಪುರಂದರದಾಸರ ಸಮಕಾಲೀನರು. ಹಾವೇರಿ ಜಿಲ್ಲೆಯ ಬಾಡ ಇವರ ಜನ್ಮ ಸ್ಥಳ. ತಂದೆ ಬೀರಪ್ಪ, ತಾಯಿ ಬಚ್ಚಮ್ಮ. ತಿಮ್ಮಪ್ಪನಾಯಕನಾಗಿದ್ದ ಇವರು ಕನಕದಾಸರಾದದ್ದು ಐತಿಹ್ಯ. ಕಾಗಿನೆಲೆಯ ಆದಿಕೇಶವ ಇವರ ಆರಾಧ್ಯ ದೈವ. ವಿಜಯನಗರದ ಪಾಳೆಯಗಾರರಾಗಿದ್ದು ಯುದ್ಧದಲ್ಲಿನ ಹಿಂಸೆಯನ್ನು ಕಂಡು ವೈರಾಗ್ಯದಿಂದ ಅಧಿಕಾರವನ್ನು ತ್ಯಜಿಸಿದರು. ಕೀರ್ತನೆ, ಉಗಾಭೋಗ, ಸುಳಾದಿಗಳನ್ನು ರಚಿಸಿದ್ದಾರೆ. ಮೋಹನತರಂಗಿಣಿ, ಹರಿಭಕ್ತಿಸಾರ, ನಳಚರಿತೆ, ರಾಮಧಾನ್ಯ ಚರಿತೆ ಎಂಬ ಕಾವ್ಯಗಳನ್ನು ರಚಿಸಿದ್ದಾರೆ. 'ಕಾಗಿನೆಲೆಯಾದಿಕೇಶವ' ಇವರ ಅಂಕಿತ.

ಲೋಕದ ಜಂಜಡಗಳಿಗೆ ಮನುಷ್ಯ ತಲ್ಲಣಿಸಬಾರದು. ಎಲ್ಲ ಜೀವಿಗಳನ್ನು ದೈವಶಕ್ತಿಯು ತಾಯಿಯ ರೀತಿಯಲ್ಲಿ ರಕ್ಷಿಸುತ್ತದೆ ಎಂಬುದನ್ನು ಹಲವು ಉದಾಹರಣೆಗಳ ಮೂಲಕ ಈ ಕೀರ್ತನೆ ಪ್ರಸ್ತುತ ಪಡಿಸುತ್ತದೆ.

### ಪದಕೋಶ:

ತಲ್ಲಣ–ತಳಮಳ; ಪವಳ–ಹವಳ, ನವರತ್ನಗಳಲ್ಲಿ ಒಂದು, ಕೆಂಪು; ಲತೆ–ಬಳ್ಳಿ; ಅರಗಿಳಿ–(ಅರಸ+ಗಿಳಿ) ಮುದ್ದುಗಿಳಿ, ಅರಸಂಚೆ.

### I. ಸಂದರ್ಭ ಸೂಚಿಸಿ ವಿವರಿಸಿ:

೧. ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ.

೨. ಪವಳದ ಲತೆಗೆ ಕೆಂಪಿಟ್ಟವರು ಯಾರೊ.

೩. ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.

### II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ವೃಕ್ಷವು ಎಲ್ಲಿ ಹುಟ್ಟಿತ್ತು?

೨. ಮೃಗಪಕ್ಷಿಗಳು ಎಲ್ಲಿ ಆಡುತ್ತಿದ್ದವು?

೩. ಯಾವ ತೆರದಿ ಸ್ವಾಮಿ ನಮ್ಮನ್ನು ಬಿಡದೆ ರಕ್ಷಿಸುವನು?

೪. ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?

೫. ಕಪ್ಪೆಗಳು ಎಲ್ಲಿ ಹುಟ್ಟಿ ಕೂಗುತ್ತವೆ?

### III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ವೃಕ್ಷವನ್ನು ಆದಿಕೇಶವ ಹೇಗೆ ಸಲಹುತ್ತಾನೆ?

೨. ಮೃಗಪಕ್ಷಿಗಳನ್ನು ಸ್ವಾಮಿಯು ಹೇಗೆ ರಕ್ಷಿಸುತ್ತಾನೆ?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಎಲ್ಲವನ್ನು ರಕ್ಷಿಸುವ ದೇವರು ನಮ್ಮನ್ನೂ ರಕ್ಷಿಸುತ್ತಾನೆ ಎಂಬುದನ್ನು ದಾಸರು ಹೇಗೆ ಹೇಳಿದ್ದಾರೆ?

೨. ಕನಕದಾಸರು 'ತಲ್ಲಣಿಸದಿರು ಮನವೆ' ಎನ್ನಲು ಕಾರಣವೇನು?

**ಆಕರ:** ದಾಸ ಸಾಹಿತ್ಯ ಸಂಪುಟ : – ಸಂ: ಸುಧಾಕರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

**ಗುಂಗುರು ಮುಸುಕಿದೊಡಾನೆಯಳ್ಕುವುದುಂಟೆ?**
**–ಬಾಹುಬಲಿ (ನಾಗಕುಮಾರ ಚರಿತಂ)**

# ೬. ಸಿಸು ಮಕ್ಕಳಿಗೊಲಿದ ಮಾದೇವ

–ಜಾನಪದ

**ಇದು ಸ್ಪರ್ಧಾತ್ಮಕ ಜಗತ್ತು. ಸ್ಪರ್ಧೆಯಲ್ಲಿ ಗೆದ್ದವನಿಗೆ ಸಕಲವೂ ದೊರೆಯತ್ತದೆ. ನಮ್ಮ ಕಾಲದಲ್ಲಿ ಸ್ಪರ್ಧೆಗೆ ವಿದ್ಯೆ ಸಾಧನವಾಗಿದೆ. ವಿದ್ಯೆಯನ್ನು ಕಲಿಯ ಬೇಕಾದವನಿಗೆ ಸಮರ್ಥ ಗುರುವಿನ ಆಯ್ಕೆ ಅನಿವಾರ್ಯ. ಗುರು ಸದಾ ಕಾಲ ಯೋಗ್ಯ ಶಿಷ್ಯನ ಶೋಧನೆಯಲ್ಲಿ ತೊಡಗಿರಬೇಕು.**

ಲಿಂಗಾ ಲಿಂಗ ಎನ್ನುವರು
ನಿಮ್ಮ–ಲಿಂಗವ್ಯಾರು ಬಲ್ಲಾರು ।ಸೊಲ್ಲು। ೧

ಮೂಡಾಲ ಮಲೆಯಲ್ಲಿ ಮಾದೇವ
ಏಗದಲ್ಲಿ ತಾವೊರಗವರೆ । ೨

ಏಗದಲ್ಲಿ ತಾವೋರಗವರೆ
ಏನೆಂದು ಯೋಚನೆ ಮಾಡವರೆ । ೩

ನಿಜಾ ನೋಡಿ ಕಣ್ಣು ಕೊಟ್ಟಂತ
ಬ್ಯಾಡಾರ ಕನ್ನಯ್ಯ ಪಡುದಿವ್ನಿ। ೪

ಸತ್ಯವಂತೆ ಸಂಕಮ್ನ ಮಕ್ಳ
ನಾ–ದತ್ತುವಾಗಿ ಪಡುದಿವ್ನಿ। ೫

ಎಷ್ಟೊತ್ತು ಯಾವ ಗಳುಗೇಲು
ಈ ಮಕ್ಳು ಬುಟ್ಟು ಹೋಗರಲ್ಲ। ೬

ಕಡ್ಡಿ ಹಳ್ಳುಕ್ಕೆ ಸಿಸುಮಕ್ಕ
ನನ್ಗೆ ಪುಷ್ಪ ತರೋದ್ಕೆ ಹೋಗವ್ರೆ। ೭

ಇವುರ್ ಮೂರು ಜನರ ಸತ್ಯಾವ
ನಾ ತಿಳಿಬೇಕಂತರೆ ಮಾದೇವ। ೮

ಮಾಯಾದ ಮಳೆಯ ಕರ್ದು ನಾನು
ಈ ಮಕ್ಕಳ ಸತ್ಯ ನೋಡಬೇಕು। ೯

ದೇವೇನ್ರ ಪತಿಯ ಬಳುಗೆ ನನ್ನ
ಮುದ್ದುಮಾದೇವ ಬಂದವುರೆ। ೧೦

ಹಳ್ಳಕೊಳ್ಳ ತುಂಬಿ ತುಳುಕೂವ
ಮಾಯಾದ ಮಳೆಯ ಕಳುಗಪ್ಪ। ೧೧

ವಾಸುದೇವನ ಕೂಗಿದರು
ನನ್ನ–ಮಾಯಕಾರ ಮಾದೇವ। ೧೨

ಜಗತ್ಯವೆಲ್ಲ ಬುಗುರಿ ತಿರಿಯೊಂಗೆ
ಸುಂಟರಗಾಳಿಯ ಕಳುಗಪ್ಪ। ೧೩

ನಾಕುಲೋಕನು ಎಕುವಾಗಿ
ನೀ ಬೀಸಬೇಕೆಂದ ಮಾದೇವ। ೧೪

ಈ ಕೆಂಡಗಣ್ಣಯ್ನ ಮಾತೀಗೆ
ನೀವುತ್ರ ಹೇಳಿರೋ ಏನ್ರಪ್ಪ। ೧೫

ಒಪ್ಪುಕೊಂಡೊ ಮಾದೇವ
ನೀವೊಪ್ಪುದಂಗೆ ಮಾಡುತೀವಿ। ೧೬

ಗುಡುಗಾಜಮ್ಮನ ಕರುದವರೆ
ನೀ ಗುಡುಗಾ ಬೇಕು ಅಂದವರೆ ೧೭

ನೀ ಮಗ ಬೊಮ್ಮರಾಯನ ಕಟುಕೊಂಡು
ನೀ– ಮಾಯಾದ ಸಿಳ್ಳ ಕೊಡಬೇಕು। ೧೮

ನನ್ನ ಮಾದೇವ್ನ ಮಾತ ಕೇಳವ್ರೆ
ಕಾರೆಂಬ ಕತ್ತಲ್ಯ ಮಾಡವ್ರೆ। ೧೯

ಕಾರೊಂಬೋ ಕತ್ತಲ್ಯ ಮಾಡವುರೆ
ಜೋರೆಂಬ ಮಳೆಯ ಕರುದವರೆ ೨೦

ಒನೊನ್ ಚಂಡುನ ಗಾತ್ರ ಹನಿಗಳು
ಅಟ್ಟಬೆಟ್ಟಾಕೆ ಸುರಿಯಾವು। ೨೧

ಗಂಗೆ ಸುರಿಯುವ ರವುಸೀಗೆ
ಭೂಮಿ ಆಕಾಶ ಒಂದಾದೊ। ೨೨

ಕಾಡು ಪ್ರಾಣಿಗಳು ಮಾದೇವ
ಕೊರುಕ್ಲಲ್ಲೆಲ್ಲ ತೇಲೀವೊ। ೨೩

ಆನೆ ಆನೆ ಮದ್ದಾನೆ ಹಿಂಡ
ಹೊತ್ಕೊಂಡೋಯ್ತಾಳೆ ಗಂಗಮ್ಮ। ೨೪

ಗುಡುಗು ಸಿಳ್ಳೀನ ರವುಸೀಗೆ
ನಡುಗೋದು ನಾಕು ಲೋಕಗಳು। ೨೫

ಕಡ್ಡಿಹಳ್ದಲ್ಲಿ ಕನ್ನಯ್ಯ
ಕತ್ತೆತ್ತಿ ಜಗವ ನೋಡವ್ನೆ। ೨೬

ಎಂದೂ ಬಾರದ ಮಾರಿ ಮಳೆ
ಇಂದು ಬಂದ ಕಾರಣ ಕಾಣ್ಣಲ್ಲ। ೨೭

ಈ ಕೆಟ್ಟಗಂಗೆ ಬುಡಳಲ್ಲ
ನಮ್ಮೊತ್ತುಕೊಂಡು ಹೋಗುವಳು। ೨೮

ಕಾರಯ್ಯ, ಬಿಲ್ಲಯ್ಯ, ಬ್ಯಾಡಾರ ಕನ್ನಯ್ಯ
ದಿಕ್ಕೆಟ್ಟು ದುಕ್ಕ ಪಡುತಾರೆ। ೨೯

ಬಂಧು ಬಳಗ ಇಲ್ದೋರ್ಗೆ ಸ್ವಾಮಿ
ನೀನಿಂತ ಬಂಧಾನ ಕೊಟ್ಯಪ್ಪ। ೩೦

ಹುಚ್ಚು ಗಂಗಮ್ಮ ಬಂದು ನಮ್ಮ
ಅಪ್ಪಾನ ಗುಡಿಯು ಮುಚ್ಕೋಯ್ತು। ೩೧

ಇಂತೆ ದೊಡ್ಡ ಅಪ್ಪಾನೆ ಮುಳುಗೋದ ಮೇಲೆ
ನಾವು ಬಾಳಬೋದೇನೊ ಮಾದೇವ। ೩೨

ಬಾಯಿ ಬಾಯ ಬಡ್ಕೋತಾನೆ
ಸತ್ಯವುಳ್ಳ ಬ್ಯಾಡ್ರು ಕನ್ನಯ್ಯ। ೩೩

ಬ್ಯಾಡುಗಂಪನ್ಕೆ ಒಲುದೋನೆ
ನಾ ಬೇಡುಕೊಳ್ತೀನಿ ಮಾದೇವ। ೩೪

ನೀ ಬಂದು ಮೊಕುವ ತೋರದಿದ್ದಾರೆ
ನಾ ನಿಂದು ಪ್ರಾಣ ಬುಡುತೀನಿ। ೩೫

ನೀರು ತೆರೆಯ ಒಡುದಾನು
ನನ್ನಪ್ಪ ತೇಲಿ ಬೀಳುತಾನೆ। ೩೬

ನನ್ನಪ್ಪ ತೇಲಿ ಬಿದ್ದಾನಲ್ಲೊ
ನನ್ನ ಮಾಯಾಕಾರ ಮಾದೇವ। ೩೭

ನೀರೀನ ಸುಳಿಗೆ ಮಾದೇವ ಸಿಕ್ಕಿ
ಗರಗರಗರನೆ ತಿರುಗವನೆ। ೩೮

ಸುತ್ತ ಮುತ್ತ ನೋಡವ್ನೆ
ಸತ್ವಂತ ಬ್ಯಾಡಾರ ಕನ್ನಯ್ಯ। ೩೯

ನನ್ನಪ್ನ ಎಳುಕೊಂಡಂಗೆ ಈ ಗಂಗೆ
ನನ್ನೂ ಎಳುಕೊಂಡು ಬುಡುತಾಳೆ। ೪೦

ಬಲಿಯಕಲ್ಲ ತಬ್ಬವುನೆ
ಬಲವಾಗಿ ಹಿಡ್ಕೊಂಡು ನಿಂತವುನೆ। ೪೧

ಕಾರಯ್ಯ ಬಿಲ್ಲಯ್ಯ ನೋಡಿದರು
ಕಣ್ಣಲ್ಲಿ ನೀರ ಕೆಡುಗಿದರು। ೪೨

ನಮ್ಮಿಗೆ ಬುಟ್ಟು ಮಾದೇವ್ರೊ
ನೀನು ಗಂಗೆ ಒಳುಗೆ ಹೋದಾಯೊ। ೪೩

ಗುರುವಿಗೆ ಶಿಷ್ಯಾರೆ ಇಲ್ಲವಲ್ಲೊ
ಶಿಷ್ಯರ್ಗೆ ಗುರುವೆ ಇಲ್ಲುವಲ್ಲೊ। ೪೪

ನಾವು ಸತ್ತರೂ ಚಿಂತಿಲ್ಲ ಕಾಣ್ರೊ
ನಮ್ಮಪ್ಪ ಮಾದೇವ್ನ ಹಿಡುಕೊಳ್ರೊ।೪೫

ಈ ಜಗತ್ಯವಾಳುವ ಗುರುದೇವನ
ನಾವೋಗಿ ಈವತ್ತು ಹಿಡಿಯಾನ। ೪೬

ಆಲುಬೆಣ್ಣೆ ಕೊಟ್ಯಲ್ಲ ಗುರುವೆ
ಹೆತ್ತವ್ವನಂಗೆ ಸಲುವೀದೆ। ೪೭

ನಮ್ಗೆ ಗೆಡ್ಡೆಗೆಣಸು ಕೊಡುನಿಲ್ಲ
ಹಾಲು ತುಪ್ಪಕೊಟ್ಯಲ್ಲಪ್ಪ। ೪೮

ಇಂತ ಹಾಲು ಬೆಣ್ಣೆ ಕೊಟ್ಟಪ್ಪ
ನಾವೆಂದಿಗು ನಿನ್ನ ಮರಿಯಾವು। ೪೯

ಮಕ್ಕಳ ಮಾತ ಕೇಳವುರೆ
ನನ್ನ ಮಕ್ಕಳಿಗೊಲುದ ಮಾದೇವ। ೫೦

ತಬ್ಬಿಕೊಂಡಿಳಿಯೂವ ಮಕ್ಕಳ
ಪ್ರೇಮಾಕೆ ಒಲಿದಾರು ಮಾದೇವ। ೫೧

ಇಂತ ಭಕ್ತಿವಂತ ಮಕ್ಕಳ ಸ್ವಾಮಿ
ತಮ್ಮ ಎಡಬಲದಲ್ಲಿ ತಬ್ಬವರೆ। ೫೨

ನನ್ನ ಸಿಸುಮಕ್ಕಳ ಪ್ರೀತಿಯಿಂದ
ನಾನಾದೆ ಮಕ್ಕಳ ಮಾದೇವ। ೫೩

ಮಾಯಾದ ಮಳೆಗೆ ಸನ್ನೆ ಮಾಡಿ
ಮೇಲೋಕುಕ್ಕೆ ಕಳುಗವರೆ। ೫೪

ಕಾರಯ್ನ ಕಂಡಾರೆ ಕರುಣ ನನ್ನಪ್ಪಂಗೆ
ಬಿಲ್ಲಯ್ನ ಕಂಡಾರೆ ಬಲು ಪ್ರೇಮ। ೫೫

ಮಕ್ಕಳನೆತ್ತಿ ಹೆಗಲಲೊತ್ಕಂಡು
ಗುಡಿಗೆ ಬಂದಾರು ಮಾದೇವ। ೫೬

ನಂಬಿದೋರ ಮನದಲ್ಲಿ ನನ್ನಪ್ಪ
ತುಂಬಿ ತುಳುಕಾರು ಮಾದೇವ। ೫೭

**ಜಾನಪದ ಕಾವ್ಯ – ಪರಿಚಯ:**

'ಮಲೆಯ ಮಾದೇಶ್ವರ' ಮಹಾಕಾವ್ಯದಲ್ಲಿ ೧೪ ಕಥಾ ಭಾಗಗಳಿವೆ. ಒಂದೊಂದು ಕಥಾ ಭಾಗವನ್ನು ಒಂದೊಂದು ಸಾಲು ಎಂದು ಕರೆಯುತ್ತಾರೆ. ಒಂದೊಂದು ಸಾಲಿನಲ್ಲಿ ಅನೇಕ ಭಾಗ ಅಥವಾ ಕವಲುಗಳಿದ್ದು ಅವನ್ನು 'ಕವಟ್ಲು' ಎಂದು ಕರೆದಿದ್ದಾರೆ.

ಸಂಕಮ್ಮನ ಮಕ್ಕಳಾದ ಕಾರಯ್ಯ ಬಿಲ್ಲಯ್ಯರನ್ನು ಮಾದೇಶ್ವರ ತನ್ನ ಶಿಶು ಮಕ್ಕಳನ್ನಾಗಿ ಮಾಡಿಕೊಳ್ಳುತ್ತಾನೆ. ಅವರನ್ನು ಪರೀಕ್ಷೆಗೆ ಒಡ್ಡಿದ ಸಂದರ್ಭ ಇದಾಗಿದೆ.

ಡಾ. ಪಿ. ಕೆ. ರಾಜಶೇಖರ (೧೯೪೭) ಪ್ರಸಿದ್ಧ ಜಾನಪದ ತಜ್ಞರು. ಪಿರಿಯಾಪಟ್ಟಣದಲ್ಲಿ ಜನಿಸಿದ ಇವರು ಜನಪದ ಮಹಾಕಾವ್ಯಗಳಾದ ಮಲೆಯ ಮಾದೇಶ್ವರ, ಜನಪದ ಮಹಾಭಾರತ, ಜನಪದ ರಾಮಾಯಣ, ಪಿರಿಯಾಪಟ್ಟಣ ಕಾಳಗ, ಬೆಟ್ಟದ ಚಾಮುಂಡಿ ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ.

**ಪದಕೋಶ:**

ಮೂಡಲ–ಪೂರ್ವ ದಿಕ್ಕು; ಏಗ–ಯೋಗ; ಒರಗು–ಮಲಗು; ಬ್ಯಾಡಾರ–ಬೇಡರ; ಸಿಸು ಮಕ್ಕ = ಶಿಷ್ಯರು, ಗಳುಗೆ–ಗಳಿಗೆ, ಕ್ಷಣ; ದೇವೇನ್ರಪತಿ–ಇಂದ್ರ; ವಾಸುದೇವ–ವಾಯುದೇವ; ತಿರಿಯೊಂಗೆ–ತಿರುಗುವಂತೆ; ಕಳುಗು–ಕಳುಹು; ಕೆಂಡಗಣ್ಣಯ್ಯ(ಕೆಂಡದಂತೆ (ಬೆಂಕಿ) ಕಣ್ಣುಳ್ಳವ)–ಮಾದೇಶ್ವರ; ಸಿಳ್ಳು–ಸಿಡಿಲು; ಕಾರ್‍ರೆಂಬಕತ್ತಲ್ಯ– ಕಗ್ಗತ್ತಲೆ; ರವುಸು–ರಭಸ; ಬ್ಯಾಡುಗಂಪನ–ಕಂಪಣಬೇಡರು ವಾಸಿಸುತ್ತಿದ್ದ ಪ್ರದೇಶ; ಮೊಕು–ಮೊಗ; ಮೇಲೋಕ–ಸ್ವರ್ಗ; ಒತ್ಕೊಂಡು–ಹೊತ್ತುಕೊಂಡು.

## I. ಸಂದರ್ಭ ಸೂಚಿಸಿ ವಿವರಿಸಿ:

೧. ಮಾಯಾದ ಮಳೆಯ ಕಳುಗಪ್ಪ.

೨. ನೀವೊಪ್ಪುದಂಗೆ ಮಾಡುತೀವಿ.

೩. ಒನೊನ್ ಚಂಡುನ ಗಾತ್ರ ಹನಿಗಳು.

೪. ನೀನಿಂತ ಬಂಧಾನ ಕೊಟ್ಯಪ್ಪ.

೫. ಸತ್ಯವುಳ್ಳ ಬ್ಯಾಡ್ರ ಕನ್ನಯ್ಯ.

೬. ಕಣ್ಣಲ್ಲಿ ನೀರ ಕೆಡುಗಿದರು.

೭. ಹೆತ್ತವ್ವನಂಗೆ ಸಲುವೀದೆ.

೮. ಗುಡಿಗೆ ಬಂದಾರು ಮಾದೇವ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಮಾದೇವ ಎಲ್ಲಿ ಒರಗಿದ್ದಾನೆ?

೨. ಯಾರ ಮಕ್ಕಳನ್ನು ಮಾದೇವ ದತ್ತುವಾಗಿ ಪಡೆದನು?

೩. ಶಿಶುಮಕ್ಕಳು ಹೂ ತರಲು ಎಲ್ಲಿಗೆ ಹೋಗಿದ್ದರು?

೪. ಮಾದೇವ ಮಕ್ಕಳ ಸತ್ಯನೋಡಲು ಏನು ಮಾಡಬೇಕೆನ್ನುತ್ತಾನೆ?

೫. ಮಳೆಯನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ?

೬. ವಾಯುದೇವನನ್ನು ಎಂತಹ ಸುಂಟರಗಾಳಿ ಕಳುಹಿಸು ಎಂದು ಮಾದೇವ ಕೇಳುತ್ತಾನೆ?

೭. ಕಾರೆಂಬೊ ಕತ್ತಲಲ್ಲಿ ಎಂತಹ ಮಳೆ ಬಂತು?

೮. ಗಂಗೆ ಸುರಿಯುವ ರಭಸಕ್ಕೆ ಏನೇನು ಒಂದಾದವು?

೯. ಗಂಗಮ್ಮ ಏನನ್ನು ಹೊತ್ತುಕೊಂಡು ಹೋದಳು?
೧೦. ನೀರಿನ ಸುಳಿಗೆ ಸಿಲುಕಿದ ಮಾದೇವ ಹೇಗೆ ತಿರುಗಿದನು?
೧೧. ಮಾದೇವ ಶಿಷ್ಯರ ಯಾವ ಗುಣಕ್ಕೆ ಒಲಿದನು?
೧೨. ನಂಬಿದವರ ಮನದಲ್ಲಿ ಮಾದೇವ ಹೇಗಿರುತ್ತಾನೆ?

## III. ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಮಾದೇವನ ಶಿಶುಮಕ್ಕಳ ಹೆಸರೇನು?
೨. ಸಿಡಿಲು ಗುಡುಗುಗಳನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ?
೩. ಮಳೆಯನ್ನು ನೋಡಿ ಕನ್ನಯ್ಯ ತನ್ನೊಳಗೆ ಏನೆಂದುಕೊಳ್ಳುತ್ತಾನೆ?
೪. ಶಿಶು ಮಕ್ಕಳು ಬಾಯಿಬಾಯಿ ಏಕೆ ಬಡಿದುಕೊಳ್ಳುತ್ತಾರೆ?
೫. ಬಲಿಯ ಕಲ್ಲನ್ನು ಕನ್ನಯ್ಯ ಬಲವಾಗಿ ಹಿಡಿದುಕೊಳ್ಳುವುದು ಏಕೆ?
೬. ಶಿಶುಮಕ್ಕಳು ನಾವು ಸತ್ತರೂ ಚಿಂತಿಲ್ಲ ಎನ್ನಲು ಕಾರಣವೇನು?
೭. ಮಾದೇವ ತನ್ನ ಶಿಶುಮಕ್ಕಳಿಗೆ ಏನೇನು ನೀಡಿ ಸಲಹಿದನು?
೮. ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಮಾದಪ್ಪ ತನ್ನ ಶಿಶುಮಕ್ಕಳನ್ನು ಪರೀಕ್ಷಿಸಲು ಕಾರಣಗಳೇನು?
೨. ಮಾದೇವ ತನ್ನ ಶಿಶುಮಕ್ಕಳನ್ನು ಪರೀಕ್ಷಿಸಲು ಯಾರ್‍ಯಾರ ಸಹಕಾರವನ್ನು ಹೇಗೆ ಪಡೆದನು?
೩. ಮಳೆ ಉಂಟು ಮಾಡಿದ ಪರಿಣಾಮಗಳನ್ನು ವಿವರಿಸಿ.
೪. ಮಳೆಯಲ್ಲಿ ಸಿಲುಕಿದ ಮಾದೇವನ್ನು ಶಿಷ್ಯರು ಹೇಗೆ ರಕ್ಷಿಸಿದನು?
೫. ಮಾದೇವ ಶಿಷ್ಯರನ್ನು ಹೇಗೆ ಸಲಹಿದನು? ವಿಶ್ಲೇಷಿಸಿ.

## V. ಭಾಷಾಭ್ಯಾಸ:

**ಗ್ರಾಮ್ಯ – ಗ್ರಾಂಥಿಕ ಪದಗಳು:** ಆಡು ಮಾತಿಗೂ, ಬರಹ ಭಾಷೆಗೂ ವ್ಯತ್ಯಾಸವಿರುತ್ತದೆ. ಬರಹದ ಭಾಷೆಗಿಂತ ಆಡುಮಾತಿಗೆ ಹೆಚ್ಚು ಮಹತ್ವವನ್ನು ಆಧುನಿಕ ಭಾಷಾ ಶಾಸ್ತ್ರಜ್ಞರು ನೀಡುತ್ತಾರೆ. **ಉದಾ: ಏಗ–ಯೋಗ; ರವುಸು–ರಭಸ. ಈ ಪಠ್ಯದಲ್ಲಿ ಬರುವ ಗ್ರಾಮ್ಯ ಪದಗಳನ್ನು ಪಟ್ಟಿ ಮಾಡಿರಿ.**

**ಆಕರ** : ಜನಪದ ಮಹಾಕಾವ್ಯ
ಮಲೆಯ ಮಾದೇಶ್ವರ (ಸಂಪುಟ–೨) – ಸಂ: ಡಾ. ಪಿ.ಕೆ. ರಾಜಶೇಖರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

**ಹೆಚ್ಚಿನ ಓದು:**

ಮಂಟೇಸ್ವಾಮಿ ಕಾವ್ಯ, ಜುಂಜಪ್ಪನಕಾವ್ಯ, ಮೈಲಾರಲಿಂಗನ ಕಾವ್ಯ, ಎಲ್ಲಮ್ಮನ ಕಾವ್ಯ, ತುಳುಪಾಡ್ದನ, ಸೋಲಿಗರು ಹಾಡಿದ ಬಿಳಿಗಿರಿರಂಗನ ಕಾವ್ಯ,

೧. ಮಾದೇಶ್ವರ ಕಾವ್ಯ–ಸಾಂಸ್ಕೃತಿಕ ಮುಖಾಮುಖಿ – ಡಾ. ವೆಂಕಟೇಶ ಇಂದ್ವಾಡಿ.
೨. ಕೋಡೆಕಲ್ಲ ಬಸವಣ್ಣ ಒಂದು ಅಧ್ಯಯನ – ಬಸವಲಿಂಗ ಸೊಪ್ಪಿನಮಠ.
೩. ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ – ಡಿ. ಆರ್. ನಾಗರಾಜ.

**ಮಕ್ಕಳು ಬುದ್ಧಿವಂತರೂ ನೀತಿವಂತರೂ ಆಗಿ ಬೆಳೆಯಬೇಕು. ಹಾಗೆ ಬೆಳೆದ ಮಕ್ಕಳೆ ಒಳ್ಳೆಯ ಪ್ರಜೆಗಳು. ಅಂಥ ಪ್ರಜೆಗಳಿಂದ ಕೂಡಿರುವ ದೇಶಕ್ಕೆ ಕೀರ್ತಿ ಬರುತ್ತದೆ.**

**– ಎಂ.ಎಸ್. ಪುಟ್ಟಣ್ಣ**

# ೭. ಅಖಂಡ ಕರ್ಣಾಟಕ!

–ಕುವೆಂಪು

ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಸಾಂಸ್ಕೃತಿಕ ಆತ್ಮ ಚೈತನ್ಯ ಬಹು ಮುಖ್ಯ. ಪ್ರಭುತ್ವ ಸಾಂಸ್ಕೃತಿಕ ಲೋಕಕ್ಕೆ ವಿನೀತವಾಗಿರಬೇಕು. ಪ್ರತಿಯೊಬ್ಬ ಕನ್ನಡಿಗನಲ್ಲೂ ಕನ್ನಡ ಕಾವ್ಯ ಪರಂಪರೆಯ ಸಂಪನ್ನತೆ ಸೂಕ್ಷ್ಮವಾಗಿ ಅಡಕವಾಗಿರುತ್ತದೆ. ಆಳುವವರ ಅಹಮಿಕೆಯನ್ನು ಪ್ರತಿರೋಧಿಸುವ ಸಂಕಲ್ಪ ಎಲ್ಲರಲ್ಲೂ ಒಡಮೂಡಬೇಕು.

ಅಖಂಡ ಕರ್ಣಾಟಕ :
ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ!
ಹರಸುತಿಹನು ದೇವ ಗಾಂಧಿ ;
ಮಂತ್ರಿಸಿಹುದು ಋಷಿಯ ನಾಂದಿ ;
ತನಗೆ ತಾನೆ ಋತಸ್ಯಂದಿ
ಅವಂಧ್ಯೆ ಕವಿಯ ಕಲ್ಪನ !
ಒರ್ವನಾದೊಡೋರ್ವನಲ್ತು ;
ಶಕ್ತಿ ಸರ್ವನಲ್ಪನ?
ಹಿಂದದೊಂದು ಹಿರಿಯ ಕನಸು:
ಇಂದು ಕೋಟಿ ಕೋಟಿ ಮನಸು
ಕೂಡಿ ಮೂಡಿ ನಿಂದ ನನಸು!
ತಡೆವುದೇನೋ ನಿನ್ನ ಕಿನಿಸು
ಒಣರುವಲ್ಪ ಜಲ್ಪನೆ?
ಭುವನ ವಂದ್ಯೆ, ಕೇಳ್, ಅವಂಧ್ಯೆ
ಕವಿಯ ವಿಂಧ್ಯ ಕಲ್ಪನೆ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ
ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೊ
ಸಿರಿಗನ್ನಡ ಸರಸ್ವತಿಯ
ವಜ್ರಕರ್ಣ ಕುಂಡಲ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!
ನೃಪತುಂಗನೆ ಚಕ್ರವರ್ತಿ!
ಪಂಪನಲ್ಲಿ ಮುಖ್ಯಮಂತ್ರಿ!
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ:
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ,
ತನಗೆ ರುಚಿರ ಕುಂಡಲ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಕೀರ್ತಿಶನಿಯ ರಾಜಕೀಯ ನಾಟಕ!
ಬರಿಯ ಹೊಟ್ಟೆ ಬಟ್ಟೆಗಲ್ತೊ :
ಪಕ್ಷ ಜಾತಿ ಕಲಹಕಲ್ತೊ :
ಹಮ್ಮು ಬಿಮ್ಮು ಸೊಮ್ಮಿಗಲ್ತೊ :
ಬಣ್ಣ ಚಿಟ್ಟೆ ಬಾಳಿಗಲ್ತೊ :
ಜೋಳವಾಳಿ ಕೂಳಿಗಲ್ತೊ ;
ದರ್ಪ ಸರ್ಪ ಕಾರ್ಕೋಟಕ
ಸ್ವಾರ್ಥ ಫಣಾ ಕ್ರೀಡೆಗಲ್ತೋ
ರಾಜಕೀಯ ಪೇಟಕ,
ಅಖಂಡ ಕರ್ಣಾಟಕ!

ಅಖಂಡ ಕರ್ಣಾಟಕ:
ಸರಸ್ವತಿಯೆ ರಚಿಸಿದೊಂದರಾಜಕೀಯ ತ್ರೋಟಕ!
ಮೆರೆಯಲಾತ್ಮ ಸಂಸ್ಕೃತಿ;
ಬೆಳಗೆ ಜೀವ ದೀಧಿತಿ;
ಪರಮಾತ್ಮನ ಚರಣದೀಪ್ತಿ
ಶರಣ ಹೃದಯಗಳಲಿ ಹೊತ್ತಿ
ಉಸಿರುಸಿರಿನ ಹಣತೆ ಬತ್ತಿ
ಉರಿಯಲೆಂದು ತಣ್ಣಗೆ;
ಬಾಳ ಸೊಡರ್‌ಗುಡಿಯನೆತ್ತಿ

ತನ್ನ ಮುಡಿಯ ಬಾನಿಗೆತ್ತಿ
ಸೊಗಸಲೆಂದು ರಸಸ್ಫೂರ್ತಿ
ಭಗವಂತನ ಕಣ್ಣಿಗೆ;
ಹಾಡುತಿಹೆನು ಕಂಡ ನಾನು;
ದಿಟ್ಟಿಗೇಡೋ? ಹುಟ್ಟು ಕುರುಡೋ?
ಬುದ್ಧಿ ಬರಡೋ? ಬೇರೆ ಹುರುಡೋ?
ಮೆಳ್ಳಗಣ್ಣ, ಕಾಣೆ ನೀನು?
ಹೇಳು! ತಪ್ಪು ನನ್ನದೇನು?
ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ!
ತಾಯಿ ಕಣಾ! ದೇವಿ ಕಣಾ!
ಬೆಂಕಿ ಕಣಾ! ಸಿಡಿಲು ಕಣಾ!
ಕಾವ ಕೊಲುವ ಒಲವ ಬಲವ
ಪಡೆದ ಚಲದ ಚಂಡಿ ಕಣಾ
ಋಷಿಯ ಕಾಣ್ಬ ಕಣ್ಣಿಗೆ
ವಿರೋಧಿಗಾಸ್ಫೋಟಕ,
ಕಂಡ ಕವಿಗಖಂಡ ದೇವಿ ಕಣಾ ಕರ್ಣಾಟಕ
ಸರಸ್ವತಿಯೆ ರಚಿಸಿದೊಂದರಾಜಕೀಯ ತ್ರೋಟಕ!
ವಿರೋಧಿಗಾಸ್ಫೋಟಕ,
ಅಖಂಡ ಕರ್ಣಾಟಕ:
ಅಲ್ತೋ ನಾವು ನರ್ತಿಪೊಂದು ರಾಜಕೀಯನಾಟಕ!
ಅಖಂಡ ಕರ್ಣಾಟಕ!
ಅಖಂಡಕರ್ಣಾಟಕ!
ಜಯ್ ಜಯ್ ಜಯ್ ಅಖಂಡ ಕರ್ಣಾಟಕ!

**ಕವನ– ಕವಿ : ಕುವೆಂಪು(೧೯೦೪–೧೯೯೪)**



ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯವರು. ತೀರ್ಥಹಳ್ಳಿ ಹಾಗೂ ಮೈಸೂರಿನಲ್ಲಿ ಶಿಕ್ಷಣ ಪಡೆದ ಕುವೆಂಪು, ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಹಾಗೂ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಭಾರತದ ಶ್ರೇಷ್ಠ ಬರಹಗಾರರಲ್ಲಿ ಒಬ್ಬರಾದ ಇವರು ಭಾವಗೀತೆ, ಕತೆ, ಕಾದಂಬರಿ, ನಾಟಕ, ಮಹಾಕಾವ್ಯ, ಜೀವನ ಚರಿತ್ರೆ, ಆತ್ಮಚರಿತ್ರೆ, ವಿಮರ್ಶೆ, ಮಕ್ಕಳ ಸಾಹಿತ್ಯ, ವೈಚಾರಿಕ ಲೇಖನ ಹೀಗೆ ಎಲ್ಲ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಸಿದ್ದಾರೆ. ಕೊಳಲು, ಕನ್ನಡ ಡಿಂಡಿಮ, ಪ್ರೇಮಕಾಶ್ಮೀರ, ಕೋಗಿಲೆ ಮತ್ತು ಸೋವಿಯತ್ ರಷ್ಯಾ, ಪಕ್ಷಿಕಾಶಿ ಮುಂತಾದ ಕವನ ಸಂಕಲನಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳು, ನೆನಪಿನ ದೋಣಿಯಲ್ಲಿ ಆತ್ಮಕಥನ, ನಿರಂಕುಶ ಮತಿಗಳಾಗಿ, ಮನುಜಮತ ವಿಶ್ವಪಥ, ವಿಚಾರಕಾಂತ್ರಿಗೆ ಆಹ್ವಾನ ವೈಚಾರಿಕ ಕೃತಿಗಳು, ಶೂದ್ರತಪಸ್ವಿ, ಸ್ಮಶಾನ ಕುರುಕ್ಷೇತ್ರಂ, ಬೆರಳ್‌ಗೆ ಕೊರಳ್ ಇನ್ನು ಮುಂತಾದ ನಾಟಕಗಳು – ಇವರ ಕೃತಿಗಳು. "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 'ಜ್ಞಾನಪೀಠ ಪ್ರಶಸ್ತಿ'ಗಳು ಲಭಿಸಿವೆ. ಧಾರವಾಡದಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರಿಗೆ ಕೇಂದ್ರ ಸರ್ಕಾರ 'ಪದ್ಮಭೂಷಣ' ಪ್ರಶಸ್ತಿ, ರಾಜ್ಯ ಸರ್ಕಾರ 'ರಾಷ್ಟ್ರಕವಿ' ಹಾಗೂ 'ಕರ್ನಾಟಕ ರತ್ನ' ಬಿರುದು ನೀಡಿ ಗೌರವಿಸಿವೆ.

ರಾಷ್ಟ್ರದ ಬದುಕಿನಲ್ಲಿ ರಾಜಕೀಯ ಅಧಿಕಾರವೇ ಅಂತಿಮವಲ್ಲ. ಪ್ರಭುತ್ವವು ನಾಡಿನ ಸಾಂಸ್ಕೃತಿಕ ಅಸ್ತಿತ್ವವನ್ನು ನಿರ್ಲಕ್ಷಿಸುತ್ತಿದೆ. ರಾಜಕೀಯ ಪ್ರಭುತ್ವವು ನೈತಿಕ ಅಧಃಪತನದತ್ತ ಸಾಗಿದಾಗ ಸಾಂಸ್ಕೃತಿಕ ಶಕ್ತಿಗಳೇ ನಾಡಿನ ಅಂತಃಪ್ರಜ್ಞೆಯ ದ್ಯೋತಕವಾಗಿ ಪ್ರತಿರೋಧಿಸುತ್ತಾ ಬಂದಿವೆ. ರಾಜ್ಯದ ಆತ್ಮಗೌರವವನ್ನು ಎತ್ತಿ ಹಿಡಿದಿವೆ. ಆಳುವವರ ಇಬ್ಬಂದಿತನದಿಂದಾಗಿ ಕರ್ನಾಟಕದ ಏಕತೆಗೆ ಧಕ್ಕೆ ಒದಗುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಈ ಕವಿತೆ ಅತ್ಯಂತ ಪ್ರಸ್ತುತವಾಗಿದೆ.

**ಪದಕೋಶ:**

ಋತಸ್ಯಂಧಿ–ಸತ್ಯದ ಒಸರು, ಸತ್ಯ ದ್ರವಿಸುವಿಕೆ; ಅವಂಧ್ಯೆ–ಬಂಜೆಯಲ್ಲದವಳು; ಕಿನಿಸು–ರೇಗು, ಕೋಪಿಸು; ಜಲ್ಪನೆ–ಅಸ್ಪಷ್ಟವಾದ ಮಾತು, ಅಸಂಬದ್ಧವಾದ ಮಾತು; ರುಚಿರ–ಕಾಂತಿ; ಸೊಮ್ಮು–ಸೊಕ್ಕು, ಗರ್ವ; ಜೋಳವಾಳಿ–ಅನ್ನದ ಋಣ, ಅನ್ನದ ಋಣವನ್ನು ತೀರಿಸುವವನು; ತ್ರೋಟಕ–ರೂಪಕ; ಪೇಟಕ–ಸಮೂಹ; ದೀಧಿತಿ–ಹೊಳಪು, ಕಾಂತಿ, ಕಿರಣ; ಬರಡು–ಪೊಳ್ಳು, ಬಂಜರು; ಹುರುಡು–ಸ್ಪರ್ಧೆ, ಪೈಪೋಟಿ, ಮತ್ಸರ; ಫಣಾ–ಸರ್ಪದಹೆಡೆ.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ.

೨. ಇಂದು ಬಂದು ನಾಳೆ ಸಂದು ಹೋಹ ಸಚಿವ ಮಂಡಲ.

೩. ನೃಪತುಂಗನೆ ಚಕ್ರವರ್ತಿ! ಪಂಪನಲ್ಲಿ ಮುಖ್ಯಮಂತ್ರಿ!

೪. ಪಕ್ಷ ಜಾತಿ ಕಲಹಕಲ್ತೊ.

೫. ಮೆರೆಯಲಾತ್ಮ ಸಂಸ್ಕೃತಿ.
೬. ಮಂತ್ರ ಕಣಾ! ಶಕ್ತಿ ಕಣಾ!

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಅಖಂಡ ಕರ್ಣಾಟಕವನ್ನು ಹರಸುತ್ತಿರುವವನು ಯಾರು?
೨. ಇಂದು ಬಂದು ನಾಳೆ ಹೋಗುವುದು ಯಾವುದು?
೩. ಸಿರಿಗನ್ನಡವನ್ನು ಯಾವುದಕ್ಕೆ ಹೋಲಿಸಲಾಗಿದೆ?
೪. ಅಖಂಡ ಕರ್ಣಾಟಕದ ಚಕ್ರವರ್ತಿ ಯಾರು?
೫. ಅಖಂಡ ಕರ್ಣಾಟಕ ಮುಖ್ಯಮಂತ್ರಿ ಯಾರು?
೬. ಸರಸ್ವತಿಯು ಯಾವ ಸಂಸ್ಕೃತಿಯನ್ನು ಮೆರೆಯಲು ಕರ್ಣಾಟಕವನ್ನು ರಚಿಸಿದ್ದಾಳೆ?
೭. ಕರ್ಣಾಟಕವು ಯಾರ ಹೃದಯಗಳಲ್ಲಿ ಹೊತ್ತಿರುವ ದೀಪವಾಗಿದೆ?
೮. ಚಲದ ಚಂಡಿ ಯಾರು?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಅಖಂಡ ಕರ್ಣಾಟಕ ಬೂಟಾಟದ ರಾಜಕೀಯ ನಾಟಕವಲ್ಲವೇಕೆ?
೨. ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು?
೩. ಪರಮಾತ್ಮನ ಚರಣದೀಪ್ತಿ ಎಲ್ಲಿ ಮತ್ತು ಹೇಗೆ ಉರಿಯಬೇಕೆಂದು ಕವಿ ಹೇಳುತ್ತಾರೆ?
೪. ಮೆಳ್ಳೆಗಣ್ಣನಿಗೆ ಕವಿ ಕೇಳುವ ಪ್ರಶ್ನೆಗಳು ಯಾವುವು?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಕುವೆಂಪು ಅವರು 'ಕೂಗಾಟದ ರಾಜಕೀಯ ನಾಟಕ' ಎಂದು ಹೇಳಿರುವ ಹಿನ್ನಲೆ ಏನು?
೨. ಸರಸ್ವತಿಯ ಸಚಿವ ಮಂಡಲವನ್ನು ಕುರಿತು ಬರೆಯಿರಿ.
೩. ಅಖಂಡ ಕರ್ಣಾಟಕವು ಬರೀ ರಾಜಕೀಯ ನಾಟಕವಲ್ಲ, ಏಕೆ?
೪. ರಾಜಕೀಯ ಶಕ್ತಿಯೆ ಮೇಳೈಸುತ್ತಿರುವ ಇಂದಿನ ಸಂದರ್ಭದಲ್ಲಿ ನಾಡನ್ನು ಒಂದು ಸಾಂಸ್ಕೃತಿಕ ಅಸ್ತಿತ್ವವಾಗಿ ಕಲ್ಪಿಸಲು ಈ ಕವನ ಹೇಗೆ ಪೂರಕವಾಗಿದೆ?
೫. ಕರ್ಣಾಟಕ ಎಂಬುದು ಬರೀ ಮಣ್ಣಿಗೆ ಹೆಸರಲ್ಲ ಎಂಬುದನ್ನು ಕವಿ ಹೇಗೆ ಹೇಳಿದ್ದಾರೆ?

**V. ಭಾಷಾಭ್ಯಾಸ:** ಕನ್ನಡ ನಾಡಿನ ಹಿರಿಮೆಯ ಬಗ್ಗೆ ಪ್ರಬಂಧ ಬರೆಯಿರಿ.

**ಆಕರ :** ಕನ್ನಡ ಡಿಂಡಿಮ (೧೯೬೮)
ಸುರುಚಿ ಪ್ರಕಾಶನ
ಸರಸ್ವತೀಪುರಂ, ಮೈಸೂರು.

| | | |
|---|---|---|
| ಕನ್ನಡಾಂಬೆಯ ಹಿರಿಮೆ | – | ಬೆನಗಲ್ ರಾಮರಾವ್ |
| ಕನ್ನಡಿಗರ ತಾಯಿ | – | ಮಂ. ಗೋವಿಂದ ಪೈ |
| ಕನ್ನಡ ನುಡಿ | – | ಆನಂದಕಂದ |
| ಜಯಹೇ ಕರ್ನಾಟಕ ಮಾತೆ | – | ಕುವೆಂಪು |
| ಹಚ್ಚೇವು ಕನ್ನಡದ ದೀಪ | – | ಡಿ.ಎಸ್. ಕರ್ಕಿ |
| ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು | – | ಹುಯಿಲಗೋಳ ನಾರಾಯಣರಾವ್ |

**ಹೆಚ್ಚಿನ ಓದು:**

**ಆಗ್ನೆ ಮಾಡೋ ಐಗೋಳ್ ಎಲ್ಲಾ**
**ದೇವ್ರೆ ಆಗ್ಲಿ –ಎಲ್ಲಾ !**
**ಕನ್ನಡ್ ಸುದ್ದೀಗ್ ಎನ್ರ ಬಂದ್ರೆ**
**ಮಾನಾ ಉಳುಸಾಕಿಲ್ಲಾ !**

**– ಜಿ.ಪಿ.ರಾಜರತ್ನಂ**

# ೮. ಎಂದಿಗೆ

–ಡಾ. ಬಿ.ಸಿ. ರಾಮಚಂದ್ರಶರ್ಮ

> ಸ್ವಾತಂತ್ರ್ಯಾ ನಂತರ ಕಟ್ಟುವ ಹೊಸ ಸಮಾಜದ ಕಲ್ಪನೆ ಸಾಕಾರಗೊಳ್ಳದಿದ್ದ ಸಂದರ್ಭದಲ್ಲಿ ಉಂಟಾದ ಆಕ್ರೋಶ ಅಕ್ಷರಗಳಲ್ಲಿ ಮೂಡಿ ಬಂದವು. ಹೊಸ ಯುಗದ ನಿರ್ಮಾಣಕ್ಕೆ ಚೈತನ್ಯ ಶಕ್ತಿ ಬೇಕು.

–೧–

ಎಂದಿಗಯ್ಯ, ಎಂದಿಗೆ ? ಎಂದಿಗೋ, ಎಂದಿಗೆ ?
ನನ್ನ ನಾಡ ಮಂದಿಗೆ,
ತಿಳಿವು ಹೊಳೆವುದೆಂದಿಗೆ ?
ನಾಡ ನೂರು ಕೋಟಿ ಗಂಡು ಹೆಣ್ಣು ಕೂಸು ಕುನ್ನಿಗೆ,
ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ ?

–೨–

ನೆನ್ನೆ ವೈಭವದ ನೆನಹ ಭೂತಗಣವೆ ಕುಣಿದಿದೆ ।
ಯುಗಯುಗಾಂತರದ ನಾಡ ಹಿರಿಮೆ ಕನಸ ಮತ್ತೆ ಕನಸಿ
ನೆನಹ ಜೊಲ್ಲ ಬೆರೆಸಿ ತೊನೆಸಿ
ನಾಡು ತಣಿದಿದೆ.
ಮೆಲುಕು ಹಾಕಿ ಹಾಕಿ ಹಾಕಿ ದವಡೆ ದಣಿದಿದೆ,
ಅಳಿದ ಸಿರಿಯ ಅಣಕವಾಡು ಒಂದೆಸಮನೆ ನಡೆದಿದೆ
ಅಂತ ಕಾಣದಾಗಿದೆ.
ಸೂಡಿನೆಂದೆದ್ದು ಬಂದ ಶವದ ಸುತ್ತ ಕುಳಿತ ಜನತೆ,
ಮೆಚ್ಚಿ ತಲೆಯ ತೂಗಿದೆ.
ನಿತ್ಯ ರುದ್ರ ನೃತ್ಯ ಹೃದಯರಂಗದಲ್ಲಿ ನಡೆದಿದೆ.
ಉನ್ಮತ್ತ ನಾಟ್ಯಕೆಂದೆ ನಾಡು ತಾಳ ಹೊಡೆದಿದೆ.
ಒಪ್ಪಿ ತೊಡೆಯ ಬಡಿದಿದೆ.

–೩–

ಯಾವ ಜೀವದ ಯೋಗಬಲವೊ, ಉಗ್ರ ತಾಪಸಿಯರ ಮಹಿಮೆಯೊ,
ಅಂತು ಬಂದಿದೆ ಬಿಡುಗಡೆ.

ಸುರಿದ ನೆತ್ತರ ಕೆಂಪ ಸಿರಿಯೊ, ಮಣ್ಣಿಗೊದಗಿದ ತಣ್ಪ ಕರೆಯೊ,
ಹಸುರ ಮೆರೆಯಿತು ಮರುಧರೆ.
ಕಡಲ ಕಡೆಗೋಲಿಟ್ಟು ಕಡೆಯಲು,
ಅಯ್ಯೋ ಬಂತೇ ವಿಷ ವಿಷ.
ನೆಚ್ಚಿ ಕಡೆಯಲು ಮೆಚ್ಚಿ ದುಡಿಯಲು
ಬಾರದಾಯಿತೆ ಅಮೃತ.
ಅಂತು ಬಂದಿತು ಬಂದೆ ಬಂದಿತು ಎಂಥ ಎಂಥಾ ಬಿಡುಗಡೆ
ಮೋಸ ಸುಳ್ಳಿಗೆ, ಲಂಚ ಸುಲಿಗೆಗೆ,
ಹೃದಯದಾಳದ ಕೊಚ್ಚೆ ಹರಿವಿಗೆ, ಇನ್ನು ಇಲ್ಲವೆ ತಡೆಬಡೆ!

–೪–

ಕಡಲುಗಳ್ಳರ ಕಾಟ ಕೊನೆಗಂಡರೇನಂತೆ ?
ಒಡಲುಗಳ್ಳರು ಇನ್ನು ಇಲ್ಲೆ ಇಹರೊ :
ರೈತ ಮಕ್ಕಳು ಬಯಸಿ ಬೆಳೆದ ಬೆಳೆಸನು ಸುಲಿದು
ಸುಖಪಡುವ ರಕ್ಕಸರು ನಡುವೆ ಇಹರೋ,
ನರನಸ್ಥಿಪಂಜರದ ಅಡಿಗಲ್ಲ ಮೇಲಿವರು
ಸುಸ್ಥಿರವು ಎನುವಂಥ ಭವನಗಳನು
ನಿರ್ಮಿಸುವ ಕ್ರೂರ ಜನ, ತೂಗಲೆಂದೇ ಬಂದು,
ಕೂಸ ಕೊರಳನೆ ಹಿಸುಕಲೆಳಸುತಿಹರು.
ಸುಡಗಾಡ ನಡುವಲ್ಲೆ ಸುಖದ ಸುಪ್ಪತ್ತಿಗೆಯ
ಹಾಸಿ ಮಲಗುವ ಜನರು ನಾಡೊಳಿಹರು.

–೫–

ಬೂಟುಕಾಲಿನೇಟು ಬಿದ್ದರಿನ್ನು ಸುಮ್ಮನಿರುವರೆ ?
ಕಿವಿಯ ತುಂಬ ಕಲ್ಲಿನೇಟು ತಿಂದ ಕುನ್ನಿ ಮರಿಯ ಕೂಗು। ಕೇಳದಲ್ಲೋ ಗರ್ಜನೆ,
ಕಿವಿ ಬಿರಿಯುವ ಮೃಗರಾಜನ ತುಂಬುಕೊರಳ ಗರ್ಜನೆ.
ರಕ್ತಪಾನಮತ್ತ ಈ ರಾಕ್ಷಸಗಣ ಹತ್ಯಕೆ,
ಕ್ಷಾತ್ರವಧೆಗೆ ನಿಂತ ಜಾಮದಗ್ನಿಯಂತೆ ಕೆರಳಿ ನಿಂತು
ಗಂಡುಗೊಡಲಿಯುಟ್ಟು ಜನತೆ ಹೆಜ್ಜೆಯಿಡುವುದೆಂದಿಗೆ,
ನಡೆವುದೆಂದು ಮುಂದಕೆ ?

ಇರುಳ ಬಸಿರ ಬಗೆದು ಉದಯರಾಗ ಬರುವುದೆಂದಿಗೆ
ನನ್ನ ನಾಡ ಮಂದಿಗೆ ?
ನಾಡ ಮೂಲೆ ಮೂಲೆಗೆ, ರಾಜ ಬೀದಿ ಸಂದಿಗೆ,
ಕ್ರಾಂತಿಭಾನು ಹೊಳೆದು ಹೊಂಬೆಳಕ ಚೆಲ್ವುದೆಂದಿಗೆ ?
ಎಂದಿಗಯ್ಯ, ಎಂದಿಗೆ ?
ನನ್ನ ನಾಡ ಮಂದಿಗೆ,
ಕಾವಳವಿದು ಕಳೆದು ಮತ್ತೆ ತಿಳಿವು ಹೊಳೆವುದೆಂದಿಗೆ,
ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ ।

## ಕವನ-ಕವಿ : ಡಾ. ಬಿ.ಸಿ.ರಾಮಚಂದ್ರ ಶರ್ಮ (೧೯೨೫-೨೦೦೫)



ಡಾ. ಬಿ. ಸಿ. ರಾಮಚಂದ್ರಶರ್ಮರು ನವ್ಯಕಾವ್ಯ ಪರಂಪರೆಯ ಕವಿಗಳಲೊಬ್ಬರು. ಬೆಂಗಳೂರಿನಲ್ಲಿ ಇವರ ಜನನ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಬೆಂಗಳೂರು, ಇಥಿಯೋಪಿಯಾ, ಲಂಡನ್‌ಗಳಲ್ಲಿ ಅಧ್ಯಾಪಕರಾಗಿ ಕೆಲಸ ನಿರ್ವಹಿಸಿದರು. ಲಂಡನ್ ವಿಶ್ವವಿದ್ಯಾಲಯದಿಂದ ಮನಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದ ಶರ್ಮರು, ಇಂಗೆಂಡ್, ಜಾಂಬಿಯಾ ಹಾಗೂ ಯುನಸ್ಕೊ ಸಂಸ್ಥೆಗಳಲ್ಲಿ ಮನಃಶಾಸ್ತ್ರಜ್ಞರಾಗಿ ಹಾಗೂ ಶಿಕ್ಷಣ ತಜ್ಞರಾಗಿ ಕೆಲಸ ಮಾಡಿದ್ದಾರೆ.

ಹೃದಯಗೀತೆ, ಏಳು ಸುತ್ತಿನ ಕೋಟೆ, ಬುವಿ ನೀಡಿದ ಸ್ಫೂರ್ತಿ, ಹೇಸರಗತ್ತೆ, ಬ್ರಾಹ್ಮಣ ಹುಡುಗ, ಮಾತು-ಮಾಟ, ದೆಹಲಿಗೆ ಬಂದ ಹೊಸ ವರ್ಷ, ಸಪ್ತಪದಿ- ಮುಂತಾದವು ಇವರ ಕವನ ಸಂಕಲನಗಳು.

ಪ್ರಸ್ತುತ ಕವನದಲ್ಲಿ ನಾಡಿನ ಜನರ ದಾಸ್ಯ ಮನೋಭಾವವನ್ನು ವಿಡಂಬಿಸಲಾಗಿದೆ. ಗತ ವೈಭವದಲ್ಲೇ ಮೈಮರೆತು ವರ್ತಮಾನದ ವಾಸ್ತವಗಳನ್ನು ಅರಿಯದ ನಾಡಿನ ಜನರನ್ನು ಕುರಿತು ಸಿಟ್ಟಿದೆ. ಹೀಗೆ ಗತವೈಭವದಲ್ಲಿ ಮೈಮರೆತಿರುವ ಜನರು ಒಂದೆಡೆಯಾದರೆ, ದೇಶಕ್ಕೆ ಬಂದ ಬಿಡುಗಡೆಯನ್ನು ಸ್ವಾರ್ಥ, ದುರಾಸೆಗಳಿಗೆ ಬಳಸುತ್ತಾ ಶೋಷಿಸುತ್ತಿರುವ ಮಂದಿ ಇನ್ನೊಂದೆಡೆ ಇದ್ದಾರೆ. ಹೊರಗಿನ ಶಕ್ತಿಗಳಿಂದ ನಾಡು ಮುಕ್ತವಾದರೂ ಒಳಗಿನ ಸ್ವಾರ್ಥ ಶಕ್ತಿಗಳ ಕೈಯಲ್ಲಿ ಸಿಲುಕಿ ನಲುಗುತ್ತಿದೆ. ಇವೆಲ್ಲವನ್ನೂ ನಾಡ ಜನತೆ ಮೆಟ್ಟಿನಿಂತು ಸತ್ವಪೂರ್ಣ ಬದುಕನ್ನು ರೂಪಿಸಿಕೊಳ್ಳಬೇಕೆಂಬ ಚಿಂತನೆ ಇಲ್ಲಿದೆ.

**ಪದಕೋಶ:**

ಕುನ್ನಿ–ನಾಯಿಮರಿ, ಅಲ್ಪ, ಕ್ಷುದ್ರ; ತೊನೆಸು–ಒದ್ದೆಯಾಗಿಸು; ಅಂತ–ಅಂತ್ಯ, ಕೊನೆ; ಸೂಡು–ಸ್ಮಶಾನ; ಉನ್ಮತ್ತ–ಕೊಬ್ಬಿದ, ಮದಿಸಿದ; ತಣ್ಪು–ಸಂತುಷ್ಟಿ, ತಣಿಸು, ಸಂತೋಷಪಡಿಸು; ಕಡೆಗೋಲು–ಮಥಿಸುವ ಕೋಲು, ಮಂತು; ತಡೆಬಡೆ–ಅಡ್ಡಿ, ಅಡೆತಡೆ; ಒಡಲು–ದೇಹ; ಕ್ಷಾತ್ರ–ಕ್ಷತ್ರಿಯ; ಕಾವಳ–ಅಂಧಕಾರ, ಮಬ್ಬು.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ.
೨. ಅಳಿದ ಸಿರಿಯ ಅಣಕವಾಡು ಒಂದೆ ಸಮನೆ ನಡೆದಿದೆ.
೩. ಅಂತು ಬಂದಿತು ಬಂದೆ ಬಂದಿತು ಎಂಥ ಎಂಥಾ ಬಿಡುಗಡೆ.
೪. ಒಡಲುಗಳ್ಳರು ಇನ್ನೂ ಇಲ್ಲೇ ಇಹರೊ.
೫. ಕ್ರಾಂತಿಭಾನು ಹೊಳೆದು ಹೊಂಬೆಳಕ ಚೆಲ್ವುದೆಂದಿಗೆ.

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಹುಟ್ಟಿನೊಂದಿಗೆ ಅಂಟಿ ಬಂದ ಯಾವುದನ್ನು ಕಳೆಯಬೇಕು?
೨. ದವಡೆ ಏಕೆ ದಣಿದಿದೆ?
೩. ನಾಡು ಯಾವುದಕ್ಕೆ ತಾಳ ಹೊಡೆದಿದೆ?
೪. ಕಡಲನ್ನು ಕಡೆದಾಗ ಏನು ಬಂತು?
೫. ನಾಡಿಗೆ ಯಾರ ಕಾಟ ಕೊನೆಗೊಂಡಿದೆ?
೬. ಕ್ಷಾತ್ರವಧೆ ಮಾಡಿದವನು ಯಾರು?
೭. ಇರುಳ ಬಸಿರು ಬಗೆದು ಬರಬೇಕಾಗಿರುವುದು ಯಾವುದು?

**III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಚಿತ್ತದಾಸ್ಯ ಕಳೆಯಬೇಕಾಗಿರುವುದು ಯಾರು ಯಾರಿಗೆ?
೨. ನಾಡ ಮಂದಿಗೆ ಯಾವುದರ ಬಲ ಹಾಗೂ ಮಹಿಮೆಯಿಂದ ಬಿಡುಗಡೆಯಾಗಿದೆ?
೩. ನಾಡಿನ ಬಿಡುಗಡೆಯಲ್ಲಿ ಯಾವುದಕ್ಕೆ ಅಡೆತಡೆಗಳು ಇಲ್ಲವಾಗಿವೆ?
೪. ನಾಡಿನ ಹೊರಗಿನ ಮತ್ತು ಒಳಗಿನ ಕಳ್ಳರು ಯಾರು?
೫. ರಾಕ್ಷಸಗಣ ಹತ್ಯೆಗೆ ಜನತೆ ಹೇಗೆ ಹೆಜ್ಜೆ ಇಡಬೇಕು?

**IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

೧. ನಾಡಜನರ ಗತವೈಭವದ ಕನಸನ್ನು ಕವಿ ಹೇಗೆ ವಿಡಂಬಿಸಿದ್ದಾರೆ? ವಿವರಿಸಿ.

೨. ಒಡಲುಗಳ್ಳರು ನಾಡನ್ನು ಹೇಗೆ ಸುಲಿಗೆ ಮಾಡುತ್ತಿದ್ದಾರೆ?

೩. ನಾಡಜನರ ದಾಸ್ಯಮನೋಭಾವ ಹಾಗೂ ನಿಷ್ಕ್ರಿಯತೆಯ ಬಗ್ಗೆ ಕವಿಯ ಪ್ರತಿಕ್ರಿಯೆಯೇನು?

೪. ಸ್ವಾಭಿಮಾನದ ನಾಡನ್ನು ಕಟ್ಟುವಲ್ಲಿ ಕವಿಯು ಹೊಂದಿರುವ ಆಶಯಗಳನ್ನು ವಿವರಿಸಿ.

**V. ಟಿಪ್ಪಣಿ: ಜಾಮದಗ್ನಿ–ಜಮದಗ್ನಿ ಮುನಿ ಮತ್ತು ರೇಣುಕ ದೇವಿಯ ಮಗ ಪರಶುರಾಮ.**

**ಆಕರ:** ಹೃದಯ ಗೀತ (೧೯೫೨) – ಡಾ. ಬಿ.ಸಿ. ರಾಮಚಂದ್ರಶರ್ಮ

**ಭಾರತದ ಕನಸು ರಾಮರಾಜ್ಯ. ನರ್ತಿಸುತಿಹುದು ರಾವಣ ರಾಜ್ಯ.**
**– ರಾಜೀವ್ ಕಲ್ಕೋಡ್.**

# ೯. ಮಗು ಮತ್ತು ಹಣ್ಣುಗಳು

–ಎಚ್. ಎಸ್. ಶಿವಪ್ರಕಾಶ್

**ಪಕ್ವತೆ ಬೆಳವಣಿಗೆಯ ಸಂಕೇತ. ವ್ಯಕ್ತಿತ್ವ ವಿಕಸನಗೊಂಡಂತೆಲ್ಲ ಪ್ರೌಢ ಮನಸ್ಥಿತಿ ನಿರ್ಮಾಣಗೊಳ್ಳುತ್ತದೆ. ಅದು ಮಾನವೀಯತೆಯ ಸಂಕೇತವೂ ಹೌದು. ಮನುಷ್ಯ ಪಕ್ವವಾಗಿದಂತೆಲ್ಲಾ ತನ್ನ ಸುತ್ತಲೂ ಸಮತೆಯ ಭಾವಲೋಕವನ್ನು ನಿರ್ಮಿಸಬಲ್ಲ.**

ಹಣ್ಣಿನಂಗಡಿ ಮುಂದೆ ಕಣ್ಣರಳಿಸುವ ಮಗು

ಇಲ್ಲಿ ಈ ತಿರುವಿನಲ್ಲಿ ಥಟ್ಟನವತರಿಸಿದ ಕಪ್ಪು ಲಾರಿಯ ಹಾಗೆ
ಗಾಳಿ ಕೀಟಲೆ ಉಗುರೊ
ತುಂಟರೆಸೆಯುವ ಕಲ್ಲೊ ಕಾಯಿಯಲ್ಲೇ ನಿನ್ನ ಕೆಡವದಿರಲಿ

ಹಣ್ಣಿನಂಗಡಿಯಾಗು ನೀನೂನು
ಗಿರವಿಯಂಗಡಿ ಗುಜರಿಗಳ ಧೂಳು ಹಬ್ಬಿದ
ಊರ ಮಾರುಕಟ್ಟೆಯ ನಡುವೆ

ಹಣ್ಣಾಗಬೇಕು ಮಗು.
ಮೈಯೆಲ್ಲ ಮಾಗಿ ಹಣ್ಣಿನ ಸುಕ್ಕು ಬರುವವರೆಗೆ
ಪಕ್ವತನ ಬಿರಿದ ಬಾಳೆಹಣ್ಣಿದೆಯಲ್ಲ
ಅದರ ಹಾಗೇ ಕೊಂಚ ಬಾಗಬೇಕು.

ಕೊಬ್ಬಿದರೆ ಚಕೋತನೆಯ ಹಾಗೆ
ಕುಗ್ಗಿದರೆ ನಿಂಬೆಹಣ್ಣಿನ ಹಾಗೆ
ಹುಳಿಗಟ್ಟುವುದು ನಿನ್ನೊಳಗೆ
ಸರಿಗಾತ್ರವಾಗಿ ಸಮನಿಸಲಿ ನಿನ್ನತನ
ಕಿತ್ತಲೆಯ ಹಾಗೆ, ಮೋಸಂಬಿ ಹಾಗೆ
ರಸಪೂರಿ ಮಾವಿನ ಹಣ್ಣಿನಂತೆ.

ಅಂಜೂರದಂತೆ ಅಪರೂಪವಾಗು ಜನರ ಕಣ್ಣಿಗೆ
ಕಂಡರೆ ಕಾಣು ಕಲ್ಲಂಗಡಿಯಾಗಿ

ಬೇಸಿಗೆ ಕಮರಿರುವ ಕಣ್ಣುಗಳಿಗೆ,
ದಳದಳ ಕೊಯ್ದು ಅರಳಿಸಿದ ದಾಳಿಂಬೆಯೊಳಗೆ
ಥಳಥಳ ಕೆಂಡ ಬಣ್ಣ ಮಣಿ ಮಣಿ
ಹನಿ ಹನಿ ತನಿರಸದ ಖನಿಯಾಗು;

ಹಬ್ಬಿಕೋ ದ್ರಾಕ್ಷಿ ಬಳ್ಳಿಯ ಹಾಗೆ
ಆಯುಷ್ಯ, ಚಪ್ಪರದ ಉದ್ದಗಲ;
ತಬ್ಬಿಕೋ ಬಿಡಬೇಡ;
ಹಣ್ಣು ತೊಡಿಸಲು ನಿನಗೆ
ತಾನೆ ಮಣ್ಣಾಗುತ-ಬರಲು ತೋಟಗಾತಿ

ಬೆಲೆಯ ರಾಕೆಟ್ಟುಯಾನ ಹೊರಡದಿರು ಸೇಬು ಹಣ್ಣಿನ ಜೊತೆಗೆ
ಎಲ್ಲರಿಗೂ ದಕ್ಕುವ ಎಲಚಿಯಾಗು.

### ಕವನ-ಕವಿ: ಎಚ್. ಎಸ್. ಶಿವಪ್ರಕಾಶ್ (೧೯೫೪)



ಎಚ್. ಎಸ್. ಶಿವಪ್ರಕಾಶ್ ಬೆಂಗಳೂರಿನವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಜೈನ್ ವಿಶ್ವವಿದ್ಯಾಲಯ ಹಾಗೂ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ 'ಆರ್ಟ್ಸ್ ಅಂಡ್ ಏಸ್ತೆಟಿಕ್ಸ್ ಸ್ಕೂಲ್'ನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ. ಪ್ರಸ್ತುತ ಜರ್ಮನಿಯ ಬರ್ಲಿನ್‌ನಲ್ಲಿರುವ "ರವೀಂದ್ರನಾಥ ಟ್ಯಾಗೋರ್ ಕೇಂದ್ರ"ದ ನಿರ್ದೇಶಕರಾಗಿದ್ದಾರೆ.

ಮಳೆಬಿದ್ದ ನೆಲದಲ್ಲಿ, ಅಣುಕ್ಷಣಚರಿತೆ, ಸೂರ್ಯಜಲ, ನವಿಲು ನಾಗರ, ಮಳೆಯ ಮಂಟಪ ಇವರ ಪ್ರಮುಖ ಕವನ ಸಂಕಲನಗಳು. ಮಹಾಚೈತ್ರ, ಮಂಟೇಸ್ವಾಮಿ ಕಥಾ ಪ್ರಸಂಗ, ಸುಲ್ತಾನ್ ಟಿಪ್ಪು, ಮಾದಾರಿ ಮಾದಯ್ಯ, ಸಿಲಪ್ಪದಿಗಾರಂ ಪ್ರಸಿದ್ಧ ನಾಟಕಗಳು. ಮಾರನಾಯಕನ ದೃಷ್ಟಾಂತ, ಮಲ್ಲಮ್ಮನ ಮನೆಹೋಟ್ಲು, ಷೇಕ್ಸ್‌ಪಿಯರ್ ಸ್ವಪ್ನನೌಕೆ, ಮರೆತುಹೋದ ದೊಂಬರಾಕೆ ಅನುವಾದಿತ ಕೃತಿಗಳು. ಮೊದಲ ಕಟ್ಟಿನ ಗದ್ಯ, ಸಾಹಿತ್ಯ ಮತ್ತು ರಂಗಭೂಮಿ ಇವರ ವಿಮರ್ಶೆಗಳು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಸಂದಿವೆ. ೨೦೧೨ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಪ್ರಸ್ತುತ ಕವಿತೆಯಲ್ಲಿ ಬೇರೆ ಬೇರೆ ಹಣ್ಣುಗಳ ವಿಭಿನ್ನ ಬಗೆಯ ರುಚಿ, ಮಾಗುವಿಕೆ, ಲಭ್ಯತೆ ಹಾಗೂ ಅಪರೂಪತೆಗಳ ಅಂಶಗಳನ್ನು ಮಗುವಿನ ವಿಕಸನದ ಗುಣಗಳಾಗಿ ಭಾವಿಸಲಾಗಿದೆ. ಈ ನೆಲೆಯಲ್ಲಿ ಅದರ ವ್ಯಕ್ತಿತ್ವ ನಿರ್ಮಾಣವಾಗಬೇಕೆಂಬ ಆಶಯ ವ್ಯಕ್ತವಾಗಿದೆ. ಬಾಳಿ ಬದುಕಬೇಕಾದ ಮಗು ಎಳವೆಯಲ್ಲಿ ಯಾವುದೇ ತೊಂದರೆಗಳಿಗೆ ಒಳಗಾಗದೆ ಉತ್ತಮವಾದ ಸಮಗಾತ್ರದ ಗುಣಗಳನ್ನು ಒಳಗೊಳ್ಳುತ್ತಾ ಪಕ್ವಗೊಂಡು, ಅಪರೂಪದ ವ್ಯಕ್ತಿತ್ವವಾಗಿ ಬೆಳೆದು, ಮೆಚ್ಚುಗೆಯನ್ನು ಗಳಿಸಬೇಕು. ಉಪಕಾರಿಯಾಗಿ, ಎಲ್ಲರಿಗೂ ದಕ್ಕುವ ವ್ಯಕ್ತಿಯಾಗಿ ರೂಪುಗೊಳ್ಳಬೇಕೆಂಬುದನ್ನು ಕಾಣಬಹುದು. ಆಧುನಿಕ ಸರಕು ಮಾರುಕಟ್ಟೆಯ ನಡುವೆ ಮಗು ಹಣ್ಣಿನಂಗಡಿಯಂತೆ ಆಗಬೇಕೆಂಬ ಉದ್ದೇಶ ಇಲ್ಲಿದೆ. ಮಗು ವ್ಯಾಪಾರಿ ಸಂಸ್ಕೃತಿಯ ಗುಣಗಳನ್ನು ಮೈಗೂಡಿಸಿಕೊಳ್ಳದೆ ಜನಪರ ಹಾಗೂ ಸಮಾಜಮುಖಿ ಗುಣ, ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕೆಂಬ ಆಶಯ ಇದೆ.

**ಪದಕೋಶ:**

ಗುಜರಿ–ಹಳೆವಸ್ತುಗಳನ್ನು ಮಾರುವ ಸ್ಥಳ; ಸುಕ್ಕು–ನೆರಿಗೆ; ಸಮನಿಸು–ಸೇರು, ಹೊಂದಿಕೊಳ್ಳು; ಕಮರು–ಬಾಡು; ಗಿರವಿ–ಅಡವು, ಒತ್ತೆ; ಖನಿ–ಗಣಿ, ನೆಲೆ; ಎಲಚಿ–ಇಲಚಿ, ಬೋರೆಹಣ್ಣು.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಕಾಯಿಯಲ್ಲೇ ನಿನ್ನ ಕೆಡವದಿರಲಿ.
೨. ಹಣ್ಣಿನಂಗಡಿಯಾಗು ನೀನೂನು.
೩. ಸರಿಗಾತ್ರವಾಗಿ ಸಮನಿಸಲಿ ನಿನ್ನತನ.
೪. ಅಂಜೂರದಂತೆ ಅಪರೂಪವಾಗು.
೫. ಎಲ್ಲರಿಗೂ ದಕ್ಕುವ ಎಲಚಿಯಾಗು.

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಮಗು ಕಣ್ಣನ್ನು ಎಲ್ಲಿ ಅರಳಿಸುತ್ತದೆ?
೨. ತಿರುವಿನಲ್ಲಿ ಅವತರಿಸುವ ವಾಹನ ಯಾವುದು?
೩. ಮಗುವು ಯಾವುದರ ಹಾಗೆ ಬಾಗಬೇಕು?
೪. ಯಾವ ಹಣ್ಣಿನಂತೆ ಮಗು ಕೊಬ್ಬಬಾರದು?
೫. ಅನ್ಯರ ಕಣ್ಣಿಗೆ ಯಾವ ಹಣ್ಣಿನಂತೆ ಮಗು ಅಪರೂಪವಾಗಬೇಕು?
೬. ಆಯುಷ್ಯದ ಚಪ್ಪರಕ್ಕೆ ಮಗು ಹೇಗೆ ಹಬ್ಬಿಕೊಳ್ಳಬೇಕು?
೭. ಬೆಲೆಯ ರಾಕೆಟ್ಟು ಯಾನದಲ್ಲಿ ಹೊರಟ ಹಣ್ಣು ಯಾವುದು?
೮. ಎಲ್ಲರಿಗೂ ದಕ್ಕುವ ಹಣ್ಣು ಯಾವುದು?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಮಗು ಬದುಕಿನಲ್ಲಿ ಯಾವ ಯಾವ ತೊಂದರೆಗಳಿಗೆ ಒಳಗಾಗಬಾರದು?
೨. ಮಗು ಹಣ್ಣಿನಂಗಡಿಯಂತಾಗಬೇಕಾದುದು ಎಲ್ಲಿ?
೩. ಮಗುವಿನಲ್ಲಿ ಸಮನಿಸಬೇಕಾದ ಗುಣಗಳು ಯಾವುವು?
೪. ಅರಳಿಸಿದ ದಾಳಿಂಬೆ ಯಾವ ರೀತಿ ಕಾಣುತ್ತದೆ?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಮಗು ಹಣ್ಣುಗಳಿಂದ ಕಲಿಯಬೇಕಾದ ಗುಣಗಳು ಯಾವುವು? ವಿವರಿಸಿ.
೨. ಮಗುವಿನ ವ್ಯಕ್ತಿತ್ವಕ್ಕೂ ಹಾಗೂ ಹಣ್ಣುಗಳಿಗೂ ಕವಿ ಹೇಗೆ ಸಂಬಂಧಗಳನ್ನು ಕಲ್ಪಿಸಿದ್ದಾನೆ? ವಿವರಿಸಿ.

## V. ಭಾಷಾಭ್ಯಾಸ:

**ದ್ವಿರುಕ್ತಿ** – ಭಾಷೆಯಲ್ಲಿ ಹಲವಾರು ಸಲ ಒಂದೇ ಪದವನ್ನು ಎರಡು ಸಲ ಸೇರಿಸಿ ಪ್ರಯೋಗಿಸುವುದು ರೂಢಿಯಲ್ಲಿದೆ. ಪರಿಣಾಮ ತೀವ್ರತೆಯ ಹಿನ್ನೆಲೆಯಲ್ಲಿ ಈ ಪ್ರಯೋಗ ರೂಪುಗೊಂಡಿದೆ. ಕೆಲವು ಸಲ ಒಂದೇ ಅರ್ಥದ ಎರಡು ಪದಗಳನ್ನು ಜೋಡಿಸಿ ಹೇಳುವುದು ರೂಢಿಯಲ್ಲಿದೆ **ಉದಾ: ಹನಿ ಹನಿ, ಮಣಿ ಮಣಿ, ಇತ್ಯಾದಿ. ಇಂತಹ ದ್ವಿರುಕ್ತಿ ಪದಗಳನ್ನು ಸಂಗ್ರಹಿಸಿ.**

**ಆಕರ :** ಮಳೆಬಿದ್ದ ನೆಲದಲ್ಲಿ – ಎಚ್. ಎಸ್. ಶಿವಪ್ರಕಾಶ್

ಹೆಚ್ಚಿನ ಓದು ಚಟುವಟಿಕೆ

**ಮಾಗಿದವನು ಬಾಗುತ್ತಾನೆ, ಬೀಗುವುದಿಲ್ಲ**

# ೧೦. ನಾ ಬರಿ ಭ್ರೂಣವಲ್ಲ

–ಮಾಲತಿ ಪಟ್ಟಣಶೆಟ್ಟಿ

ಹೆಣ್ಣು ಮಗುವನ್ನು ನಿರಾಕರಿಸುವ, ನಿರ್ಲಕ್ಷಿಸುವ ಲಿಂಗತಾರತಮ್ಯ ಧೋರಣೆಯು ನಾಗರಿಕ ಸಮಾಜದಲ್ಲಿ ಹಲವಾರು ಗಂಭೀರ ಬಿಕ್ಕಟ್ಟುಗಳಿಗೆ ಕಾರಣವಾಗಿವೆ. ಹೆಣ್ಣನ್ನು ಕೇವಲ ದೇಹವಾಗಿ ಪರಿಭಾವಿಸದೆ ಅವಳ ಮನೋವ್ಯಕ್ತಿತ್ವವನ್ನು ಗೌರವಿಸುವ ಮಾನವೀಯ ಧೋರಣೆಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕಾಗಿದೆ. ಬದುಕಿನ ಎಲ್ಲಾ ರಂಗಗಳಲ್ಲೂ ತಾರತಮ್ಯಕ್ಕೆ ಅವಕಾಶವಿಲ್ಲದಂತೆ ಸ್ತ್ರೀ–ಪುರುಷರಿಬ್ಬರ ಸಮಾನ ಸಹಭಾಗಿತ್ವದಲ್ಲಿ ಸ್ವಸ್ಥ ಸಮಾಜದ ನಿರ್ಮಾಣ ಮಾಡಬೇಕಾಗಿರುವುದು ಇಂದಿನ ಅಗತ್ಯ.

ಅವ್ವಾ
ನಾ ನಿನ್ನ ಮಗಳು
ದೇಹದ ಮುಗುಳು
ನಿನ್ನ ಕನಸಿನ ಅರಳವ್ವಾ
ನಾ ಬರಿ ಭ್ರೂಣವಲ್ಲ

ಏ ಅವ್ವಾ
ಔಷಧಿಯೆಲ್ಲ ವಿಷವಾಗಿ
ಗುಳಿಗೆಗಳೆಲ್ಲ ನಶೆಯಾಗಿ
ಪಾಶವಾಗಿದೆಯವ್ವ ನನ್ನುಸಿರಿಗೆ!
ನಾ ಬರಿ ಭ್ರೂಣವಲ್ಲ

ಏ ಅವ್ವಾ
ನನ್ನ ಜಗತ್ತೆ ಪುಟ್ಟದು
ಕರಿಯುಗುರು ಬೆನ್ನಟ್ಟಿಯಲ್ಲೆ?
ಚಿಂತಿಸಿ ನಾ ಕೆಟ್ಟನವ್ವ
ನಾ ಬರಿ ಭ್ರೂಣವಲ್ಲ

ಕೇಳವ್ವ
ಕಂಡಿಲ್ಲ ನಾನಿನ್ನೂ
ಬದುಕಿನಾಗಸದ ನೀಲ
ಪಚ್ಚೆಯಂಥ ನೆಲ
ಗಾಳಿಯ ಮೃದು ಸ್ಪರ್ಶ
ನಾ ಬರಿ ಭ್ರೂಣವಲ್ಲ

ಏಕವ್ವಾ
ಯಾರದ್ಯಾಕವ್ವಾ ಒತ್ತಾಸೆ
ಮೇಲೆ ನಿನ್ನ ನಿರಾಸೆ,
ಗಾಬರಿಗೊಂಡಿದ್ದೇನವ್ವಾ ;
ನಾ ಬರಿ ಭ್ರೂಣವಲ್ಲ

ನನ್ನವ್ವ, ಗೊತ್ತಿಲ್ಲವೆ ಮಗಳ ರಕ್ತ
ರಕ್ತವಲ್ಲ, ಪ್ರೀತಿ ರಸವೆ
ನಿನ್ನವ್ವನಾಗಿಯೇ ಬರುವೆನೆ
ನಾ ಬರಿ ಭ್ರೂಣವಲ್ಲ

ನನ್ನ ಹಡೆದವ್ವ
ನಿನ್ನ ಮೈ ಗಂಧದಿಂದ
ಕಿತ್ತುಕೊಂಡರೆ ನಾ ಸತ್ತೆನವ್ವಾ
ಚೆಲ್ಲಬೇಕೆ ಉಡಿಯ ಮುತ್ತು
ನಾ ಬರಿ ಭ್ರೂಣವಲ್ಲ

ನನ್ನ ಮುದ್ದಿನವ್ವ
ವರವ ಕೊಡು ತಾಯಿ
ನನ್ನ ಉಸಿರಿಗೆ
ನಿನ್ನ ಬಾಳ ಹಸಿರಿಗೆ
ಹೂ ತರುವೆನೇ ನಿನ್ನ ಹೆಸರಿಗೆ
ನಾ ಬರಿ ಭ್ರೂಣವಲ್ಲ.

## ಕವನ–ಕವಿ ಪರಿಚಯ: ಮಾಲತಿ ಪಟ್ಟಣಶೆಟ್ಟಿ (೧೯೪೦)



ಕನ್ನಡದ ಲೇಖಕಿಯರಲ್ಲಿ ಮಾಲತಿ ಪಟ್ಟಣಶೆಟ್ಟಿಯವರು ಪ್ರಮುಖರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿ, ಇವರು ಧಾರವಾಡದಲ್ಲಿ ನೆಲಸಿದ್ದಾರೆ. ಬಾ ಪರೀಕ್ಷೆಗೆ, ಗರಿಗೆದರಿ, ತಂದೆ ಬದುಕು ಗುಲಾಬಿ, ದಾಹ ತೀರ, ಮೌನ ಕರಗುವ ಹೊತ್ತು,

ಹೂದಂಡೆ, ನನ್ನ ಸೂರ್ಯ, ಎಷ್ಟೊಂದು ನಾವೆಗಳು ಇವರ ಕವನ ಸಂಕಲನಗಳು. ಇಂದು ನಿನ್ನಿನ ಕತೆಗಳು, ಸೂರ್ಯ ಮುಳುಗುವುದಿಲ್ಲ, ಇನ್ನಷ್ಟು ಕತೆಗಳು (ಕಥಾ ಸಂಕಲನ), ಬೆಳ್ಳಕ್ಕಿ ಸಾಲು (ಮಕ್ಕಳ ಕವಿತೆ), ಬೋರಂಗಿ (ಮಕ್ಕಳ ನಾಟಕ), ಬಸವರಾಜ ಕಟ್ಟೀಮನಿ ಬದುಕು ಬರಹ, ಶ್ರೀನಿವಾಸ ವೈದ್ಯ ಬದುಕು–ಬರಹ (ವ್ಯಕ್ತಿ ಚಿತ್ರ), ಪ್ರಶಾಂತ, ಸಮತಾ, ಕಾವ್ಯ ೯೬, ಅಕ್ಕ (ಸಂಪಾದಿತ) ಪ್ರಮುಖ ಕೃತಿಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ಗೊರೂರು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಭ್ರೂಣಾವಸ್ಥೆಯಲ್ಲಿರುವ ಹೆಣ್ಣು ಮಗುವು ತನ್ನ ತಾಯಿಯೊಂದಿಗೆ ನಡೆಸುವ ಆಪ್ತಸಂವಾದವನ್ನು ಈ ಕವಿತೆ ಚಿತ್ರಿಸುತ್ತದೆ. ತಾಯಿಯ ಗರ್ಭವು ತನಗೆ ಅತ್ಯಂತ ಸುರಕ್ಷಿತ ತಾಣವೆಂದು ಭಾವಿಸಿರುವ ಮಗುವಿಗೆ ತನ್ನ ಅಸ್ತಿತ್ವವನ್ನೇ ನಿರಾಕರಿಸುತ್ತಿರುವ ವ್ಯವಸ್ಥೆಯ ಧೋರಣೆಗಳು ಆತಂಕವನ್ನು ಸೃಷ್ಟಿಮಾಡಿದೆ. ಬದುಕಲು ಮಾತ್ರವಲ್ಲ, ಹುಟ್ಟುವುದಕ್ಕೂ ಹೋರಾಟ ಮಾಡಬೇಕಾಗಿರುವ ಈ ವಿಷಮ ಪರಿಸ್ಥಿತಿಯಲ್ಲಿ ತಾಯಿಗೆ ಮಾತ್ರವೇ ತನ್ನನ್ನು ರಕ್ಷಿಸುವ ಶಕ್ತಿಯಿದೆ ಎಂಬ ಭರವಸೆಯೊಂದಿಗೆ ಹೊಟ್ಟೆಯೊಳಗಿನ ಮಗುವು ತನ್ನನ್ನು ಕಾಪಾಡುವಂತೆ ತಾಯಿಯಲ್ಲಿ ದೀನವಾಗಿ ಮೊರೆಯಿಡುವ ಚಿತ್ರಣ ಇಲ್ಲಿದೆ.

**ಪದಕೋಶ:**

ಮುಗುಳು–ಮೊಗ್ಗು; ನಶೆ–ಅಮಲು; ಪಾಶ–ನೇಣಿನ ಕುಣಿಕೆ; ಗುಳಿಗೆ–ಮಾತ್ರೆ; ಉಡಿ–ಮಡಿಲು.

## I. ಸಂದರ್ಭ ಸೂಚಿಸಿ ವಿವರಿಸಿ:

೧. ನಿನ್ನ ಕನಸಿನ ಅರಳವ್ವಾ.
೨. ಪಾಶವಾಗಿದೆಯವ್ವ ನನ್ನುಸಿರಿಗೆ.
೩. ಕಂಡಿಲ್ಲ ನಾನಿನ್ನೂ ಬದುಕಿನಾಗಸದ ನೀಲ.
೪. ಯಾರದ್ಯಾಕವ್ವಾ ಒತ್ತಾಸೆ.
೫. ನಿನ್ನವ್ವನಾಗಿಯೇ ಬರುವೆನೆ.
೬. ಚೆಲ್ಲಬೇಕೆ ಉಡಿಯ ಮುತ್ತು.
೭. ಹೂ ತರುವೆನೇ ನಿನ್ನ ಹೆಸರಿಗೆ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಅವ್ವನ ದೇಹದ ಮುಗುಳು ಯಾರು?
೨. ಭ್ರೂಣಾವಸ್ಥೆಯಲ್ಲಿರುವ ಮಗುವಿಗೆ ವಿಷವಾಗಿರುವುದು ಯಾವುದು?
೩. ಭ್ರೂಣಾವಸ್ಥೆಯ ಮಗುವನ್ನು ಬೆನ್ನಟ್ಟಿರುವುದು ಯಾವುದು?

೪. ಒಡಲೊಳಗಿನ ಮಗು ತನ್ನ ರಕ್ತವನ್ನು ಏನೆಂದು ಭಾವಿಸುತ್ತದೆ?

೫. ತನ್ನನ್ನು ಉಳಿಸಿದರೆ ತಾಯಿಗೆ ಏನು ತರುವೆನೆಂದು ಮಗುವು ಹೇಳುತ್ತದೆ?

**III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಹೊಟ್ಟೆಯಲ್ಲಿರುವ ಮಗುವು ತನ್ನ ಉಸಿರಿಗೆ ಯಾವುದು ಪಾಶವಾಗಿದೆಯೆಂದು ಭಾವಿಸುತ್ತದೆ?

೨. ತಾನು ಬದುಕಿನಲ್ಲಿ ಇನ್ನೂ ಕಾಣಬೇಕಾಗಿರುವುದು ಏನೆಂದು ಒಡಲೊಳಗಿನ ಮಗುವು ಹೇಳುತ್ತದೆ?

೩. ಭ್ರೂಣಾವಸ್ಥೆಯ ಮಗುವು ಏಕೆ ಗಾಬರಿಗೊಂಡಿದೆ?

೪. ತನ್ನನ್ನು ಏಕೆ ಕಿತ್ತುಕೊಳ್ಳಬಾರದೆಂದು ಹೊಟ್ಟೆಯೊಳಗಿನ ಮಗುವು ಹೇಳುತ್ತಿದೆ?

೫. ಹೊಟ್ಟೆಯೊಳಗಿನ ಮಗುವು ಯಾವ ವರವನ್ನು ಬೇಡುತ್ತಿದೆ?

**IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

೧. ಹೆಣ್ಣು ಭ್ರೂಣಹತ್ಯೆಯನ್ನು ಈ ಕವಿತೆ ಹೇಗೆ ವಿರೋಧಿಸುತ್ತದೆ?

೨. 'ನಾ ಬರಿ ಭ್ರೂಣವಲ್ಲ' ಎಂದು ಹೊಟ್ಟೆಯೊಳಗಿನ ಮಗುವು ಹೇಳಲು ಕಾರಣವೇನು?

೩. ಹೆಣ್ಣಿಗೂ ಸಮಾನವಾಗಿ ಬದುಕುವ ಹಕ್ಕಿದೆ ಎಂಬ ಆಶಯವು ಕವಿತೆಯಲ್ಲಿ ಹೇಗೆ ಧ್ವನಿತವಾಗಿದೆ?

೪. ಈ ಕವಿತೆಯಲ್ಲಿ ಸ್ತ್ರೀ ಸಂವೇದನೆ ಹೇಗೆ ವ್ಯಕ್ತವಾಗಿದೆ?

**ಆಕರ:** ಎಷ್ಟೊಂದು ನಾವೆಗಳು(೨೦೦೯) – ಮಾಲತಿ ಪಟ್ಟಣಶೆಟ್ಟಿ
ಸಾಹಿತ್ಯ ಭಂಡಾರ, ಹುಬ್ಬಳ್ಳಿ

**ಹೆಚ್ಚಿನ ಓದು :** **ಹದಿಬದೆಯ ಧರ್ಮ–ಸಂಚಿಯ ಹೊನ್ನಮ್ಮ**
**ಒಡಲ ತುಡಿತಕೆ ಕೇಡು–ಮಂಜುನಾಥ ಅದ್ದೆ**

**ಕುವರನಾದೊಡೆ ಬಂದ ಗುಣವೇನದರಿಂದ**
**ಕುವರಿಯಾದೊಡೆ ಕುಂದೇನು**
**ಇವರೀರ್ವರೊಳೇಳ್ಗೆವಡೆದವರಿಂದ**
**ಸವನಿಪುದಿಹಪರ ಸೌಖ್ಯ**
**–ಸಂಚಿಯ ಹೊನ್ನಮ್ಮ**

# ೧೧. ಮತ್ತೆ ಸೂರ್ಯ ಬರುತ್ತಾನೆ

–ಡಾ. ಲೋಕೇಶ ಅಗಸನಕಟ್ಟೆ

**ಸವಾಲು ಸಾವಿರ ಎದುರಾದಾಗಲು ಎದೆಗುಂದಬಾರದು. ಅವುಗಳನ್ನು ಧೈರ್ಯವಾಗಿ ನಿಭಾಯಿಸುವ ಮನೋಭಾವನೆ ಬೆಳಸಿಕೊಳ್ಳಬೇಕು. ವಾಸ್ತವಕ್ಕೆ ಮುಖಮಾಡಿ ನಿಲ್ಲಬೇಕು. ಪಲಾಯನ ಹೇಡಿತನದ ಲಕ್ಷಣ. ಸಾವಿನ ಕಾಠಿಣ್ಯಕ್ಕಿಂತ ಬದುಕಿನ ಮಾಧುರ್ಯ ಬಲು ದೊಡ್ಡದು.**

ಸಸ್ಯ ಶ್ಯಾಮಲೆಯ
ಮಲೆಯ ಮಾಲೆಯ
ಅನಾಥ ಕಡಿದುಳಿದ ಕಾಂಡಗಳೇ
ಯಜ್ಞದಗ್ನಿಯಲಿ
ಚಿತಾಭಸ್ಮವಾದ ಶ್ರೀಗಂಧ ತರುಗಳೇ
ನಳಿಗೆ ನಗುವಿಗೆ
ಘೀಳಿಟ್ಟ ಕಣಿವೆ ಕಾಡುಗಳ ಹಾಡೇ
ಸಾಕಿನ್ನು ಚಿಂತೆ
ಮತ್ತೆ ಸೂರ್ಯ ಬರುತ್ತಾನೆ

ವಿಶಾಲ ಸಾಗರದ ಕರಿ ನೀರೇ
ಅಮಾಯಕರನ್ನಾವರಿಸಿದ ಸರಳೇ
ದಿಕ್ಕು ತಪ್ಪಿದ ಹಡಗು ಹಾಯಿಯೇ
ಜೀಕು ಗಾಣದ ನೊಗಕೆ ಹೆಗಲು ಕೊಟ್ಟ ಎತ್ತೇ
ಯಾಕಿನ್ನು ಚಿಂತೆ
ಮತ್ತೆ ಸೂರ್ಯ ಬರುತ್ತಾನೆ

ಲಾಠಿ ಬೂಟುಗಳಿಗೆ ತತ್ತರಿಸಿದ ಜನವೇ
ಗಂಟೆ ಜಾಗಟೆಗಳ ಸದ್ದಿನಲಿ ಕರಗಿದ
ಸನ್ನಿಪಾತ ಸಮೂಹವೇ
ಅಣುಬಾಂಬುಗಳಿಗೆ ಬಂಜೆಗೊಂಡ ನೆಲವೇ
ಬಿಡಿ ಇನ್ನು ಚಿಂತೆ
ಮತ್ತೆ ಸೂರ್ಯ ಬರುತ್ತಾನೆ

ಸಸ್ಯ ಶ್ಯಾಮಲೆಯ ಕತ್ತು ಹಿಸುಕಿ ಬೆಳೆದು
ಪಾರ್ಥೇನಿಯಂ ಕುಲವೇ

ಕಾರ್ನಿಯ ಕಬಳಿಸ ಬಂದ ನಖಗಳೇ
ಕರುಳ ಬಳ್ಳಿಗೆ ತೊಡರಿದ ಕ್ಯಾನ್ಸರ್ ಹುಳುವೇ
ಹೃದಯ ಗಹ್ವರದಲಿ
ಎಚ್ಚರೆಚ್ಚರ
ಮತ್ತೆ ಸೂರ್ಯ ಬರುತ್ತಾನೆ

ಪುಟ್ಟ ದಿಟ್ಟ ಹಕ್ಕಿಗಳೇ
ಕೋಟಿ ಕಂಠದಲಿ ಹಾಡಿ
ಕಾಡು ಕಣಿವೆ ಬೆಟ್ಟಗಳು ಮಾರ್ದನಿಸಲಿ
ಮತ್ತೆ ಸೂರ್ಯ ಬರುತ್ತಾನೆ.

ಬದನಿಕೆಯೂ
ಇರಲಿ ತನ್ನಂತೆ

## ಕವನ–ಕವಿ ಪರಿಚಯ: ಡಾ. ಲೋಕೇಶ ಅಗಸನಕಟ್ಟೆ (೧೯೫೮)



ಲೋಕೇಶ ಅಗಸನಕಟ್ಟೆ ದಾವಣಗೆರೆ ಜಿಲ್ಲೆ ಅಗಸನಕಟ್ಟೆ ಗ್ರಾಮದವರು. ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದ ಇವರು 'ಕನ್ನಡ ಕಾವ್ಯ–ಸಮಾಜ ಸಂಸ್ಕೃತಿ' ಮಹಾ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಪ್ರಸ್ತುತ ಚಿತ್ರದುರ್ಗದ ಕನ್ನಡ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮತ್ತೆ ಸೂರ್ಯ ಬರುತ್ತಾನೆ, ಮನೆಯಂಗಳದ ಮರ ಮತ್ತು ಧರಣಿಯ ಧ್ಯಾನ ಕವನ ಸಂಕಲಗಳು, ಅಭಿಮುಖ, ಒಳಗಿನ ಬೆಳಗು ವಿಮರ್ಶಾ ಸಂಕಲಗಳು–ಇವರ ಕೃತಿಗಳು. 'ನೀರೊಳಗಣಕಿಚ್ಚು' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 'ಹಟ್ಟಿಯೆಂಬ ಭೂಮಿಯ ತುಣುಕು' ಕಥಾ ಸಂಕಲನಕ್ಕೆ ಛಂದ ಪ್ರಶಸ್ತಿ ಬಂದಿದೆ. ನಮ್ಮೆಲ್ಲರ ಬುದ್ಧ ಎಂಬ ನಾಟಕ ಹಲವಾರು ಪ್ರಯೋಗಳನ್ನು ಕಂಡಿದೆ.

ಮನುಷ್ಯನ ಅತಿ ಆಸೆ ಬದುಕನ್ನು ನರಕಸದೃಶ್ಯವಾಗಿಸಿದೆ. ಮುಗ್ಧ ಜನರ ಬದುಕು ತುಳಿತಕ್ಕೆ ಸಿಕ್ಕಿದೆ. ಧರ್ಮ, ದೇವರು, ಮತಾಚರಣೆ, ಮತ ವೈಭವೀಕರಣಗಳಲ್ಲಿ ಅವರು ದಿಕ್ಕು ತಪ್ಪಿದ್ದಾರೆ. ಅರಾಜಕತೆ, ಅಸಹಾಯಕತೆ, ದಾರುಣತೆ ತುಂಬಿ ಹೋಗಿ ಎಲ್ಲರೂ ಹತಾಶರಾಗಿದ್ದಾರೆ. ಭವಿಷ್ಯದ ದಿನಗಳಲ್ಲಿ ಕಾಲ ಬದಲಾಗುತ್ತದೆ ಎನ್ನುವ ಭರವಸೆ ಇದೆ.

**ಪದಕೋಶ:**

ಚಿತಾಭಸ್ಮ– ಬೂದಿ; ಘೀಳಿಟ್ಟು–ಕೂಗಿ; ಹಾಯಿ–ದಿಕ್ಸೂಚಿ; ಜೀಕುಗಾಣ–ಶಬ್ದಮಾಡುತ್ತ ತಿರುಗುವ ಗಾಣ; ಸನ್ನಿಪಾತ–ಮಂಕುಕವಿದ ಸ್ಥಿತಿ; ಕಾರ್ನಿಯ–ಕಣ್ಣಿನ ಪಾಪೆ; ನಖ–ಉಗುರು; ಗಹ್ವರ–ಗುಹೆ; ಬದನಿಕೆ–ಬಂದಳಿಕೆ, ಪರಾವಲಂಬಿ.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಚಿತಾಭಸ್ಮವಾದ ಶ್ರೀಗಂಧ ತರುಗಳೇ.
೨. ದಿಕ್ಕು ತಪ್ಪಿದ ಹಡಗು ಹಾಯಿಯೇ.
೩. ಗಂಟೆ ಜಾಗಟೆಗಳ ಸದ್ದಿನಲಿ ಕರಗಿದ ಸನ್ನಿಪಾತ ಸಮೂಹವೇ.
೪. ಕರುಳ ಬಳ್ಳಿಗೆ ತೊಡರಿದ ಕ್ಯಾನ್ಸರ್ ಹುಳುವೇ.
೫. ಕಾಡು ಕಣಿವೆ ಬೆಟ್ಟಗಳು ಮಾರ್ದನಿಸಲಿ.

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಮಲೆಯ ಮಾಲೆ ಯಾವುದು?
೨. ಶ್ರೀಗಂಧ ತರುಗಳು ಏನಾದವು?
೩. ಅಣುಬಾಂಬುಗಳಿಗೆ ನೆಲ ಏನಾಗಿದೆ?
೪. ನಖಗಳು ಏನನ್ನು ಕಬಳಿಸಲು ಬಂದಿವೆ?
೫. ಕರುಳ ಬಳ್ಳಿಗೆ ತೊಡರಿದ ಹುಳು ಯಾವುದು?

**III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಚಿತಾಭಸ್ಮವಾದ ತರು ಯಾವುದು ಮತ್ತು ಎಲ್ಲಿ?
೨. ಅಮಾಯಕರಿಗೆ ಕವಿ ನೀಡುವ ಆಶ್ವಾಸನೆ ಯಾವುದು?
೩. ಜನರು ತತ್ತರಿಸಿರುವುದು ಯಾವುದಕ್ಕೆ?
೪. ಹಕ್ಕಿಗಳು ತಮ್ಮ ಕಂಠಗಳಿಂದ ಏನೇನನ್ನು ಮಾರ್ದನಿಸಬೇಕಿದೆ?

**IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

೧. ಕವಿಯ ಆತಂಕಕ್ಕೆ ಕಾರಣವಾದ ಸನ್ನಿವೇಶಗಳು ಕವಿತೆಯಲ್ಲಿ ಹೇಗೆ ಮೂಡಿವೆ?
೨. ಪ್ರಸ್ತುತ ಕಾಲದೊಂದಿಗೆ ಈ ಕವಿತೆ ಹೇಗೆ ಹೊಂದಿಕೊಳ್ಳುತ್ತದೆ? ವಿಮರ್ಶಿಸಿ:
೩. 'ಮತ್ತೆ ಸೂರ್ಯ ಬರುತ್ತಾನೆ' ಕವಿತೆಯ ಆಶಯವನ್ನು ಚರ್ಚಿಸಿ.

**ಆಕರ:** ಮತ್ತೆ ಸೂರ್ಯ ಬರುತ್ತಾನೆ– ಡಾ. ಲೋಕೇಶ ಅಗಸನಕಟ್ಟೆ

**ಪರಿಸ್ಥಿತಿಯು ಪ್ರತಿಕೂಲವಾಗಿರುವಾಗ ಮಾತನಾಡುವುದು ಸಾಹಸವೆ !**

**– ಡಾ. ರಂ. ಶ್ರೀ. ಮುಗಳಿ**

# ೧೨. ಸುನಾಮಿಯ ಹಾಡು

– ಡಾ. ಎಚ್.ಎಲ್. ಪುಷ್ಪ

ಹೊಸ ಕಾಲವನ್ನು ಮನುಷ್ಯ ಎಷ್ಟೇ ಬಲಿಷ್ಠವಾಗಿ ನಿರ್ಮಿಸಿ ಆಧುನಿಕಗೊಳಿಸಿದರೂ ನಿಸರ್ಗದೆದುರು ನಿಲ್ಲಲಾರ. ಅವನ ಸೃಷ್ಟಿಯನ್ನು ನಿಸರ್ಗ ಒಂದು ಕ್ಷಣದಲ್ಲಿ ನಾಶಪಡಿಸಬಲ್ಲುದು. ವಿಜ್ಞಾನದ ಸವಲತ್ತುಗಳು ಮಾತ್ರ ಮಾನವ ಸೃಷ್ಟಿಯಲ್ಲ, ಅವನು ಮತ ಮೌಢ್ಯಗಳನ್ನೂ ಸೃಷ್ಟಿಸಿಕೊಂಡಿದ್ದಾನೆ. ಅದನ್ನು ಬಿಟ್ಟು ಹೊಸ ಹುಡುಕಾಟದ ಕಡೆಗೆ ಮನಸ್ಸು ಮಾಡಬೇಕು. ಸಹಬಾಳ್ವೆ ನಮ್ಮೆಲ್ಲರ ಮೂಲ ಸೆಲೆಯಾಗಬೇಕು.

ಭೂಮಿಯೊಳಗಿನ ಜಲದ ತೆರೆ
ಸರಿಯುತ್ತ, ಮೆಲ್ಲನೆ ಒಳಗೊಳಗೆ ನುಂಗುತ್ತ
ಕಾಣದಿದ್ದಷ್ಟೇ ಮೋಸ ಕಂಡದ್ದೂ ಕೂಡ
ಮೊಸಳೆ ಬಾಯಂತೆ ಜಲದ ಕಣ್ಣು ತೆರೆದು
ಕುಸಿಯುತ್ತಾ ಮಣ್ಣ ಪದರ
ಎಲ್ಲ ಜೀವಚರಗಳು ಸಮಾಧಿಯೊಳಗೆ ಜಾರುತ್ತಾ
ಆಹಾ, ಪ್ರಳಯ! ಇದು ಜಲಪ್ರಳಯ!
ಪಾಪದ ಕೊಡ ತುಂಬಿದ ಜಗಪ್ರಳಯ!

ಕುದಿವ ಕಡಲು
ಉಗಿದು ಎಲ್ಲ ಜೀವಚರಗಳ ಹೊರಕ್ಕೆ
ನುಂಗುತಿದೆ ಎಲ್ಲ ಮನುಕುಲವ ಒಳಕ್ಕೆ
ಒಡಲ ಒಳಗೆ ಇನ್ನೇನಿದೆ
ಸತ್ತವರ ಎಲ್ಲ ಸತ್ತೆ ಹೊರಬೀಳುತ್ತಿದೆ
ಮಾಯವಾಗಿದೆ ಎಲ್ಲ ಹವಳಗಳ ದ್ವೀಪ
ಮಿನುಗುವ ಬಿಳಿಮುತ್ತುಗಳು.

ಕರೆವ ಮಕ್ಕಳ ಕೊರಳು
ಹಕ್ಕಿಗಳ ಪಿಸುಮಾತು, ಮೀನುಗಾರನ
ಬಲೆ, ಬಲೆಯೊಳಗಿನ ಮೀನು

ನೀರಿನಲ್ಲಿ ನರಳಿಕೆಯಾಗಿ
ಅಲೆಯಬ್ಬರದ ಎದುರು ದನಿ ಕಳಕೊಂಡು
ನೋವು, ವಿಷಾದ, ನಶ್ವರತೆ
ಅಲುಗಿಸುವ ಜೀವದ ಭಯ.

ಎಲ್ಲೋ ದೂರದಲ್ಲಿ ಭೂಮಿ ಕಂಪಿಸಿದರೆ
ಕಡಲು ಎಲ್ಲೆ ಮೀರಿ ಮೊರೆದರೆ
ಇಟ್ಟಿಗೆ ಮೇಲೆ ಇಟ್ಟಿಗೆ ಜೋಡಿಸಿದ
ಗುಡಿ, ಚರ್ಚು, ಮಸೀದಿಗಳೆಲ್ಲಾ
ಹಾರಿ ಹೋಗುತ್ತವೆ ಸಾಕ್ಷಿಯಿಲ್ಲದಂತೆ
ಕುಸಿದು ಹೋದ ಸಮಾಧಿಯ ಸುತ್ತ
ನಾಳೆ ಉತ್ಖನನ ನಡೆಸುವವರು ಪಿಕಾಸಿ ಹಿಡಿದು
ಎಲ್ಲಿಂದ ಅಗೆಯಬೇಕೆಂದು ನಕಾಶೆ ಹುಡುಕುತ್ತಾರೆ.

ವಾಸ್ಕೋಡಗಾಮನ ನಾವೆ, ಟೈಟಾನಿಕ್‌ನ
ಅವಶೇಷಗಳು ಕಾಗದದ ದೋಣಿಗಳಾಗಿ ತೇಲುತ್ತಾ
ಮಂಗಳವೋ, ಶುಕ್ರವೋ ಯಾವುದಾದರೊಂದು
ಗ್ರಹ ಹುಡುಕಲೇ ಬೇಕು
ಉಳಲು, ಬಿತ್ತಲು, ಮನೆಯ ಕಟ್ಟಲು
ಮತ್ತೆ ತೊಟ್ಟಿಲು ತೂಗಲು
ಹೌದು ಇತಿಹಾಸದ ಚಕ್ರ ಸುತ್ತಲೇಬೇಕು
ಅಣುಯುಗದಿಂದ ಶಿಲಾಯುಗಕ್ಕೆ
ಶಿಲಾಯುಗದಿಂದ ಮತ್ತೊಂದು ಯುಗಕ್ಕೆ.

**ಕವನ–ಕವಿ : ಡಾ. ಎಚ್.ಎಲ್. ಪುಷ್ಪ (೧೯೬೨)**



ಡಾ. ಎಚ್.ಎಲ್. ಪುಷ್ಪ ದೊಡ್ಡಬಳ್ಳಾಪುರ ತಾಲ್ಲೂಕಿನ ಹೊಸಹಳ್ಳಿಯವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಹಾಗೂ ಹಂಪಿಯು ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಈಗ ಬೆಂಗಳೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿ ಪ್ರಾದೇಶಿಕ ಭಾಷಾ ಸಲಹಾಸಮಿತಿಯ ಸದಸ್ಯರಾಗಿ, "ಅನ್ವೇಷಣೆ" ಸಾಹಿತ್ಯ ಪತ್ರಿಕೆಯ ಗೌರವ ಸಂಪಾದಕರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಅಮೃತಮತಿಯ ಸ್ವಗತ, ಗಾಜುಗೋಳ, ಲೋಹದ ಕಣ್ಣು, ಮದರಂಗಿ ವೃತ್ತಾಂತ– (ಕವನ ಸಂಕಲನಗಳು), ಭೂಮಿಯಲ್ಲ ಇವಳು, ಪರ್ವಾಪರ್ವ, ಗೆಲ್ಲಲಾರ್ಕುಮೆ ಮೃತ್ಯುರಾಜನಂ – (ನಾಟಕಗಳು), ಗಂಧಗಾಳಿ, ಅವಲೋಕನ (ವಿಮರ್ಶೆಗಳು) ಮುಂತಾದುವು ಇವರ ಪ್ರಮುಖ ಕೃತಿಗಳು.

ಒರಿಸ್ಸಾದ ಉದಯ ಭಾರತಿ ರಾಷ್ಟ್ರೀಯ ಪ್ರಶಸ್ತಿ, ಪುತಿನ ಕಾವ್ಯ ಪುರಸ್ಕಾರ, ಕಡೆಂಗೋಡ್ಲು ಶಂಕರಭಟ್ಟ ಕಾವ್ಯ ಪ್ರಶಸ್ತಿ, ದಿನಕರ ದೇಸಾಯಿ ಕಾವ್ಯ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ಸಂದಿವೆ.

ಕಡಲ ಅಲೆಗಳ ಶಕ್ತಿಯೆದುರು ಕಟ್ಟಡಗಳು, ಗುಡಿ, ಚರ್ಚು, ಮಸೀದಿಗಳು ಯಾವುದೂ ಉಳಿಯುವುದಿಲ್ಲ. ಪ್ರಕೃತಿಯ ಎದುರು ಮಾನವ ನಿರ್ಮಿತ ಚರಿತ್ರೆಯು ಉರುಳಿ ಹೋಗುತ್ತದೆ. ಹೊಸಯುಗದ ಮನುಕುಲ ನಿರ್ಮಾಪಕರು ಮತ್ತೆ ಅಳಿದುಳಿದ ಅವಶೇಷಗಳ ನಡುವೆ ಉತ್ಖನನ ನಡೆಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಕವಿತೆ ಸಾರುತ್ತದೆ.

**ಪದಕೋಶ:**

ಸತ್ತೆ–ವ್ಯವಸ್ಥೆ, ತಾಯಿಮಾಸು; ಹವಳ–ನವರತ್ನಗಳಲ್ಲೊಂದು, ಕೆಂಪು ಬಣ್ಣದ ಮಣಿ; ಮೊರೆ–ಗರ್ಜಿಸು, ಅಬ್ಬರಿಸು; ಉತ್ಖನನ– ಪ್ರಾಚೀನ ಅವಶೇಷಗಳ ಶೋಧ; ಅವಶೇಷ–ಉಳಿಕೆ.

**ಟಿಪ್ಪಣಿ: ಸುನಾಮಿ** (Tsunami): ಸಾಗರದ ಆಳದಲ್ಲಿ ಉಂಟಾಗುವ ಭೂಕಂಪನದಿಂದ ಉಂಟಾದ ದೈತ್ಯ ಅಲೆಗಳಿಗೆ ಸುನಾಮಿ ಎಂದು ಕರೆಯುತ್ತಾರೆ.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಪಾಪದ ಕೊಡ ತುಂಬಿದ ಜಗಪ್ರಳಯ.
೨. ಸತ್ತವರ ಎಲ್ಲ ಸತ್ತೆ ಹೊರಬೀಳುತ್ತಿದೆ.
೩. ಗುಡಿ ಚರ್ಚು ಮಸೀದಿಗಳೆಲ್ಲ ಹಾರಿಹೋಗುತ್ತವೆ.
೪. ಎಲ್ಲಿಂದ ಅಗೆಯಬೇಕೆಂದು ನಕಾಶೆ ಹುಡುಕುತ್ತಾರೆ.
೫. ಅಣುಯುಗದಿಂದ ಶಿಲಾಯುಗಕ್ಕೆ.

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಭೂಮಿಯೊಳಗಿನ ಯಾವ ತೆರೆ ಸರಿಯುತ್ತದೆ?
೨. ಜಲದ ಕಣ್ಣು ತೆರೆದಾಗ ಕುಸಿಯುವುದು ಯಾವುದು?
೩. ಜಗಪ್ರಳಯ ಯಾವಾಗ ಸಂಭವಿಸುತ್ತದೆ?
೪. ಮಾಯವಾಗಿರುವ ದ್ವೀಪ ಯಾವುದು?

೫. ಸಾಕ್ಷಿ ಇಲ್ಲದಂತೆ ಹಾರಿಹೋಗುತ್ತಿರುವುದು ಯಾವುದು?
೬. ನಕಾಶೆ ಹುಡುಕುತ್ತಿರುವವರು ಯಾರು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಕವಿತೆಯಲ್ಲಿ ಜಗಪ್ರಳಯವನ್ನು ಹೇಗೆ ಕಲ್ಪಿಸಲಾಗಿದೆ?
೨. ಅಬ್ಬರದ ಅಲೆಯೆದುರು ದನಿ ಕಳೆದುಕೊಂಡವುಗಳು ಯಾವುವು?
೩. ಭೂಮಿ ಕಂಪಿಸಿದಾಗ ಏನಾಯಿತು?
೪. ಕಾಗದದ ದೋಣಿಗಳಾಗಿ ತೇಲುತ್ತಿರುವುವು ಯಾವುವು?
೫. ಮಂಗಳ, ಶುಕ್ರಗ್ರಹಗಳನ್ನು ಯಾಕೆ ಹುಡುಕಬೇಕು?

## IV. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಜಲಪ್ರಳಯದ ಪರಿಣಾಮಗಳನ್ನು ಕವಿತೆಯ ಹಿನ್ನಲೆಯಲ್ಲಿ ವಿವರಿಸಿ.
೨. ಸಾವಿನಲ್ಲಿ ಎಲ್ಲರೂ ಸಮಾನರಾಗುವ ವಿಪರ್ಯಾಸವನ್ನು ಸುನಾಮಿಯ ಹಾಡು ಹೇಗೆ ಧ್ವನಿಸುತ್ತಿದೆ?
೩. ಪ್ರಕೃತಿಯ ಸರ್ವಶಕ್ತಿಯ ಎದುರು ಮಾನವನ ಶಕ್ತಿ ಸಾಮರ್ಥ್ಯಗಳ ಮಿತಿಯನ್ನು ಕವಿತೆ ಹೇಗೆ ಸ್ಪಷ್ಟಪಡಿಸುತ್ತಿದೆ?

**ಆಕರ:** ಲೋಹದ ಕಣ್ಣು (2009) – ಎಚ್.ಎಲ್.ಪುಷ್ಪ
ಲೋಹಿಯಾ ಪ್ರಕಾಶನ
ಬಳ್ಳಾರಿ.

**ವಿದ್ಯುದ್ದೀಪಗಳೇ ಹೇಳಿ**
**ಕಳೆಯಬಲ್ಲಿರಾ ನೀವು**
**ನಿಮ್ಮನ್ನಿಲ್ಲಿಗೆ ತಂದವರ**
**ಬದುಕಿನ ಕತ್ತಲೆಯನ್ನು?**
**–ರಂಜಾನ್ ದರ್ಗಾ**

❖❖❖❖❖

# ೧೩. ಹೊಲಿಗೆ ಯಂತ್ರದ ಅಮ್ಮಿ

– ಆರೀಫ್ ರಾಜಾ

ತಾಯಿ ಲೋಕದ ದೈವ. ಮಾನವ ಸಮಾಜದಲ್ಲಾಗಲಿ, ಪ್ರಾಣಿ ಸಮಾಜದಲ್ಲಾಗಲಿ ತಾಯಿ ಪೊರೆಯುವ ಗುಣಗಳನ್ನು ಹೊಂದಿರುತ್ತಾಳೆ. ತನ್ನ ಮಕ್ಕಳಿಗೆ ಕಷ್ಟಗಳನ್ನು ನಿವಾರಿಸಲು ಸತತ ಪ್ರಯತ್ನ ಮಾಡುತ್ತಾಳೆ. ಅದಕ್ಕಾಗಿ ತನ್ನ ಜೀವನವನ್ನು ಗಂಧದಂತೆ ತೇಯುತ್ತಾಳೆ. ಇಡೀ ಜೀವಮಾನವನ್ನು ಮಕ್ಕಳ ಶ್ರೇಯಸ್ಸಿಗಾಗಿ ಮುಡಿಪಿಡುವ ತಾಯಿ ದೈವವನ್ನು ಗೌರವಿಸುವ ಹಾಗೂ ಕಾಪಾಡುವ ಹೊಣೆಗಾರಿಕೆ ನಮ್ಮದು.

ರೊಟ್ಟಿ ಪಾಲುಮಾಡಿದಂತೆ ಬಟ್ಟೆ ಗಡಿಕೊರೆದು
ಕತ್ತರಿಸುವ ಅಮ್ಮಿ ತುಂಡು ತುಂಡು ಸೇರಿಸಿ
ಹೊಲಿದು ಒಂದು ಮಾಡುತ್ತಾಳೆ
ಒಂದು ಕೈಯಲ್ಲಿ ಕತ್ತರಿ:
ಮುಖವಾಡ ಒಡೆದು ಬಯಲಾಗಲು
ಮತ್ತೊಂದು ಕೈಯಲ್ಲಿ ಸೂಜಿ;
ಲೋಕದ ಮಾನ ಕಾಪಾಡಲು

ಕಾಲಿನಿಂದ ಪೆಡಲು ತುಳಿಯುವ ಅಮ್ಮಿ
ಚಕ್ರ ತಿರುಗಿಸಿದಂತೆಲ್ಲಾ ಇತಿಹಾಸ
ಒಂದು ಸುತ್ತು ಉರುಳುತ್ತದೆ

ಸೂಜಿ ಮೂಗಿಗೆ ದಾರಪೋಣಿಸುವ ಅಮ್ಮಿ
ಸಂತೆಯಲ್ಲಿ ಕೊಂಡುತಂದ ನಿರಾಕಾರಮಾನಕ್ಕೆ ಹೊಲಿಗೆ ಹಾಕಿ
ರೂಪು ನೀಡುತ್ತಾಳೆ ಆಕಾಶದಂತಹ, ಕಡಲಿನಂತಹ ಬಟ್ಟೆಗೆ
ನಮೂನಮೂನೆಯ ಪಾತ್ರ ಕೊಡುವ ಅಮ್ಮಿಯೇ ಸೃಷ್ಟಿಕರ್ತೆ
ಅಮ್ಮಿಯ ಕಣ್ಣು, ಮೂಗು, ಹಣೆ, ರೋಮಗಳಿಂದ ಇಳಿಯುವ
ಉಪ್ಪುನೀರಿನಿಂದಲೇ ಈ ನಿಗೂಢ ಬದುಕಿನೊಳಗೆ
ನಿರ್ಜೀವ ಬಟ್ಟೆಗೆ ಪ್ರವೇಶ

ಬಣ್ಣಬಣ್ಣದ ಬಟ್ಟೆಹೊಲಿದು ಜಗಕ್ಕೆ
ಉಡಿಸುವ ಅಮ್ಮಿ ಯಾವಾಗಲೂ ಧರಿಸುವುದು ಹಾಲುಬಿಳಿಸೀರೆ

ಚಿಂದಿಮನಸುಗಳನು ಜೋಡಿಸಲು ಸೂಜಿ ಇದೆ
ಗೋಲವಿಶ್ವ ದಾರಿ ಸಾಗಲು ರಾಟೆ ಇದೆ
ಲೋಕವಿಕಾರಗಳನ್ನು ಕಡಿದು ಹಾಕಲೆಂದೇ
ಕೈಯಲ್ಲಿ ಕತ್ತರಿ

ಹರಿದ ಚಂದ್ರ, ತೂತುಬಿದ್ದ ನಕ್ಷತ್ರ ಯಾರದೋ
ಚಾಟಿಏಟಿಗೆ ಗಿರ್ರನೆ ತಿರುಗುವ ಗ್ರಹ ಬುಗುರಿಗಳು
ದಿಕ್ಕುದೆಸೆಯಿಲ್ಲದೆ ಅಲೆಯುವ ಅಲೆಮಾರಿ
ಉಲ್ಕೆಗಳು, ಧೂಮಕೇತುಗಳು ನಿದ್ದೆಬಾರದೆ ಒದ್ದಾಡುತಿರಲು
ಒಂದು ಹಾಸಿಗೆಬೇಕು ಅಮ್ಮಿ ಹೊಲಿದುಕೊಡು

ಕಟ್ಟಿಕೊಂಡ ಗಂಡನನ್ನು ಹೊಟ್ಟೆಯ ಮಗುವಿನಂತೆ ಸಾಕಿ
ಹೊಲಿಗೆ ಯಂತ್ರದ ಕೂಡ ಕಾಲು ಶತಮಾನ ಕಳೆದ
ನನ್ನ ಅಮ್ಮಿಗೆ ನಮಾಜ್ ಎಂದರೆ ಜುಮ್ಮಾ
ಈದ್ ಎಂದರೆ ದೂದ್‌ಖುರ್ಮಾ

ರಟ್ಟೆ ಬೀಳುವತನಕ ರಾಟೆತಿರುಗಿಸಿ
ಆರುಮಕ್ಕಳ ಹಸಿವು ನೀಗಿಸುವ ಅಮ್ಮಿಗೆ
ಕರುಳಕುಡಿಗಳೆಂದರೆ ಕನಸುಗಣ್ಣು,
ಮರುಭೂಮಿಯಲ್ಲೂ ಸಿಗುವ ಹಸಿರುಮಣ್ಣು.

### ಕವನ–ಕವಿ ಆರಿಫ್ ರಾಜಾ (೧೯೮೩)



ಆರಿಫ್ ರಾಜಾ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಅರಕೆರಾ ಗ್ರಾಮದವರು. ಇವರು ರಾಯಚೂರು ಜಿಲ್ಲೆಯ ಉಪ್ರಾಳ ಕ್ಯಾಂಪ್‌ನಲ್ಲಿ ಸರಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸೈತಾನನ ಪ್ರವಾದಿ, ಜಂಗಮ ಫಕೀರನ ಜೋಳಿಗೆ, ಬೆಂಕಿಗೆ ತೊಡಿಸಿದ ಬಟ್ಟೆ ಇವರ ಕವನ ಸಂಕಲನಗಳು.

'ಜಂಗಮ ಫಕೀರನ ಜೋಳಿಗೆ' ಸಂಕಲನಕ್ಕೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಪುಸ್ತಕ ಪ್ರಶಸ್ತಿ, ಬೇಂದ್ರೆ ಪುಸ್ತಕ ಬಹುಮಾನ ಹಾಗೂ ೨೦೧೨ರ ಕೇಂದ್ರ ಸಾಹಿತ್ಯ ಅಕಾಡೆಮಿಯ "ಯುವ ಪುರಸ್ಕಾರ" ಪ್ರಶಸ್ತಿ ದೊರೆತಿವೆ. ಇವರ ಕವಿತೆಗಳು ಭಾರತದ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಪರ್ಶಿಯನ್ ಭಾಷೆಯಲ್ಲಿ ರಚಿತವಾದ "ಭಾರತದ ಸಮಕಾಲೀನ ಕವಿತೆಗಳು" ಸಂಕಲನದಲ್ಲಿ ಇವರ ಅನುವಾದಿತ ಕವಿತೆಗಳು ಪ್ರಕಟಣೆಗೊಂಡಿವೆ.

ಧರ್ಮಾಂಧತೆ, ಅಂಧಶ್ರದ್ಧೆ ಹಾಗೂ ವೈಷಮ್ಯಗಳಿಂದ ತತ್ತರಿಸುತ್ತಿರುವ ವಾತಾವರಣವನ್ನು ಕವಿ ಹೊಲಿಗೆ ಯಂತ್ರದ ರೂಪಕದೊಂದಿಗೆ ಕಟ್ಟಿಕೊಟ್ಟಿದ್ದಾರೆ. ತಾಯಿಯ ಕೌಶಲ, ಶಕ್ತಿ, ಸಾಮರ್ಥ್ಯ, ವ್ಯಕ್ತಿತ್ವ ಹಾಗೂ ಸೃಷ್ಟಿಗುಣಗಳನ್ನು ಕಾಣಬಹುದು. ಅಮ್ಮಿಯ ಶ್ರಮ ಕಾವ್ಯವಾಗಿ ರೂಪುದಳೆದಿದೆ. ಕತ್ತರಿ, ಸೂಜಿ ಹಿಡಿದಿರುವ ಅಮ್ಮಿ ಚಿಂದಿ ಮನಸುಗಳನ್ನು ಹೊಲಿದು ಒಂದು ಮಾಡುತ್ತಾಳೆ. ದುಡಿದು ಸಂಸಾರವನ್ನು ಸಾಕುವ ತಾಯಿಯ ಚಿತ್ರಣ ಇಲ್ಲಿದೆ.

**ಪದಕೋಶ:**

ಪೆಡಲು–ತುಳಿಯುವ ಕಬ್ಬಿಣದ ಹಲಗೆ; ರಾಟೆ–ಚಕ್ರ; ಉಲ್ಕೆ ಮತ್ತು ಧೂಮಕೇತು–ಆಕಾಶಕಾಯಗಳು; ಜುಮ್ಮಾ–ಶುಕ್ರವಾರ; ದೂದ್‌ಖುರ್ಮಾ–ಶ್ಯಾವಿಗೆ ಪಾಯಸ; ಈದ್–ಹಬ್ಬ; ನಮಾಜ್–ಮುಸ್ಲೀಮರ ಪ್ರಾರ್ಥನೆ.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ನಿರಾಕಾರಮಾನಕ್ಕೆ ಹೊಲಿಗೆ ಹಾಕಿ ರೂಪು ನೀಡುತ್ತಾಳೆ.
೨. ಚಿಂದಿ ಮನಸುಗಳನ್ನು ಜೋಡಿಸಲು ಸೂಜಿ ಇದೆ.
೩. ಅಮ್ಮಿ ಯಾವಾಗಲೂ ಧರಿಸುವುದು ಹಾಲುಬಿಳಿಸೀರೆ.
೪. ನಮಾಜ್ ಎಂದರೆ ಜುಮ್ಮಾ ...ಈದ್ ಎಂದರೆ ದೂದ್ ಖುರ್ಮಾ.
೫. ಕರುಳಕುಡಿಗಳೆಂದರೆ ಕನಸುಗಣ್ಣು.

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಅಮ್ಮಿ ಏನನ್ನು ಪಾಲು ಮಾಡಿದಂತೆ ಬಟ್ಟೆ ಕತ್ತರಿಸುತ್ತಾಳೆ?
೨. ಚಕ್ರ ತಿರುಗಿಸಿದಂತೆ ಉರುಳುವುದು ಯಾವುದು?
೩. ಅಮ್ಮಿ ಯಾವಾಗಲೂ ಏನನ್ನು ಧರಿಸುವಳು?
೪. ಅಮ್ಮಿ ಯಾವುದನ್ನು ಕಡಿದು ಹಾಕಲೆಂದು ಕತ್ತರಿ ಹಿಡಿದಿದ್ದಾಳೆ?
೫. ಅಮ್ಮಿ ಜಗತ್ತಿಗೆ ಎಂತಹ ಬಟ್ಟೆಯನ್ನು ತೊಡಿಸುವಳು?
೬. ಮಗುವಿನಂತೆ ಯಾರನ್ನು ಸಾಕಿದಳು?
೭. ಹೊಲಿಗೆ ಯಂತ್ರದ ಜೊತೆಗೆ ಅಮ್ಮಿ ಕಳೆದ ಕಾಲವೆಷ್ಟು?

## III. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಕತ್ತರಿ ಮತ್ತು ಸೂಜಿಗಳ ಕೆಲಸ ಯಾವುದು?
೨. ಅಮ್ಮಿಯನ್ನು ಸೃಷ್ಟಿಕರ್ತೆಯೆಂದು ಏಕೆ ಕರೆಯಲಾಗಿದೆ?
೩. ಅಮ್ಮಿಯ ಬದುಕಿನಲ್ಲಿ ನಿರ್ಜೀವ ಬಟ್ಟೆಯ ಪ್ರವೇಶ ಹೇಗಾಯಿತು?
೪. ದಿಕ್ಕು ದೆಸೆಯಿಲ್ಲದೆ ಅಲೆಯುತ್ತಿರುವುವು ಯಾವುವು?
೫. ಹಾಸಿಗೆಯನ್ನು ಹೊಲಿದುಕೊಡುವಂತೆ ಅಮ್ಮಿಯನ್ನು ಕೇಳಲು ಕಾರಣವೇನು?
೬. ಅಮ್ಮಿಯ ಪಾಲಿಗೆ ನಮಾಜ್ ಮತ್ತು ಈದ್ ಎಂದರೆ ಯಾವುವು?

## IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಅಮ್ಮಿಯ ಹೊಲಿಗೆಯ ಕೌಶಲ್ಯವು ಕವಿತೆಯಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ?
೨. ಹೊಲಿಗೆ ಕಾಯಕದ ಮೂಲಕ ಮನೆ ಮತ್ತು ಲೋಕದ ಮಾನವನ್ನು ಅಮ್ಮಿ ಹೇಗೆ ಕಾಪಾಡಿದ್ದಾಳೆ?
೩. ಹಾಸಿಗೆಯನ್ನು ಹೊಲಿದು ಕೊಡುವಂತೆ ಅಮ್ಮಿಯನ್ನು ಕೇಳಲು ಕಾರಣಗಳೇನು?
೪. ಅಮ್ಮಿಯ ವ್ಯಕ್ತಿತ್ವ ಕವಿತೆಯಲ್ಲಿ ಒಡಮೂಡಿದ ಬಗೆಯನ್ನು ವಿವರಿಸಿ.

**ಆಕರ :** ಜಂಗಮ ಫಕೀರನ ಜೋಳಿಗೆ(೨೦೦೯) – ಆರೀಫ್ ರಾಜಾ
ಲಡಾಯಿ ಪ್ರಕಾಶನ,
ಗದಗ.

**ಹೆಚ್ಚಿನ ಓದು:**
**ಅವ್ವ – ಪಿ. ಲಂಕೇಶ್**
**ಅಮ್ಮನ ಅಂಗನವಾಡಿ – ಡಾ. ಅರುಣ್ ಜೋಳದ ಕೂಡ್ಲಿಗಿ**
**ಸೂಜಿ ಮತ್ತು ಕತ್ತರಿ(ಕಥೆ) – ಶೇಕ್ ಫರೀದ್**

ತಾಯಿಗಿಂತ ದೇವರಿಲ್ಲ. – ಗಾದೆ

# ೧೪. ದೇವರಿಗೊಂದು ಅರ್ಜಿ

– ಲಕ್ಕೂರು ಸಿ. ಆನಂದ

**ದಲಿತ ಸಮುದಾಯವು ಶತಮಾನಗಳಿಂದಲೂ ಅವಮಾನಗಳಿಗೆ ಸಿಲುಕಿದೆ. ಸಮಾಜ ಸುಧಾರಕರು, ಸಂತರು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ್ದಾರೆ. ಜಾಗತೀಕರಣ ಯುಗದಲ್ಲೂ ಅಸ್ಪೃಶ್ಯತೆಯು ಬದಲಾದ ರೂಪದಲ್ಲಿ ಕಂಡುಬರುತ್ತಿದೆ. ಎಲ್ಲರು ಮುಖ್ಯವಾಹಿನಿಯಲ್ಲಿ ಒಂದಾಗಬೇಕಾದದ್ದು ಬಹುಮುಖ್ಯ.**

ನನ್ನನ್ನೊಮ್ಮೆ ಕ್ಷಮಿಸು ಬಿಡು ದೇವರೆ
ಧರೆ ಮೇಲೆ ಉರಿಪಾದ ಊರಿ ನಡೆದಂತೆಲ್ಲಾ
ಯಾರೊ ನನ್ನ ತಲೆಯ ಮೇಲೂ ನಡೆದಂತಾಗುತ್ತಿದೆ
ಜಗದ ಅಗಲದ ನಡುವಿನಿಂದ ಯಾರೇ ಕರೆದರು
ಬಂದೂಕು, ಬಾಂಬ್ ಎಂತಲೆ ಕೇಳಿಸುತ್ತಿದೆ ನನಗೆ

ನಮ್ಮದಲ್ಲದ ಯಾರದೊ ಸಮಾಧಿಗಳನ್ನು ಮೃದುವಾಗಿ
ಸವರುತ್ತಿದ್ದರೆ ಜೀವಂತ ವ್ಯಕ್ತಿಗಳನ್ನು ಬಚ್ಚಿಟ್ಟುಕೊಂಡ ಗೋಡೆಗಳು
ನನ್ನ ಕೈ ಗುರುತುಗಳನ್ನು ಅಪ್ಪಿಕೊಳ್ಳುತ್ತಿವೆ

ಸುಮ್ಮನಿರಲಾರದೆ ಗುಲಾಬಿಗೆ ಮುತ್ತಿಡೋಣವೆಂದರೆ
ಎಚ್ಚೆತ್ತ ಗುಲಾಬಿ ಯಾವ ಕುಲ?
ಯಾವ ಮತ? ಎಂದು ಪ್ರಶ್ನೆ ಕೇಳುತ್ತ ದಿಟ್ಟಿಸಿ ನೋಡುತ್ತಿದೆ.

ಒಂದಷ್ಟು ಸಮಾಧಾನ ಪಡೋಣವೆಂದು
ಬೊಗಸೆಯೊಳಗೊಂದಷ್ಟು ನೀರು ತುಂಬಿಕೊಂಡು
ಆ ಚಂದಿರನನ್ನು ಬಂಧಿಸಿ ಕುಡಿಯೋಣವೆಂದರೆ
ಬೊಗಸೆಯೊಳಗಿನ ನೀರು ಬೆರಳ ಸಂದಿಯಲ್ಲಿ ಸೋರಿ ಹೋಗಿ
ನಗುವ ಚಂದಿರ ಕೈಗಂಟಿಕೊಳ್ಳುತ್ತಿದ್ದಾನೆ.

ದೂರಕ್ಕೆಲ್ಲಾದರು ಹೊರಟುಬಿಡೋಣವೆಂದು
ದಿಕ್ಕು ಬಂದ ಕಡೆ ನಡೆದಂತೆಲ್ಲಾ

ಅವರಿವರು ಉದಾಸೀನವಾಗಿ ಬಿಟ್ಟಂತಹ ಬಿಸಿಯುಸಿರು
ನನ್ನ ಗುಂಡಿಗೆಯನ್ನು ಹಿಚುಕುತ್ತಿದೆ
ಇದು ಯಾವುದು ಬೇಡವೆಂದು
ಎಲ್ಲಾದರು ನೆಲಕ್ಕೆ ಬೆನ್ನು ಮುಟ್ಟಿಸೋಣವೆಂದರೆ
ನಗುವ ಅಮೃತಶಿಲೆಯ ಸಮಾಧಿಗಳು
ಮುಳ್ಳುಗಳಾಗಿ ಕೊಂಚ-ಕೊಂಚವೆ ಬೆನ್ನನ್ನು ಚುಚ್ಚುತ್ತಿವೆ

ನನ್ನನ್ನು ಈಗಲಾದರು ಕ್ಷಮಿಸು ಬಿಡು ದೇವರೆ
ಇವರನ್ನೆಲ್ಲಾ ಮುಟ್ಟಿ-ಮುಟ್ಟಿ ಅಪವಿತ್ರವಾಗುವುದಕ್ಕಿಂತ
ಮುಟ್ಟಿಸಿಕೊಳ್ಳದೆ ಪವಿತ್ರನಾಗಿರಬೇಕೆಂದು ಕೊಂಡಿದ್ದೇನೆ.

**ಕವನ-ಕವಿ : ಲಕ್ಕೂರು ಸಿ. ಆನಂದ (೧೯೮೦)**



ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಲಕ್ಕೂರಿನವರು. ಪ್ರಸ್ತುತ ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಊರಿಂದ ಊರಿಗೆ, ಇಪ್ಪತ್ತರ ಕಲ್ಲಿನ ಮೇಲೆ, ಬಟವಾಡೆಯಾಗದ ರಸೀತಿ, ಇತಿ ನಿನ್ನ ವಿಧೇಯನು- ಕವನ ಸಂಕಲನಗಳು. ಸ್ಮೃತಿ ಕಿಣಾಂಕಂ, ಆರುದ್ರ, ದಿ ಲಾಸ್ಟ್ ಬ್ರಾಹ್ಮಿನ್, ಆಕಾಶ ದೇವರು- ಅನುವಾದ ಕೃತಿಗಳು. ಕಡೆಂಗೋಡ್ಲು ಶಂಕರಭಟ್ಟ ಕಾವ್ಯ ಪುರಸ್ಕಾರ, ದು.ನಿಂ.ಬೆಳಗಲಿ ಕಾವ್ಯ ಪ್ರಶಸ್ತಿ, ಅಖಿಲ ಭಾರತ ದಲಿತ ಕಾವ್ಯ ಪುರಸ್ಕಾರ ಹಾಗೂ ಆಂಧ್ರ ಪ್ರದೇಶ ಸರ್ಕಾರದ ಶ್ರೀ ಶ್ರೀ ಕಾವ್ಯ ಪುರಸ್ಕಾರಗಳನ್ನು ಪಡೆದಿದ್ದಾರೆ.

ಹುಟ್ಟಿನಿಂದ ಜಾತಿಯ ಕಾರಣಕ್ಕಾಗಿ ಲೋಕದ ಜನತೆ ಕೀಳಾಗಿ ಕಾಣುತ್ತಿರುವ ಬಗೆಗೆ ಗಾಢ ವಿಷಾದವಿದೆ. ಮುಟ್ಟಿದರೆ "ಅಪವಿತ್ರ"ವೆಂದು ಭಾವಿಸಿರುವ ಪ್ರಧಾನ ಸಂಸ್ಕೃತಿಯ ವಿರುದ್ಧ ದನಿಯೆತ್ತುವ ಕವನ ಆ ಸಂಸ್ಕೃತಿಯ ಭಾಗವಾಗದೇ ಸ್ವತಂತ್ರವಾಗಿ ಅಸ್ತಿತ್ವವನ್ನು ಸಾಧಿಸಿಕೊಳ್ಳುವ ದಿಟ್ಟ ನಿಲುವು ಇಲ್ಲಿದೆ.

**ಪದಕೋಶ:**

ಊರಿ-ದೃಢವಾಗಿ; ಗುಂಡಿಗೆ-ಎದೆ, ಹೃದಯ, ಧೈರ್ಯ; ಉರಿಪಾದ-ನೋವಿನಿಂದ ಉರಿಯುತ್ತಿರುವ ಪಾದ; ಅಗಲ-ವಿಶಾಲ

**I. ಸಂದರ್ಭ ಸೂಚಿಸಿ ವಿವರಿಸಿ:**

೧. ನನ್ನ ಕೈ ಗುರುತುಗಳನ್ನು ಅಪ್ಪಿಕೊಳ್ಳುತ್ತಿದೆ.

೨. ಯಾವ ಕುಲ? ಯಾವ ಮತ?

೩. ನಗುವ ಚಂದಿರ ಕೈಗಂಟಿಕೊಳ್ಳುತ್ತಿದ್ದಾನೆ.

೪. ಮುಟ್ಟಿಸಿಕೊಳ್ಳದೆ ಪವಿತ್ರನಾಗಿರಬೇಕೆಂದು ಕೊಂಡಿದ್ದೇನೆ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ತನ್ನನ್ನು ಕ್ಷಮಿಸುವಂತೆ ಕವಿ ಯಾರಲ್ಲಿ ಕೇಳುತ್ತಾನೆ?

೨. ಸಮಾಧಿಗಳು ಯಾರನ್ನು ಬಚ್ಚಿಟ್ಟುಕೊಂಡಿವೆ?

೩. ಬೊಗಸೆಯಲ್ಲಿ ಯಾರನ್ನು ಬಂಧಿಸಲು ಕವಿ ಬಯಸಿದ್ದಾನೆ?

೪. ಕವಿಯ ಗುಂಡಿಗೆಯನ್ನು ಹಿಂಡುತ್ತಿರುವುದು ಯಾವುದು?

೫. ಕವಿಯ ಬೆನ್ನನ್ನು ಮುಳ್ಳುಗಳಾಗಿ ಚುಚ್ಚುತ್ತಿರುವುದೇನು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಧರೆಯ ಮೇಲಿನ ನಡಿಗೆ ಹಾಗೂ ಕರೆಯುವ ಧ್ವನಿ ಕವಿಗೆ ಹೇಗೆ ಭಾಸವಾಗುತ್ತಿದೆ?

೨. ನಗುವ ಚಂದಿರ ಏಕೆ ಕೈಗಂಟಿಕೊಳ್ಳುತ್ತಿದ್ದಾನೆ?

೩. ದಿಕ್ಕು ಬಂದ ಕಡೆಗೆ ನಡೆದ ಕವಿಗೆ ಆದ ಅನುಭವವೇನು?

೪. ಕವಿಯನ್ನು ಚುಚ್ಚುತ್ತಿರುವುದು ಯಾವುದು? ಏಕೆ?

## IV. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಜಗತ್ತು ತನ್ನನ್ನು ಕೀಳಾಗಿ ಕಂಡು ನಿರಾಕರಿಸುತ್ತಿರುವ ಬಗೆಯನ್ನು ಕವಿ ಹೇಗೆ ಚಿತ್ರಿಸಿದ್ದಾನೆ?

೨. 'ಮುಟ್ಟಿಸಿಕೊಳ್ಳದೆ ಪವಿತ್ರನಾಗಿರಬೇಕೆಂದು' ಹೇಳುವ ಕವಿಯ ಮಾತಿನ ಅರ್ಥವೇನು? ವಿವರಿಸಿ.

೩. 'ದೇವರಿಗೊಂದು ಅರ್ಜಿ' ಕವಿತೆಯ ಆಶಯವನ್ನು ವಿವರಿಸಿ.

**ಆಕರ:** ಬಟವಾಡೆಯಾಗದ ರಸೀತಿ(೨೦೦೮) - ಲಕ್ಕೂರು ಸಿ. ಆನಂದ
ಅಭಿನವ ಪ್ರಕಾಶನ,
ಬೆಂಗಳೂರು.

**ಹೆಚ್ಚಿನ ಓದು:**

೧. ಹೊಲೆ ಮಾದಿಗರ ಹಾಡುಗಳು - ಡಾ. ಸಿದ್ಧಲಿಂಗಯ್ಯ.

೨. ಸಾವಿರಾರು ನದಿಗಳು - ಡಾ. ಸಿದ್ಧಲಿಂಗಯ್ಯ

೩. ಕುಸುಮ ಬಾಲೆ – ದೇವನೂರು ಮಹಾದೇವ

**ಚಟುವಟಿಕೆ :** ದಲಿತ ಲೇಖಕರ ಕೃತಿಗಳನ್ನು ಸಂಗ್ರಹಿಸಿ ಅಭ್ಯಸಿಸಿ.

ದೇವನೂರು ಮಾಹದೇವ, ಕೆ.ಬಿ. ಸಿದ್ಧಯ್ಯ, ಡಾ.ಸಿದ್ಧಲಿಂಗಯ್ಯ, ಎಲ್. ಹನುಮಂತಯ್ಯ, ಸತ್ಯಾನಂದ ಪಾತ್ರೋಟ, ಜಂಬಣ್ಣ ಅಮರಚಿಂತ, ಮೂಡ್ನಾಕೂಡು ಚಿನ್ನಸ್ವಾಮಿ, ಸುಬ್ಬು ಹೊಲೆಯಾರ್, ಮುಂತಾದವರು.

**ಧರ್ಮಗ್ರಂಥಗಳ ಅಕ್ಷರಗಳಲ್ಲಿ ನಿಮ್ಮ ಹೃದಯದ ಕೂಗಿನ ಪ್ರಾಮಾಣಿಕತೆಯಿಲ್ಲ.**
**ಸಮಸ್ತ ಶೋಷಣೆಯ ಅಳಿವಿಗಾಗಿ ದನಿಯೆತ್ತಿ ಕೂಗಿ**
**ಸಮಸ್ತ ಲೋಕದ ಒಳಿತಿಗಾಗಿ ಹೃದಯ ತುಂಬಿ ಕೂಗಿ.**

**– ವೀರಭದ್ರ ಚನ್ನಮಲ್ಲ ಸ್ವಾಮೀಜಿ.**

# ೧೫. ಜೀವಕೆ–ಇಂಧನ

– ಬಸವರಾಜ ವಕ್ಕುಂದ

**ನೈಸರ್ಗಿಕ ಸಂಪನ್ಮೂಲವಾದ ಇಂಧನವು ನಾಗರೀಕ ಸಮಾಜದ ಚಟುವಟಿಕೆಗಳಿಗೆ ಮೂಲಾಧಾರವಾಗಿದೆ. ಮಿತವಾದ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸದೆ, ದುರಾಸೆಯಿಂದ ಬಳಸುತ್ತಿರುವುದು ಮಾನವ ಸಮಾಜಕ್ಕೆ ಹಾನಿಕಾರಕ. ಮುಂದಿನ ಪೀಳಿಗೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ಕಾಪಿಡುವುದು ನಮ್ಮೆಲ್ಲರ ಜವಾಬ್ದಾರಿ. ಪ್ರಕೃತಿ ನೀಡಿರುವ ಪರ್ಯಾಯ ಮಾರ್ಗಗಳನ್ನು ಸಮರ್ಪಕವಾಗಿ ಬಳಸಿಕೊಂಡಾಗ ನೈಸರ್ಗಿಕ ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಬಹುದು.**

ಚರಾಚರಗಳಲಿ ಜೀವ ಅರಳಿಸಿ
ಭೂಮಿ ತಿರುಗುತಿದೆ ಬಯಲೊಳಗೆ
ಗಾಳಿ ನೀರು ಬೆಂಕಿ ಸೇರಿವೆ
ಉಸಿರಾಡುವ ಈ ಒಡಲೊಳಗೆ

ಉಳ್ಳವರ ಆಶೆಯ ಬೆಂಕಿ ಗಾಳಿಗಳು
ಸುಡುತಿವೆ ಜೀವದ ಸೆಲೆಗಳನ್ನು
ಬತ್ತಿ ಬರಡಾಗಿ ಒಣಗಿ ಹೋಗುತಿವೆ
ಹೀರಿವೆ ಕರುಣೆಯ ಜಲಗಳನು

ಧನ ಧನವೆನ್ನುವ ಧನದ ದಾಹಿಗಳು
ಮಾರಿಕೊಂಡರು ಭೂಮಿಯನು
ಮಹಲಿನ ಬುಡದಲಿ ಬಿರುಕುಗಳೆದ್ದಿವೆ
ಕೇಳರು ಮಾರಿಯ ಸದ್ದನು

ಧನವಿದ್ದರು ಇಂಧನ ಬೇಕಲ್ಲವೆ
ಜೀವಕೆ ಪ್ರತಿಕ್ಷಣ ಬದುಕಲು
ಜೈವಿಕ ಬೆಳೆಗಳ ಹಸಿರನು ಹೊದಿಸಿ
ಕಾಯಬೇಕು ಈ ಭೂಮಿಯನು
ಜೈವಿಕ ಇಂಧನ ಬಳಸುವದೊಂದೆ

ಭೂಮಿಯ ಉಳಿಸುವ ದಾರಿ
ಸಮತೋಲನದಲ್ಲಿ ಬದುಕುವುದೊಂದೆ
ಜೀವ ಉಳಿಯುವ ದಾರಿ

ಜೈವಿಕ ಇಂಧನ ಜೀವಕೆ ಇಂಧನ
ಎಂದೂ ಕರಗದ ಮೂಲಧನ
ಬರಡು ಬಂಗಾರ ಹಸಿರು ಹೊನ್ನೆ
ಮುಗಿಯದ ದಾರಿಯ ಈ ಪಯಣ

**ಕವನ–ಕವಿ : ಬಸವರಾಜ ವಕ್ಕುಂದ (೧೯೫೮)**



ಧಾರವಾಡ ಜಿಲ್ಲೆ ಅಮ್ಮಿನಭಾವಿಯ ಬಸವರಾಜ ವಕ್ಕುಂದ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಧಾರವಾಡದ ಶ್ರೀ ಮಂಜುನಾಥೇಶ್ವರ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶೋಕ ಸಭೆ, ಬಿನ್ನವತ್ತಳೆ, ಅನ್ನ ಅಕ್ಷರಗಳ ನಡುವೆ ಕವನ ಸಂಕಲನಗಳು ಹಾಗೂ ಬಹುಮುಖಿ, ನಿರಾವರಣ, ಜಿನದತ್ತ ದೇಸಾಯಿ ಜೀವನ ಕಾವ್ಯ ವಿಮರ್ಶಾ ಕೃತಿಗಳು ಪ್ರಕಟವಾಗಿವೆ. ಪು.ತಿ.ನ. ಕಾವ್ಯಪ್ರಶಸ್ತಿ, ಪೆರ್ಲ ಕೃಷ್ಣಭಟ್ಟ ಕಾವ್ಯಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಜೈವಿಕ ಇಂಧನವನ್ನು ತೀರಿ ಹೋಗುತ್ತಿರುವ ನೈಸರ್ಗಿಕ ಇಂಧನದ ಪರ್ಯಾಯವಾಗಿ ಬಳಸಬೇಕಾದ ಅವಶ್ಯಕತೆ ಇದೆ. ಇಂಧನ ಇಲ್ಲದಿದ್ದ ಪರಿಸ್ಥಿತಿಯಲ್ಲಿ ನಾಗರೀಕ ಸಮಾಜ ಮುಂದುವರಿಯಲು ಸಾಧ್ಯವಿಲ್ಲ. ಭೂಮಿಯ ಮೇಲೆ ಮನುಷ್ಯನ ಎಲ್ಲಾ ಚಟುವಟಿಕೆಗಳು ಇಂಧನದ ಮೇಲೆ ಅವಲಂಬಿತವಾಗಿವೆ. ಇಂಧನ ನಾಶದಿಂದ ನಾಗರೀಕತೆ ಕುಸಿಯುವ ದುರಂತ ಕಣ್ಮುಂದೆ ಇದೆ. ಇದರಿಂದ ಹೊರ ಬರಲು ಜೈವಿಕ ಇಂಧನ ಬಹುಮುಖ್ಯ ಸಾಧನವಾಗುತ್ತದೆ ಎನ್ನುವ ಆಶಯ ಇಲ್ಲಿದೆ.

**ಪದಕೋಶ:**

ಸೆಲೆ–ಒಸರು; ಬರಡು–ಬಂಜರು.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಸುಡುತಿವೆ ಜೀವದ ಸೆಲೆಗಳನು.
೨. ಕೇಳರು ಮಾರಿಯ ಸದ್ದನು.
೩. ಧನವಿದ್ದರು ಇಂಧನ ಬೇಕಲ್ಲವೆ.

೪. ಜೈವಿಕ ಇಂಧನ ಜೀವಕೆ ಇಂಧನ.

## II. ಒಂದೊಂದು ವಾಕ್ಯದಲ್ಲಿ ಉತ್ತರಿಸಿ:

೧. ಜೀವ ಎಲ್ಲಿ ಅರಳಿದೆ?
೨. ಜೀವದ ಸೆಲೆಗಳನ್ನು ಸುಡುತಿರುವುದು ಯಾವುದು?
೩. ಭೂಮಿಯನ್ನು ಯಾರು ಮಾರಿಕೊಂಡರು?
೪. ಈ ಭೂಮಿಯನ್ನು ಹೇಗೆ ಕಾಯಬೇಕು?
೫. ಜೀವ ಉಳಿಯುವ ದಾರಿ ಯಾವುದು?
೬. ಎಂದೂ ಕರಗದ ಮೂಲಧನ ಯಾವುದು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಒಡಲೊಳಗೆ ಏನೇನು ಸೇರಿಕೊಂಡಿವೆ?
೨. ಉಳ್ಳವರ ಆಶೆಯ ಪರಿಣಾಮಗಳೇನು?
೩. ಧನದಾಹದಿಂದ ಉಂಟಾದ ಪರಿಣಾಮಗಳೇನು?
೪. ಭೂಮಿ ಮತ್ತು ಜೀವವನ್ನು ಉಳಿಸುವ ದಾರಿ ಯಾವುದು?

## IV. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಉಳ್ಳವರ ಸ್ವಾರ್ಥ ಭೂಮಿ ಮತ್ತು ಇಂಧನವನ್ನು ಹೇಗೆ ನಾಶಗೈದಿದೆ? ವಿವರಿಸಿ.
೨. ಭೂಮಿಯ ಹಸಿರನ್ನು ಉಳಿಸಿ ಜೈವಿಕ ಇಂಧನ ಬಳಸುವ ಕವಿಯ ಆಶಯಗಳನ್ನು ವಿವರಿಸಿ:

**ಆಕರ:** ಕೂಸು ಕಂಡ ಕನಸಿನಲ್ಲಿ (ಜೈವಿಕ ಇಂಧನ ಗೀತೆ ಹಾಗೂ ರೂಪಕಗಳ ಸಂಕಲನ)

– ಸಂ: ಎಲ್.ಎನ್. ಮುಕುಂದರಾಜ್
ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

**ಚಟುವಟಿಕೆ :** ೧. ಜೈವಿಕ ಇಂಧನ ಕುರಿತ ಕಾರ್ಯಗಾರಗಳಲ್ಲಿ ಭಾಗವಹಿಸಿ.
೨. ಇಂಧನ ತಜ್ಞರೊಂದಿಗೆ ಸಂವಾದ ನಡೆಸಿ.

**ಮಿತಿಯಾದ ಸಂಪನ್ಮೂಲ ಮತ್ತು ಅತಿಯಾದ ದುರಾಸೆ ವಿನಾಶಕ್ಕೆ ಕಾರಣ**
**– ನಾಣ್ಣುಡಿ**

# ಗದ್ಯಭಾಗ

# ೧. ಗಾಂಧಿ

–ಡಾ॥ ಬೆಸಗರಹಳ್ಳಿ ರಾಮಣ್ಣ

**ಗಾಂಧೀಜಿ ಹೆಸರನ್ನು ನಾವಿಂದು ಅಪಮೌಲ್ಯಗೊಳಿಸಿಕೊಂಡಿದ್ದೇವೆ. ಬದುಕಿನ ಮೌಲ್ಯಗಳಿಗೆ, ಉತ್ತಮ ಆದರ್ಶಕ್ಕೆ ಪ್ರತಿರೂಪವಾದ ಗಾಂಧೀಜಿಯವರನ್ನು ನಮ್ಮ ದೇಶದ ಜನ ಇಂದು ಅಸಡ್ಡೆಯಿಂದ ಕಾಣತೊಡಗಿದ್ದಾರೆ. ಗಾಂಧಿ ಹೆಸರಿಗೆ, ಅವರ ಸರಳ ಬದುಕಿಗೆ, ಉನ್ನತ ಆದರ್ಶಗಳಿಗಾಗಿರುವ ಅವ್ಯವಸ್ಥೆಯನ್ನು ಭಾರತದಾದ್ಯಂತ ಕಾಣಬಹುದು.**

ಒಂದು ದಿನ...

ಬಳ್ಳಕೆರೆ ಎಂಬ ಹಳ್ಳಿಯಿಂದ ಹೊತ್ತು ಮೂಡುವುದಕ್ಕೆ ಮುಂಚೆಯೇ ಬಂದು ಆಸ್ಪತ್ರೆಯಲ್ಲಿ ಕಾಯುತ್ತಿದ್ದ ಒಬ್ಬ ಹೆಂಗಸು ಮತ್ತು ಸುಮಾರು ಹದಿನೈದು ವರ್ಷದ ಹುಡುಗ ಬಹಳ ಹೊತ್ತಿನವರೆಗೂ ಯಾರ ಗಮನಕ್ಕೂ ಬರದೆಯೇ ಬಿದ್ದಿದ್ದರು. ಆ ಹೆಂಗಸು ಆ ಹುಡುಗನ ತಾಯಿ, ಸುಮಾರು ನಲವತ್ತರ ಪ್ರಾಯ. ಹುಡುಗ ವರಾಂಡದಲ್ಲಿ ಕಂಬಕ್ಕೆ ಒರಗಿ, ಆಸ್ಪತ್ರೆಗೆ ಬಂದು ಹೋಗುವವರನ್ನು ಯಾವ ಕುತೂಹಲವೂ ಇಲ್ಲದೆ ನೋಡುತ್ತಾ ಕುಳಿತಿದ್ದ. ಅವನಿಗೆ ಹದಿನೈದು ವರ್ಷಕ್ಕೇ ಪ್ರಪಂಚದ ಮೇಲೆ ಒಂದು ಬಗೆಯ ಜಿಗುಪ್ಸೆ ಮೂಡಿ ನಿಂತಿತ್ತು. ಕುಳಿತು ಕುಳಿತು ಸಾಕಾಗಿ ಅವನ ಪಕ್ಕದಲ್ಲಿಯೇ ನಿಂತಿದ್ದ ತನ್ನ ಅವ್ವನ ಸೀರೆಯನ್ನು ಬಲವಾಗಿ ಎಳೆದು ಹೇಳಿದ:

"ಅವ್ವ ಬಿಸ್ಲು ಜಾಸ್ತಿ ಆಯ್ತಾ ಅದೆ, ನಡಿ ಊರಿಗೆ ಹೋಗ್ವ."

"ಒಸಿ ಸುಮ್ಕಿರು, ಬಂದೋರು ಬಂದೋ ತೋರಿಸ್ಕೊಂಡೇ ಹೋಗುವ."

"ಹೊತ್ತೂಡಕೆ ಮುಂಚೆ ಬಂದೋ ನಾವು . . . . ."

"ಇಲ್ಲಿ ನನ್ನ ನಿನ್ನ ರಾಗವ ಯಾರು ಕೇಳಾರು?"

ತನ್ನನ್ನು ಹೆತ್ತವಳು ಮೌನವಾಗಿ ನೋವನ್ನು, ಅವಮಾನವನ್ನು ಸಹಿಸಿಕೊಂಡು ನಿಂತಿರುವುದನ್ನು ಕಂಡು ಹುಡುಗ ಹೇಳಿದ:

"ನಾನು ಇದ್ದರೆಷ್ಟು, ಸತ್ತರೆಷ್ಟು ನಡಿಯವ್ವಾ ಹೋಗುವ, ಊರಿಗೆ."

"ಮೂರೊತ್ತೂ 'ಸಾಯ್ತೀನಿ ಸಾಯ್ತಿನಿ', ಇದೇ ನಿನ್ನ ನಾಲಿಗೆ ಮೇಲೆ."

“ಇದ್ದು ನಾನು ಯಾವ ರಾಜ್ಯ ಆಳಬೇಕು”– ವಯಸ್ಸಿಗೆ ಮೀರಿದ ಅನುಭವದ ಮಾತುಗಳು ತನ್ನ ಮಗನ ಬಾಯಿಯಿಂದ ಬಂದದ್ದು ತಾಯಿಗೆ ಆಶ್ಚರ್ಯವಾಗಲಿಲ್ಲ. ಹೆತ್ತಕರುಳು ಚುರಕ್ಕೆಂದು ಸೆರಗಿನಿಂದ ಕಣ್ಣೊರೆಸಿಕೊಂಡಳು. ತನ್ನ ದೇಹದಲ್ಲಿರುವ ಕಾಯಿಲೆಯ ನೋವನ್ನು, ತಾಯಿಯ ಅಸಹಾಯಕತೆ, ಅವಮಾನವನ್ನು ಇನ್ನು ಸಹಿಸಲಾಗದು ಎನ್ನುವ ರೀತಿಯಲ್ಲಿ ಹುಡುಗ ಧಡಕ್ಕನೆ ಮೇಲೆದ್ದು ಮುಂದುವರಿದ–

“ಎಲ್ಲಿಗೋ ಮಗ?”

“ಡಾಕ್ಟ್ರ ನೋಡೋಕೆ. . . .”

“ಲೋ; ಮೊದಲೇ ತೂರಾಡ್ತಿ, ಬಿದ್ದುಗಿದ್ದು ಬುಟ್ಟಿಕನಪ್ಪ” ಎಂದು ಹಿಡಿದುಕೊಳ್ಳಲು ಬಂದ ತಾಯಿಯ ಕೈಗಳಿಂದ ಕೊಸರಿಕೊಂಡವನೆ ವೈದ್ಯಾಧಿಕಾರಿಗಳ ಕೊಠಡಿಯನ್ನು ಪ್ರವೇಶಿಸಿ, ನೆರೆದಿದ್ದ ಜನರ ಗುಂಪನ್ನು ಸೀಳಿ ವೈದ್ಯಾಧಿಕಾರಿಯ ಮೇಜಿನ ಮುಂದೆ ನಿಂತು, ಜೋರಾಗಿ ಹೇಳಿದ: “ಸಾ! ನಾನು ನಮ್ಮವ್ವ ಒತಾರೆಯಿಂದ ಕಾಯ್ಕೊಂಡೀವಿ.”

ವೈದ್ಯಾಧಿಕಾರಿ ಕತ್ತೆತ್ತಿ ನೋಡಿದ. ಸುಮಾರು ಎತ್ತರದ, ನರಪೇತಲ, ಅಗಲ ಕಿವಿಗಳ ಹೊಟ್ಟೆ ಡುಬ್ಬಣ್ಣನೊಬ್ಬ ತನ್ನ ಮುಂದೆ ಬಂದು ನಿಂತಿದ್ದಾನೆ. ಅವ್ಯಕ್ತ ನೋವಿನ ರೋಷ ಅವನ ಮುಖದ ಮೇಲೆ ನಿಂತಿದೆ.

ಹುಡುಗನೇ ಮತ್ತೆ ಹೇಳಿದ: “ನನ್ನೊಸಿ ನೋಡಿ ಸಾ!” ವೈದ್ಯಾಧಿಕಾರಿಗೆ ಈ ಅಪರೂಪದ ವ್ಯಕ್ತಿಯನ್ನು ಕಂಡು ಸ್ವಲ್ಪ ಕುಚೇಷ್ಟೆ ಮಾಡಬೇಕೆನಿಸಿ, ಅವನನ್ನೇ ದೃಷ್ಟಿಸಿ ಹೇಳಿದ: “ವಸಿ ಏನೋ ಚೆನ್ನಾಗೇ ನೋಡ್ದೆ, ನಿನ್ನ ಹೊಟ್ಟೆ ದಪ್ಪ ಕೈಕಾಲು ಸಣ್ಣ, ಕಿವಿಗಳು ಮಾತ್ರ ಗಾಂಧಿ ಕಿವಿಗಳು ಇದ್ದಾಗಿವೆಯಪ್ಪಾ.”

ಹುಡುಗ ತನ್ನ ಬಲಗೈಯನ್ನು ಮುಂದೆ ಚಾಚಿ: “ನನಗೆ ಕಾಯಿಲೆ ಏನು ನೋಡಿ ಸಾ” ಎಂದು ಬೇಡಿದ.

“ನಿಮ್ ದಮ್ಮಯ್ಯ ಕೋಪ ಮಾಡ್ಕೊಳ್ದೇ ನೋಡಿ ಸ್ವಾಮಿ. ಇವನೊಬ್ಬನೇ ನನಗೆ ಗಂಡು ಮಗ ಅಂತ ಇರೋನು!” ಹೆಂಗಸೊಬ್ಬಳು ಗೋಗರೆದಳು.

ವೈದ್ಯಾಧಿಕಾರಿಗೆ ತನ್ನ ಮುಂದೆ ನಿಂತಿರುವ ವ್ಯಕ್ತಿಗಳು ತನ್ನಂತೆಯೇ ಮನುಷ್ಯ ವರ್ಗಕ್ಕೆ ಸೇರಿದವರು ಎಂಬುದು ಜ್ಞಾಪಕಕ್ಕೆ ಬಂದೋ ಅಥವಾ ವೈದ್ಯರಾಗಬೇಕಾದವರಿಗೆ ಅನುಕಂಪದಿಂದ ಕೂಡಿದ ಹೃದಯ ಇರಬೇಕು ಎಂಬ ಮಾತು ನೆನಪಾಗಿಯೋ, ಏನು ಕತೆಯೋ, ಒಟ್ಟಿನಲ್ಲಿ ಈ ತಾಯಿ–ಮಗನ ಮೇಲೆ ಕರುಣೆ ಬಂದು ಕೇಳಿದ: “ಇವನು ನಿನ್ನ ಮಗನೇನಮ್ಮ?”

"ಹೂ! ಸ್ವಾಮಿ, ದೇವರಾಣೆಗೂ!"

"ಇವನ ಹೆಸರೇನಮ್ಮ?"

"ಗಾಂಧಿ ಸ್ವಾಮಿ!"

"ಏನಮ್ಮ ಹುಡುಗಾಟಕ್ಕೆ ನಾನು ಇವನ ಕಿವಿಗಳು ಗಾಂಧೀಜಿಗೆ ಇದ್ದಂತಿವೆ ಅಂದ್ರೆ ಇವನ್ನ ಸಾಕ್ಷಾತ್ ಗಾಂಧಿ ಅಂತ್ಲೇ ತಿಳ್ಕೊಂಡು ಬಿಟ್ರ?"

"ಇಲ್ಲ ಸ್ವಾಮಿ, ಸುಳ್ಳು ಹೇಳಿದ್ರೆ ನನ್ನ ನಾಲ್ಗೆಗೆ ಉಳಾ ಬೀಳ್ಲಿ; ಸೇದೋಗ್ಲಿ, ನನ್ನಾಣೆಗೂ ಇವನ ಹೆಸರು ಗಾಂಧಿ ಅಂತ."

"ನನ್ನ ಹೆಸರು ದೇವರ ಸತ್ಯವಾಗ್ಲೂ ಸಾ ಮಹಾತ್ಮಗಾಂಧಿ ಅಂತ" ಹುಡುಗ ಧೈರ್ಯವಾಗಿ, ದೃಢ ನಿಲುವಿನಿಂದ ನುಡಿದ.

"ಗಾಂಧಿ,"

ವೈದ್ಯಾಧಿಕಾರಿ ಬೆಪ್ಪಾಗಿಹೋದ. ಅವನ ವೈದ್ಯಕೀಯ ಜೀವನದ ಈವರೆಗಿನ ಅವಧಿಯಲ್ಲಿ ಈ ರೀತಿಯ ಕಾಕತಾಳ ನ್ಯಾಯವನ್ನು ಅವನು ಕಂಡಿರಲಿಲ್ಲ. ಕೇಳಿಯೂ ಇರಲಿಲ್ಲ. ತನ್ನ ಜೀವಿತದಲ್ಲಿ ಒದಗಿ ಬಂದ ಈ ಘಟನೆ ತೀರ ಅಪರೂಪ ಎನ್ನಿಸಿ ಇದನ್ನು ತನ್ನ ಸಹದ್ಯೋಗಿಗಳೊಂದಿಗೆ ಪಾಲು ಮಾಡಿಕೊಳ್ಳಲು ಜವಾನನನ್ನು ಜೋರಾಗಿ ಕರೆದು ಹೇಳಿದ.

"ನೋಡೋ ನಾಯ್ಡು, ನರಸಿಂಹಮೂರ್ತಿ, ಸರಸಮ್ಮ ಇವರನ್ನು ಬೇಗನೆ ನಾನು ಬರಹೇಳ್ದೆ ಅಂತ ಕೂಗಯ್ಯ," ಎಲ್ಲರೂ ಬಂದರು. ವೈದ್ಯಾಧಿಕಾರಿ ಹೇಳಿದ್ದನ್ನು ಕೇಳಿ ಕಿಸಕ್ಕನೆ ನಕ್ಕುಬಿಟ್ಟರು. ಅದರಲ್ಲಿಯೂ ಈಗ ತಾನೆ ಕುಟುಂಬ ಯೋಜನೆಯ ವಿಸ್ತರಣಾಧಿಕಾರಿಯಾಗಿ ಕೆಲಸಕ್ಕೆ ಸೇರಿದ ನರಸಿಂಹಮೂರ್ತಿ ತಾನು ಇದನ್ನು ನಂಬುವುದಿಲ್ಲ ಎನ್ನುವಂತೆ ಕಿಸಕ್ಕನೆ ನಕ್ಕ. ವೈದ್ಯಾಧಿಕಾರಿಗೆ ಸ್ವಲ್ಪ ಕೋಪ ಕೆರಳಿ, "ಬೇಕಾದ್ರೆ ಅವನ್ನೇ ಕೇಳ್ರಿ" ಎಂದ.

ನರಸಿಂಹಮೂರ್ತಿ ವೈದ್ಯಾಧಿಕಾರಿಗಳ ಕುರ್ಚಿಯ ಮೇಲೆ ಗೋಡೆಗೆ ತೂಗು ಹಾಕಿರುವ ಫೋಟೋ ಒಂದನ್ನು ತೋರಿಸಿ ಕೇಳಿದ: "ಲೋ ಹುಡುಗ ಆ ಫೋಟೋ ಯಾರದಯ್ಯ?"

"ಮಹಾತ್ಮ ಗಾಂಧೀಯೋರ್ದು ಸಾ, ಇದ ನಾ ಕಾಣನೆ?"

"ನಿನ್ನ ಹೆಸರೇನಯ್ಯ"

"ಮಹಾತ್ಮಗಾಂಧಿ ಸಾ"

"ಸುಳ್ಳು ಹೇಳಬ್ಯಾಡ"

"ಸುಳ್ಳು ಹೇಳಿ ನಿಮ್‌ತಾವು ನಾನು ಯಾವ ಸಾಮ್ರಾಜ್ಯ ಈಸ್ಕೋಬೇಕು."

ಎಲ್ಲರೂ ನಾಲಿಗೆ ಸೇದಿ ಹೋದವರಂತೆ ನಿಂತರು. ಮಹಾತ್ಮಗಾಂಧೀಜಿಯ ಫೋಟೋವನ್ನು ಒಮ್ಮೆ; ನಂತರ ರಕ್ತಮಾಂಸ ತುಂಬಿಕೊಂಡು ಉಸಿರಾಡುತ್ತಾ ನೋವನ್ನು ಅನುಭವಿಸುತ್ತ ನೆಲದ ಮೇಲೆ ತಮ್ಮ ಕಣ್ಣೆದುರಿಗೆ ನಿಂತಿರುವ ಮಹಾತ್ಮಗಾಂಧಿಯ ಕಡೆಗೊಮ್ಮೆ ದೃಷ್ಟಿಯನ್ನು ಬೀರುತ್ತ ನಿಂತರು. ವೈದ್ಯಾಧಿಕಾರಿ ಮತ್ತು ಅವನ ಬಳಗ ಜಗತ್ತಿನ ಮೇಲೆ ತೀರ ಸೋಜಿಗದ ವಿಷಯವನ್ನು ಕಂಡವರಂತೆ ನಿಂತುದನ್ನು ಕಂಡು ಮಹಾತ್ಮ ಗಾಂಧಿಗೆ ಬೇಸರವಾಯಿತು.

"ನನ್ನ ಕಾಯಿಲೆ ನೋಡಿ ಸಾ! ನನ್ನ ಹಣೇಬರ ಎಂದ."

"ನಿನಗೆ ಈ ಹೆಸರು ಯಾರು ಕಟ್ಟಿದೋರು"

"ನಮ್ಮ ಅಯ್ಯ ಕರಿಸಿದ್ದೇಗೌಡ ಅಂತವ್ನೆ". ವೈದ್ಯಾಧಿಕಾರಿ, ಮಿಡ್‌ವೈಫ್ ಅಮ್ಮನವರನ್ನು ಕರೆದು ಗಾಂಧಿಯನ್ನು ಪರೀಕ್ಷೆಯ ಕೊಠಡಿಗೆ ಕರೆದುಕೊಂಡು ಹೋಗಿ ಮಲಗಿಸುವಂತೆ ಹೇಳಿದರು. ಅವಳು ಹಾಗೆಯೇ ಮಾಡಿದಳು. ನಾಲಿಗೆ, ಕಣ್ಣು, ಗಂಟಲು ನೋಡಿದ ಮೇಲೆ ಹೃದಯ ಶ್ವಾಸಕೋಶಗಳ ಪರೀಕ್ಷೆ ಮುಗಿಸಿ, ಹೊಟ್ಟೆಯನ್ನು ಪರೀಕ್ಷೆ ಮಾಡಿದ ವೈದ್ಯಾಧಿಕಾರಿ ಗಾಂಧಿಯ ತಾಯಿಯ ಕಡೆ ತಿರುಗಿ "ನಿನ್ನ ಹೆಸರೇನಮ್ಮ" ಎಂದರು.

"ನಿಂಗಮ್ಮ ಸ್ವಾಮಿ"

"ನೋಡಮ್ಮ ನಿಮ್ಮುಡುಗನಿಗೆ ಹೊಟ್ಟೇಲಿ ನೀರು ಸೇರ್ಕೊಂಡಿದೆ. ಜೊತೆಗೆ ಕಾಲುಗಳೂ ಊದಿಕೊಂಡಿವೆ. ಇದು ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆ. ಆಗಲೇ ಕಪ್ಪು ಈಲಿಗೂ (ಲಿವರ್) ಕಾಯಿಲೆ ಹಬ್ಬಿ ಅದು ಮುಟ್ಟಿದರೆ ಸಾಕು ಗಾಂಧಿ ನೋವು ಅಂತ ಬಡ್ಕೋತಾನೆ".

"ಏನೋ ಸ್ವಾಮಿ ನಿಮ್ಮ ಎಕ್ಡ. ಮೂರು ಮೈಲಿ ನಡೀಬೇಕಾದ್ರೆ ಮೂವತ್ತು ತಾವು ಕುಂತ್ಕಂಡು, ತೆವಳ್ಕೊಂಡು ಬಂದ. ಉಳಿಸಿ ಕೊಡಿ, ನಾಳಾಕೆ ನಮ್ಮಪ್ಪನ ಕರ್ಕೊಂಡು ಬತ್ತೀನಿ. . . ತಂದೆ ಇಲ್ಲದ ತಬ್ಬಲಿ."

"ನಿನ್ನ ಗಂಡನಿಗೆ ಏನಾಗಿ ಸತ್ತೋದ?"

"ಸ್ವಾಮಿ ಸೇಂದಿ ಇಳಿಸೋಕೆ ಸಾಹುಕಾರ‍್ರು ತಾವು ಇದ್ರು. ಒಂದು ದಿನ

ಮರದ ಮೇಲಿಂದ ಬಿದ್ದು ಫಕ್ಕನೆ ಪ್ರಾಣ ಬುಟ್ಟುಬುಟ್ರು".

"ಅಯ್ಯೋ ಪಾಪ! ನೋಡಮ್ಮ ನಿಮ್ಮುಡುಗನಿಗೆ ಎಕ್ಸರೇ ಆಗಬೇಕು. ಹೃದಯದ ಪರೀಕ್ಷೆ ಮಾಡಬೇಕು. ರಕ್ತ, ಮೂತ್ರ ಪರೀಕ್ಷೆ ಮಾಡಬೇಕು. ಇಲ್ಲಾಗೋ ವಿಷಯವಲ್ಲ ಇದು. ಇವನ್ನ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಸೇರಿಸಬೇಕು. ನಾನು ಎಲ್ಲಾನು ಬರೆದು ಕೊಡ್ತೀನಿ. ಹೊಟ್ಟೇಲಿರೋ ನೀರು ಕಡಿಮೆ ಆಗೋಕೆ ಈಗ ಎರಡು ಗುಳಿಗೆ ನುಂಗಿಸ್ತೀನಿ" ಎಂದು ಹೇಳಿ ನೀರು ತರಿಸಿ, ಗುಳಿಗೆಗಳನ್ನು ನುಂಗಿಸಿಯೇ ಬಿಟ್ಟರು. ಸರಸರನೆ ದೊಡ್ಡಾಸ್ಪತ್ರೆಗೆ ಗಾಂಧಿಯ ಕಾಯಿಲೆಯ ವಿಷಯವಾಗಿ ತಾವು ಪತ್ತೆ ಹಚ್ಚಿರುವ ವಿವರಗಳನ್ನೂ ನಮೂದಿಸಿ ಕೈಗೆ ಕೊಟ್ಟರು.

****

ಮೊಮ್ಮಗನ ಸ್ಥಿತಿ ಚಿಂತಾಜನಕವಾದುದೆಂಬುದನ್ನು ಕರಿಸಿದ್ದೇಗೌಡನಿಗೆ ಯಾರೂ ಹೇಳಿಕೊಡಬೇಕಾಗಿರಲಿಲ್ಲ. ಅವನ ಆಸೆಯ ಕುಡಿ ತನ್ನ ಮಗಳು ನಿಂಗಮ್ಮ ಮತ್ತು ಅವಳ ಮಕ್ಕಳು ಪದ್ದಿ ಮತ್ತು ಗಾಂಧಿ. ಪದ್ದಿ ಎಷ್ಟೇ ಆದರೂ ನೆರೆಮನೆಗೆ ಹೋಗುವ ಹೆಣ್ಣು, ಗಾಂಧಿಯ ಮೇಲೆ ಕರಿಸಿದ್ದೇಗೌಡನಿಗೆ ಎಲ್ಲೂ ಇಲ್ಲದ ಪ್ರೀತಿ. ತನ್ನ ಈ ಮೊಮ್ಮಗನಿಗೆ ಹೆಸರು ಕಟ್ಟಿದ್ದೇ ಒಂದು ಮರೆಯಲಾಗದ ಘಟನೆ. ಕರಿಸಿದ್ದೇಗೌಡನ ಜೀವನದಲ್ಲಿ ಹದಿನೈದು ವರ್ಷಗಳ ಹಿಂದಿನ ಮಾತು. ಹೊಲ ಉತ್ತು ಸಾಕಾಗಿ ತಾನೂ ಮತ್ತು ಅಳಿಯ ಬುಕ್ಕೇಗೌಡ ಹೊತ್ತು ಮುಳುಗಿದ ಮೇಲೆ ಬಂದಾಗ ಮೊರತುಂಬ ರಗರಗನೆ ಉರಿಯುತ್ತಾ ಮೊಮ್ಮಗು ಮಲಗಿತ್ತು. ಕರಿಸಿದ್ದೇಗೌಡ ಹಿಗ್ಗಿಹೀರೇಕಾಯಿ ಆದ. ತನ್ನ ಮೊಮ್ಮಗನ ಅಗಲವಾದ ಕಿವಿಗಳನ್ನು ಕಂಡು ಆನಂದಿಸುತ್ತಾ ಜೋಯಿಸರ ಮನೆಗೆ ಹಾರಿದ. ಜೋಯಿಸರು ಮಗು ಬಹು ಪ್ರಶಸ್ತವಾದ ಘಳಿಗೆಯಲ್ಲಿ ಹುಟ್ಟಿದೆ ಎಂದು ಲೆಕ್ಕಾ ಹಾಕಿ ಹೇಳಿ, ಮಗುವಿನ ಕಿವಿ ಅಗಲವಾಗಿರುವುದರಿಂದಲೂ ಮತ್ತು ಕರಿಸಿದ್ದೇಗೌಡ ಬಹಳ ವರ್ಷಗಳ ಹಿಂದೆ ಶಿವಪುರಕ್ಕೆ ಹೋಗಿ ಮಹಾತ್ಮ ಗಾಂಧೀಜಿಯವರನ್ನು ಖುದ್ದಾಗಿ ದರ್ಶನ ಪಡೆದು ಬಂದವನು ಈ ಸುತ್ತಮುತ್ತಲಿಗೆ ಇವನೊಬ್ಬನೇ ಆದುದರಿಂದ ಮಗುವಿಗೆ 'ಮಹಾತ್ಮಾ ಗಾಂಧಿ' ಎಂದು ಹೆಸರಿಡಬೇಕೆಂದೂ ತೀರ್ಮಾನ ಹೇಳಿದರು. ಕರಿಸಿದ್ದೇಗೌಡ ಎಷ್ಟು ಮುಗ್ಧ ಎಂದರೆ 'ಮಹಾತ್ಮ ಗಾಂಧೀಜಿಯವರೇ ಮತ್ತೆ ಜನ್ಮ ಪಡೆದು ನಿನ್ನ ಮಗಳ ಗರ್ಭದಲ್ಲಿ ಜನಿಸಿದ್ದಾರೆ' ಎಂದರೆ ಅದನ್ನೂ ನಂಬಿಬಿಡುತ್ತಿದ್ದ. ಸದ್ಯ ಜೋಯಿಸರು ಅಂಥ ಘೋರ ಅಪರಾಧ ಮಾಡಲಿಲ್ಲ.

ಕರಿಸಿದ್ದೇಗೌಡನಿಗೆ ಎರಡು ಎಕರೆ ಹೊಲ, ಒಂದು ಮನೆ, ಇತ್ತೀಚೆಗೆ ಈ ಹೊಲದಲ್ಲಿ ಒಂದು ಎಕರೆಯನ್ನು ಬಡವರಿಗೆ ಮನೆ ಕಟ್ಟಿಕೊಳ್ಳಲೆಂದು ಹಂಚುವುದಕ್ಕಾಗಿ ಸರ್ಕಾರ ವಶಪಡಿಸಿಕೊಂಡಿತ್ತು. ಇದು ಕರಿಸಿದ್ದೇಗೌಡನಿಗೆ ತನ್ನ ಅಳಿಯ ಸತ್ತುದಕ್ಕಿಂತಲೂ

ತೀವ್ರ ಚಿಂತೆಗೆ ಗುರಿ ಮಾಡಿತ್ತು. ಈ ಚಿಂತೆಯಲ್ಲಿ ಮುಳುಗಿ ಸರ್ಕಾರ ವಶಪಡಿಸಿಕೊಂಡಿರುವ ಒಂದು ಎಕರೆ ಭೂಮಿಯಲ್ಲಿರುವ ಸೊಗಸಾದ ಫಲ ನೀಡುವ ಹಲಸಿನ ಮರವನ್ನು ಕಡಿದುಕೊಳ್ಳುವುದೋ ಬೇಡವೋ ಎನ್ನುವ ಜಿಜ್ಞಾಸೆಯಲ್ಲಿ ಸಿಕ್ಕಿಬಿದ್ದುದರಿಂದ ಅವನು ತನ್ನ ಮೊಮ್ಮಗನ ಆರೋಗ್ಯದ ಕಡೆಗೆ ಅಷ್ಟು ಗಮನ ಕೊಟ್ಟಿರಲಿಲ್ಲ.

ಮಗಳು ವೈದ್ಯರು ಬರೆದುಕೊಟ್ಟ ಚೀಟಿಯನ್ನು ಕೊಟ್ಟು ಗಾಂಧಿಯನ್ನು 'ದೊಡ್ಡಾಸ್ಪತ್ರೆಗೆ' ಸೇರಿಸಬೇಕಂತೆ ಎಂದು ಹೇಳಿದಾಗ ಕರಿಸಿದ್ದೇಗೌಡನಿಗೆ ಎದೆ ಧಸಕ್ಕೆಂದಿತು.

ಮಾರನೆಯ ದಿನವೇ ಇಡೀ ಸಂಸಾರವೇ ಬಸ್ಸಿನಲ್ಲಿ ಅಷ್ಟೋ ಇಷ್ಟೋ ಇದ್ದ ಪುಡಿಗಂಟನ್ನು ತೆಗೆದುಕೊಂಡು ದೊಡ್ಡಾಸ್ಪತ್ರೆ ಇರುವ ತಮ್ಮ ಜಿಲ್ಲಾ ಕೇಂದ್ರಕ್ಕೆ ಪಯಣ ಬೆಳೆಸಿತು.

ಆಸ್ಪತ್ರೆ ತಲುಪಿದಾಗ ಮಧ್ಯಾಹ್ನವಾಗಿತ್ತು. ಹೊರ ರೋಗಿಗಳನ್ನು (ಔಟ್ ಪೇಷೆಂಟ್) ಪರೀಕ್ಷೆ ಮಾಡುವ ವಿಭಾಗದಲ್ಲಿ ರೋಗಿಗಳ ಹೆಸರು ದಾಖಲು ಮಾಡಿಕೊಂಡು ಚೀಟಿಯನ್ನು ಕೊಟ್ಟು ವೈದ್ಯರ ಬಳಿಗೆ ಕಳಿಸುವ ಗುಮಾಸ್ತರಿಗೆ ತಮ್ಮ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೊಟ್ಟಿದ್ದ ಕಾಗದವನ್ನು ಕೊಟ್ಟಾಗ, ಗುಮಾಸ್ತ ಎಲ್ಲವನ್ನೂ ಓದಿ, ರೋಗಿಯ ಹೆಸರನ್ನು ಎರಡು ಮೂರು ಸಾರಿ ಓದಿ, ಏನೋ ಅನುಮಾನ ಬಂದವನಂತೆ, ಕರಿಸಿದ್ದೇಗೌಡನ ಕಡೆ ನೋಡಿ "ಯಾರನ್ನು ತೋರಿಸೋಕೆ ಕರ್ಕೊಂಡು ಬಂದಿರೋದು" ಎಂದು ಕೇಳಿ, ಕರಿಸಿದ್ದೇಗೌಡ ತನ್ನ ಮೊಮ್ಮಗನನ್ನು ತೋರಿಸಲು "ಓಹೋ! ಇವನ ಹೆಸರು 'ಮಹಂತೇಗೌಡ' ಅಂತ ಅಲ್ವೆ? ನಿಮ್ಮ ಡಾಕ್ಟ್ರು ಇವನ್ನ 'ಮಹಾತ್ಮ ಗಾಂಧಿ' ಅಂತ ಬರೆದು ಬುಟ್ಟವರಲ್ಲ!" ಎಂದು ನಕ್ಕ.

ಕರಿಸಿದ್ದೇಗೌಡ "ಬರೆದಿರೋದು ಸರಿಯಾಗೆ ಅದೆ ಸ್ವಾಮಿ. ಇವನ ಹೆಸರು ಮಹಾತ್ಮಗಾಂಧಿ ಅಂತ್ಲೆ!" ಎಂದ. ಗುಮಾಸ್ತ ಬಿಟ್ಟ ಬಾಯಿ ಬಿಟ್ಟುಕೊಂಡೇ ಮಹಾತ್ಮಗಾಂಧಿಯನ್ನು ನೋಡಿದ. "ಸರಿಯಪ್ಪ ತಗೋ ಚೀಟಿ" ಎಂದವನೆ ಹಳೆಯ ಕಾಗದ ಜೊತೆಗೊಂದು ಹೊಸ ಚೀಟಿಯನ್ನು ಕೊಟ್ಟ: ಆ ಕಡೆಗೆ ಹೋಗು ಎಂದು ತೋರಿಸಿದ.

ಅಲ್ಲೊಬ್ಬ ಇವರು ಕೊಟ್ಟ ಕಾಗದಗಳನ್ನೂ ಮತ್ತು ಇನ್ನೂ ಆನೇಕ ಹೊರರೋಗಿಗಳು ಕೊಟ್ಟ ಕಾಗದಗಳನ್ನು ತೆಗೆದುಕೊಂಡು ಒಳಗೆ ಹೋಗಿ ಒಂದು ದೊಡ್ಡ ಮೇಜಿನ ಸುತ್ತ ಕುರ್ಚಿಗಳಲ್ಲಿ ಕುಳಿತಿದ್ದ ವೈದ್ಯರ ಗುಂಪಿನ ಮುಂದೆ ಇಟ್ಟು ಬಂದ.

ಮಹಾತ್ಮಗಾಂಧಿಯ ಸರದಿ ಬಂದಾಗ ವೈದ್ಯರ ಗುಂಪು ಗಹಗಹಿಸಿತು. ಜೋರಾಗಿ

ಕೂಗಿ ಕರೆದರು: 'ಯಾರಪ್ಪಾ ಮಹಾತ್ಮಾ ಗಾಂಧಿ?'

"ಕರ್ಕೊಂಡು ಬಂದೇ ಸ್ವಾಮಿ ಇಲ್ಲವನೆ" ಎಂದು ಕರಿಸಿದ್ದೇಗೌಡ ತನ್ನ ಮೊಮ್ಮಗನನ್ನು ಕರೆದುಕೊಂಡು ಒಳಗೋದ.ನಿಂಗಮ್ಮನನ್ನೂ ಮತ್ತು ಪದ್ದಿಯನ್ನೂ ಹೊರಗಡೆಯೇ ಜವಾನ ತಡೆದ.

ಕರಿಸಿದ್ದೇಗೌಡ ತಮ್ಮ ಮುಂದೆ ಕರೆದು ತಂದು ನಿಲ್ಲಿಸಿದ ವ್ಯಕ್ತಿಯನ್ನು ವೈದ್ಯ ಮಹಾಶಯರುಗಳೆಲ್ಲ ಒಂದು ವಿಚಿತ್ರ ಕಾಯಿಲೆಯನ್ನು ಪತ್ತೆ ಹಚ್ಚಿದಾಗಲೋ ಅಥವಾ ಕ್ಯಾನ್ಸರ್ ವ್ಯಾಧಿಗೆ ಔಷಧಿ ಕಂಡುಹಿಡಿದಾಗಲೋ ಆಗುವ ವಿಸ್ಮಯದಂತೆಯೇ ನೋಡಿದರು.

'ಮಹಾತ್ಮಾ ಗಾಂಧಿ' ಎಂದು ಕರೆಯಲ್ಪಡುವ ವ್ಯಕ್ತಿಯನ್ನು ಕಂಡು ಅವರಿಗೆ ಅಳಬೇಕೋ ನಗಬೇಕೋ ಅಥವಾ ನಂಬದಿರುವಂಥ ಒಂದು ಸ್ಥಿತಿಯಲ್ಲೇ ಇದ್ದು ಬಿಡಬೇಕೋ, ಏನೂ ತೋಚದೆ ಪರೀಕ್ಷೆಯ ಕೊಠಡಿಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿ ಕರಿಸಿದ್ದೇಗೌಡನನ್ನು ಕರೆದು, "ನೋಡಯ್ಯ, ನಿನ್ನ ಮೊಮ್ಮಗನಿಗೆ ಹೃದಯ ಹಾಗೂ ಮೂತ್ರಪಿಂಡಗಳ ಕಾಯಿಲೆ. ಔಷಧಿಗಳೆಲ್ಲಾನೂ ಬರೆದು ಕೊಡ್ತೀವಿ. ತಗೋ, ಹೇಗೆ ಸೇವಿಸಬೇಕು ಅನ್ನೋದು ಹೇಳ್ತೀವಿ. ಹಾಗೆ ಕೊಡು. ಸ್ವಲ್ಪ ಹುಷಾರುಗುತ್ತೆ" ಎಂದರು. ಕರಿಸಿದ್ದೇಗೌಡನನ್ನು ಕತ್ತಿಡಿದು ನೀರಿಗೆ ಅದುಮಿದಂತಾಯಿತು.

"ನಿಂದಮ್ಮಯ್ಯ, ಏನೋ ನನ್ ಮೊಮ್ಮಗನನ್ನ ಕಾಪಾಡಿ. ಇಲ್ಲೇ ಒಸಿ ದಿನ ಇಟ್ಕೊಂಡು ಉಳಿಸಿಕೊಡಿ. ನೀವು ಇವನಿಗೆ ಮಾಡೋ ಉಪಕಾರ ಈ ನನ್ನ ಅಪ್ಪನಿಗೆ ಮಾಡೋ ಉಪಕಾರ ಅಂತ ತಿಳ್ಕೊಂಡು ಮಾಡಿ; ನಿಮ್ಗೆ ಪುಣ್ಯ ಬತ್ತದೆ" ಎಂದು ಅಲ್ಲಿಯೇ ನೇತು ಹಾಕಿದ್ದ ಮಹಾತ್ಮಗಾಂಧೀಜಿಯವರ ಭಾವಚಿತ್ರಕ್ಕೆ ಕೈ ಜೋಡಿಸಿ, ಕಣ್ಣೀರು ಹಾಕುತ್ತಾ ನಿಂತುಬಿಟ್ಟ. ವೈದ್ಯರು ಮರು ಮಾತಾಡದೆ ಚೀಟಿಯಲ್ಲಿ ಬರೆದು ಗಂಡಸರ ವಾರ್ಡಿನಲ್ಲಿ ಮಹಾತ್ಮ ಗಾಂಧಿಯನ್ನು ಸೇರಿಸುವುದೆಂದು ಬರೆದು ಒಬ್ಬ ಜವಾನನನ್ನು ಕರೆದು ಜೊತೆಯಲ್ಲಿ ಕಳುಹಿಸಿದರು.

****

ಮಹಾತ್ಮಗಾಂಧಿಯನ್ನು ಮೂವತ್ತು ಜನರು ಇರಬೇಕಾದ ವಾರ್ಡಿನಲ್ಲಿ ಅರವತ್ತು ಜನರಿರುವ ಕಡೆ ನೆಲದ ಮೇಲೆ ಒಂದು ಹಾಸಿಗೆ ಕೊಟ್ಟು ಹಾಕಿದರು. ಎಕ್ಸರೇ, ತೊಂಟೆ ಪರೀಕ್ಷೆಗಳ ಜೊತೆಗೆ ಔಷಧೋಪಚಾರವೂ ನಡೆಯತೊಡಗಿತು. ವೈದ್ಯರು ಬರೆದುಕೊಟ್ಟ ಔಷಧಿಗಳನ್ನು ತಂದುಕೊಡುವುದಕ್ಕೆ ಮೂರು ದಿವಸಕ್ಕೆ ಕರಿಸಿದ್ದೇಗೌಡನ ಪುಟ್ಟ ಗಂಟು ಕರಗಿಹೋಯಿತು.

ನಾಲ್ಕನೆಯ ದಿನ ತನ್ನ ಅವ್ವ ನಿಂಗಮ್ಮ ತನ್ನ ತಂಗಿಯ ಕಿವಿಯ ಮತ್ತು

ತನ್ನ ಕಿವಿಯ ಓಲೆಗಳನ್ನು ಬಿಚ್ಚಿ ತನ್ನ ಅಯ್ಯನಿಗೆ ಏಕೆ ಕೊಡುತ್ತಿದ್ದರೆಂಬುದನ್ನು ಊಹಿಸಿ, ತನ್ನ ಪ್ರೀತಿಯ ಅಯ್ಯನನ್ನು ಕರೆದು ಕೇಳಿದ: "ಅಯ್ಯಾ ನನ್ನ ಊರಿಗೆ ಕರ್ಕೊಂಡು ನಡಿ. ನನ್ನ ಹಣೇಬರಹ ಇದ್ದಂಗಾಯ್ತದೆ."

"ಅಂಗೆಲ್ಲ ಮಾತಾಡಬ್ಯಾಡ. ನಾನು ಇನ್ನೂ ಬದುಕಿವ್ನಿಕಲ ಮಗ. ನಿನ್ನ ಉಳಿಸಿಕೋತಿನಿ."

ತನ್ನ ಮೇಲೆ ಅಯ್ಯನಿಗಿರುವ ಪ್ರೀತಿಗಾಗಿ ಗಾಂಧಿಗೆ ಅಳು ಒಳಗಿಂದ ಗುದ್ದುಕೊಂಡು ಬಂತು. ತನ್ನ ಪ್ರೀತಿಯ ಅಯ್ಯನ ತೊಡೆಯ ಮೇಲೆ ತಲೆ ಮಡಗಿಕೊಂಡು ದೃಷ್ಟಿಗೆ ದೃಷ್ಟಿ ಸೇರಿಸಿ ಹೇಳಿದ; "ಅಯ್ಯ ನಾನು ಸತ್ತೋದ್ರೆ ನನ್ನ ನಮ್ಮ ಅಲಸಿನ ಮರದ ಬುಡದಲ್ಲೇ ಹಾಕಬೇಕು." ಕರಿಸಿದ್ದೇಗೌಡ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ. ನಿಂಗಕ್ಕ 'ಬುಡ್ತು ಅನ್ನು' ಎಂದು ಗಾಂಧಿಯನ್ನು ಗದರಿಕೊಂಡಳು. ಪದ್ದಿ 'ಅಣ್ಣಾ ಅಣ್ಣಾ' ಎಂದು ಬಿಕ್ಕಳಿಸಿ ಅತ್ತುಬಿಟ್ಟಳು.

ಇಷ್ಟೆಲ್ಲಾ ನಡೆಯುತ್ತಿರುವಾಗ ಎಂ.ಡಿ ಪಾಸು ಮಾಡಿರುವ ದೊಡ್ಡ ಡಾಕ್ಟರ್ ಸಾಹೇಬರು ದಯಮಾಡಿಸಿ, ಗಾಂಧಿಯನ್ನು ಪರೀಕ್ಷೆ ಮಾಡಿ, ಒಂದು ಚೀಟಿಯಲ್ಲಿ ಔಷಧಿಯನ್ನು ಬರೆದು ಆದಷ್ಟು ಬೇಗ ತರಿಸಬೇಕೆಂದು ಅಪ್ಪಣೆ ಮಾಡಿ, ಬೇರೆ ರೋಗಿಗಳನ್ನು ನೋಡತೊಡಗಿದರು. ಮಗಳು ಮತ್ತು ಮೊಮ್ಮಗಳ ಓಲೆಗಳನ್ನು ತೆಗೆದುಕೊಂಡು ಊರಿಗೆ ಬಂದು ಕರಿಸಿದ್ದೇಗೌಡ ಗಿರವಿ ಇಡಲು ಪ್ರಯತ್ನಿಸಿದ. ಯಾರೂ ಒಪ್ಪಲಿಲ್ಲ. ಸಾಲ ಪಡೆಯಲು ಯತ್ನಿಸಿದ. ಎಲ್ಲೂ ಒಂದು ಪೈಸೆ ಹುಟ್ಟಲಿಲ್ಲ. ಅಲಸಿನಮರ ಕೊಡುವುದಾದರೆ ಕೊಂಡುಕೊಳ್ಳುವುದಾಗಿ ಸುಳಿವು ಸಿಕ್ಕಲು, ಇನ್ನೂರ ಐವತ್ತು ರೂಪಾಯಿಗಳಿಗೆ ಮರವನ್ನು ಮಾರಬೇಕಾದರೆ ಎರಡು ದಿವಸಗಳು ಹಿಡಿದವು. ಹಣ ಪಡೆದು ಕರಿಸಿದ್ದೇಗೌಡ ಬಸ್ಸು ಹತ್ತಿ ಆಸ್ಪತ್ರೆಯ ಬಳಿಗೆ ಬಂದಾಗ ಮಗಳು ನಿಂಗವ್ವ ಬಾಗಿಲಲ್ಲೇ ಪದ್ದಿಯನ್ನು ನಿಲ್ಲಿಸಿಕೊಂಡು ಅಳುತ್ತಾ ನಿಂತಿದ್ದಳು. ಕರಿಸಿದ್ದೇಗೌಡ, 'ಗಾಂಧಿ ಹೇಗಿದ್ದಾನೆ?' ಎಂದು ಕೇಳಲೇ ಇಲ್ಲ. ಬದಲು 'ಯಾವಾಗ ಜೀವ ಹೋಯ್ತು' ಎಂದು ಕೇಳಿದ.

"ರಾತ್ರಿ ಸರೋತ್ತಿನಲ್ಲಿ, ಹೆಣೇನ್‌ಮನೇಲಿ ಮಲಗಿಸವ್ರೆ" ಎಂದು ಅಳಲು ಪ್ರಾರಂಭಿಸಿದ ಮಗಳನ್ನು ಸಂತೈಸುತ್ತ ಕರಿಸಿದ್ದೇಗೌಡ ಹೇಳಿದ: "ಮನುಷ್ರು ಸಾಯ್ದೆ ಕಲ್ಲು ಸತ್ತಾದ. ಸುಮ್ಕಿರು ಮಂತೆ" ಎಂದು ಗಾಂಧಿಯ ಹೆಣವನ್ನು ಪಡೆಯಲು ಅಪ್ಪಣೆಗಾಗಿ ದೊಡ್ಡ ಸಾಹೇಬರ ರೂಮಿನ ಕಡೆ ಹೆಜ್ಜೆ ಹಾಕಿದ.

## ಕತೆ–ಕತೆಗಾರರು: ಡಾ॥ ಬೆಸಗರಹಳ್ಳಿ ರಾಮಣ್ಣ (೧೯೩೮–೧೯೯೯)



ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದ ಬೆಸಗರಹಳ್ಳಿ ರಾಮಣ್ಣನವರು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯವರು. ವೈದ್ಯರಾಗಿದ್ದ ಇವರು ಬಂಡಾಯ ಸಾಹಿತ್ಯದ ಪ್ರಮುಖ ಲೇಖಕರು. ಹಳ್ಳಿಯ ಬಡ ಜನರ ಮುಗ್ಧತೆ, ಅಸಹಾಯಕತೆ, ನೋವು, ನಲಿವುಗಳನ್ನು ತುಂಬ ಹತ್ತಿರದಿಂದ ಗಮನಿಸಿದವರು. ಜೀವನವನ್ನು ಬಲು ಪ್ರೀತಿಯಿಂದ ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ.

ಪ್ರಸ್ತುತ ಕಥೆಯನ್ನು 'ಕಣಜ' ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. 'ನೆಲದ ಒಡಲು', 'ಗರ್ಜನೆ', 'ನೆಲದಸಿರಿ', 'ಹರಕೆಯಹಣ', 'ಒಂದು ಹುಡುಗನಿಗೆ ಬಿದ್ದ ಕನಸು' ಹಾಗೂ 'ಕೊಳಲು ಮತ್ತು ಖಡ್ಗ' ಇವರ ಕಥಾ ಸಂಕಲನಗಳು. 'ತೋಳಗಳ ನಡುವೆ' ಕಿರು ಕಾದಂಬರಿ. 'ಗರ್ಜನೆ' ಕಥಾ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತಿದೆ.

ಬಡ ಕುಟುಂಬದ ರೋಗಿಷ್ಠ ಹುಡುಗನೊಬ್ಬನ ದಾರುಣ ಸ್ಥಿತಿಯ ಮೇಲೆ ಕತೆಯು ಬೆಳಕು ಚೆಲ್ಲುತ್ತದೆ. ಬಡವರಿಗೆ ಸರಿಯಾಗಿ ಸಿಗದ ವೈದ್ಯಕೀಯ ಸೌಲಭ್ಯಗಳು, ಅದನ್ನು ಪಡೆಯುವಲ್ಲಿ ಅವರು ಪಡುವ ಪರಿಪಾಟಲನ್ನು ಕತೆ ತೆರೆದಿಡುತ್ತದೆ.

### ಪದಕೋಶ:

ವರಾಂಡ–ಮನೆಯ ಮುಂಭಾಗದ ಕೈಸಾಲೆ, ಮೊಗಸಾಲೆ,ಅಂಗಳ; ಹೋಗ್ವ–ಹೋಗೋಣ; ಮೂಸೆ– ಚಿನ್ನಬೆಳ್ಳಿ ಮುಂತಾದ ಲೋಹಗಳನ್ನು ಕರಗಿಸಲು ಬಳಸುವ ಉಪಕರಣ; ನರಪೇತಲ– ತೆಳ್ಳನೆ ಮನುಷ್ಯ; ಅವ್ಯಕ್ತ– ಕಾಣದ; ವಸಿ–ಸ್ವಲ್ಪ; ಗೋಗರೆ–ಬೇಡಿಕೊಳ್ಳು; ಕಾಕತಾಳ–ಒಂದು ಲೋಕನ್ಯಾಯ, ಅನಿರೀಕ್ಷಿತ ಘಟನೆ; ಮಿಡ್‌ವೈಫ್–ಸೂಲಗಿತ್ತಿ, ನರ್ಸ್, ಆರೋಗ್ಯ ಸಹಾಯಕಿ; ಎಕ್ಡ–ಚಪ್ಪಲಿ; ನಾಳಾಕೆ–ನಾಳೆಗೆ; ಮೊರ–ಕಾಳು, ರಾಗಿ ಮೊದಲಾದ ಧಾನ್ಯಗಳನ್ನು ಹಸನು ಮಾಡಲು ಬಳಸುವ ಸಾಧನ; ಪುಡಿಗಂಟು–ಚಿಲ್ಲರೆ ಹಣ; ತೊಂಟೆ–ಕಫ; ಸರೋತ್ತು–ಮಧ್ಯರಾತ್ರಿ; ಗಿರವಿ–ಅಡ(ಒತ್ತೆ) ಇಡುವುದು; ಮಂತೆ–ಮತ್ತೆ.

### I. ಸಂದರ್ಭ ಸೂಚಿಸಿ ವಿವರಿಸಿ:

೧. ಇಲ್ಲಿ ನನ್ನ ನಿನ್ನ ರಾಗವ ಯಾರು ಕೇಳಾರು?

೨. ಇದ್ದು ನಾನು ಯಾವ ರಾಜ್ಯ ಆಳಬೇಕು?

೩. ಮೊದಲೇ ತೂರಾಡ್ತಿ ಬಿದ್ದು ಗಿದ್ದು ಬುಟ್ಟಿಕನಪ್ಪ.

೪. ಇವನ್ನ ಸಾಕ್ಷಾತ್ ಗಾಂಧಿ ಅಂತ್ಲೇ ತಿಳ್ಕೊಂಡು ಬಿಟ್ರ.
೫. ಲೋ ಹುಡುಗ ಆ ಫೋಟೋ ಯಾರದಯ್ಯ.
೬. ಓಹೋ! ಇವನ ಹೆಸರು ಮಹಂತೇಗೌಡ ಅಂತ ಅಲ್ವೆ?
೭. ಇಲ್ಲೇ ಒಸಿ ದಿನ ಇಟ್ಕೊಂಡು ಉಳಿಸಿಕೊಡಿ.
೮. ಮನುಷ್ರು ಸಾಯ್ದೆ ಕಲ್ಲು ಸತ್ತಾದ, ಸುಮ್ಕಿರು ಮಂತೆ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ವೈದ್ಯಾಧಿಕಾರಿಯ ಜ್ಞಾಪಕಕ್ಕೆ ಬಂದದ್ದು ಏನು?
೨. ವೈದ್ಯಾಧಿಕಾರಿ ಇಲ್ಲಿಯವರೆಗೆ ಯಾವ ರೀತಿಯ ನ್ಯಾಯವನ್ನು ಕಂಡಿರಲಿಲ್ಲ?
೩. ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರೇನು?
೪. ಮೊಮ್ಮಗನ ಅಗಲವಾದ ಕಿವಿಗಳ ಕಂಡ ಕರಿಸಿದ್ದೇಗೌಡ ಯಾರ ಮನೆಗೆ ಹೋದನು?
೫. ಹುಡುಗನಿಗೆ ಮಹಾತ್ಮ ಗಾಂಧಿ ಎಂಬ ಹೆಸರನ್ನು ಇಟ್ಟವರು ಯಾರು?
೬. ಗಾಂಧಿಯನ್ನು ಹೆಚ್ಚಿನ ಪರೀಕ್ಷೆಗಳಿಗೆ ಯಾವ ಆಸ್ಪತ್ರೆಗೆ ಸೇರಿಸಬೇಕೆಂದು ವೈದ್ಯಾಧಿಕಾರಿ ಸೂಚಿಸಿದರು?
೭. ಹಲಸಿನ ಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣವೆಷ್ಟು?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ವೈದ್ಯಾಧಿಕಾರಿಗೆ ಹುಡುಗ ಹೇಗೆ ಕಂಡನು?
೨. ವೈದ್ಯಾಧಿಕಾರಿ ಹುಡುಗನ್ನು ನೋಡಿ ಏನೆಂದು ಕುಚೇಷ್ಟೆ ಮಾಡಿದ?
೩. ಹುಡುಗನ ಯಾವ ಮಾತಿಗೆ ವೈದ್ಯಾಧಿಕಾರಿ ಬೆಪ್ಪಾಗಿ ಹೋದ?
೪. ಗಾಂಧಿಯನ್ನು ಪರೀಕ್ಷೆ ಮಾಡಿದ ವೈದ್ಯರು ನಿಂಗಮ್ಮನಿಗೆ ಹೇಳಿದ ಮಾತುಗಳೇನು?
೫. ನಿಂಗಮ್ಮನ ಗಂಡ ಪ್ರಾಣ ಕಳೆದುಕೊಂಡದ್ದು ಹೇಗೆ?
೬. ಗಾಂಧಿ ಎಂಬ ಹುಡುಗನ ಕೊನೆಯ ಆಸೆ ಯಾವುದು?
೭. ಊರಿಗೆ ಬಂದ ಕರಿಸಿದ್ದೇಗೌಡ ಏನನ್ನು ಗಿರವಿ ಇಡಲು ಪ್ರಯತ್ನಿಸಿದ?

## IV. ಐದಾರು ವಾಕ್ಯಗಳಲ್ಲಿ ಉತ್ತರಿಸಿ:

೧. ವೈದ್ಯಾಧಿಕಾರಿ ಮತ್ತು ಆಸ್ಪತ್ರೆಯ ಸಿಬ್ಬಂದಿಗಳು ಗಾಂಧಿಯನ್ನು ನಡೆಸಿಕೊಂಡ ರೀತಿಯನ್ನು ನಿರೂಪಿಸಿರಿ.

೨. ಕರಿಸಿದ್ದೇಗೌಡ ತನ್ನ ಮೊಮ್ಮಗನಿಗೆ ಗಾಂಧಿಯ ಹೆಸರಿಡಲು ಕಾರಣವೇನು?

೩. ಮೊಮ್ಮಗನ ಪ್ರಾಣ ಉಳಿಸಿಕೊಳ್ಳಲು ಕರಿಸಿದ್ದೇಗೌಡ ಪಟ್ಟ ಪಾಡೇನು?

೪. ಗಾಂಧಿ ಎಂಬ ಹುಡುಗನ ಸಾವಿನ ಸಂದರ್ಭವನ್ನು ವಿವರಿಸಿರಿ.

**ಆಕರ: ಕಣಜ – ಡಾ॥ ಬೆಸಗರಹಳ್ಳಿ ರಾಮಣ್ಣ.**

**ಹೆಚ್ಚಿನ ಓದು:**

| | |
|---|---|
| ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು(ಕಥೆ) | – ಡಾ॥ ಬೆಸಗರಹಳ್ಳಿ ರಾಮಣ್ಣ |
| ಕುಬಿ ಮತ್ತು ಇಯಾಲ(ಕಥೆ) | – ಪೂರ್ಣಚಂದ್ರ ತೇಜಸ್ವಿ |
| ಶವದ ಮನೆ(ಕಥೆ) | – ಚದುರಂಗ |
| ಗಾಂಧಿ ಸ್ಮರಣೆ (ಕವನ ಸಂಕಲನ) | – ಚಂದ್ರಶೇಖರ ಪಾಟೀಲ |

**ನಮೋ ನಮೋ ಎಂಬೆನೆ ಎಲೆ ವೈದ್ಯರಾಜನೆ**
**ಯಮನ ಹಿರಿಯ ಸಹೋದರನೆ**
**ಯಮನು ಹೀರಿದರೆ ಪ್ರಾಣ ಮಾತ್ರವನು**
**ನೀನು ಹೀರುವೆ ಕಾಂಚಾಣವನು**

– ಬೀchi

# ೨. ರಾಗಿಮುದ್ದೆ

**–ಚ.ಹ.ರಘುನಾಥ**

**ಕನ್ನಡ ನಾಡಿನ ಆಹಾರ ಧಾನ್ಯಗಳ ಪೈಕಿ ರಾಗಿ ಮತ್ತು ಜೋಳ ತುಂಬಾ ಮಹತ್ವವನ್ನು ಪಡೆದಿವೆ. ಬಡವರ ಆದಾರ ಮೂಲವಾದ ರಾಗಿಗೆ ಕರ್ನಾಟಕ ಪರಂಪರೆಯಲ್ಲಿ ಒಂದು ಸಾಂಸ್ಕೃತಿಕ ಮಹತ್ವ ಇದೆ. ಇಷ್ಟೇ ಮಹತ್ವ ಜೋಳಕ್ಕೂ ಇದೆ. ಮನುಷ್ಯನ ಆಹಾರ ಪದ್ಧತಿ ಹದಗೆಟ್ಟು, ಕಾಯಿಲೆಗಳು ಬರತೊಡಗಿದ ಮೇಲೆ ನಮಗೆ ರಾಗಿಯ ಮಹತ್ವ ಅರ್ಥವಾಗತೊಡಗಿದೆ. ಬಡವರ ಆಹಾರ ಎಂದು ತಿರಸ್ಕಾರಕ್ಕೆ ಒಳಗಾಗಿದ್ದ ರಾಗಿ ಇಂದು ಎಲ್ಲರ ಜೀವ ಕಾಪಾಡುವ ಸಂಜೀವಿನಿ ಎನಿಸಿದೆ.**

ಗ್ರಾಮದ ಅಧಿದೇವತೆ ನಾಗಮ್ಮನ ದೇಗುಲಕ್ಕೆ ಮಗಳ ಚೌಲಕ್ಕೆಂದು ಬಂದಿದ್ದೆವು. ಅಣ್ಣನೊಂದಿಗೆ ಬಂದಿದ್ದವನು ದೇಗುಲದ ಅಂಗಳದ ಕಟ್ಟೆಯ ಮೇಲೆ ಹೋಗಿ ಕೂತೆ. ಆಗ, ನನ್ನ ಮೂಗು ಮನಸ್ಸುಗಳ ತಕ್ಷಣ ಆವರಿಸಿಕೊಂಡಿದ್ದು ಹಿತವಾದ ಒಂದು ಪರಿಮಳ!. ಅದೇ ದೇಗುಲಕ್ಕೆ ಹೊಂದಿಕೊಂಡಿದ್ದ ಒಂದು ಕಟ್ಟಡದ ನಿರ್ಮಾಣಕ್ಕಾಗಿ ಬಂದಿದ್ದ ಶ್ರಮಿಕರ ಗುಂಪೊಂದು ಕಟ್ಟೆಯ ಮೇಲಿನ ಮರದ ನೆರಳಿನಲ್ಲಿ ಬುತ್ತಿಗೆ ಮುಗಿಬಿದ್ದಿತ್ತು. ಆ ಬುತ್ತಿಯಿಂದ ಹೊರಹೊಮ್ಮುತ್ತಿತ್ತು ಮುದ್ದೆ ಹಾಗೂ ಕಿವುಚಿದ ಸಾರಿನ ಸೊಗಸಾದ ಘಮ. ಮುದ್ದೆಯನ್ನು ಮುರಿಯುತ್ತ, ತುತ್ತುಗಳನ್ನು ಸಾರಿನಲ್ಲಿ ಹೊರಳಿಸುತ್ತ ಅವರು ನುಂಗುತ್ತಿದ್ದರೆ ಇತ್ತ ನನ್ನ ಹಾಗೂ ಅಣ್ಣನ ನಾಲಗೆಯ ಮೇಲೆ ನೀರೊಡೆದಿತ್ತು. ಹಸಿವಿನಿಂದಾಗಿ ಜೋಂಪು ಹತ್ತಿದ ಕಣ್ಣುಗಳಲ್ಲಿ ಮುದ್ದೆಯ ಸಾಲು ಸಾಲು ಚಿತ್ರಗಳು ಮೂಡಿಕೊಂಡವು.

ನಮಗೆಲ್ಲಾ ರಾಗಿಮುದ್ದೆ! ಎಂದ ತಕ್ಷಣ ನೆನಪಾಗುವುದು ಬಡತನ ಹಾಗೂ ಕನ್ನಡತನ. ಒಂದು ಪ್ರದೇಶದ ಆಹಾರಪದ್ಧತಿಗೂ, ಸಂಸ್ಕೃತಿಗೂ ತಳುಕು ಹಾಕುವುದಾದರೆ ರಾಗಿಯನ್ನು ಬಿಡುವಂತಿಲ್ಲ. ರಾಗಿಮುದ್ದೆಯನ್ನು ಹೊರತುಪಡಿಸಿ ಕನ್ನಡ ಸಂಸ್ಕೃತಿಯ ಬಗ್ಗೆ ಮಾತನಾಡುವಂತಿಲ್ಲ.

ಹಳ್ಳಿಯ ಚಿತ್ರಗಳನ್ನು ನೆನಪಿಸಿಕೊಳ್ಳಿ. ಹೊಲದ ಬದಿಯ ಬೃಹತ್ ಮರ. ಆ ಮರದ ನೆಳಲಲ್ಲಿ ಹೊಲದೊಡತಿ ನೆತ್ತಿಯ ಮೇಲೆ ಹೊತ್ತು ತಂದ ಬುತ್ತಿ ಬಿಚ್ಚಿದ್ದಾಳೆ. ಮಧ್ಯಾಹ್ನದ ಊಟಕ್ಕೆ ಗುಂಪುಗೂಡಿದ ಒಬ್ಬೊಬ್ಬರ ಕೈಯಲ್ಲಿ ಒಂದೊಂದು ರಾಗಿಮುದ್ದೆ. ಮುದ್ದೆಯನ್ನು ಅದುಮುತ್ತಾ ಅದುಮುತ್ತಾ, ಇಡೀ ಮುದ್ದೆಯನ್ನೇ ಬಟ್ಟಲಿನಾಕಾರಕ್ಕೆ ಬದಲಿಸುತ್ತಾರೆ. ಆ ಮುದ್ದೆಗುಂಡಿಯಲ್ಲಿ ಸಾರನ್ನೋ ಗೊಜ್ಜನ್ನೋ ತುಂಬಿಸಿಕೊಂಡು, ಎಡ ಅಂಗೈಗುಣಿಯಲ್ಲಿ ಪವಡಿಸಿದ ಮುದ್ದೆಯ ಮೇಲ್ಭಾಗದಿಂದ ತುತ್ತುತುತ್ತಾಗಿ ಮುರಿಯುತ್ತಾ, ನುಂಗುತ್ತಾ,

ಇರುತ್ತಾರೆ. ಮುದ್ದೆ ಕರಗುವ ವೇಳೆಗಾಗಲೇ, ಅಂಗೈಯಲ್ಲಿ ಮತ್ತೊಂದು ಮುದ್ದೆ ಪ್ರತ್ಯಕ್ಷ! ಅದೇ ಹಳ್ಳಿಯ ಬದುಕು. ಇದು ದುಡಿವ ಜನರ ಬದುಕು.

ಮುದ್ದೆಗೆ ಸಂಬಂಧಿಸಿದಂತೆ ನನ್ನ ಬಾಲ್ಯದ ನೆನಪಿನಲ್ಲಿ ಅಚ್ಚೊತ್ತಿರುವ ಕರಿಯನು ನೆನಪಾಗುತ್ತಾನೆ. ಅಪ್ಪ ಮೇಷ್ಟ್ರಾಗಿದ್ದ ದಿನಗಳವು. ಊರಿನ ಹೋಟೆಲೊಂದರಲ್ಲಿ ಕರಿಯ ಕಸಮುಸುರೆ ಬಳಿಯುತ್ತಿದ್ದ. ನೋಡಲಿಕ್ಕೆ ಅವನೂ ದೊಡ್ಡದೊಂದು ರಾಗಿಮುದ್ದೆ ಯಂತೆಯೇ ಕಾಣುತ್ತಿದ್ದ. ಮಕ್ಕಳಾದ ನಮ್ಮ ಪಾಲಿಗವನು ಆಶ್ಚರ್ಯದ ವಸ್ತು. ಅವನ ನಿಜವಾದ ಹೆಸರು ಯಾರಿಗೆ ಗೊತ್ತು? ನೋಡಲಿಕ್ಕೆ ಕಪ್ಪಗಿದ್ದುದರಿಂದ ಕರಿಯ ಎನ್ನುತ್ತಿದ್ದೆವು. ಈ ಬಲಭೀಮ ನಮ್ಮ ಮನೆಯ ಪಕ್ಕದ ಬೋರ್‌ವೆಲ್‌ಗೆ ನೀರಿಗಾಗಿ ಬರುತ್ತಿದ್ದ. ನೀರು ಪಾತಾಳದಲ್ಲಿ ನೆಲೆನಿಂತ ಊರದು. ಎಷ್ಟು ಜೋರಾಗಿ ಜಗ್ಗಿದರೂ ಚಿಮ್ಮುತ್ತಿದ್ದುದು ದಾರದಷ್ಟೇ ದಪ್ಪದ ನೀರು. ಆ ಬೋರ್‌ವೆಲ್ ಬಡಿದು ಬಡಿದೇ ಅಮ್ಮನ ಹೊಟ್ಟೆ ಅಸಗೆಟ್ಟಿತ್ತು. ನಾವೆಲ್ಲ ನೀರಿಗಾಗಿ ಪ್ಲಾಸ್ಟಿಕ್ ಬಿಂದಿಗೆಗಳನ್ನೋ, ತಾಮ್ರದ ಕೊಡಪಾನಗಳನ್ನೋ ತಂದರೆ, ಕರಿಯ ದೊಡ್ಡದೊಂದು ಬಾನಿಯನ್ನೇ ತರುತ್ತಿದ್ದ. ಬೋರ್‌ವೆಲ್ಲನ್ನು ಅವನು ಜೋರಾಗಿ ಜಗ್ಗುತ್ತಿದ್ದರೆ ಅದರ ದಡಬಡ ಸದ್ದು ಫರ್ಲಾಂಗು ದೂರ ಅನುರಣಿಸುತ್ತಿತ್ತು. ಇವನ ಬಲಪ್ರಯೋಗಕ್ಕೆ ಬೋರ್‌ವೆಲ್ ಎಲ್ಲಿ ಮುರಿದುಹೋಗುತ್ತದೋ; ಮುರಿದರೆ, ಮೈಲುದೂರದಿಂದ ನೀರು ಹೊತ್ತು ತರಬೇಕಾಗುತ್ತದೋ ಅನ್ನುವ ಭಯ ನಮ್ಮದು. ಮಣ್ಣಿನ ಅರವಿ ತುಂಬಿದಾಗ ಅದನ್ನು ಸಲೀಸಾಗಿ ಭುಜದ ಮೇಲಿರಿಸಿಕೊಂಡು ಸಾಗುವ ಕರಿಯನನ್ನು ನೋಡಿದರೆ, ಎರಡು ಬೃಹತ್ ಗುಡಾಣಗಳು ಒಟ್ಟಿಗೆ ರಸ್ತೆಯಲ್ಲಿ ಸಾಗುತ್ತಿರುವಂತೆ ಭಾಸವಾಗುತ್ತಿತ್ತು. ಈ ಕರಿಯನ ಶಕ್ತಿ ಮೂಲವಾದರೂ ಯಾವುದು? ಹೋಟೆಲ್‌ನಲ್ಲಿ ಉಳಿಯುವ ಸೀಕುಬಾಕುವಿನಲ್ಲೇ ಅವನ ಹೊಟ್ಟೆ ತುಂಬುತ್ತಿತ್ತಾ? ಗೊತ್ತಿಲ್ಲ.

ರಾಗಿಮುದ್ದೆ ಮಾಡಿದ ನಂತರ ಮಡಕೆಯಲ್ಲಿ ಮುದ್ದೆಯ ಅಂಟಿನ ಸಣ್ಣದೊಂದು ಎಳೆ ಉಳಿಯುತ್ತದಲ್ಲ; ಅದುವೇ ಸೀಕು. ಹಳ್ಳಿಯ ಭಾಷಾಪರಿಸರದಲ್ಲಿ 'ಸೀಕುಬಾಕು' ಎನ್ನುವ ಪದ ಚಾಲ್ತಿಯಲ್ಲುಂಟು. ಸೀಕಿನ ಜವಳಿ ಬಾಕೆಂದರೇನೋ ಗೊತ್ತಿಲ್ಲ. ಸೀಕು ಮಾತ್ರ ರುಚಿಕರ. ಒಣಗಿದ ಸೀಕು ಕುರುಂ ಕುರುಂ ಹಪ್ಪಳದಂತೆ ಸ್ವಾದಿಷ್ಟ. ಬಾಲ್ಯದಲ್ಲಿ ಅಮ್ಮ ಬಿಡಿಸಿ ಒಲೆಗುಂಡಿನ ಮೇಲಿಟ್ಟ ಸೀಕನ್ನು ಚಪ್ಪರಿಸಿದ ರುಚಿ ಇನ್ನೂ ನಾಲಗೆಯಲ್ಲಿದೆ. ಹಳ್ಳಿಗಳಲ್ಲಿ ಇಂದಿಗೂ ಸೀಕು ಕಂಡಾಗ ಬಡಮಕ್ಕಳ ಕಣ್ಣು ಅರಳುವುದಿದೆ. ಶಾಲೆಗೆ ಹೋಗುವ ಉಳ್ಳವರ ಮಕ್ಕಳ ಜೇಬುಗಳಲ್ಲಿ ವಿವಿಧ ತಿನಿಸುಗಳಿದ್ದರೆ, ಬಡಮಕ್ಕಳ ಜೇಬಲ್ಲಿ ಮುದ್ದೆಯ ಮಡಿಕೆಯಿಂದ ಅಮ್ಮ ಬಿಡಿಸಿಕೊಟ್ಟ ಸೀಕಿರುತ್ತದೆ. ಆ ಸೀಕು ಬಡ ಮಗುವಿನ ಪಾಲಿಗೆ ಚಾಕಲೇಟು!

ಬಡತನದಿಂದ ಕನ್ನಡತನದತ್ತ ಬರೋಣ. ಇಂಗ್ಲಿಷ್‌ನಲ್ಲಿ 'ಫಿಂಗರ್ ಮಿಲ್ಲೆಟ್' ಎಂದು ಕರೆಸಿಕೊಳ್ಳುವ ರಾಗಿಯ ಮೂಲ ಹುಡುಕಿಕೊಂಡು ಹೊರಟರೆ ಎಡತಾಕುತ್ತವೆ ಆಫ್ರಿಕಾ, ಇಥಿಯೋಪಿಯಾ. ಮೂಲದ ವಿಷಯ ಮರೆತು, ರಾಗಿಗೂ ಕನ್ನಡಜನಕ್ಕೂ ನಂಟಿನ ವಿಷಯ

ಹುಡುಕಿದರೆ ಅದು ಹೆಚ್ಚೂಕಮ್ಮಿ ನಾಲ್ಕು ಸಾವಿರ ವರ್ಷಗಳ ಇತಿಹಾಸ. ಭಾರತದಲ್ಲಂತೂ ರಾಗಿಬೆಳೆ ಹಾಗೂ ಬಳಕೆಯಲ್ಲಿ ಕರ್ನಾಟಕವೇ ಮುಂದು. ದೇಶದ ಪ್ರತಿಶತ ಅರ್ಧದಷ್ಟು ರಾಗಿ ಬೆಳೆಯುವುದು ನಮ್ಮಲ್ಲೇ. ಮಂಡ್ಯ, ಮೈಸೂರು, ತುಮಕೂರು, ಕೋಲಾರಗಳು ರಾಗಿಯ ಕಣಜಗಳು.

ಕನ್ನಡ ನಾಡಿನ ಹಿಂದೆ 'ಕಂನಾಡು' ಎನ್ನುವ ವಿಶೇಷವಿದೆಯಲ್ಲ; ಈ ಅನನ್ಯತೆ ಕಾರಣವೇ ಈ ರಾಗಿ. ಬಣ್ಣ, ಗಟ್ಟಿತನ, ತಾಳಿಕೆ ಎಲ್ಲದರಲ್ಲೂ ಕನ್ನಡ ಜನಕ್ಕೆ ರಾಗಿ ಹತ್ತಿರ. ಆ ಕಾರಣದಿಂದಲೇ ರಾಗಿ ಕನ್ನಡ ಆಹಾರ ಸಂಸ್ಕೃತಿಯ ಪ್ರಮುಖ ಧಾನ್ಯ. ಈ ರಾಗಿಯ ಶ್ರೇಷ್ಠತೆಯ ಕುರಿತೇ ಪುರಂದರದಾಸರು 'ಯೋಗ್ಯ ರಾಗಿ ಭೋಗ್ಯ ರಾಗಿ' ಎಂದು ರಾಗಿಯ ಶ್ರೇಷ್ಠತೆ ಎತ್ತಿಹಿಡಿದರು. ಕನಕದಾಸರು 'ರಾಮಧಾನ್ಯ ಚರಿತೆ' ಯನ್ನೇ ರಚಿಸಿದರು

ಜನಪದರ ಪಾಲಿಗಂತೂ ರಾಗಿ ಹಾಗೂ ರಾಗಿಮುದ್ದೆ ಹೊರತುಪಡಿಸಿ ಬದುಕಾದರೂ ಎಲ್ಲಿದೆ? 'ಮುದ್ದೆ ನಿದ್ದೆಗೆ ಕೊರೆ ಮಾಡದಿರು ಶಿವನೇ' ಎನ್ನುವುದು ಅವರ ಪ್ರಾರ್ಥನೆ. ರಾಗಿಯನ್ನು ಹಿಟ್ಟು ಮಾಡುವ ಕಲ್ಲು ಕೂಡ ಅವರಿಗೆ ಪವಿತ್ರ. 'ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗೀಯ। ಜಲ್ಲಜಲ್ಲನೆ ಉದುರಮ್ಮ' ಎನ್ನುವುದು ಜನಪದ ಹೆಣ್ಣುಮಗಳ ಪ್ರಾರ್ಥನೆ. ರಾಗಿಕಲ್ಲು ಆಕೆಯ ಪಾಲಿಗೆ ದೈವವಷ್ಟೇ ಅಲ್ಲ; ಸಂಕಟ ಹಂಚಿಕೊಳ್ಳುವ ಗೆಳತಿಯೂ ಹೌದು.

ಅಂದಹಾಗೆ, ರಾಗಿಮುದ್ದೆಯ ಆಕಾರ ಗಮನಿಸಿದ್ದೀರಾ? ಆ ಗೋಳಾಕಾರ ನಮ್ಮ ಹಿರೀಕರಿಗೆ ಹೊಳೆದದ್ದಾದರೂ ಹ್ಯಾಗೋ? ಆ ಗೋಳದ ಹಿಂದೆ ಭೂಗೋಳವಿದೆಯಾ? ಬ್ರಹ್ಮಾಂಡದ ತತ್ವವಿದೆಯಾ? ಇರಬಹುದೇನೋ? ಏನಿಲ್ಲದಿದ್ದರೂ ಒಂದು ಕಲಾತ್ಮಕತೆಯಂತೂ ಇದ್ದೇ ಇದೆ. ಕುದಿವ ನೀರಿಗೆ ರಾಗಿಯ ಹಿಟ್ಟು ಬೆರೆಸಿ, ಹದವಾಗಿ ಕುದಿಸಿ, ಪಾಕಕ್ಕೆ ಬಂದ ಮಿಶ್ರಣವನ್ನು ಉಂಡೆಗಟ್ಟುವ ಪ್ರಕ್ರಿಯೆ ಮೇಲ್ನೋಟಕ್ಕೆ ಸುಲಭದ್ದಾಗಿ ಕಂಡರೂ, ಅದು ಅನುಭವವನ್ನು ಬೇಡುವ ಕೆಲಸ. ಗಂಟಾಗದಂತೆ, ಪೆಡುಸಾಗದಂತೆ ಮುದ್ದೆ ಮಾಡಲಿಕ್ಕೆ ಪಳಗಿದ ಕೈಗಳೇ ಆಗಬೇಕು. ಹಬೆಯಾಡುವ ಮುದ್ದೆಯನ್ನು ಕೈ ಒದ್ದೆ ಮಾಡಿಕೊಂಡು ಉಂಡೆಗಟ್ಟುವುದಕ್ಕೂ ಕೌಶಲ್ಯ ಇರಬೇಕು. ನಮ್ಮ ತಾತನ ದೊಡ್ಡಿಯಂಥ ಮನೆಯಲ್ಲಿ ಹತ್ತಾರು ಮಂದಿಗೆ ದೊಡ್ಡ ಬಾನಿಯಲ್ಲಿ ಮುದ್ದೆ ಮಾಡುತ್ತಿದ್ದ ದಿನಗಳ ಕಥೆಯನ್ನು ಅಮ್ಮನ ಬಾಯಲ್ಲೇ ಕೇಳಬೇಕು. ದೇಹದ ಶಕ್ತಿಯಷ್ಟನ್ನೂ ಕ್ರೋಡೀಕರಿಸಿ ದೊಡ್ಡದೊಂದು ಕಟ್ಟಿಗೆಯಲ್ಲಿ ಮುದ್ದೆಯ ಎಸರನ್ನು ತೊಳಸುವುದು ಬಲು ಕಷ್ಟದ ಕೆಲಸ. ಕೆಲವೊಮ್ಮೆ ಕೈಯ ಶಕ್ತಿ ಹೆಚ್ಚಾಗಿಯೋ? ಅಥವಾ ಮಡಕೆ ಹಳತಾಗಿಯೋ? ಕೋಲು ಬಾನಿಯ ತಳ ಭೇದಿಸಿ, ಎಸರೆಲ್ಲ ಒಲೆಯ ಪಾಲಾಗಿ ಬಿಡುವುದು. ಆಗ ಆ ಹಿಟ್ಟಿನ ಕೋಲಲ್ಲೇ ಮಗಳ ಅಟ್ಟಾಡಿಸುವ ಅಜ್ಜಿ ಸಿಟ್ಟು ಕೇವಲ ಬರಿಯ ನೆನಪುಗಳಲ್ಲ; ಸಂದುಹೋದ ಜೀವನ ಶೈಲಿಯೊಂದರ ಮೆಲುಕು.

ಇನ್ನು ನಾಜೂಕು ಮಂದಿಗೆ ಬಾಳೆಹಣ್ಣಿನಂಥ ಮೆತ್ತನೆ ಮುದ್ದೆ ಬೇಕು!. ದುಡಿವ ಜನಕ್ಕೆ ಮಾತ್ರ ಗೋಡೆಗೆಸೆದರೆ ಪುಟಿಯುವ ಚೆಂಡಿನಂಥ ಗಟ್ಟಿ ಮುದ್ದೆಯೇ ಇರಬೇಕು!. ರಾಗಿಯಲ್ಲಿನ ಕಾರ್ಬೋಹೈಡ್ರೇಟ್ ಎಂಬ ಅಂಶ ಸ್ವಲ್ಪ ಸ್ವಲ್ಪವೇ ಬಿಡುಗಡೆಯಾಗುವುದರಿಂದ ಮುದ್ದೆ ಜೀರ್ಣವಾಗಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಈ ಕಾರಣಕ್ಕೋ ಏನೋ ಶ್ರಮಿಕರಿಗೆ ರಾಗಿಮುದ್ದೆಯ ಊಟವೇ ಅಚ್ಚುಮೆಚ್ಚು.

ಪುಟಿಯುವ ಚೆಂಡಿನಂಥ ಮುದ್ದೆ ಎಂದೆನಲ್ಲ; ಅಂಥ ಮುದ್ದೆಗೆ ಇಂಗ್ಲಿಷ್‌ನಲ್ಲಿ 'ರಾಗಿ ಬಾಲ್' ಎನ್ನುತ್ತಾರೆ. ಇದೊಂದು ಸ್ವಾರಸ್ಯಕರ ಸಂಗತಿ. ಜರ್ಮನಿಯಲ್ಲಿ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿ ನಡೆಯುತ್ತಿದ್ದ ದಿನಗಳವು (೨೦೦೬ನೇ ಇಸವಿ). ಆ ಸಮಯದಲ್ಲೇ ಕ್ರೀಡಾಂಗಣದ ಕಚೇರಿಯ ಕ್ಯಾಂಟೀನ್‌ನಲ್ಲಿ ವಾರಕ್ಕೆ ಎರಡು ದಿನ ಮುದ್ದೆ ಮಾಡುವ ನಿರ್ಣಯ ಜಾರಿಗೆ ಬಂದಿತ್ತು. ಕ್ಯಾಂಟೀನ್‌ನ ಮೆನು ಫಲಕದ ಪಟ್ಟಿಯಲ್ಲಿ 'ರಾಗಿ ಬಾಲ್' ಎನ್ನುವ ಹೆಸರು ಸೇರ್ಪಡೆಯಾಗಿತ್ತು. ಈ ಬಾಲ್‌ಗಳನ್ನು ತಟ್ಟೆಯಲ್ಲಿ ಇಟ್ಟುಕೊಂಡು ತುಟಿಬಣ್ಣ ಕೆಡದಂತೆ ಚಮಚೆಯಲ್ಲಿ ತಿನ್ನುವ ಚೆಲುವೆಯರು, ಇಡೀ ಮುದ್ದೆಯನ್ನು ಒಮ್ಮೆಗೇ ಎತ್ತಿಕೊಂಡು ಕಚ್ಚಿತಿನ್ನುವ ಚೆನ್ನಿಗರ ಕಾರಣದಿಂದ ಕ್ಯಾಂಟೀನ್ ರಸಮಯ ಸನ್ನಿವೇಶಗಳ ರಂಗಸ್ಥಳವಾಗಿತ್ತಂತೆ!. ಒಟ್ಟಾರೆ, ಮುದ್ದೆ ಗಟ್ಟಿತನಕ್ಕೆ ಹೆಸರಾದುದು. 'ಹಿಟ್ಟು ತಿಂದು ಜಟ್ಟಿಯಾಗು', 'ಹಿಟ್ಟಂ ತಿಂದಂ ಬೆಟ್ಟಂ ಕಿತ್ತಿಟ್ಟಂ' ಎನ್ನುವ ಅನುಭವದ ಮಾತುಗಳು ಈ ಗಟ್ಟಿತನವನ್ನೇ ಸಾರಿ ಹೇಳುತ್ತವೆ.

ಅಕ್ಕಿ, ಗೋಧಿಗೆ ಹೋಲಿಸಿದರೆ ರಾಗಿ ಎಂಟ್ಹತ್ತು ಪಟ್ಟು ಹೆಚ್ಚು ಪೌಷ್ಟಿಕ; ರೋಗ ನಿರೋಧಕ. ರಕ್ತದಲ್ಲಿನ ಸಕ್ಕರೆ ಅಂಶ ನಿಯಂತ್ರಿಸುತ್ತದೆ. ಪ್ರತ್ಯಾಮ್ಲೀಯ ಗುಣ ಹೊಂದಿರುವುದರಿಂದ ರಾಗಿ ತಿನಿಸು ದೇಹಕ್ಕೆ ತಂಪು. ರಾಗಿಯಲ್ಲಿ ಹೃದಯದ ಬೇನೆ ಹಾಗೂ ಕ್ಯಾನ್ಸರ್ ತಡೆಗಟ್ಟಬಲ್ಲ ಔಷಧೀಯ ಗುಣಗಳಿವೆ. ತೆಳ್ಳಗಾಗಬೇಕೆನ್ನುವವರಿಗೆ ರಾಗಿಮುದ್ದೆ ಹೇಳಿಮಾಡಿಸಿದ ಊಟ. ಹೀಗೆ, ರಾಗಿ– ರಾಗಿಮುದ್ದೆ ಕುರಿತು ಹತ್ತಾರು ಮೆಚ್ಚುಗೆ, ನಂಬಿಕೆಯ ಮಾತುಗಳಿವೆ. ಆರೋಗ್ಯಕರ ದೇಹದ ಹಳ್ಳಿಗರೇ ರಾಗಿಯ ಮಹಿಮೆಯನ್ನು ಜಗತ್ತಿಗೆ ಸಾರಬಲ್ಲ ಜೀವಂತ ಉದಾಹರಣೆಗಳು. ಈ ಪರಿಯ ರಾಗಿ, ಹಸುಳೆಗಳಿಗೆ ಪೌಷ್ಟಿಕ ಆಹಾರ. ರಾಗಿಹಿಟ್ಟಿನ ಸೂಪ್ ಹೀರುವ ಮಕ್ಕಳು ಕೆನ್ನೆತುಂಬಿಕೊಂಡು ನಳನಳಿಸುತ್ತಾರೆ. ರಾಗಿಯಲ್ಲಿನ ಅಧಿಕ ಪ್ರಮಾಣದ ಕ್ಯಾಲ್ಸಿಯಂ ಮಕ್ಕಳ ಬೆಳವಣಿಗೆ ನಿಟ್ಟಿನಲ್ಲಿ ಟಾನಿಕ್‌ನಂತೆ ಕೆಲಸ ಮಾಡುತ್ತದೆ.

ರಾಗಿಮುದ್ದೆಗೂ ಸೊಪ್ಪಿನ ಸಾರಿಗೂ ಹೇಳಿಮಾಡಿಸಿದ ಜೊತೆ. ಹಾಗೆ ನೋಡಿದರೆ ಮುದ್ದೆಗೆ ಯಾವ ಎಸರಿನೊಂದಿಗೂ ಹೊಂದಿಕೊಳ್ಳುವ ಗುಣವಿದೆ. ಕಿವುಚಿದ ಸಾರು, ಸೊಪ್ಪು ಸಾರು, ಹಿತಕವರೆ, ಮೊಳಕೆಯೊಡೆದ ಹುರಳಿಕಾಳು ಸಾರು, ಉಪ್ಪು ಮೆಣಸಿನಕಾಯಿ ಗೊಜ್ಜು, ಕೋಳಿಸಾರು ಹೀಗೆ ಎಲ್ಲದರೊಂದಿಗೂ ರಾಗಿಹಿಟ್ಟು ಅನುರೂಪ ಜೋಡಿಯಾಗಬಲ್ಲದು. ಯಾವುದೂ ಇಲ್ಲವೆನ್ನಿ. ಕೊನೆಗೆ ನೀರು ಮಜ್ಜಿಗೆಯಿದ್ದರೂ ಸಾಕು. ಮಜ್ಜಿಗೆಯಲ್ಲಿ

ಮುದ್ದೆಯನ್ನು ಕದರಿ ಕುಡಿಯುವ ಸುಖ, ಉಪ್ಪು ಮೆಣಸಿನಕಾಯಿ ಗೊಜ್ಜಿನೊಂದಿಗೆ ಮುದ್ದೆಯನ್ನು ಮೆದ್ದಿ ಮೆಲ್ಲುವ ಆನಂದವನ್ನು ಅನುಭವಿಸಿದವರೇ ಬಲ್ಲರು. ಅದು ಪದಗಳಿಗೆ ನಿಲುಕದ ರಸಾನುಭವ.

'ಮುದ್ದೆ ಮಹಿಮೆ' ಮಹಾಭಾರತದಷ್ಟಿದ್ದರೂ ಆಧುನಿಕ ಸಂದರ್ಭದಲ್ಲಿ ಮುದ್ದೆಯೆಂದರೆ ಮೋರೆ ತಿರುಗಿಸುವವರು, 'ಅದು ಮಧುಮೇಹಿಗಳ ಪಥ್ಯ' ಎಂದು ಮೂಗುಮುರಿವವರೂ ಸಾಕಷ್ಟಿದ್ದಾರೆ. ಮುದ್ದೆಯು ಬಣ್ಣ ಮೈಬಣ್ಣ ಕಂದಿಸುತ್ತದೆಂದು ಕಂಗಾಲಾಗುವ ಕೋಮಲಾಂಗಿಯರೂ ಇದ್ದಾರೆ. ರಾಗಿ ಎಂದರೆ ಮುದ್ದೆ ಅಥವಾ ರೊಟ್ಟಿ ಎಂದಷ್ಟೇ ಹೇಳುವ ದಿನಗಳು ಈಗಿಲ್ಲ. ರಾಗಿದೋಸೆ, ರಾಗಿಇಡ್ಲಿ, ರಾಗಿಶ್ಯಾವಿಗೆ, ರಾಗಿಚಕ್ಕುಲಿ, ರಾಗಿ ಹಪ್ಪಳ, ರಾಗಿಬಿಸ್ಕತ್ತು– ಹೀಗೆ ರಾಗಿ ಮಹಿಮೆ ದೊಡ್ಡದಾಗಿ ಬೆಳೆಯುತ್ತಲೇ ಇದೆ.

ರಾಗಿಯ ಬಗ್ಗೆ ಮಾತನಾಡುವಾಗ ಕನ್ನಡನಾಡಿನ ರೈತರ ನಡುವೆ 'ರಾಗಿ ಲಕ್ಷ್ಮಣಯ್ಯ' ಎಂದೇ ಹೆಸರಾದ ಡಾ. ಸಿ.ಹೆಚ್.ಲಕ್ಷ್ಮಣಯ್ಯನವರನ್ನು ನೆನಪಿಸಿಕೊಳ್ಳಬೇಕು. ಮೈಸೂರು ತಾಲ್ಲೂಕಿನ ಹಾರೋಹಳ್ಳಿಯ ಈ ರಾಗಿಮೋಹಿಯ ಗಮನ ರಾಗಿಯತ್ತ ಹರಿಯುವ ವೇಳೆಗೆ ರಾಗಿತಳಿಗಳ ಕುರಿತ ಸಂಶೋಧನೆ ಸ್ಥಗಿತಗೊಂಡು ದಶಕಗಳಾಗಿದ್ದವು. ಇಳುವರಿ ಹಾಗೂ ಆರ್ಥಿಕವಾಗಿ ಅಷ್ಟೇನೂ ಲಾಭದಾಯಕವಲ್ಲದ ಸ್ಥಳೀಯ ತಳಿಗಳನ್ನು ರೈತರು ನೆಚ್ಚಿಕೊಂಡಿದರು. ಇಂಥ ಸಂದರ್ಭದಲ್ಲಿ ಲಕ್ಷ್ಮಣಯ್ಯ 'ಸಂಪರ್ಕ ಪದ್ಧತಿ' ಎನ್ನುವ ತಮ್ಮ ನೂತನ ಪರಿಕಲ್ಪನೆಯ ಮೂಲಕ ಹೊಸತಳಿಗಳ ಅನ್ವೇಷಣೆಯಲ್ಲಿ ತೊಡಗಿಸಿಕೊಂಡರು. ಈ ನಿಟ್ಟಿನಲ್ಲಿ ಮೈಸೂರು ಹಾಗೂ ತಮಿಳುನಾಡಿನ ತಳಿಗಳನ್ನು ಬಳಸಿಕೊಂಡರು. ಪರಿಣಾಮವಾಗಿ ದೊರೆತದ್ದು ಅದ್ಭುತ ಯಶಸ್ಸು. ಅದೇ ಕರ್ನಾಟಕದ 'ರಾಗಿ ಕ್ರಾಂತಿ'!

ಮಳೆಯನ್ನು ಅನುಸರಿಸಿ ವರ್ಷಕ್ಕೆ ಎರಡು ಸಲ ರೈತರು ರಾಗಿ ಬೆಳೆಯುತ್ತಿದ್ದುದನ್ನು ಗಮನಿಸಿದ ಲಕ್ಷ್ಮಣಯ್ಯ, ವರ್ಷದ ಎಲ್ಲ ಅವಧಿಯಲ್ಲೂ ಬೆಳೆಯಬಹುದಾದ ಕಡಿಮೆ ಅವಧಿ, ಕಡಿಮೆ ನೀರಿನಲ್ಲಿ ಬೆಳೆಯುವ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದರು.

ಅನಾರೋಗ್ಯಪೀಡಿತರಾದ ಸಂದರ್ಭದಲ್ಲೂ ಲಕ್ಷ್ಮಣಯ್ಯನವರು 'ರಾಗಿಧ್ಯಾನ'ವನ್ನು ಮರೆಯಲಿಲ್ಲ. ಕೊನೇ ದಿನಗಳಲ್ಲಿ ಅತಿ ಸೂಕ್ಷ್ಮವಾದ ಶಸ್ತ್ರಚಿಕಿತ್ಸೆಯೊಂದಕ್ಕೆ ಅವರು ಒಳಪಡಬೇಕಾಯಿತು. ಆಪರೇಷನ್ ಕೊಠಡಿಗೆ ತೆರಳುವ ಮುನ್ನ, 'ಚಿಕಿತ್ಸೆಯ ನಂತರ ನಾನು ಚೇತರಿಸಿಕೊಂಡು ರಾಗಿ ಸಂಶೋಧನೆಯಲ್ಲಿ ಮುಂದುವರೆಯುವುದು ಸಾಧ್ಯವಾ? ಹಾಗಿದ್ದರೆ ಮಾತ್ರ ನನ್ನನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿ. ಇಲ್ಲದಿದ್ದರೆ ನನ್ನ ಸಾಯಲು ಬಿಡಿ' ಎಂದು ವೈದ್ಯರನ್ನು ಕೇಳಿಕೊಂಡಿದ್ದರಂತೆ. ಅಂಥ ಮಹಾನ್ ರಾಗಿಪ್ರೇಮಿ ಅವರಾಗಿದ್ದರು. ದುರದೃಷ್ಟವಶಾತ್ ಅವರ ಶಸ್ತ್ರಚಿಕಿತ್ಸೆ ಯಶಸ್ವಿಯಾಗಲಿಲ್ಲ. 'ಅಂತ್ಯಸಂಸ್ಕಾರಕ್ಕೆ ಮೊದಲು ನನ್ನ ದೇಹದ ಮೇಲೆ ಒಂದು ಮುಷ್ಟಿ ರಾಗಿ ಸುರಿಯಿರಿ' ಎಂಬುದು ಲಕ್ಷ್ಮಣಯ್ಯನವರು ತಮ್ಮ ಪತ್ನಿಯ ಬಳಿ ಹೇಳಿಕೊಂಡಿದ್ದ ಕೊನೆಯ ಆಸೆಯಾಗಿತ್ತು.

ಹೀಗೆ, ಲಕ್ಷ್ಮಣಯ್ಯನವರನ್ನು ನೆನೆಯುತ್ತಾ ಮುದ್ದೆ ವಿಲಾಸದಲ್ಲಿ ಮುಳುಗಿದವನನ್ನು ತಕ್ಷಣ ಎಚ್ಚರಗೊಳಿಸಿದ್ದು ಪೂಜೆ ಮುಗಿಸಿ ಬಂದ ಅಮ್ಮನ ಮಾತು. ಜೋಂಪು ಹತ್ತಿದ ಕಣ್ಣುಗಳ ಹಾಗೇ ಅರಳಿಸಿ ಹೊರಗೆ ನೋಡಿದೆ. ಪ್ರಕೃತಿಮಾತೆ ಹಸಿರನ್ನೇ ಉರಿಯಾಗಿಸಿ, ಭೂಮಿಯನ್ನೇ ಮಡಕೆಯನ್ನಾಗಿಸಿಕೊಂಡು ಮುದ್ದೆ ಚೆಂಡುಗಳ ಕಟ್ಟಿಕಟ್ಟಿ ಬಯಲಿನಲ್ಲಿ ಜೋಡಿಸಿಟ್ಟಂತೆ ದೂರದ ಬೆಟ್ಟಸಾಲಿನ ಗುಡ್ಡಗಳು ಕಾಣಿಸಿದವು. ನೆತ್ತಿಯ ಮೇಲಿನ ಮುಗಿಲು ಬಯಲಿನಲ್ಲಿನ ತುಂಟ ಓಡುವೋಡಗಳು ಮುದ್ದೆಗಿಟ್ಟ ಕುದಿಯೆಸರಂತೆ ಕಾಣಿಸುತ್ತಿದ್ದವು.

## ಲೇಖನ-ಲೇಖಕರು: ಚ.ಹ.ರಘುನಾಥ (೧೯೭೪)



'ಪ್ರಜಾವಾಣಿ' ಪತ್ರಿಕೆಯಲ್ಲಿ ಉಪ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿರುವ ಇವರು, ತುಮಕೂರು ಜಿಲ್ಲೆ ಮಧುಗಿರಿ ತಾಲೂಕಿನ ಹರಳಾಪುರದವರು. 'ಹೊಳೆಯಲ್ಲಿ ಹರಿದ ನೀರು' ಕವನ ಸಂಕಲನ, 'ಹೊರಗೂ ಮಳೆ ಒಳಗೂ ಮಳೆ' ಕಥಾ ಸಂಕಲನ ಪ್ರಕಟಿಸಿದ್ದಾರೆ. ಕಥಾರಂಗಂ ಪ್ರಶಸ್ತಿ, ವಸುದೇವ ಭೂಪಾಲಂ ದತ್ತಿನಿಧಿ ಬಹುಮಾನ, ಕೆ.ಸಾಂಬಶಿವಪ್ಪ ಸ್ಮಾರಕ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ.

ಹಳ್ಳಿಯ ಬದುಕಿನಲ್ಲಿ ರಾಗಿ ಮುದ್ದೆಗಿರುವ ಮಹತ್ವವನ್ನು ಲೇಖಕರು ಇಲ್ಲಿ ಚಿತ್ರಿಸಿದ್ದಾರೆ. ಜಾನಪದ ಜಗತ್ತಿನ ಜನ ಗಾದೆ ಮತ್ತು ಹಾಡುಗಳ ಮೂಲಕ ರಾಗಿಯ ಮಹತ್ವ ಕೊಂಡಾಡಿರುವುದನ್ನು, ಆಧುನಿಕ ರಾಗಿ ಕೃಷಿ ಪದ್ಧತಿಯನ್ನು ಈ ಪ್ರಬಂಧ ಹಾಸ್ಯ ಶೈಲಿಯಲ್ಲಿ ನಿರೂಪಿಸಿದೆ.

## ಪದಕೋಶ:

ಚೌಲ-ದೇವರ ಹೆಸರಿನಲ್ಲಿ ಮಕ್ಕಳ ಕೂದಲು ತೆಗೆಸುವ ಪದ್ಧತಿ; ಅಸಗೆಟ್ಟಿತ್ತು-ಗಡ್ಡೆ ಕಟ್ಟುವುದು ; ಸೀಕು-ಮುದ್ದೆಯ ಅಂಟಿನ ಸಣ್ಣದೊಂದು ಎಳೆ; ಎಸರು-ಅಡಿಗೆ ಮಾಡಲು ಇಟ್ಟಿರುವ ಕುದಿಯುವ ನೀರು, ಸಾರು; ಪ್ರತ್ಯಾಮ್ಲೀಯ-ಆಮ್ಲಗುಣವನ್ನು ಶಮನಗೊಳಿಸುವ.

## I. ಸಂದರ್ಭ ಸೂಚಿಸಿ ವಿವರಿಸಿ:

೧. ಅಂಗೈಯಲ್ಲಿ ಮತ್ತೊಂದು ಮುದ್ದೆ ಪ್ರತ್ಯಕ್ಷ!

೨. ಎಷ್ಟು ಜೋರಾಗಿ ಜಗ್ಗಿದರೂ ಚಿಮ್ಮುತ್ತಿದ್ದುದು ದಾರದಷ್ಟೇ ದಪ್ಪದ ನೀರು.

೩. ಸೀಕನ್ನು ಚಪ್ಪರಿಸಿದ ರುಚಿ ಇನ್ನೂ ನಾಲಗೆಯಲ್ಲಿದೆ.

೪. ಮುದ್ದೆ ಮಾಡಲಿಕ್ಕೆ ಪಳಗಿದ ಕೈಗಳೇ ಆಗಬೇಕು.

೫. ಸಂದು ಹೋದ ಜೀವನ ಶೈಲಿಯೊಂದರ ಮೆಲುಕು.

೬. ತುಟಿಬಣ್ಣ ಕೆಡದಂತೆ ಚಮಚೆಯಲ್ಲಿ ತಿನ್ನುವ ಚೆಲುವೆಯರು.

೭. ಅದು ಪದಗಳಿಗೆ ನಿಲುಕದ ರಸಾನುಭವ.

೮. ನನ್ನ ದೇಹದ ಮೇಲೆ ಒಂದು ಮುಷ್ಟಿ ರಾಗಿ ಸುರಿಯಿರಿ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಗ್ರಾಮದ ಅಧಿದೇವತೆ ಯಾರು?

೨. ಕಣ್ಣುಗಳಲ್ಲಿ ಯಾವುದರ ಸಾಲುಚಿತ್ರಗಳು ಮೂಡಿಕೊಂಡವು?

೩. ಹೋಟೆಲ್ಲಿನಲ್ಲಿ ಕರಿಯ ಏನು ಕೆಲಸ ಮಾಡುತ್ತಿದ್ದ?

೪. ಊರಿನ ನೀರು ಎಲ್ಲಿ ನೆಲೆನಿಂತಿತ್ತು?

೫. ನೀರಿಗಾಗಿ ಕರಿಯ ಏನನ್ನು ತರುತ್ತಿದ್ದ?

೬. ಬಡಮಕ್ಕಳ ಪಾಲಿಗೆ ಚಾಕಲೇಟ್ ಯಾವುದು?

೭. ರಾಗಿಗೆ ಎಷ್ಟು ಸಾವಿರ ವರ್ಷಗಳ ಇತಿಹಾಸವಿದೆ?

೮. ರಾಗಿಯಲ್ಲಿನ ಸ್ವಲ್ಪಸ್ವಲ್ಪವೇ ಬಿಡುಗಡೆಯಾಗುವ ಅಂಶ ಯಾವುದು?

೯. ಅಕ್ಕಿ, ಗೋಧಿಗೆ ಹೋಲಿಸಿದರೆ ರಾಗಿ ಎಷ್ಟು ಪಟ್ಟು ಹೆಚ್ಚು ಪೌಷ್ಟಿಕವಾಗಿದೆ?

೧೦. ಡಾ. ಸಿ.ಹೆಚ್. ಲಕ್ಷ್ಮಣಯ್ಯನವರು ತಮ್ಮ ಪತ್ನಿಗೆ ಹೇಳಿಕೊಂಡ ಕೊನೆಯ ಆಸೆ ಯಾವುದು?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಲೇಖಕರು ಹಾಗೂ ಅವರ ಅಣ್ಣನ ನಾಲಗೆಯ ಮೇಲೆ ನೀರೂರಲು ಕಾರಣವೇನು?

೨. ನಮ್ಮ ಯಾವ ಜಿಲ್ಲೆಗಳು ರಾಗಿಯ ಕಣಜಗಳಾಗಿವೆ?

೩. ರಾಗಿ ಬೀಸುವ ಕಲ್ಲನ್ನು ಕುರಿತ ಜನಪದ ಹೆಣ್ಣುಮಗಳ ಪ್ರಾರ್ಥನೆ ಯಾವುದು?

೪. ಮುದ್ದೆ ಮಾಡಲು ಬೇಕಾದ ಕೌಶಲ್ಯವೇನು?

೫. ಲೇಖಕರ ಪ್ರಕಾರ ದುಡಿವ ಜನಕ್ಕೆ ಯಾವ ರೀತಿಯ ಮುದ್ದೆ ಇರಬೇಕು?

೬. ಯಾವ ಕಾರಣದಿಂದ ಕ್ಯಾಂಟೀನ್ ರಸಮಯ ಸನ್ನಿವೇಶಗಳ ರಂಗಸ್ಥಳವಾಗಿತ್ತು?

೭. ರಾಗಿಯಲ್ಲಿ ಯಾವ ರೋಗಗಳನ್ನು ತಡೆಯಬಲ್ಲ ಗುಣವಿದೆ?

೮. ಮುದ್ದೆಯ ಕುರಿತು ಕೋಮಲಾಂಗಿಯರಿಗೆ ಇರುವ ಹೆದರಿಕೆ ಯಾವುದು?

## IV. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.

೧. ಹಳ್ಳಿಯ ಜನ ಕೈಯಲ್ಲೇ ಮುದ್ದೆ ತಿನ್ನುವ ಚಿತ್ರಣವನ್ನು ವಿವರಿಸಿ.

೨. ಕರಿಯನ ಜೀವನ ಹೇಗಿತ್ತು? ಜನರು ಆತನನ್ನು ಕಾಣುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

೩. ರಾಗಿಮುದ್ದೆ ಕುರಿತು ಇರುವ ಹತ್ತಾರು ಮೆಚ್ಚುಗೆಯ ನಂಬಿಕೆಯ ಮಾತುಗಳಾವುವು?

೪. ರಾಗಿಮುದ್ದೆ ಯಾವ ಬಗೆಯ ಸಾರುಗಳ ಜೊತೆ ಸೇರಿ ಎಂತಹ ರಸಾನುಭವವನ್ನು ಸೃಷ್ಟಿಸುತ್ತದೆ? ವಿವರಿಸಿರಿ.

೫. ಡಾ.ಸಿ.ಹೆಚ್.ಲಕ್ಷ್ಮಣಯ್ಯನವರ ರಾಗಿ ಸಂಶೋಧನೆ ಮತ್ತು ರಾಗಿ ಪ್ರೀತಿಯನ್ನು ವಿವರಿಸಿರಿ.

**ಆಕರ:** ರಾಗಿ ಮುದ್ದೆ : ಚ.ಹ.ರಘುನಾಥ

ಹೆಚ್ಚಿನ ಓದು: ರಾಮಧಾನ್ಯ ಚರಿತೆ – ಕನಕದಾಸ
ಕಾಲಜ್ಞಾನಿ ಕನಕ – ಕಿ.ರಂ. ನಾಗರಾಜ್
ತೆನೆ ಮರೆಯ ಕ್ರಾಂತಿ–ಪ್ರೊ॥ ಎಂ. ನಾರಾಯಣಸ್ವಾಮಿ ಹಾಗೂ ರಮೇಶ್ ಸಂಕ್ರಾತಿ.

**ಯಾರು ದೊರೆಯಾದರು ರಾಗಿಕಲ್ಲು ಬೀಸೋದು ತಪ್ಪೋದಿಲ್ಲ –ಗಾದೆ**

# ೩. ಜ್ಯೋತಿಷ್ಯ–ಅರ್ಥಪೂರ್ಣವೋ ಅರ್ಥರಹಿತವೋ?

**–ಡಾ. ಎಚ್. ನರಸಿಂಹಯ್ಯ**

**ಭವಿಷ್ಯವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಯಾರನ್ನೂ ಬಿಟ್ಟಿಲ್ಲ. ಅದನ್ನು ತಿಳಿಯುವುದು ಅಸಾಧ್ಯವೆಂದು ಎಲ್ಲರಿಗೂ ಗೊತ್ತಿದೆ. ಇದನ್ನೇ ಬಂಡವಾಳ ಮಾಡಿಕೊಂಡ ಕೆಲವರು ಸಾಮಾನ್ಯರನ್ನು ಹೆದರಿಸಿ ವಂಚಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿರುವುದು ದುರಂತ. ಭವಿಷ್ಯದ ಆಧಾರದ ಮೇಲೆ ಬದುಕು ನಡೆಯುವುದಿಲ್ಲ. ಭವಿಷ್ಯಕಾರರ ಮಾತಿನಂತೆ ಯಾವುದೂ ನಿರ್ಧಾರವಾಗುವುದಿಲ್ಲ. ಜೀವನ ಹೇಗಿರುತ್ತದೋ ಹಾಗೇ ಸ್ವೀಕರಿಸುವುದು ಬುದ್ಧಿವಂತರ ಲಕ್ಷಣ.**

ಪ್ರಕೃತಿಯ ಘಟನೆಗಳು ಆದಿಮಾನವನಿಗೆ ಭಯ ಭಕ್ತಿಯನ್ನುಂಟು ಮಾಡಿದ್ದು, ಅವನ ಬಹುಪಾಲು ನಂಬಿಕೆಗಳು ಈ ಹಿನ್ನೆಲೆಯಲ್ಲಿಯೇ ರೂಪುಗೊಂಡವು. ಮಿಂಚು ಗುಡುಗುಗಳು ಅವನಿಗೆ ಸಾಕಷ್ಟು ಭಯವನ್ನುಂಟುಮಾಡಿರಬೇಕು. ಮಧ್ಯಾಹ್ನದಲ್ಲಿ ಗ್ರಹಣ ನಡೆದಾಗ ಕತ್ತಲು ಮುಸುಕಿದ್ದು ಎಂತಹ ಧೈರ್ಯಶಾಲಿಯಾದ ಆದಿಮಾನವನಿಗೂ ನಡುಕವನ್ನುಂಟು ಮಾಡಿರಬೇಕು. ಭೂಕಂಪವು ಅವನಿಗೆ ಹೆಚ್ಚಿನ ದಿಗಿಲನ್ನು ತಂದಿರಬೇಕು. ಕನಸು, ರೋಗ, ಸಾವು–ಇವೆಲ್ಲಾ ಅವನಿಗೆ ರಹಸ್ಯಗಳಾಗಿರಬೇಕು.

ಪ್ರಾಚೀನ ಜ್ಯೋತಿಷ್ಯದ ಉಗಮವು ಖಗೋಳಶಾಸ್ತ್ರದಲ್ಲಿ ಕಂಡುಬರುತ್ತದೆ. ಖಗೋಳಶಾಸ್ತ್ರವು ವಿಜ್ಞಾನವಾದ್ದರಿಂದ ಅದು ಬೆಳೆಯುತ್ತಾ ಬಂದಿದೆ. ವಿಜ್ಞಾನದ ಎಲ್ಲಾ ಪ್ರಯೋಗಗಳು, ತಾತ್ಕಾಲಿಕವಾಗಿದ್ದು. ಅಧಿಕಾರಯುಕ್ತವಾಗಿ ಕುರುಡಾಗಿ ಅದು ಮಾತನಾಡುವುದಿಲ್ಲ. ವಿಜ್ಞಾನದ ಎಲ್ಲ ಸಿದ್ಧಾಂತಗಳು, ನಿಯಮಗಳು ಹೊಸ ಸಂಶೋಧನೆಯ ಬೆಳಕಿನಲ್ಲಿ ಪುನರ್ ರಚಿತವಾಗುತ್ತವೆ. ಯಾವುದೇ ಒಂದು ವಿಷಯ ವಿಜ್ಞಾನವೆನಿಸಿಕೊಳ್ಳಬೇಕಾದರೆ ಅದು ವಸ್ತುನಿಷ್ಠತೆ, ಪುನರಾವೃತ್ತಿಯ ಸಾಮರ್ಥ್ಯ, ದೃಢತೆ, ವಿಶ್ವಮಾನ್ಯತೆ– ಈ ಎಲ್ಲ ರೀತಿಯ ಅಂಶಗಳನ್ನು ತೃಪ್ತಿಪಡಿಸಬೇಕಾಗುತ್ತದೆ. ವಿಜ್ಞಾನದ ಎಲ್ಲಾ ಶಾಖೆಗಳು ಅಪೂರ್ಣತೆಯಲ್ಲಿಯೇ ಆರಂಭವಾಗುತ್ತವೆ. ಇದಕ್ಕೆ ಕಾರಣ ಜ್ಞಾನದ ಮಿತಿ ಮತ್ತು ಆ ಕಾಲದಲ್ಲಿ ಬಳಕೆಯಲ್ಲಿದ್ದ ಒರಟಾದ ಉಪಕರಣಗಳು, ಕೆಲವು ಸಂದರ್ಭಗಳಲ್ಲಿ ತಪ್ಪು ಗ್ರಹಿಕೆಗಳು ಕೂಡ ಈ ಬಗೆಯ ಅಪೂರ್ಣತೆಗೆ ಕಾರಣವಾಗುತ್ತವೆ. ನಿರಂತರ ಸತ್ಯಶೋಧನೆಯ ಹಂಬಲ ವಿಜ್ಞಾನದ ಮಹೋನ್ನತಿಯಾಗಿದೆ.

ವಿಜ್ಞಾನದ ಇತರ ಶಾಖೆಗಳಂತೆ ಪ್ರಾಚೀನ ಖಗೋಳಶಾಸ್ತ್ರ ಸಹ ಹಲವಾರು ತಪ್ಪು ಗ್ರಹಿಕೆಗಳನ್ನು ಪಡೆದುಕೊಂಡಿತ್ತು. ನಕ್ಷತ್ರ ಖಚಿತವಾದ ಆಕಾಶ ಮತ್ತು ಚಂದ್ರ ಮೊದಲಿನಿಂದಲೂ ಮನುಷ್ಯನನ್ನು ಆಕರ್ಷಿಸಿದ್ದವು. ಕುತೂಹಲ ಮತ್ತು ಸೂಕ್ಷ್ಮ ನಿರೀಕ್ಷಣಾ ಶಕ್ತಿಯಿರುವ ಜನರು ಅವುಗಳ ಬಗ್ಗೆ ಮತ್ತಷ್ಟು ತಿಳಿಯಲು ಪ್ರಯತ್ನಿಸಿದರು.

ಆಗ ವಿಷಯವನ್ನು ತಿಳಿಯಲು ಅವರಿಗೆ ಕಣ್ಣು ಮಾತ್ರ ಏಕೈಕ ಸಾಧನವಾಗಿತ್ತು. ಪ್ರಾಚೀನ ಖಗೋಳಶಾಸ್ತ್ರ ಹಾಗೂ ಜ್ಯೋತಿಷ್ಯದ ಪ್ರಕಾರ ಒಂಬತ್ತು ಗ್ರಹಗಳಿವೆ. ಅವು ಸೂರ್ಯ, ಚಂದ್ರ, ರಾಹು, ಕೇತು, ಬುಧ, ಶುಕ್ರ, ಮಂಗಳ, ಗುರು ಮತ್ತು ಶನಿ. ಆದರೆ ಸೂರ್ಯ–ಚಂದ್ರರು ಗ್ರಹಗಳಲ್ಲ, ಸೂರ್ಯ ನಕ್ಷತ್ರವಾದರೆ ಚಂದ್ರ ಉಪಗ್ರಹ. ಇದರ ಜೊತೆಗೆ ರಾಹು ಕೇತುಗಳು ಅಸ್ತಿತ್ವದಲ್ಲಿ ಇಲ್ಲದೆ ಇರುವುವು. ಅವು ಅವರ ಕಲ್ಪನೆಯ ಕೃತಕ ಬಿಂದುಗಳು. ಜ್ಯೋತಿಷ್ಯದ ಅಧಾರವಾಗಿರುವ ಒಂಬತ್ತು ಗ್ರಹಗಳಲ್ಲಿ ಎರಡು ಗ್ರಹಗಳೇ ಅಲ್ಲ. ಇದಲ್ಲದೆ ಜ್ಯೋತಿಷಿಗಳಿಗೆ ನಿಖರವಾದ ಕಾಲದ ಪರಿಕಲ್ಪನೆ ಇರಲಿಲ್ಲವಾದರೂ, ಅದರ ಪ್ರಾಮುಖ್ಯ ಜ್ಯೋತಿಷ್ಯದಲ್ಲಿ ಹೆಚ್ಚಾಗಿದೆ.

ವಿಜ್ಞಾನದ ಪ್ರಕಾರ ಗ್ರಹಗಳು ಸೂರ್ಯನ ಭಾಗಗಳು, ಆದ್ದರಿಂದ ಅವುಗಳು ಸೂರ್ಯನ ರೀತಿಯ ಭೌತಿಕ ಸ್ವರೂಪವನ್ನೇ ಪಡೆದುಕೊಂಡಿವೆ. ಭೌತವಸ್ತುವಿನ ದೊಡ್ಡ ರಾಶಿಗಳಾಗಿರುವ ಗ್ರಹಗಳು ಭೂಮಿಯಿಂದ ಮಿಲಿಯನ್‌ಗಟ್ಟಲೆ ಮೈಲಿಗಳ ದೂರದಲ್ಲಿವೆ. ಇವು ಮನುಷ್ಯನ ಜೀವನದ ಘಟನೆಗಳ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ಗ್ರಹಿಸುವುದು ಅಸಾಧ್ಯ. ಮನುಷ್ಯನ ಎಲ್ಲ ಗುಣಗಳನ್ನು ಗ್ರಹಗಳಿಗೆ ಆರೋಪಿಸುವುದು ಹಾಸ್ಯಾಸ್ಪದ. ಗ್ರಹಗಳ ಸ್ಥಾನಗಳು, ಶುಭ, ಅಶುಭ, ಸ್ನೇಹಪರ, ಶತ್ರುಗಳು, ಸೇಡಿನ ಭಾವನೆಯನ್ನು ಹೊಂದುವವು ಆಗುತ್ತವೆ ಎಂಬ ನಂಬಿಕೆ ಪ್ರಚಲಿತವಾಗಿದೆ. ನಮ್ಮ ಪ್ರಾಚೀನ ಜನಾಂಗದಲ್ಲಿ ತಪ್ಪಾಗಿ, ಒರಟು ಒರಟಾಗಿ ರೂಪಗೊಂಡ ವಿಚಾರಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಈ ಯುಗದಲ್ಲೂ ಹೆಚ್ಚಿನ ಪ್ರಭಾವವನ್ನು ಬೀರುತ್ತಿರುವುದು ದುರದೃಷ್ಟಕರ.

ಜ್ಯೋತಿಷ್ಯವು ರಾಹುಕಾಲ, ಗುಳಿಕಕಾಲ ಮತ್ತು ಯಮಗಂಡಕಾಲ– ಈ ಮೂರು ಅಂಶಗಳನ್ನು ಅಡಿಪಾಯವಾಗಿ ಹೊಂದಿದೆ. ರಾಹು, ಕೇತುಗಳು ಅಸ್ತಿತ್ವದಲ್ಲಿಯೇ ಇಲ್ಲದಿರುವಾಗ ರಾಹುಕಾಲ, ಗುಳಿಕಕಾಲಗಳಿಗೆ ಸಹಜವಾಗಿಯೇ ಯಾವ ಅರ್ಥವೂ ಇರುವುದಿಲ್ಲ. ಜ್ಯೋತಿಷ್ಯದ ಪ್ರಕಾರ ರಾಹುಕಾಲದಲ್ಲಿ ಪ್ರಯಾಣ, ಮದುವೆ, ಧಾರ್ಮಿಕ ಕಾರ್ಯ ಈ ಬಗೆಯ ಶುಭಕಾರ್ಯಗಳನ್ನು ನಡೆಸಬಾರದು. ಈ ನಂಬಿಕೆ ನಿಜವಾದ ಪಕ್ಷದಲ್ಲಿ ರಾಹುಕಾಲದಲ್ಲಿ ಹೊರಟ ವಿಮಾನಗಳು, ರೈಲುಗಳು, ಬಸ್ಸುಗಳು ಅಪಘಾತಕ್ಕೆ ಒಳಗಾಗಬೇಕು. ನ್ಯೂಯಾರ್ಕ್, ಚಿಕಾಗೋ, ಲಂಡನ್ ಅಂತಹ ವಿಮಾನ ನಿಲ್ದಾಣಗಳಲ್ಲಿ ಯಾವಾಗಲೂ ವಿಮಾನಗಳು ಬಂದು ಹೋಗುತ್ತಿರುತ್ತವೆ. ಅವುಗಳು ರಾಹುಕಾಲವನ್ನು ತಪ್ಪಿಸಲು ಕಾಯುವುದಿಲ್ಲ. ರೈಲು ಹೊರಡಲು ಜ್ಯೋತಿಷ್ಯದ ಅನುಮತಿಯನ್ನು ಯಾರೂ ಕೇಳುವುದಿಲ್ಲ.

ಜಾತಕಗಳು ಕೂಡ ಜ್ಯೋತಿಷ್ಯದ ಅಧಾರಗಳ ಮೇಲೆ ರಚಿತವಾಗಿರುತ್ತವೆ. ವ್ಯಕ್ತಿ ಹುಟ್ಟಿದಾಗ ಕಂಡುಬರುವ ಗ್ರಹಗತಿಗಳ ಆಧಾರದಿಂದ ಜಾತಕಗಳನ್ನು ಬರೆಯಲಾಗುತ್ತದೆ. ವ್ಯಕ್ತಿಯ ಜೀವನದ ಎಲ್ಲ ಪ್ರಮುಖ ಘಟ್ಟಗಳು ಅದರಲ್ಲಿ ಸುರಕ್ಷಿತವಾಗಿ ಅಡಕವಾಗಿರುತ್ತವೆ

ಎಂಬ ನಂಬಿಕೆ ಇದೆ. ಗ್ರಹಗಳ ಸ್ಥಾನವು ವಿದ್ಯಾಭ್ಯಾಸ, ಮದುವೆ, ವಿದೇಶ ಪ್ರಯಾಣ, ಅಪಘಾತ, ಸಾವು ಇವುಗಳನ್ನೆಲ್ಲಾ ನಿರ್ಧರಿಸುತ್ತದೆ ಎಂದು ನಂಬುವುದು ಅರ್ಥರಹಿತ. ವಧು–ವರರಿಗಿಂತ ಗ್ರಹಗಳ ಪಾತ್ರ ಮದುವೆಯ ವ್ಯವಹಾರಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಕೆಲವು ಜಾತಕಗಳು, ತಮ್ಮ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು, ಅವು ಭಾವಿ ಅತ್ತೆ ಅಥವಾ ಮಾವನ ಮೇಲೆ ದುಷ್ಪರಿಣಾಮವನ್ನು ಬೀರುತ್ತವೆ ಎಂದು ತಿಳಿಸುತ್ತವೆ.

ವಧು–ವರರ ಜಾತಕಗಳು ಅತ್ಯಂತ ಸಮರ್ಪಕವಾಗಿ ಕೂಡಿ ಬಂದಿದ್ದನ್ನು ಗಮನಿಸಿಯೇ ಅದ ಎಷ್ಟೋ ಮದುವೆಗಳು ಯಶಸ್ವಿಯಾಗಿ ಇಲ್ಲದೆ ಇರುವುದಕ್ಕೆ ನಿದರ್ಶನಗಳಿವೆ. ಈ ಗುಂಪಿನಲ್ಲಿ ಜಾತಕ ಸೂಚಿಸುವುದಕ್ಕಿಂತ ಮುಂಚೆಯೇ ಕಂಡುಬರುವ ವಿಧವೆ–ವಿಧುರರು ದೊರೆಯುತ್ತಾರೆ. ಸಾಮಾನ್ಯವಾಗಿ ಪ್ರಸಿದ್ಧ ಜ್ಯೋತಿಷಿಗಳು ಬಹಳ ಮಟ್ಟಿನ 'ನಂಬಿಕೆ'ಗೆ ಅರ್ಹರೆಂದು ಭಾವಿಸಲಾಗುತ್ತದೆ. ಆದರೆ ಇವರ ಲೆಕ್ಕಾಚಾರಗಳು ಸುಳ್ಳಾಗುವುದು ಬೇಕಾದಷ್ಟು ಸಾರಿ ಕಂಡುಬರುತ್ತದೆ. ಪ್ರಸಿದ್ಧ ಜ್ಯೋತಿಷಿಗಳು ಒಪ್ಪಿದ ಜಾತಕಗಳ ಪ್ರಕಾರ ನಡೆದ ಮದುವೆಗಳಲ್ಲೂ ಅನಿರೀಕ್ಷಿತ ದುರಂತಗಳು, ಸಂಸಾರವಿರಸ, ತಪ್ಪು ತಿಳುವಳಿಕೆ, ಅಸುಖವು ಕಂಡುಬರುತ್ತದೆ. ಜಗತ್ತಿನಲ್ಲಿಯೇ ಶೇ.೯೦ಕ್ಕೆ ಹೆಚ್ಚು ಜನರ ಮದುವೆಗಳು ಯಾವುದೇ ಜಾತಕವಿಲ್ಲದೆ ನಡೆಯುತ್ತವೆ. ಅವರ ವಿವಾಹಗಳು ಉಳಿದವರಂತೆ ಸುಖವೋ ಅಥವಾ ಅಸುಖವೋ ಆಗಿರುತ್ತವೆ.

ಪ್ರಕೃತಿಯ ವಿಕೋಪದ ಸಂದರ್ಭದಲ್ಲಿ ಕಾಣುವ ಸಾವಿನ ಸನ್ನಿವೇಶವನ್ನು ವಿಶ್ಲೇಷಿಸಿದಾಗ ಕೂಡ ಈಗಾಗಲೇ ದುರ್ಬಲವಾಗಿರುವ ತಪ್ಪುದಾರಿಯಲ್ಲಿ ಹೋಗುತ್ತಿರುವ ಜ್ಯೋತಿಷ್ಯದ ಮೇಲೆ ಮಾರಕ ಪರಿಣಾಮವನ್ನುಂಟುಮಾಡುತ್ತದೆ. ವಿಮಾನ ಅಪಘಾತದಲ್ಲಿ ಸತ್ತ ಎಲ್ಲ ದುರದೃಷ್ಟಶಾಲಿಗಳ ಜಾತಕವು ಒಂದೇ ಸೂಚನೆಯನ್ನು ಕೊಡುತ್ತದೆ ಎಂದು ಅಭಿಪ್ರಾಯಪಡುವುದು ತೀರ ಅಸಂಗತ. ಇದೇ ರೀತಿ ಚಂಡಮಾರುತ ಅಥವಾ ಭೂಕಂಪಕ್ಕೆ ಬಲಿಯಾದ ಎಲ್ಲ ವ್ಯಕ್ತಿಗಳ ಜಾತಕದಲ್ಲೂ ಅವನ ಸಾವಿನ ದಿನ ಒಂದೇ ರೀತಿಯಲ್ಲಿ ಸೂಚಿತವಾಗಿರುತ್ತದೆ ಎಂದು ಹೇಳುವುದು ಅಷ್ಟೆ ಅಸಂಬದ್ಧವಾದುದು.

ಜ್ಯೋತಿಷ್ಯದ ಪ್ರಕಾರ ಚಂಡಮಾರುತಕ್ಕೆ ಅಥವಾ ಭೂಕಂಪಕ್ಕೆ ಬುದ್ಧಿವಂತಿಕೆ ಹಾಗೂ ಸಮಯೋಚಿತ ಬುದ್ಧಿ ಇರಬೇಕು. ಅವು ಯಾವ ಜಾತಕಗಳಲ್ಲಿ ಒಂದೇ ದಿನ ಸಾವಿನ ಭವಿಷ್ಯ ಬರೆದಿದೆಯೊ ಅಂತಹವರನ್ನು ಮಾತ್ರ ಹುಡುಕಿಕೊಂಡು ಮರಣಕ್ಕೆ ಕಾರಣವಾಗಬೇಕು. ಚಂಡಮಾರುತ ಬೀಸಿದ ಪ್ರದೇಶಗಳಲ್ಲಿ ಸುರಕ್ಷಿತವಾದ ಮನೆಗಳಲ್ಲಿ ವಾಸಮಾಡುವ ಶ್ರೀಮಂತರ ಅಥವಾ ಭೂಕಂಪಗಳಿಂದ ರಕ್ಷಿಸಲ್ಪಡುವ ಪ್ರದೇಶಗಳಲ್ಲಿ ಇರುವ ಪ್ರದೇಶದ ಜನರ ಜಾತಕಗಳು ಸಾವಿಗೀಡಾದ ಬಡವರಿಗಿಂತ ಉತ್ತಮ ಅದೃಷ್ಟವನ್ನು ಹೊಂದಿರಬೇಕು. ಈ ಅಂಶ ಕೂಡ ಜ್ಯೋತಿಷ್ಯದ ಟೊಳ್ಳುತನವನ್ನು ವ್ಯಕ್ತಪಡಿಸಬಲ್ಲದು.

ಜ್ಯೋತಿಷಿಗಳ ಭವಿಷ್ಯವಾಣಿಯು ಓದಲು ತಮಾಷೆಯಾಗಿರುತ್ತದೆ. ಅವು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಇದ್ದು, ಒಂದಕ್ಕಿಂತ ಹೆಚ್ಚು ಅರ್ಥವನ್ನು ಕೊಡುತ್ತಿರುತ್ತವೆ. ದಿನಪತ್ರಿಕೆಗಳಲ್ಲಿ ಮತ್ತು ವಾರಪತ್ರಿಕೆಗಳಲ್ಲಿ ಕಂಡುಬರುವ ಭವಿಷ್ಯದ ಸ್ವರೂಪ ಎಲ್ಲ ವಾರಗಳಲ್ಲೂ ಒಂದೇ ರೀತಿಯ ಸ್ಥೂಲವಿವರಣೆಯನ್ನು ಹೊಂದಿರುತ್ತದೆ. ಚುನಾವಣೆಗಳ ಬಗ್ಗೆ ಜ್ಯೋತಿಷಿಗಳು ಹೇಳುವ ಭವಿಷ್ಯವು ಪತ್ರಿಕಾ ಪ್ರತಿನಿಧಿಯು ನಡೆಸುವ ಚುನಾವಣೆಯ ಮೊದಲಿನ ಸಮೀಕ್ಷೆಯಷ್ಟೇ ಊಹೆಗೆ ಒಳಪಟ್ಟಿರುತ್ತದೆ. ಇಬ್ಬರು ಜ್ಯೋತಿಷಿಗಳ ಅಭಿಪ್ರಾಯಗಳಲ್ಲಿ ಸಾಮಾನ್ಯವಾಗಿ ಯಾವ ಹೊಂದಿಕೆಯೂ ಇರುವುದಿಲ್ಲ.

ಇಬ್ಬರು ಜ್ಯೋತಿಷಿಗಳ ಭವಿಷ್ಯದಲ್ಲಿ ಭಿನ್ನಾಭಿಪ್ರಾಯ ಇರುವುದು ಇರಲಿ, ಒಬ್ಬನೇ ಜ್ಯೋತಿಷಿಯ ಭವಿಷ್ಯವು ಕೂಡ ಗೊಂದಲದಿಂದ ಕೂಡಿದ್ದು ಸತ್ಯಕ್ಕೆ ಬಹಳ ದೂರದಲ್ಲಿ ಇರುತ್ತದೆ. ಎಲ್ಲ ರೀತಿಯ ಸಾಧ್ಯತೆಗಳ ಬಗ್ಗೆಯೂ ಹಲವಾರು ಜ್ಯೋತಿಷಿಗಳು ಭವಿಷ್ಯ ನುಡಿದಿದ್ದಾಗ ಯಾರಾದರೂ ಒಬ್ಬರ ಮಾತು ನಿಜವಾಗಿ ನಡೆಯುವ ಸಂಗತಿಗಳೊಂದಿಗೆ ಸರಿಹೊಂದುವುದು ಅಶ್ಚರ್ಯವೇನೂ ಅಲ್ಲ. ಇದು ಜ್ಯೋತಿಷ್ಯದ ಅಧಿಕೃತತೆಯನ್ನು ಸೂಚಿಸುವುದಿಲ್ಲ. ಕೆಟ್ಟು ಹೋದ ಗಡಿಯಾರ ಕೂಡ ದಿನದಲ್ಲಿ ಎರಡು ಸಾರಿ ಸರಿಯಾದ ವೇಳೆ ಸೂಚಿಸುತ್ತದೆ. ಕೋತಿಯೊಂದು ಟೈಪರೈಟರ್‌ನ ಅಚ್ಚಿನ ಮೊಳೆಯನ್ನು ಒತ್ತುವಂತೆ ಮಾಡಿದಾಗ ಅದು ಆಕಸ್ಮಿಕವಾಗಿ, ಯಾವುದೇ ಒಂದು ಪದ ಅಥವಾ ಷೇಕ್ಸ್‌ಪಿಯರ್‌ನ ದ್ವಿಪದಿಯೇ ಆಗಿಬಿಡಬಹುದು. ಹೀಗೆಂದ ಮಾತ್ರಕ್ಕೆ ಕೋತಿಗೆ ಟೈಪಿಂಗ್‌ಕಲೆ ಅಥವಾ ಷೇಕ್ಸ್‌ಪಿಯರ್‌ನ ಕಾವ್ಯಶಕ್ತಿಯ ಪರಿಜ್ಞಾನ ಇದೆಯೆಂದು ಅರ್ಥವಲ್ಲ.

ಹೆಣ್ಣು ಮಕ್ಕಳಿಗೆ ಜನ್ಮವಿತ್ತ ತಾಯಿಯೊಬ್ಬಳಿಗೆ ಜ್ಯೋತಿಷಿಯೊಬ್ಬರು ಈ ಸಾರಿ ಗಂಡುಮಗುವಿನ ಜನನವಾಗುತ್ತದೆ ಎಂಬ ಭವಿಷ್ಯ ನುಡಿದಿದ್ದರು. ಸಂಭ್ರಮದಲ್ಲಿದ್ದ ಆಕೆ ಮತ್ತೆ ಹೆಣ್ಣುಮಗುವಿನ ತಾಯಿಯಾದಳು. ಬೇಜಾರಿನಿಂದ ಅವಳು ಜ್ಯೋತಿಷ್ಯದ ಬಗ್ಗೆ ಕೋಪ ವ್ಯಕ್ತಪಡಿಸಿದಾಗ ಅವನು ಗೋಡೆಯ ಮೇಲೆ 'ಹೆಣ್ಣುಮಗು' ಎಂದು ಬರೆದಿದ್ದನ್ನು ತೋರಿಸಿ, ಪ್ರಸವದ ಸಂದರ್ಭದಲ್ಲಿ ಸಂತೋಷವಾಗಿರಲೆಂದು ಉದ್ದೇಶಪೂರ್ವಕವಾಗಿಯೇ ತಾನು ಹೀಗೆ ಹೇಳಿದ್ದೆನೆಂದು ಉತ್ತರಕೊಟ್ಟನಂತೆ. ಜ್ಯೋತಿಷಿ ಮತ್ತು ಭವಿಷ್ಯ ಕೇಳಿದ ವ್ಯಕ್ತಿಗಳಲ್ಲಿಯೇ ಸಮಸ್ಯೆ ಇದ್ದಾಗ ಇಂತಹ ಜಾಣತನದ ತಂತ್ರಗಳು ಸಾಮಾನ್ಯವಾಗಿ ಉಪಯೋಗವಾಗುತ್ತವೆ.

ಜೀವನದಲ್ಲಿ ಎಲ್ಲವೂ ಪೂರ್ವ ನಿರ್ಧಾರಿತವಾಗುತ್ತದೆಂಬ ವಿಧಿವಾದವನ್ನು ಜ್ಯೋತಿಷ್ಯ ತಿಳಿಸುತ್ತದೆ. ಜನರು ನಿರಾಶೆಯಲ್ಲಿದ್ದಾಗ, ಸಮಸ್ಯೆಗಳಲ್ಲಿ ಇದ್ದಾಗ ಜ್ಯೋತಿಷಿಗಳನ್ನು ಮೊರೆ ಹೋಗುತ್ತಾರೆ. ಗ್ರಹಗಳ ಅನಿಷ್ಟ ಗತಿಯಿಂದ ಉಂಟಾಗುವ ಘೋರ ಪರಿಣಾಮಗಳನ್ನು ಜ್ಯೋತಿಷಿಗಳು ಅವರಿಗೆ ತಿಳಿಸುತ್ತಾರೆ. ಆ ಅಮಂಗಳ ನಿವಾರಣೆಯು ಶಾಂತಿ, ಪೂಜೆಗಳಿಂದ ಪರಿಹಾರವಾಗುತ್ತದೆಂಬ ಸಾಂತ್ವನವನ್ನು ಕೊಡುತ್ತಾರೆ. ಅದಕ್ಕಾಗಿ

ಖರ್ಚಾಗುವ ಹೆಚ್ಚಿನ ಹಣದ ಬಗ್ಗೆ ಹೇಳಲು ಮರೆಯುವುದಿಲ್ಲ. ಅವರ ಮಾರ್ಗದರ್ಶನವನ್ನು ಬಯಸುವ ಯಾರೂ ಅವರ ಅಭಿಪ್ರಾಯಗಳನ್ನು ತಿರಸ್ಕರಿಸುವುದಿಲ್ಲ. ಮುಖ್ಯವಾಗಿ ಜ್ಯೋತಿಷ್ಯ ಮುಗ್ಧ ಜನರನ್ನು ಭಯದಲ್ಲಿರಿಸಿ ಅವರ ಸುಲಿಗೆಗೆ ಕಾರಣವಾಗುತ್ತದೆ. ಜ್ಯೋತಿಷ್ಯ ಒಂದು ವಾಣಿಜ್ಯವಾಗಿದೆ.

ದಿನನಿತ್ಯದ ಘಟನೆಗಳನ್ನು ವಿಶ್ಲೇಷಿಸಿದಾಗ ಜ್ಯೋತಿಷ್ಯದ ಅಧಿಕೃತತೆ ನಿರಾಕರಣೆ ಆಗುವುದನ್ನು ಮೇಲಿನ ಎಲ್ಲಾ ಉದಾಹರಣೆಗಳು ತಿಳಿಸಬಲ್ಲವು. ಅನೇಕ ಜನ ಶಿಕ್ಷಣವನ್ನು ಪಡೆದವರು, ವಿಜ್ಞಾನಿಗಳು, ಜ್ಯೋತಿಷ್ಯವನ್ನು ನಂಬುವುದು ಶೋಚನೀಯ ವಿಚಾರ. ಪ್ರಯೋಗಶಾಲೆಯಲ್ಲಿ ವಿಚಾರವಾದಿಯಾದ ವಿಜ್ಞಾನಿ ಜೀವನದ ಸಮಸ್ಯೆಗಳನ್ನು ಎದುರಿಸುವಾಗ ವಿಚಾರಕ್ಕೆ ಮಂಗಳ ಹಾಡುವುದು ಕಂಡುಬರುತ್ತದೆ. ಜ್ಯೋತಿಷ್ಯವೂ ಉಳಿದ ಮೂಢನಂಬಿಕೆಗಳಂತೆ ಸ್ವತಂತ್ರ ಆಲೋಚನೆ ಮತ್ತು ಆತ್ಮವಿಶ್ವಾಸಕ್ಕೆ ಧಕ್ಕೆಯನ್ನು ತರುತ್ತದೆ. ಈ ರೀತಿಯ ಮೂಢನಂಬಿಕೆಗಳಿಂದ ಉಂಟಾಗುವ ಪರಿಸರ ಮಾಲಿನ್ಯವು ವಾಯು, ಜಲಮಾಲಿನ್ಯಗಳಿಗಿಂತ ಹೆಚ್ಚು ಅಪಾಯಕಾರಿ.

ಖಗೋಳಶಾಸ್ತ್ರವು ವಿಜ್ಞಾನವಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಜ್ಯೋತಿಷ್ಯ ಮಾತ್ರ ತನ್ನ ಪುರಾತನ ನಂಬಿಕೆ ಹಾಗೂ ತಪ್ಪು ಗ್ರಹಿಕೆಗಳನ್ನೇ ಹೊಂದಿದೆ. ಈಗಲೂ ನವಗ್ರಹಗಳು ಜ್ಯೋತಿಷ್ಯದ ದಾರಿಯನ್ನು ತೋರಿಸುತ್ತವೆ. ಇವುಗಳಲ್ಲಿ ನಾಲ್ಕು ಗ್ರಹಗಳೇ ಅಲ್ಲ. ಆದರೆ ಯುರೇನೆಸ್, ನೆಪ್ಚೂನ್, ಪ್ಲೂಟೋ ಅಂತಹ ಹೊಸ ಗ್ರಹಗಳನ್ನು ವಿಜ್ಞಾನಿಗಳು ಕಂಡುಹಿಡಿದರು.

ನಮ್ಮ ದೇಶದಲ್ಲಿ ಸಾಮಾಜಿಕ ಕೆಳಸ್ತರದಿಂದ ಬಂದ ಜನರು ಶಿಕ್ಷಣವನ್ನು ಮೊದಲ ಬಾರಿಗೆ ಪಡೆದುಕೊಂಡಾಗ ಅವರಲ್ಲಿ ರೂಪಗೊಳ್ಳುತ್ತಿರುವ ಮನೋಭಾವ ಕೂಡ ಅಪಾಯಕಾರಿ. ಕೀಳರಿಮೆಯಿಂದ ಬಳಲುತ್ತಿರುವ ಅವರು ತರ್ಕಹೀನವಾದ 'ಮುಂದುವರಿದ' ಶಿಕ್ಷಣ ಪಡೆದ ಜನರ ಮನೋಭಾವವನ್ನು ಅನುಕರಿಸುತ್ತಾರೆ. ಜ್ಯೋತಿಷ್ಯದಂತಹ ಪ್ರಗತಿ ವಿರೋಧಿ ನಂಬಿಕೆಗಳನ್ನು ಹೊಂದುವುದು ಸಾಮಾಜಿಕ ಅಂತಸ್ತಿನ ಗುರುತಾಗಿದೆ. ವ್ಯಕ್ತಿಯ ಒಳಿತಿಗಾಗಿ ಅಥವಾ ಸಮಾಜದ ಒಳಿತಿಗಾಗಿ ಈ ರೀತಿಯ ಮನೋಧರ್ಮ ಹೆಚ್ಚಿನ ಹಾನಿಯನ್ನುಂಟುಮಾಡುವ ಅವಿವೇಕವಾಗಿದೆ. ಈ ರೀತಿ ಹೊಸದಾಗಿ ಪರಿವರ್ತಿತರಾದವರು ಅಲ್ಲಿಯೇ ಶತಮಾನಗಳಿಂದ ಇದ್ದವರಿಗಿಂತ ಹೆಚ್ಚು ಅಭಿಮಾನವನ್ನು ಹೊಂದಿರುತ್ತಾರೆ.

ಬುದ್ಧನು 'ವಿನಯ ಪೀಟಿಕಾ' ಗ್ರಂಥದಲ್ಲಿ 'ಯಾರು ನಕ್ಷತ್ರಗಳ ಲೆಕ್ಕಾಚಾರದಂತಹ ತಂತ್ರಗಳಿಂದ ಜೀವನ ನಡೆಸುತ್ತಾರೋ ಇವರಿಂದ ದೂರವಿರಬೇಕು' ಎಂದು ಎಚ್ಚರಿಸಿರುತ್ತಾನೆ. ನಕ್ಷತ್ರ ವೀಕ್ಷಣೆ ಮತ್ತು ಜ್ಯೋತಿಷ್ಯ, ಶಕುನಗಳ ಅಧಾರದಿಂದ ಶುಭ ಅಥವಾ ಅಶುಭವನ್ನು ತಿಳಿಸುವುದು, ಒಳಿತು, ಕೆಡುಕುಗಳ ಬಗ್ಗೆ ಭವಿಷ್ಯ ನುಡಿಯುವುದು ಇಂತಹವುಗಳನ್ನೆಲ್ಲಾ ತ್ಯಜಿಸಬೇಕು ಎಂಬ ಅಭಿಪ್ರಾಯ ಬುದ್ಧನ ಉಪದೇಶಗಳಲ್ಲಿ ಕಂಡುಬರುತ್ತದೆ.

ಮನುಷ್ಯನ ಭವಿಷ್ಯದ ನಿರ್ಣಯಕ್ಕೆ ಅವನೆ ಕಾರಣ ಎಂದು ದೃಢವಾಗಿ ನಂಬಿದ್ದ ಸ್ವಾಮಿ ವಿವೇಕಾನಂದ ಅವರು ಜ್ಯೋತಿಷ್ಯದ ಬಗ್ಗೆ ಕಟುವಾದ ಅಭಿಪ್ರಾಯ ಪಡುತ್ತಾರೆ. "ನಕ್ಷತ್ರಗಳ ಪ್ರಭಾವ ನನ್ನ ಮೇಲೆ ಆಗುವುದಾದರೆ ಅಗಲಿ, ಅದು ನನ್ನ ಜೀವನದ ಮೇಲೆ ಪ್ರಭಾವ ಬೀರಿದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಜ್ಯೋತಿಷ್ಯ ಮತ್ತಿತರ ಸಂಗತಿಗಳು ಸಾಮಾನ್ಯವಾಗಿ ದುರ್ಬಲ ಮನಸ್ಸಿನ ಗುರುತುಗಳು. ಇಂತಹವುಗಳು ಬದುಕಿನಲ್ಲಿ ಪ್ರಾಮುಖ್ಯ ಪಡೆದುಕೊಂಡ ಕೂಡಲೆ ವೈದ್ಯರನ್ನು ಕಂಡು ಉತ್ತಮ ಆಹಾರ ಮತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳುವುದು ಒಳ್ಳೆಯದು" ಎಂಬುದು ವಿವೇಕಾನಂದರ ಅಭಿಪ್ರಾಯ.

ಅಧ್ಯಾಪಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಯಾವುದೇ ಶಿಕ್ಷಣ ಕ್ರಮದ ಮುಖ್ಯ ಉದ್ದೇಶವಾಗಬೇಕು. ಪ್ರಶ್ನಿಸದೆ, ಪರಿಶೀಲಿಸದೆ ಯಾವುದನ್ನೂ ಒಪ್ಪಿಕೊಳ್ಳಬಾರದು. ಅದು ಭಗವದ್ಗೀತೆ, ಬೈಬಲ್ ಅಥವಾ ಕುರಾನ್ ಆಗಿರಲಿ, ವೈಜ್ಞಾನಿಕವಾದ ಆಲೋಚನೆಗಳಿಗೆ ತೃಪ್ತಿಯನ್ನುಂಟು ಮಾಡಬೇಕು. ಸಮಾಜದ ಸುಧಾರಣೆ ಶಿಕ್ಷಣದ ಒಂದು ಉದ್ದೇಶ. ನಮ್ಮ ಶಿಕ್ಷಣ ಅವಿದ್ಯಾವಂತ ಮೂಢನಂಬಿಕೆಯುಳ್ಳವನನ್ನು ವಿದ್ಯಾವಂತ ಮೂಢ ನಂಬಿಕೆಯುಳ್ಳವನನ್ನಾಗಿ ಪರಿವರ್ತಿಸುತ್ತದೆ. ಇವರಿಬ್ಬರಲ್ಲಿ ಯಾರು ಹೆಚ್ಚು ಅಪಾಯಕಾರಿ ಎಂಬುದು ನಮಗೆಲ್ಲ ಗೊತ್ತು.

ವಿಶ್ವವಿದ್ಯಾಲಯ ಹಾಗೂ ಉನ್ನತ ಶಿಕ್ಷಣ ಕೊಡುತ್ತಿರುವ ಸಂಸ್ಥೆಗಳು ಜ್ಯೋತಿಷ್ಯ, ಹಸ್ತಸಾಮುದ್ರಿಕ, ಪವಾಡದಂತಹ ಪ್ರಗತಿ ವಿರೋಧಿ ಅಂಶಗಳ ವೈಜ್ಞಾನಿಕ ತಪಾಸಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಅಂಥವರಿಗೆ ತೆರೆದ ಮನಸ್ಸು ಇರಬೇಕು. ಇಲ್ಲಿ ತೆರೆದ ಮನಸ್ಸು ಎಂದರೆ ಖಾಲಿ ತಲೆ ಅಲ್ಲ.

### ಲೇಖನ–ಲೇಖಕರು: ಡಾ. ಎಚ್. ನರಸಿಂಹಯ್ಯ (೧೯೨೧–೨೦೦೫)

ಡಾ. ಎಚ್. ನರಸಿಂಹಯ್ಯರವರು 'ಎಚ್ಚೆನ್'ಎಂದೇ ಚಿರಪರಿಚಿತರು. ಗಾಂಧಿವಾದಿ, ವಿಚಾರವಾದಿ, ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದ ಇವರು ಮೂಲತಃ ವಿಜ್ಞಾನ ಕ್ಷೇತ್ರದವರು. ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಹೊಸೂರಿನ ಕಡುಬಡತನದ



ಕುಟುಂಬದಲ್ಲಿ ಜನಿಸಿದವರು.ನ್ಯಾಷನಲ್ ವಿದ್ಯಾಸಂಸ್ಥೆಯನ್ನು ಕಟ್ಟಿ ಬೆಳೆಸಿದ ಇವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಅಧ್ಯಾಪನ ಮತ್ತು ಆಡಳಿತಗಳೆರಡರಲ್ಲೂ ಹೆಸರುಗಳಿಸಿದ್ದರು. ವೈಜ್ಞಾನಿಕ ಮತ್ತು ವೈಚಾರಿಕ ಮನೋಧರ್ಮವನ್ನು ಎತ್ತಿ ಹಿಡಿಯುತ್ತ ಬಂದವರು. "ತೆರೆದಮನ" ಇವರ ಪ್ರಬಂಧ ಸಂಕಲನ. 'ಹೋರಾಟದ ಹಾದಿ' ಇವರ ಆತ್ಮಕತೆಯಾಗಿದೆ.

ಜ್ಯೋತಿಷ್ಯ ವಿಜ್ಞಾನವಾಗಿ ಉಳಿಯಬೇಕಾದರೆ ಆಧಾರ, ಪ್ರಯೋಗ ಮತ್ತು ತರ್ಕಗಳ ಮೂಸೆಯಲ್ಲಿ ಗೆದ್ದು ಬರಬೇಕಾಗುತ್ತದೆ. ಹಾಗಿಲ್ಲದಿದ್ದರೆ ಅದನ್ನು ವಿಜ್ಞಾನವೆಂದು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಭವಿಷ್ಯದ ಹಿಂದೆ ಬಿದ್ದ ಜನರು ಸುಳ್ಳು ಮಾಹಿತಿಗಳಿಂದ ಮೋಸ ಹೋಗುವುದು ಸರ್ವೇಸಾಮಾನ್ಯವಾಗಿದೆ. ಪ್ರಶ್ನಿಸದೆ ಒಪ್ಪಿಕೊಳ್ಳುವುದು ಸಮಂಜಸವಲ್ಲ. ವೈಚಾರಿಕ ಪ್ರಜ್ಞೆ ಬೆಳೆಸಿಕೊಳ್ಳುವುದು ಬಹು ಮುಖ್ಯ. ಜ್ಯೋತಿಷ್ಯದ ಹಿಂದೆ ಹೋಗಿ ಬದುಕನ್ನು ಹಾಳು ಮಾಡಿಕೊಳ್ಳದಿರುವುದು ಬುದ್ಧಿವಂತಿಕೆಯ ಲಕ್ಷಣ.

**ಪದಕೋಶ:**

ಜ್ಯೋತಿಷ್ಯ–ಗ್ರಹನಕ್ಷತ್ರಾದಿಗಳ ಚಲನೆ; ಸ್ಥಾನ ಇವುಗಳಿಂದ ಉಂಟಾಗುವ ಫಲ ಇತ್ಯಾದಿಗಳನ್ನು ತಿಳಿಸುವ ಶಾಸ್ತ್ರ; ಪ್ರಭಾವ–ಪರಿಣಾಮ; ದಿಗಿಲು–ಭಯ; ಖಗೋಳಶಾಸ್ತ್ರ–ಗ್ರಹನಕ್ಷತ್ರಗಳನ್ನೊಳಗೊಂಡ ಆಕಾಶಮಂಡಲ; ಅಸಂಗತ–ಹೊಂದಾಣಿಕೆಯಾಗದ; ಅಜಗಜಾಂತರ–ಆನೆಗೂ ಆಡಿಗೂ ಇರುವ ಅಂತರ; ದ್ವಿಪದಿ–ಎರಡು ಸಾಲಿನ ಪದ್ಯ; ತಪಾಸಣೆ–ವಿಚಾರಣೆ; ಅಸ್ತಿತ್ವ–ಇರುವಿಕೆ.

## I. ಸಂದರ್ಭ ಸೂಚಿಸಿ ವಿವರಿಸಿ:

೧. ರೈಲು ಹೊರಡಲು ಜ್ಯೋತಿಷ್ಯದ ಅನುಮತಿಯನ್ನು ಯಾರೂ ಕೇಳುವುದಿಲ್ಲ.
೨. ಶೇ.೯೦ಕ್ಕೆ ಹೆಚ್ಚು ಜನರ ಮದುವೆಗಳು ಯಾವುದೇ ಜಾತಕವಿಲ್ಲದೆ ನಡೆಯುತ್ತವೆ.
೩. ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ.
೪. ಜ್ಯೋತಿಷ್ಯ ಒಂದು ವಾಣಿಜ್ಯವಾಗಿದೆ.
೫. ಸಮಾಜದ ಸುಧಾರಣೆ ಶಿಕ್ಷಣದ ಒಂದು ಉದ್ದೇಶ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧ ಜ್ಯೋತಿಷ್ಯದ ಉಗಮವು ಎಲ್ಲಿ ಕಂಡು ಬರುತ್ತದೆ?
೨. ಯಾವುದು ಹಾಸ್ಯಾಸ್ಪದ ಸಂಗತಿ?
೩. ಜಾತಕಗಳನ್ನು ಹೇಗೆ ಬರೆಯಲಾಗುತ್ತದೆ?
೪. ಜ್ಯೋತಿಷಿಗಳ ಭವಿಷ್ಯವಾಣಿ ಓದಲು ಹೇಗಿರುತ್ತದೆ?
೫. ಜನ ನಿರಾಶೆ, ಸಮಸ್ಯೆಗಳಲ್ಲಿದ್ದಾಗ ಯಾವುದರ ಮೊರೆ ಹೋಗುತ್ತಾರೆ?
೬. ಜ್ಯೋತಿಷ್ಯ ಮುಗ್ಧ ಜನರನ್ನು ಹೇಗೆ ಶೋಷಿಸುತ್ತದೆ?
೭. ಮೂಢನಂಬಿಕೆಗಳಿಂದ ಉಂಟಾಗುವ ಅಪಾಯ ಎಂಥದ್ದು?
೮. ವಾಯು, ಜಲ ಮಾಲಿನ್ಯಕ್ಕಿಂತ ಯಾವುದು ಹೆಚ್ಚು ಅಪಾಯಕಾರಿಯಾಗಿರುತ್ತದೆ?

**III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪಗೊಳ್ಳುತ್ತವೆ?

೨. ಜ್ಯೋತಿಷ್ಯದ ಪ್ರಕಾರ ಗ್ರಹಗಳೆಷ್ಟು? ಅವುಗಳು ಯಾವುವು?

೩. ರಾಹುಕಾಲ, ಗುಳಿಕಕಾಲ, ಯಮಗಂಡಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?

೪. ಬುದ್ಧನು "ವಿನಯ ಪೀಟಿಕಾ" ಗ್ರಂಥದಲ್ಲಿ ಯಾರಿಂದ ದೂರವಿರಬೇಕೆಂದು ಎಚ್ಚರಿಸಿದ್ದಾನೆ?

**IV. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

೧. ಪ್ರಕೃತಿಯ ಘಟನೆಗಳು ಆದಿ ಮಾನವನ ಮನಸ್ಸಿನ ಮೇಲೆ ಉಂಟು ಮಾಡಿದ ಪರಿಣಾಮಗಳೇನು?

೨. ಜ್ಯೋತಿಷ್ಯ ಏಕೆ ವಿಜ್ಞಾನವಾಗಲಾರದು? ವಿವರಿಸಿ.

೩. ಸ್ವಾಮಿ ವಿವೇಕಾನಂದರು ಜ್ಯೋತಿಷ್ಯದ ಬಗ್ಗೆ ತಾಳಿರುವ ಅಭಿಪ್ರಾಯವೇನು?

೪. ಶಿಕ್ಷಣದ ಮುಖ್ಯ ಉದ್ದೇಶ ಏನಾಗಬೇಕು?

೫. ಜ್ಯೋತಿಷ್ಯವು ಅರ್ಥಪೂರ್ಣವೋ? ಅರ್ಥರಹಿತವೋ? ವಿಶ್ಲೇಷಿಸಿ.

**ಆಕರ:** ತೆರೆದ ಮನ – ಡಾ. ಎಚ್. ನರಸಿಂಹಯ್ಯ

ಹೆಚ್ಚಿನ ಓದು:

ನಮ್ಮ ಅಳತೆಯನ್ನು ಮೀರಲಾದ ದೇವರು – ಡಾ. ಕೆ. ಶಿವರಾಮ ಕಾರಂತ.

ವೈಚಾರಿಕ ಪ್ರಜ್ಞೆಗೆ ಅಡೆತಡೆಗಳು : ಡಾ. ಹೆಚ್. ನರಸಿಂಹಯ್ಯ

**ಪವಾಡಗಳು ಜನ ಸಾಮಾನ್ಯರನ್ನು ಆಕರ್ಷಿಸುವ ಸುಲಭವಾದ ಮಾರ್ಗ. ಅವು ಶೋಷಣೆಯ ಮಾಧ್ಯಮಗಳಾಗುತ್ತಿವೆ. ಧರ್ಮದ ಹೆಸರಿನಲ್ಲಿ ದುರ್ವ್ಯವಹಾರಗಳಿಗೆ ದಾರಿ ಮಾಡಿಕೊಡುತ್ತವೆ.**

**–ಡಾ. ಎಚ್. ತಿಪ್ಪೇರುದ್ರಸ್ವಾಮಿ**

❖ ❖ ❖ ❖ ❖

# ೮. ಶಾಸ್ತ್ರಿಮಾಸ್ತರ ಮತ್ತವರ ಮಕ್ಕಳು

**–ಡಾ. ಚೆನ್ನಣ್ಣ ವಾಲೀಕಾರ**

ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ತೀವ್ರವಾಗಿ ಹಚ್ಚಿ ಕೊಳ್ಳದೆ ಆ ಕ್ಷಣಗಳನ್ನು ಇತರರ ಕಷ್ಟ ನಿವಾರಿಸುವ ಕ್ಷಣಗಳಾಗಿ ಮಾರ್ಪಡಿಸಲು ಮನಸ್ಸು ಮಾಡುವುದು ಎಲ್ಲರಿಗೂ ಸಾಧ್ಯ. ಆದರೆ ವ್ಯಕ್ತಿಗಳು ಈ ನಿಟ್ಟಿನಲ್ಲಿ ಪ್ರಯತ್ನಿಸದೆ ದುರ್ಘಟನೆಗಳನ್ನು ಮತ್ತೆ ಮತ್ತೆ ನೆನಪಿಗೆ ತಂದುಕೊಂಡು ಜೀವನವೆಲ್ಲಾ ಕೊರಗುತ್ತಾರೆ. ತನ್ನ ನೋವನ್ನು ಬೇರೆಯವರ ನಲಿವಿನ ಮೂಲಕ ಮರೆತಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ.

ಅವತ್ತು ವಿಶ್ವವಿದ್ಯಾಲಯದ ವಾರ್ಷಿಕೋತ್ಸವ ಕಾರ್ಯಕ್ರಮವಿದ್ದುದರಿಂದ ಮನೆಗೆ ಬರಲು ರಾತ್ರಿಯಾಗಿತ್ತು. ಬರುವುದರೊಳಗಾಗಿ ಊರಿಂದ ಕೂಡಲೇ ಬರಲು ಟೆಲಿಗ್ರಾಂ ಹಾದಿ ಕಾಯುತ್ತಿತ್ತು, ಅಣ್ಣನದು. ಯಾಕಾಗಿರಬೇಕೆಂದು ವಾಚ್ ನೋಡಿಕೊಂಡೆ. ಸಮಯ ಒಂಬತ್ತಾಗಿತ್ತು. ಸಂಜೆಯ ಉದ್ಯಾನ ಗಾಡಿ ಹೋಗಿತ್ತು. ರಾತ್ರಿ ಹನ್ನೊಂದಕ್ಕೆ ಪ್ಯಾಸಂಜರ್ ಇದೆ. ಹಿಡಿದು ಶಹಾಬಾದಿಗೆ ಹೋದರಾಯಿತೆಂದು ಮುಖ ತೊಳೆದು ಊಟಕ್ಕೆ ಕುಳಿತೆ. ಮನೆಯ ನಾಳಿನ ಕೆಲಸಗಳ ಕುರಿತು ಮನೆಯೊಡತಿಗೆ ತಿಳಿಸಿ ಬಟ್ಟೆ ಹಾಕಿಕೊಂಡು ಬಸ್ಸು ನಿಲುಗಡೆ ಸ್ಥಾನಕ್ಕೆ ಬಂದು ನಿಂತೆ. ರೇಲ್ವೆ ಸ್ಟೇಷನ್ನಿಗೆ ಹೋಗುವ ಬಸ್ಸು ಬಂತು. ಸ್ಟೇಷನ್ನಿಗೆ ಬಂದಾಗ ಹತ್ತಾಗಿತ್ತು.

ಗಾಡಿ ಬರಲು ಇನ್ನೊಂದು ತಾಸು. ಅಲ್ಲಿತನಕ ಏನು ಮಾಡುವುದೆಂದು ಹೋಗಿ ಹೊರಗಡೆಯ ಕಲ್ಲಿನ ಮೇಲೆ ಕುಳಿತೆ. ಆಗ ಸೇಂಗಾಕಾಯಿ ಮಾರುತ್ತ ಒಬ್ಬ ಬಂದನು. ಅವನು ನನ್ನ ಹತ್ತಿರ ಬಂದು ಅಲ್ಲಿ ಸುತ್ತಮುತ್ತ ಕುಳಿತವರಿಗೆ ಸೇಂಗಾ ಮಾರುತ್ತಿರುವಾಗ ನಾನು ಮೂವತ್ತು ವರುಷಗಳ ಹಿಂದೆ ಶಹಾಬಾದಿನಲ್ಲಿ ಇವನ ಜೊತೆ ಓದಿದ್ದರ ನೆನಪಾಯಿತು. ಕೂಡಲೇ ಗುರುತು ಹಿಡಿದು ಮಾತಾಡಿಸಿದೆ. ಅವನೂ ಗುರುತು ಹಿಡಿದನು. ಸೇಂಗಾ ಮಾರುವುದನ್ನು ಬಿಟ್ಟು ನನ್ನ ಪಕ್ಕದಲ್ಲಿ ಕುಳಿತನು. ಬಾಲ್ಯದ ಗೆಳೆಯರಿಬ್ಬರೂ ಗಾಡಿ ಬರುವತನಕ ಮಾತಾಡಿದೆವು. ಎಲ್ಲೂ ಕೆಲಸ ಸಿಗದಾಗ ಈ ಸೇಂಗಾ ಮಾರುವ ದಂಧಾ ಮಾಡುತ್ತಿರುವುದಾಗಿ, ದಿನಕ್ಕೆ ಐವತ್ತು ಅರವತ್ತು ರೂಪಾಯಿ ಬರುವುದಾಗಿ ತಿಳಿಸಿದನು. ತನ್ನ ಹೆಂಡಿರು ಮಕ್ಕಳ ಬಂಧುಬಳಗದವರ ವಿವರ ನೀಡುತ್ತಿದ್ದಂತೆ ಗಾಡಿ ಬಂತು. ನಾನು ಗಡಬಡಿಸಿ ಎದ್ದು ಗಾಡಿ ಹತ್ತಿದೆ. ಅವನು ಗಾಡಿಯೊಳಗೆ ಸೇಂಗಾ ಮಾರುತ್ತ ನಡೆದನು.

ಒಂದೈದು ನಿಮಿಷ ನಿಂತು ಗಾಡಿ ಹೊರಟಿತು. ಹಿರೆನಂದೂರ, ಮರತೂರಗಳಿಗೆ ಎರಡೆರಡು ನಿಮಿಷ ನಿಂತು ಹನ್ನೆರಡು ಮಧ್ಯ ರಾತ್ರಿಯ ಹೊತ್ತಿಗೆ ಗಾಡಿ ಶಹಾಬಾದಿಗೆ

ಬಂದು ನಿಲ್ಲುತ್ತಿದ್ದಂತೆ ಆಕಾಶಕ್ಕೆ ತೂತು ಬಿದ್ದಂತೆ ಮಳೆ ಧೋಧೋ ಎಂದು ಸುರಿದು ಭೂಮಿಗೆ ಭೂಮಿ ನೀರು ನೀರು ಮಾಡಿತು. ಮಳೆಯ ಪೆಟ್ಟಿಗೆ ಹೊರಗಡೆ ನಿಂತಿದ್ದ, ಕುಳಿತಿದ್ದ, ಮಲಗಿದ್ದ ಜನವೆಲ್ಲಾ ಎದ್ದು ಬಂದು ಸ್ಟೇಷನ್ ತುಂಬ ಇರುವೆಗೂ ಸ್ಥಳವಿಲ್ಲದಷ್ಟು ಸೇರಿಕೊಂಡಿತು.

ಮಳೆ ನಿಂತಿತು, ಜನ ಮಲಕೊಂಡಿತು. ವಾಚ್ ನೋಡಿಕೊಂಡೆ. ಒಂದಾಗುತ್ತಿತ್ತು. ಬೆಳಗಾಗಲು ಇನ್ನು ಐದು ತಾಸು. ಅಲ್ಲಿ ತನಕ ಏನು ಮಾಡುವುದು? ಹೇಗೆ ಹೊತ್ತು ಕಳೆಯುವುದು ಎಂದಾಗ ನಾನೋದಿದ ಹೈಸ್ಕೂಲು ನೆನಪಾಯಿತು. ಐದು ನಿಮಿಷದಲ್ಲೆ ಹೋಗುತ್ತೇನೆ. ವರಾಂಡದಲ್ಲಿ ಸಾಕಷ್ಟು ಜಾಗ ಇರುವುದು. ಮಲಗಿದರಾಯಿತು. ಒಬ್ಬ ಚಪರಾಸಿ ಇರುವನು. ನಾನು ಹಳೆಯ ವಿದ್ಯಾರ್ಥಿ ಎಂದರೆ ಬಿಡುವನು ಎಂದು ನಿರ್ಧರಿಸಿ ಆ ಕಡೆಗೆ ಹೊರಟೆ.

ಬರುವುದರೊಳಗಾಗಿ ಶಾಲೆಯ ವರಾಂಡದಲ್ಲಿ ಚಪರಾಸಿ ಒಬ್ಬನೆ ಇದ್ದನು. ನಾನು ಹಳೆಯ ವಿದ್ಯಾರ್ಥಿ ಎಂದಾಗ ಮಲಗಲು ಅನುಕೂಲ ಮಾಡಿದನು. ನನ್ನ ಬ್ಯಾಗಿನಲ್ಲಿದ್ದ ಲುಂಗಿ ಹಾಸಿ ಅದೇ ಉಟ್ಟಬಟ್ಟೆಯ ಮೇಲೆ ಮಲಗಿದೆ. ಅರ್ಧತಾಸಾಯ್ತು, ತಾಸಾಯ್ತು ನಿದ್ದೆಯೇ ಹತ್ತಲಿಲ್ಲ. ತಣ್ಣನೆಯ ಗಾಳಿ, ಹೊಚ್ಚಿಕೊಳ್ಳಲು ಏನೂ ಇರಲಿಲ್ಲ. ಕಣ್ಣಿಗೆ ನಿದ್ದೆ ಬರಲಿಲ್ಲ. ಎದ್ದು ಕುಳಿತು, ಅಂಗಳದ ಕಡೆಗೆ ನೋಡಿದೆ. ಹಿಂದೆ ಇಲ್ಲಿ ಆಟ ಆಡಿದ, ಹುಲ್ಲು ಕಿತ್ತಿದ, ಜೆಂಡಾ ಏರಿಸಿದ, ಕ್ಲಾಸ್‌ಗಳಿಲ್ಲದಾಗ ಹೊರಗೆ ಬಿಸಿಲು ಕಾಸಲು ಕುಳಿತ ಒಂದೊಂದು ಸ್ಥಳಗಳನ್ನು ನೋಡುತ್ತಿದ್ದಂತೆ ನಾನು ಸಮ್ಮೋಹನಕ್ಕೊಳಗಾದೆ.

ಕಾರ್ಯಕ್ರಮಗಳು ನಡೆಸುತ್ತಿದ್ದ ವೇದಿಕೆ ಕಡೆಗೆ ಮನಸ್ಸು ಹೋಯಿತು. ನಾನು ಅರಳಿದ್ದು ಅಲ್ಲೇ ಅನಿಸಿತು. ನಾನು ಏಳನೆಯ ವರ್ಗದಲ್ಲಿದ್ದಾಗ ಏಕಪಾತ್ರಾಭಿನಯ ಮಾಡುವೆನೆಂದಾಗ ಕಮಿಟಿಯವರು ನಿರಾಕರಿಸಿದ್ದಕ್ಕೆ ನೋವುಗೊಂಡುದ್ದರ ನೆನಪಾಯಿತು. ನಾನು ಎಂಟನೆಯ ವರ್ಗದಲ್ಲಿದ್ದಾಗ ಭಾಷಣ, ಲೇಖನ, ಭಾವಗೀತೆ ಸ್ಪರ್ಧೆಗಳಲ್ಲಿ ಬಹುಮಾನ ಪಡೆದದ್ದರ ನೆನಪಾಯಿತು. ಆಗ ನಮ್ಮ ಶಾಲೆಗೆ ಬಂದ ಹಾಸ್ಯ ಋಷಿ ಬೀಚಿ, ಪ್ರಕೃತಿ ಕವಿ ಕಾವ್ಯಾನಂದ, ಜಾನಪದ ಗಾರುಡಿಗ ಬೇಂದ್ರೆ ಮುಂತಾದವರು ಕಾವ್ಯ ಮತ್ತು ಜೀವನ ತರಂಗಗಳನ್ನೆಬ್ಬಿಸಿದುದು ನೆನಪಾಯಿತು. ಸೂಡಿ, ಲಾಲ, ಶೆಟ್ಟಿ, ದೇಶಪಾಂಡೆ ಗುರುಗಳು ನನ್ನ ಓರೆ ಕೋರೆಗಳನ್ನು ತಿದ್ದಿದ್ದರು. ನನ್ನ ಶಹಾಬಾದ ಶಾಲೆಯ ಮಾಸ್ತರರ ನೆನೆಪಾಗುತ್ತಲೇ ನನ್ನಲ್ಲಿ ನನ್ನೂರಿನಲ್ಲಿ ಬೀಜಾಕ್ಷರ ಬಿತ್ತಿ ತಮ್ಮ ಜೊತೆಗೆ ಶಹಾಬಾದಿಗೆ ಕರೆದುಕೊಂಡು ಬಂದ ಶಾಸ್ತ್ರಿ ಮಾಸ್ತರರ ನೆನಪು ಬಂದಾಗ ಕೆಲ ಕ್ಷಣ ಮೂಕನಾಗಿ ಹೋದೆ. ಎಲ್ಲೋ ಬಿದ್ದ ಕಲ್ಲನ್ನು ಕಡೆದು ದೇಗುಲದೊಳಗಡೆ ಇಟ್ಟ ಕೀರ್ತಿ ಶಾಸ್ತ್ರಿಮಾಸ್ತರರಿಗೆ ಸಲ್ಲುವುದೆಂಬ ವಿಚಾರ ಬಂದಾಗ ಹಿಂದಿನದೆಲ್ಲಾ ನೆನಪುಗಳು ಮಳೆಯಂತೆ ಸುರಿಯತೊಡಗಿದವು.

ನನ್ನ ಬಾಲ್ಯ ಆರಂಭವಾದದ್ದೆ ಅಕ್ಕನೂರಿನಲ್ಲಿ. ಆ ಕೇರಿಯಲ್ಲಿ ಎಲ್ಲ ಹುಡುಗರೂ ದನ ಕಾಯುವವರಾದುದರಿಂದ ನಾನೂ ದನ ಕಾಯಲು ಹೊರಟೆ. ಅಕ್ಕ, ಸಾಲಿ ಕಲಿಸಬೇಕೆಂದರೂ ಆ ಕೇರಿಯ ಹುಡುಗರ ಪ್ರೀತಿಯಲ್ಲಿ ಸಾಲಿಗೆ ಚಕ್ಕರ್ ಕೊಟ್ಟು ಅವರ ಜೊತೆ ದನ ಕಾಯುವವನಾದೆ. ಪ್ರತಿನಿತ್ಯ ಟೊಂಕಕ್ಕೆ ರೊಟ್ಟಿ ಬುತ್ತಿ ಕಟ್ಟಿಕೊಂಡು ದನ ಕಾಯಲು ಹೋಗುವುದೆಂದರೆ ಎಂಥ ಸಂತೋಷ. ಹಳ್ಳ, ಹೊಳೆ, ಕೆರೆ, ಬಾವಿ ಗಿಡಮರ ಬಳ್ಳಿ ಬೆಟ್ಟ ಗುಡ್ಡ, ಹಣ್ಣುಹಂಪಲಗಳ ಮಧ್ಯ ಬೋರ್ಸುಳು ಹಿಡಿಯುತ್ತ, ಪೀಪಿ ಊದುತ್ತ ಕೃಷ್ಣನಂತೆ ಹುಡುಗಿಯರ ಜೊತೆ ಕಣ್ಣುಮುಚ್ಚಾಲೆ, ಬಳಿ ಚಕಾರಾಟಾ, ಕೋಲಂಬಗುಳ್ಳಿ, ಲೋಡ್‌ಲೋಡ್ ತಿಮ್ಮಯ್ಯ ಆಟ ಆಡುವುದೆಂದರೆ ಎಲ್ಲಿಲ್ಲದ ಹಿಗ್ಗು. ದನಗಳನ್ನು ಮೇಯಿಸಲು ಎಲ್ಲೋ ಬಿಟ್ಟು ಎಲ್ಲೋ ಆಡುತ್ತ. ಸಂಜೆ ಆದಾಗ ಹಾಡುತ್ತ ಕುಣಿಯುತ್ತ ಮನೆಗೆ ದನವಾಗಿ, ಪಕ್ಷಿಯಾಗಿ ಬರುವುದೊಂದು ನಮ್ಮ ಪಾಲಿಗೆ ನಿತ್ಯ ಹಬ್ಬವಾಗಿರುತ್ತಿತ್ತು. ಇಂಥ ಮಹಾಸುಖ ಬಿಡಬಾರದು. ಜೀವನದುದ್ದಕ್ಕೂ ದನ ಕಾಯುತ್ತ ಇರಬೇಕೆಂದು ನಿರ್ಧರಿಸಿದೆ.

ನಮ್ಮೂರಲ್ಲಿ ನಮ್ಮಾವನಿಗೂ ಹೊಸದಾಗಿ ಆರಂಭವಾದ ಸರಕಾರಿ ಸಾಲೆಗೆ ಬಂದ ಶಾಸ್ತ್ರಿಮಾಸ್ತರರಿಗೂ ಗೆಳೆತನವಾಯಿತು. ಈ ಗೆಳೆತನದ ಗುರುತಿಗಾಗಿ ಅಕ್ಕನೂರಿನಲ್ಲಿ ದನಕಾಯುತ್ತಿದ್ದ ನನಗೆ ಸಾಲಿ ಕಲಿಸುವ ವಿಚಾರ ಶಾಸ್ತ್ರಿ ಮಾಸ್ತರರು ವ್ಯಕ್ತಪಡಿಸಿದರು. ಇದರಿಂದ ನನ್ನ ತಂದೆ ಬಂದು ನನ್ನನ್ನು ಹೊಡೆದು ಬಡೆದು ನನ್ನ ಪ್ರೀತಿಯ ದನಗಳನ್ನು, ಗೆಳೆಯರನ್ನು, ನಾನು ಪ್ರೀತಿಸಿದ ಹೊಳೆ ಹಳ್ಳ, ಗಿಡಮರ, ಗುಡ್ಡಬೆಟ್ಟ, ಹಣ್ಣುಹಂಪಲು, ಬೋರ್ಸುಳಗಳಿಂದ ಅಗಲಿಸಿ ಎಳೆಕೊಂಡು ಊರಿಗೆ ತಂದನು. ಇಲ್ಲಿ ತನಕ ಬಯಲು ಸಾಲೆಯಲ್ಲಿದ್ದ ನನಗೆ ನಾಲ್ಕು ಗೋಡೆಗಳ ಕೋಟೆ ಬಂಧನದಲ್ಲಿ ಬಂಧಿಸಿದರು. ಯಾರೆಷ್ಟೇ ಹೇಳಿದರೂ ಮೂರ್ನಾಲ್ಕು ತಿಂಗಳವರೆಗೆ ನಾನು ಪಾಟಿಯ ಮೇಲೆ ಒಂದಕ್ಷರ ಬರೆಯದೆ ಸದಾ ನನ್ನ ದನದ ಬಳಗವನ್ನು ನೆನೆಯುತ್ತ ಕುಳಿತೆ.

ದಿನಗಳು ಹೋದಂತೆ ಹೋದಂತೆ ಅವರ ನೆನಪು ಕಡಿಮೆಯಾಗುತ್ತ ಹೋಯಿತು. ಶಾಸ್ತ್ರಿ ಮಾಸ್ತರರ ಹೆಂಡತಿ ಅಂಬವ್ವ ನನಗೆ ಸಂಜೆ–ಮುಂಜಾನೆ ಸಿಹಿ ಸಿಹಿ ತಿಂಡಿತಿನಿಸುಗಳನ್ನು ಮಾಡಿದ ಅಡುಗೆಯನ್ನು ತಿನಿಸುತ್ತ, ಉಣ್ಣಿಸುತ್ತ ನಡೆದಳು. ಶಹಾಬಾದಿಗೆ ಸಂತಿ ಮಾಡಲು ಹೋಗುವಾಗ ಕರೆದುಕೊಂಡು ಹೋಗುತ್ತಿದ್ದಳು. ಹೋಟೆಲದಲ್ಲಿ ಹೊಟ್ಟೆ ತುಂಬ ತಿನ್ನಿಸುತ್ತಿದ್ದಳು. ಶಾಸ್ತ್ರಿಮಾಸ್ತರರು ತಾವು ನೋಡಿದ ಸಿನೇಮಾ ತೋರಿಸುತ್ತಿದ್ದರು. ನನಗೆ ಅಕ್ಷರ ಕಲಿಯೆಂದು ಒತ್ತಾಯ ಮಾಡುತ್ತಿರಲ್ಲಿಲ್ಲ. ನನ್ನ ಮನಸ್ಸು ತಿರುಗಲು ಸುಮ್ಮನೆ ಬಿಟ್ಟಿದ್ದರು. ಎಷ್ಟು ದಿವಸ ಸುಮ್ಮನೆ ಕೂಡುವುದು, ಅಕ್ಕನೂರಿನ ನೆನಪುಗಳೆಲ್ಲ ಬಯಲಲ್ಲಿ ಬಯಲಾಗಿ ಹೋದ ಮೇಲೆ ಶಾಸ್ತ್ರಿ ಮಾಸ್ತರ ಮತ್ತು ಅಂಬವ್ವನವರ ಪ್ರೀತಿ ಕಡಲಲ್ಲಿ ಮಿಂದಮೇಲೆ ಅಕ್ಷರಮಳೆ ಧಾರಾಕಾರವಾಗಿ

ಸುರಿಯತೊಡಗಿತು. ಕೇವಲ ಮೂರು ತಿಂಗಳೊಳಗೆ ಅಕ್ಷರಗಳಭ್ಯಾಸ ಮುಗಿಸಿ ಅದೇ ವರುಷ ಒಂದನೆಯ ಪರೀಕ್ಷೆ ಪಾಸಾದೆ. ಹಿಂದೆ ದನ ಕಾಯಲು ಹೋಗುವಾಗ ಹತ್ತಿದ್ದ ಅಡವಿರುಚಿ ಈಗ ಸಾಲಿ ಕಡೆ ತಿರುಗಿತು.

ಅಲ್ಲಿಂದ ಪ್ರತಿ ವರುಷ ಪಾಸಾಗುತ್ತ ಪಾಸಾಗುತ್ತ ನಡೆದೆ. ಅಲ್ಲಿತನಕ ಮಾಸ್ತರರಿಗೆ ಮಕ್ಕಳಾಗಿರಲಿಲ್ಲ. ನನ್ನನ್ನು ಅವರು ತಮ್ಮ ಮನೆಯ ಮಗನೆಂದು ತಿಳಿದು ಮನೆಯಲ್ಲಿ ಇಟ್ಟುಕೊಂಡಿದ್ದರು. ನಾನು ನಾಲ್ಕನೆಯ ವರ್ಗ ಪಾಸಾಗುವ ಹೊತ್ತಿಗೆ ಅವಳಿಜವಳಿ ಗಂಡು ಮಕ್ಕಳು ಹುಟ್ಟಿದವು, ಅವರ ಖುಷಿ ಕಡಲಾಗಿ ಹೋಯಿತು.ಒಂದು ಬೇಕು ಎರಡು ಸಾಕು ಎನ್ನುವ ಕುಟುಂಬ ಯೋಜನೆಯ ಭರತ ವಾಕ್ಯದಂತೆ ಶಾಸ್ತ್ರಿಮಾಸ್ತರರು ಶಸ್ತ್ರಚಿಕಿತ್ಸೆ ಮಾಡಿಸಿದರು. ಅದೇ ವರುಷ ಅವರಿಗೆ ಶಹಾಬಾದಿಗೆ ವರ್ಗವಾಯಿತು. ನನ್ನದೂ ನಾಲ್ಕನೆಯ ವರ್ಗ ಮುಗಿದಿತ್ತು. ಅವರ ಜೊತೆ ಮುಂದಿನೋದಿಗಾಗಿ ಹೊರಟೆ.

ತಮಗೆ ಎರಡು ಗಂಡು ಮಕ್ಕಳಾದರೂ ನನ್ನನ್ನು ಬಿಡಲಿಲ್ಲ. ಶಹಾಬಾದಿನಲ್ಲಿ ತಮ್ಮ ಮನೆಯಲ್ಲಿಟ್ಟುಕೊಂಡರು. ನಮಗೆ ಮೂರು ಮಕ್ಕಳು ಎಂದು ಅವರು ಮನೆಗೆ ಬಂದವರಿಗೆ ಹೇಳುತ್ತಿದ್ದರು. ಹಳ್ಳಿಯಲ್ಲಿದ್ದಂತೆ ಇಲ್ಲಿಯೂ ಇರತೊಡಗಿದೆ. ಶಾಸ್ತ್ರಿ ಮಾಸ್ತರರು ಪಾಠ ಹೇಳುತ್ತಿದ್ದರು. ಅಂಬವ್ವ ಅವ್ವ ಅಡುಗೆ ಮಾಡುತ್ತಿದ್ದಳು. ನಾನು ಕಸ ಹೊಡೆದು, ನೀರು ತರುವುದು, ಬಾಜಾರಿಗೆ ಹೋಗಿ ಕಾಯಿಪಲ್ಲೆ, ಕುಳ್ಳುಕಟ್ಟಿಗೆ ತರುವುದು ಮಾಡುತ್ತಿದ್ದೆ. ಎಲ್ಲರೂ ಕೂಡಿ ಉಣ್ಣುತ್ತಿದ್ದೆವು. ಪ್ರತಿ ರವಿವಾರ ಕೂಡಿ ಸಿನೇಮಾಕ್ಕೆ ಹೋಗುತ್ತಿದ್ದೆವು. ಆ ಹುಡುಗರೂ ನನ್ನ ಬಿಟ್ಟು ಒಂದು ಘಳಿಗೆ ಇರುತ್ತಿರಲಿಲ್ಲ. ನಾನು ಸಾಲಿಗೆ ಹೊರಟರೆ ಅಳುತ್ತಿದ್ವು. ಹೊರಗಿನಿಂದ ಬಂದ ಕೂಡಲೇ ತೆಕ್ಕೆಗೆ ಬೀಳುತ್ತಿದ್ದವು. ಹೀಗೆ ದಿನಗಳು ಸಾಗಿದವು.

ನಾನು ಹತ್ತನೆಯ ವರ್ಗದಲ್ಲಿದ್ದೆ. ಆ ಎರಡು ಹುಡುಗರಿಗೆ ನರ್ಸರಿ ಸಾಲಿಗೆ ಸೇರಿಸಲಾಗಿತ್ತು. ನಾನು ಮಾಸ್ತರ ಸೇರಿ ಶಾಲೆಗೆ ಹೋಗಿದ್ದೆವು. ಅಂಬವ್ವ ಅವ್ವ ಅಡಿಗೆ ಕೆಲಸ ಮುಗಿಸಿಕೊಂಡು ಕಸೂತಿ ಹಾಕುತ್ತ ಒಬ್ಬಾಕಿನೆ ಮನೆಯಲ್ಲಿ ಇದ್ದಳು. ಆಗ ಮಧ್ಯಾಹ್ನ ಎರಡಾಗಿರಬೇಕು. ನಿತ್ಯ ಮುಂಜಾನೆ ಹುಡುಗರಿಗೆ ಸಾಲಿಗೆ ಕಳಿಸಲು ಅಂಬವ್ವ ಅವ್ವ ಹೋಗಿ ಸಂಜೆ ಕರೆದುಕೊಂಡು ಬರುತ್ತಿದ್ದಳು. ಅವತ್ತು ಮಧ್ಯಾಹ್ನ ಯಾಕೊ ಏನೋ ಶಾಲೆ ಬಿಟ್ಟದ್ದರಿಂದ ಹುಡುಗರು ತಾವೇ ರೋಡಿನ ಮೇಲೆ ನಡೆಯುತ್ತಾ ಆಟ ಆಡುತ್ತಾ ಬರುತ್ತಿದ್ದರು. ತೀವ್ರ ವೇಗವಾಗಿ ಬಂದ ಲಾರಿಗೆ ಎರಡು ಹುಡುಗರು ಸಿಕ್ಕು ಗಿಜಗುಳಕಿ ಆಗಿ ಹೋದರು. ತಕ್ಷಣವೇ ಅಸ್ಪತ್ರೆಗೆ ಒಯ್ದರೂ ಪ್ರಯೋಜನವಾಗಲಿಲ್ಲ. ಪ್ರಾಣ ಅಲ್ಲೇ ಹೋಗಿದ್ದವು.

ಸುದ್ದಿ ಕೇಳಿ ಮಾಸ್ತರರು ಹೌಹಾರಿ ಹೋದರು. ನಾನು ಅವರ ಜೊತೆ ಓಡಿದೆ. ಅಂಬವ್ವ ಅವ್ವ ಮೂರ್ಛೆ ಹೋಗಿಬಿದ್ದಳು, ಬಿದ್ದವಳು ಮೇಲೇಳಲಿಲ್ಲ. ಶಾಲೆಗೆ ಶಾಲೆ, ಬಾಜಾರಿಗೆ ಬಾಜಾರೆ, ಊರಿಗೆ ಊರೇ ಆಸ್ಪತ್ರೆಗೆ ಓಡಿ ಬಂದಿತ್ತು. ಇದು ಶವಯಾತ್ರೆಯಾಗಿರಲಿಲ್ಲ, ದೇವರ ಜಾತ್ರೆಗೆ ಜನ ಸೇರಿದಂತಿತ್ತು. ಅಂಬವ್ವ ಅವ್ವನ ಹೆಣದ ಜೊತೆ ಆ ಎರಡೂ ಹುಡುಗರ ಹೆಣ ಸೇರಿಸಿ ಒಂದೇ ಕುಣಿಯಲ್ಲಿ ಮಲಗಿಸಲಾಯಿತು. ಅಲ್ಲಿ ಅಳದವರೆ ಪಾಪಿಗಳಾಗಿದ್ದರು. ಎಂಥ ಜನರಿಗೆ ಹ್ಯಾಂಗಾಯ್ತಲ್ಲಾ ಎಂದು ನೆರೆದ ಜನ ಗೋಳ್ಗರೆದರು. ಶಾಸ್ತ್ರಿಮಾಸ್ತರರು ಹುಚ್ಚಾಗಿ ಹೋಗಿದ್ದರು. ಮೇಲೆ ಮುಗಿಲು ಹರಿದುಬಿದ್ದಂತೆ, ಸಿಡಿಲು ಬಡಿದಂತೆ, ಅವರ ಸ್ಥಿತಿಯಾಗಿತ್ತು.

ಮಣ್ಣಾಗಿ ಆರು ತಿಂಗಳಾಯಿತು, ಹಾಸಿಗೆ ಹಿಡಿದ ಮಾಸ್ತರರು ಶಾಲೆಗೆ ಬರಲಿಲ್ಲ. ಕೊನೆಗೆ ಯೋಚಿಸಿ ಯೋಚಿಸಿ ಒಂದು ನಿರ್ಧಾರಕ್ಕೆ ಬಂದರು. ಇನ್ನೂ ಹತ್ತು ವರುಷ ಸೇವೆ ಇತ್ತು, ತಾವೇ ನಿವೃತ್ತಿಗೆ ಅರ್ಜಿ ಹಾಕಿದರು. ಹೆಂಡತಿ ಹೆಸರಲ್ಲಿ, ಮಕ್ಕಳ ಹೆಸರಿನಲ್ಲಿ ಇಟ್ಟಿದ್ದ ಜೀವ ವಿಮೆ, ಬ್ಯಾಂಕಿನ ಹಣ ತೆಗೆದರು. ನಿವೃತ್ತಿಯಿಂದ ಬಂದ ಹಣ ಸೇರಿಸಿ ತಾನಿದ್ದ ಬಾಡಿಗೆ ಮನೆಯನ್ನು ಖರೀದಿ ಮಾಡಿದರು. 'ಅನಾಥ ಬಾಲಕರಾಶ್ರಮ' ಎಂದು ಬೋರ್ಡು ಬರೆಸಿ ಮನೆಮುಂದೆ ಹಾಕಿದರು. ಶಾಲೆ ಓದಲು ಬರುವ ನಿರ್ಗತಿಕ, ಬಡವ, ಅನಾಥ ಮಕ್ಕಳನ್ನು ಸೇರಿಸಿಕೊಂಡು ಅವರ ಊಟ, ವಸತಿ, ಬಟ್ಟೆ, ಪಾಟಿ ಪುಸ್ತಕಗಳ ಖರ್ಚು ನೋಡಿಕೊಳ್ಳುತ್ತ, ಅದರಲ್ಲಿ ತನ್ನ ಹೆಂಡತಿ ಮಕ್ಕಳ ನೋವು ಸಾವನ್ನು, ನಲಿವು ಸಿಹಿಯನ್ನಾಗಿ ಮಾಡತೊಡಗಿದರು.

ಕಂಪನಿ ಬಂಬು ಊದಿತು, ಕೇಳಿ ಎಚ್ಚರವಾಯಿತು. ಮುಂದಿನ ನೆನಪುಗಳು ನಿಂತವು, ಎದ್ದು ನಿಂತೆನು. ಲುಂಗಿ ಬ್ಯಾಗಿನೊಳಗಿಟ್ಟುಕೊಂಡು ಶಾಲೆಯ ಆವರಣದಲ್ಲಿದ್ದ ನಳದಲ್ಲಿ ಮುಖ ತೊಳೆದುಕೊಂಡೆನು. ಅಲ್ಲೇ ಸಮೀಪದಲ್ಲಿದ್ದ ಶಾಸ್ತ್ರಿಮಾಸ್ತರರ ಅನಾಥ ಬಾಲಕರಾಶ್ರಮಕ್ಕೆ ಹೋಗಬೇಕೆನಿಸಿತು. ಹೊರಟೆ.

ಮೊದಲಿನ ಶಹಾಬಾದ ಈಗ ಇರಲಿಲ್ಲ. ಎಸಿಸಿ ಸಿಮೆಂಟ್ ಕಂಪೆನಿಯಿಂದ, ಎ.ಬಿ.ಎಲ್. ಕಂಪನಿಯಿಂದ ಜನ ತುಂಬಿ ಹೋಗಿತ್ತು. ಊರಿನ ನಾಲ್ಕು ದಿಕ್ಕಿಗೂ ಊರು ಒಂದೊಂದು ಮೈಲಿನವರೆಗೆ ಬೆಳೆದಿತ್ತು, ನಾನು ನೋಡುತ್ತ ಹೊರಟೆ. ನೀರು ತುಂಬುವ, ಸಂಡಾಸಿಗೆ ಹೊರಟಿರುವ, ಕೆಲಸಕ್ಕಾಗಿ ಹೊರಟಿರುವ, ಊರಿಗೆ ಹೋಗುವ, ಕಾಯಿಪಲ್ಲೆ ತುಂಬಿಕೊಂಡು ಬರುವ, ಹೊಟೇಲಂಗಡಿ ತೆರೆಯುವ ಜನರನ್ನು ನೋಡುತ್ತ ನೋಡುತ್ತ ನಡೆದೆ.

ಅವರಲ್ಲಿ ನನ್ನ ಜೊತೆ ಆಡಿದವರು ಓದಿದವರು ಒಬ್ಬರೂ ಇರಲಿಲ್ಲ. ಈಗ ಅವರೆಲ್ಲಿರುವರೋ ಏನೋ ಎಂತೋ ಎಂದು ತೀರಂದಾಜ ಟಾಕೀಜ, ಬೆಂಡಿ

ಬಾಜಾರ ಗಂಟ ನೋಡುತ್ತ ನೋಡುತ್ತ ಶಾಸ್ತ್ರಿಮಾಸ್ತರರ ಅನಾಥ ಬಾಲಕರಾಶ್ರಮಕ್ಕೆ ಬಂದೆ.

ನಾನಲ್ಲಿಗೆ ಬರುವುದರೊಳಗಾಗಿ ಹುಡುಗರೆಲ್ಲ ಎದ್ದಿದ್ದರು. ಕಸ ಗುಡಿಸುವುದು ನೀರು ತುಂಬುವುದು ನಡೆದಿತ್ತು. ಮಾಸ್ತರರು ಆ ಎಪ್ಪತ್ತರ ವಯಸ್ಸಿನಲ್ಲೂ ವರ್ತಮಾನ ಪತ್ರಿಕೆ ಓದುತ್ತ ಕುಳಿತಿದ್ದರು. ನಾನು ಬಂದ ಸುದ್ದಿ ಕೇಳಿ ಪೇಪರೋದುವುದು ಬಿಟ್ಟರು. ನನ್ನನ್ನು ನೋಡಿ ದಳದಳ ಕಣ್ಣೀರು ಸುರಿಸುತ್ತ ಎದ್ದು ಬಂದು ನನ್ನ ತೆಕ್ಕೆಗೆ ಬಿದ್ದರು. “ನನ್ನ ಹಿರಿಮಗಾ ಬಂದಾ, ನನ್ನ ಹಿರಿಮಗಾ ಬಂದಾ” ಎಂದು ಅಬ್ಬಬ್ಬರಿಸಿ ಅಳತೊಡಗಿದರು. ಮಾಸ್ತರರು ಅಳುವುದು ಕೇಳಿ ಅನಾಥ ಬಾಲಕರಾಶ್ರಮದ ಹುಡುಗರೆಲ್ಲ ತಮ್ಮ ತಮ್ಮ ಕೆಲಸ ಬಿಟ್ಟು ಓಡಿ ಬಂದರು. ಮಾಸ್ತರರು ನನ್ನ ತೆಕ್ಕೆಗೆ ಬಿದ್ದು ಅಳುತ್ತಿರುವುದು ನೋಡಿ ಅವರಿಗೆ ಒಂದೂ ತಿಳಿಯದಾಯಿತು. ಹುಡುಗರು ಬೆರಗುಗೊಂಡು ನೋಡುತ್ತಾ ನಿಂತರು. ಇಂಥ ಮಹಾವ್ಯಕ್ತಿಗೆ ನನ್ನನ್ನು ರೂಪಿಸಿದ ಶಿಲ್ಪಿಗೆ ಇಲ್ಲಿವರೆಗೆ ಮರೆತು ಕುಂತದಕ್ಕೆ ನಾನೂ ಮೋಡವಾಗಿ ಸುರಿಯತೊಡಗಿದೆ.

## ಕತೆ-ಕತೆಗಾರರು: ಡಾ. ಚೆನ್ನಣ್ಣ ವಾಲೀಕಾರ(೧೯೪೩)



ಡಾ.ಚೆನ್ನಣ್ಣ ವಾಲೀಕಾರ ಚಿತ್ತಾಪುರ ತಾ॥ ಯಾದಗಿರಿ ಜಿಲ್ಲೆ ಶಂಕರವಾಡೆಯವರು. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ, ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ- ಇವರ ಪಿಎಚ್.ಡಿ. ಪ್ರಬಂಧ. ಪ್ಯಾಂಥರ್ ಪದ್ಯಗಳು, ಬಂಡೆದ್ದ ದಲಿತರ ಬೀದಿ ಹಾಡುಗಳು ಮುಂತಾದವು ಕವನ ಸಂಕಲನಗಳು. ಒಂದು ಹೆಣ್ಣಿನ ಒಳಜಗತ್ತು, ಗ್ರಾಮಭಾರತ ಕಾದಂಬರಿಗಳು. ಜಾನಪದ ಲೋಕ, ಒಂದು ಗ್ರಾಮದ ಜಾನಪದೀಯ ಅಧ್ಯಯನ ಹಾಗು ಕರ್ನಾಟಕ ದೇವದಾಸಿಯರ ಸಮಸ್ಯೆಗಳು- ಸಮಗ್ರ ಅಧ್ಯಯನಗಳು ಸಂಶೋಧನ ಗ್ರಂಥಗಳು. ಗುಲ್ಬರ್ಗಾ ಜಿಲ್ಲೆಯ ತ್ರಿಪದಿಗಳು, ಗುಲ್ಬರ್ಗಾ ಜಿಲ್ಲೆಯ ಮೊಹರಂ ಪದಗಳು ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ.

ಇವರಿಗೆ ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. ಅಖಿಲಭಾರತ ನಾಲ್ಕನೇ ದಲಿತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಅಕ್ಷರದಿಂದ ವಂಚಿತರಾದ ಮಕ್ಕಳಿಗೆ ಅಕ್ಷರ ಕಲಿಸಬೇಕೆಂಬ ಮಹದಾಸೆ

ಶಾಸ್ತ್ರಿಮಾಸ್ತರರದ್ದು. ಮಕ್ಕಳಿಲ್ಲದ ಮಾಸ್ತರರು ನಿರೂಪಕರಿಗೆ ಹೆತ್ತವರ ವಾತ್ಸಲ್ಯ ತೋರಿಸುತ್ತ ಓದಿಸುತ್ತಾರೆ. ತಮಗೆ ಅವಳಿ ಮಕ್ಕಳಾದ ಮೇಲೂ ನಿರೂಪಕರನ್ನು ಬಿಡುವುದಿಲ್ಲ. ಹೆಂಡತಿ ಮಕ್ಕಳ ಸಾವಿನಿಂದ ದುಃಖಿತರಾದ ಮಾಸ್ತರರು ಸ್ವಯಂ ನಿವೃತ್ತಿ ಪಡೆಯುತ್ತಾರೆ. ನಿವೃತ್ತಿಯಿಂದ ಬಂದ ಹಣದಿಂದ 'ಬಾಲಕರ ಅನಾಥಾಶ್ರಮ'ವನ್ನು ಆರಂಭಿಸಿ ಅನಾಥ ಮಕ್ಕಳ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. 'ಎಲ್ಲೋ ಬಿದ್ದ ಕಲ್ಲನ್ನು ಕಡೆದು ದೇಗುಲದೊಳಗಡೆ' ಇಟ್ಟ ಕೀರ್ತಿ ಶಾಸ್ತ್ರಿ ಮಾಸ್ತರರದು. ಇಂತಹ ಎಷ್ಟೋ ಕಲ್ಲುಗಳನ್ನು ಕಡೆದಿದ್ದಾರೆ. ಮಾಸ್ತರರಲ್ಲಿರುವ ಆದರ್ಶದ ನಿಲುವು ಅನುಕರಣೀಯ.

**ಪದಕೋಶ:**

ದಂಧಾ–ಕೆಲಸ, ಉದ್ಯೋಗ; ಚಪರಾಸಿ–ಜವಾನ, ಸೇವಕ; ಜೆಂಡಾ–ಬಾವುಟ; ಬೋರ್ಹುಳ–ನಗಾರಿಹುಳ, ಜೀರುಂಡೆ, ಶಬ್ದದಹುಳು (ಒಂದು ಜಾತಿಯ ಹುಳು); ಪಾಟಿ–ಬರೆಯುವ ಕಪ್ಪುಹಲಗೆ, ಸ್ಲೇಟು; ಕುಳ್ಳು–ಬೆರಣಿ; ಕುಣಿ–ಗುಂಡಿ; ನಳ–ನಲ್ಲಿ; ಬಂಬು–ಸೈರನ್ (ಕಾರ್ಖಾನೆಯಲ್ಲಿ ಸಮಯ ಸೂಚಿಸಲು ಬಳಸುವ ಯಂತ್ರ).

## I. ಸಂದರ್ಭ ಸೂಚಿಸಿ, ವಿವರಿಸಿ:

೧. ನಾನು ಗಡಬಡಿಸಿ ಎದ್ದು ಗಾಡಿ ಹತ್ತಿದೆ.

೨. ನಾನು ಸಮ್ಮೋಹನಕ್ಕೊಳಗಾದೆ.

೩. ನೆನಪುಗಳು ಮಳೆಯಂತೆ ಸುರಿಯತೊಡಗಿದವು

೪. ನಮ್ಮ ಪಾಲಿಗೆ ನಿತ್ಯ ಹಬ್ಬವಾಗಿರುತ್ತಿತ್ತು.

೫. ನಾಲ್ಕು ಗೋಡೆಗಳ ಕೋಟೆ ಬಂಧನದಲ್ಲಿ ಬಂಧಿಸಿದರು.

೬. ಅಕ್ಷರಮಳೆ ಧಾರಾಕಾರಾಗಿ ಸುರಿಯ ತೊಡಗಿತು.

೭. ಅಲ್ಲಿ ಅಳದವರೆ ಪಾಪಿಗಳಾಗಿದ್ದರು.

೮. ನನ್ನ ಹಿರೀಮಗ ಬಂದಾ, ನನ್ನ ಹಿರೀಮಗ ಬಂದಾ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಸೇಂಗಾ ಮಾರುವವನ ದಿನದ ಸಂಪಾದನೆ ಎಷ್ಟು?

೨. ಗಾಡಿ ಶಹಾಬಾದಿಗೆ ಬಂದಾಗ ಸಮಯ ಎಷ್ಟಾಗಿತ್ತು?

೩. ಶಾಸ್ತ್ರಿಮಾಸ್ತರರ ಹೆಂಡತಿ ಹೆಸರೇನು?

೪. ಮಾಸ್ತರರ ಅವಳಿ ಮಕ್ಕಳ ಸಾವು ಹೇಗಾಯಿತು?

೫. ಮಾಸ್ತರರಿಗೆ ಇನ್ನೂ ಎಷ್ಟು ವರ್ಷ ಸೇವೆ ಇತ್ತು?

೬. ಮಾಸ್ತರರು ಮನೆಯ ಮುಂದೆ ಬರೆಸಿ ಹಾಕಿದ ಬೋರ್ಡು ಯಾವುದು?

೭. ನಿರೂಪಕರನ್ನು ರೂಪಿಸಿದ ಶಿಲ್ಪಿ ಯಾರು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ತಾವು ಓದಿದ ಹೈಸ್ಕೂಲ್ ನೆನಪು ಬಂದಾಗ ನಿರೂಪಕರಿಗೆ ಏನನಿಸಿತು?
೨. ನಿರೂಪಕರ ಓರೆಕೋರೆಗಳನ್ನು ತಿದ್ದಿದ ಗುರುಗಳು ಯಾರ್‍ಯಾರು?
೩. ನಿರೂಪಕರ ತಂದೆ ಅವರನ್ನು ಯಾರು ಯಾರಿಂದ ಅಗಲಿಸಿ ಊರಿಗೆ ಕರೆತಂದರು?
೪. ಪ್ರೈಮರಿ ಶಾಲೆ ಸೇರಿದಾಗ ನಿರೂಪಕರನ್ನು ಅಂಬವ್ವ ಹೇಗೆ ನೋಡಿ ಕೊಳ್ಳುತ್ತಿದ್ದರು?
೫. ಮಾಸ್ತರರ ಮಕ್ಕಳ ಶವಯಾತ್ರೆಗೆ ಜನ ಹೇಗೆ ಬಂದಿತ್ತು?
೬. ಅವಳಿ ಮಕ್ಕಳ ಸಾವಿನ ನಂತರ ಮಾಸ್ತರ ಮತ್ತು ಅಂಬವ್ವನ ಸ್ಥಿತಿ ಏನಾಯಿತು?
೭. ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು?

## IV, ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ನಿರೂಪಕರ ಬಯಲು ಶಾಲೆಯ ಅನುಭವ ಮತ್ತು ನಂತರದ ಶಾಲೆಯ ಅನುಭವಗಳು ಹೇಗಿದ್ದವು?
೨. ಮಾಸ್ತರು ಮತ್ತು ಅಂಬವ್ವರ ಪ್ರೀತಿ ಕಡಲಲ್ಲಿ ಕತೆಗಾರರ ಬಾಲ್ಯ ಹೇಗೆ ಕಳೆಯಿತು?
೩. ಅವಳಿ ಮಕ್ಕಳ ಸಾವು ಮಾಸ್ತರರ ಬದುಕನ್ನೇ ಬದಲಾಯಿಸಿದ್ದು ಹೇಗೆ? ವಿವರಿಸಿ.
೪. 'ಅನಾಥ ಬಾಲಕರಾಶ್ರಮ'ವನ್ನು ಶಾಸ್ತ್ರಿಮಾಸ್ತರು ಹೇಗೆ ಪ್ರಾರಂಭಿಸಿದರು? ಅದರ ಉದ್ದೇಶವೇನು?
೫. ಬದಲಾದ ಶಹಾಬಾದನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ?
೬. ಶಾಸ್ತ್ರಿಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ.

## V. ಭಾಷಾಭ್ಯಾಸ:

**ದೇಶ್ಯ-ಅನ್ಯದೇಶ್ಯ:** ಒಂದು ಭಾಷೆಯ ಮೂಲಶಬ್ದಗಳನ್ನು ದೇಶ್ಯ, ದೇಸೀಯ ಎನ್ನಲಾಗುವುದು. ಇವುಗಳ ಜೊತೆ ತನ್ನ ಸಂಪರ್ಕಕ್ಕೆ ಬಂದ ಅನ್ಯಭಾಷೆಯ ಪದಗಳನ್ನು ಚಲಾವಣೆಗೆ ತಂದುಕೊಳ್ಳುತ್ತದೆ. ಇವುಗಳನ್ನು ಅನ್ಯದೇಶ್ಯ, ಅನ್ಯದೇಶೀಯ ಪದಗಳೆಂದು ಕರೆಯಲಾಗಿದೆ. ಉದಾ: ಚಪರಾಸಿ, ಕಂಪನಿ, ಬಾಜಾರ್, ಲಾರಿ, ಟಾಕೀಜ. **ಇದೇ ರೀತಿಯ ಅನ್ಯದೇಶ್ಯ ಪದಗಳನ್ನು ಸಂಗ್ರಹಿಸಿ.**

**ಟಿಪ್ಪಣಿ: ಬಳಿ ಚಕರಾಟ:** ಗಾಜಿನ ಬಳೆ ಚೂರುಗಳನ್ನು ಕಾಯಿಗಳೆಂದು ಕರೆಯುತ್ತಾರೆ. ಕಾಯಿಗಳನ್ನು ಮುನ್ನಡೆಸಬೇಕಾದರೆ ಕವಡೆಗಳಿಂದ ಅಥವಾ ಹುಣಸೇ ಬೀಜದ ಬೇಳೆಗಳನ್ನು ದಾಳದ ರೀತಿಯಲ್ಲಿ ಉಪಯೋಗಿಸುತ್ತಾರೆ. ಐದು ಮನೆ ಮತ್ತು ಏಳು ಮನೆ ಆಟಗಳನ್ನು ಆಡುತ್ತಾರೆ. ಹುಣಸೆಬೀಜಗಳನ್ನು ಕುಲುಕಿ ಹಾಕಿದಾಗ,

ಬಿಳಿ ಬಣ್ಣದ ಭಾಗ ಮೇಲ್ಮುಖವಾಗಿ ಬೀಳುವುದನ್ನು ಆಧರಿಸಿ, ಒಂದು, ಎರಡು, ಮೂರು, ಚೌಕ ಎಂದು ಕಾಯಿಗಳನ್ನು ನಡೆಸಲಾಗುತ್ತದೆ. ಎದುರಾಳಿಯ ಕಾಯಿಯನ್ನು ಹೊಡೆದಾಗ ಚೌಕದ ಒಳ ಅಂಗಣ ಪ್ರವೇಶಕ್ಕೆ ಅರ್ಹರಾಗಿ ಮಧ್ಯದಲ್ಲಿರುವ ಸ್ಥಳಕ್ಕೆ ಸೇರಿದಾಗ ಕಾಯಿಗಳು ಹಣ್ಣಾಗುತ್ತವೆ. ಯಾರು ಬೇಗ ಹಣ್ಣು ಮಾಡುತ್ತಾರೊ ಅವರು ಗೆದ್ದ ಹಾಗೆ. ಒಮ್ಮೆ ಇಬ್ಬರು, ಮೂವರು ಮತ್ತು ನಾಲ್ವರು ಒಟ್ಟಿಗೆ ಆಟ ಆಡಬಹುದು. ಇದನ್ನು 'ಚೌಕ ಬಾರ' ಎಂದೂ ಕೂಡ ಕರೆಯುತ್ತಾರೆ.

**ಲೋಡ್ ಲೋಡ್ ತಿಮ್ಮಯ್ಯ:** ವೃತ್ತಾಕಾರವಾಗಿ ತಲೆತಗ್ಗಿಸಿಕೊಂಡು ಕುಳಿತುಕೊಳ್ಳುವುದು. ಕುಳಿತವರ ಬೆನ್ನ ಹಿಂದೆ ಒಬ್ಬ ಸುತ್ತುತ್ತಾ ಬರಬೇಕು. ಹಾಗೆ ಬರುವಾಗ ಕೈಯಲ್ಲಿರುವ ಕರವಸ್ತ್ರವನ್ನೋ, ಟೋಪಿಯನ್ನೋ ಯಾರದಾದರೂ ಬೆನ್ನ ಹಿಂದೆ ಹಾಕಿ ಓಡುವುದು. ಯಾರ ಬೆನ್ನ ಹಿಂದೆ ಬಟ್ಟೆ ಇರುತ್ತದೆಯೋ ಅವನು ಬಟ್ಟೆ ಹಾಕಿದವನನ್ನು ಓಡಿಸಿಕೊಂಡು ಹೋಗಿ ಮುಟ್ಟುವುದು. ಅನಂತರ ಮುಟ್ಟಿಸಿಕೊಂಡವನು ಇನ್ನೊಬ್ಬರ ಹಿಂದೆ ಬಟ್ಟೆ ಹಾಕುತ್ತಾ ಆಟ ಮುಂದುವರೆಯುತ್ತದೆ. ಇದನ್ನು 'ಲೋಡ್ ಲೋಡ್ ತಿಮ್ಮಯ್ಯ' ಮತ್ತು 'ಟೋಪಿ ಆಟ' ಎಂದೂ ಕರೆಯುತ್ತಾರೆ.

**ಕೋಲಂಬ ಗುಳ್ಳಿ:** ಇದು ಹೆಣ್ಣು ಮಕ್ಕಳು ಆಡುವ ಆಟ. ದೀಪಾವಳಿ ಹಬ್ಬದ ಸಮಯದಲ್ಲಿ ಹೆಣ್ಣುಮಕ್ಕಳು ಒಟ್ಟಾಗಿ ಸೇರಿ ಹಾಡು ಹಾಡುತ್ತ ಆಡುತ್ತಾರೆ. ಇದು ಒಂದು ರೀತಿಯಲ್ಲಿ ಅಳಗುಳಿಮಣೆ ಆಟ ಇರುವಂತೆ ಇರುತ್ತದೆ. ಕೆಲವು ಕಡೆ ಚೆನ್ನೆಮಣೆ ಆಟ ಎಂದೂ ಕರೆಯುತ್ತಾರೆ.

**ಆಕರ:** ಸಮಗ್ರ ಸಣ್ಣ ಕಥಾ ಸಂಪುಟ
ಡಾ. ಚೆನ್ನಣ್ಣ ವಾಲೀಕಾರ
ದಲಿತ ಬಂಡಾಯ ಪ್ರಕಾಶನ–ಗುಲ್ಬರ್ಗ.

**ಹೆಚ್ಚಿನ ಓದು:**

**೧. ಬಂಡಾಯ ಕತೆಗಳು – ಸಂ. ರಂಜಾನ್ ದರ್ಗಾ, ಚಂದ್ರಶೇಖರ ಆಲೂರು.**

**೨. ಸುವರ್ಣ ಕಥಾ ಸಂಕಲನ – ಸಂ. ಕೃಷ್ಣಮೂರ್ತಿ ಹನೂರು, ಬಾನುಮುಷ್ತಾಕ್.**

**ಸಮಸ್ಯೆಗಳಿಂದಲೇ ಜೀವನ, ಸಮಸ್ಯೆಗಳಿಂದಲೇ ಸಂಸಾರ,**
**ಸಮಸ್ಯೆಗಳೇ ಚಟುವಟಿಕೆಗಳಿಗೆ ಕಾರಣ.**
**– ಡಾ. ರಂ.ರಾ. ದಿವಾಕರ**

# ೫. ಬುದ್ಧ ಬಿಸಿಲೂರಿನವನು

**–ನಾಗತಿಹಳ್ಳಿ ಚಂದ್ರಶೇಖರ್**

> ಪ್ರವಾಸ ಕಥನದ ಉದ್ದೇಶ ಇತಿಹಾಸದ ದಾಖಲೆ ಅಲ್ಲ ಅಥವಾ ಪ್ರವಾಸಾನುಭವಗಳ ಶುಷ್ಕ ದಾಖಲೆಯೂ ಅಲ್ಲ. ಪ್ರಬಂಧದ ಬಂಧ, ಕಟ್ಟು, ಮಿತಿಯನ್ನು ಮೀರಿದ ವೈಯಕ್ತಿಕ ವಾಸ್ತವಾನುಭವಗಳ ಸೃಜನಾತ್ಮಕ ಅಭಿವ್ಯಕ್ತಿಯ ಕಲೆ.

ರಣ ಬಿಸಿಲು. ತುಂಬು ಗರ್ಭಿಣಿ ತವರಿಗೆ ಹೊರಟಿದ್ದಾಳೆ. ಹೆರಿಗೆ ನೋವು ಆರಂಭವಾಗುತ್ತದೆ. ಹತ್ತಿರದಲ್ಲೇ ಉದ್ಯಾನವನ, ಆ ಮಹಾತಾಯಿ ಅಲ್ಲಿಯೇ ಹಡೆಯುತ್ತಾಳೆ. ಗಂಡು ಮಗು! ಆ ಮಗು ಮುಂದೆ ಮಹಾತ್ಮನಾಗುತ್ತಾನೆ.

ಆ ಮಹಾತಾಯಿ ಮಾಯಾದೇವಿ. ಆ ಲುಂಬಿನಿ ಉದ್ಯಾನವನದಲ್ಲಿ ಜನಿಸಿದವನು ಗೌತಮ. ಜಗತ್ತಿನಾದ್ಯಂತ ನಾಲ್ಕು ನೂರು ಮಿಲಿಯನ್‌ಗೂ ಹೆಚ್ಚಿರುವ ಬೌದ್ಧರಿಗೆ ಹೊಸತಾದ ಬೆಳಕೊಂದನ್ನು ತೋರಿದ. ಬೌದ್ಧರಲ್ಲದವರಲ್ಲೂ ಕುತೂಹಲ ಹುಟ್ಟಿಸಿ ಗೌರವಾರ್ಹನಾದ. ದಕ್ಷಿಣ ನೇಪಾಳದ ಆ ಸಣ್ಣ ಉದ್ಯಾನವನ 'ಲುಂಬಿನಿ' ಬೌದ್ಧ ಮಾರ್ಗಿಗಳ ಪಾಲಿಗೆ ಪವಿತ್ರ ಸ್ಥಳವಾಯಿತು.

ಹಾಗೆ ನೋಡಿದರೆ ನೇಪಾಳ ಪ್ರವಾಸದ ಪ್ರಮುಖ ಗುರಿ ಈ ಲುಂಬಿನಿಯನ್ನು ನೋಡುವುದೇ ಆಗಿತ್ತು. ದೊಡ್ಡವರ ಹುಟ್ಟೂರು, ಬೆಳೆದ ಪರಿಸರವನ್ನು ನೋಡುವ ನನ್ನ ಕುತೂಹಲ ಯಾವತ್ತಿನದು? ಅದು ಕುವೆಂಪುವಿನಿಂದ ಆರಂಭವಾಗುತ್ತದೆ. ಅನಂತರ ಗಾಂಧೀಜಿಯವರ ಪೋರಬಂದರ್, ವಿದೇಶದಲ್ಲಿ ಹಲವು ಚೇತನಗಳ ಜನ್ಮಸ್ಥಳ ಹುಡುಕಿ ಹೋದದ್ದಿದೆ. ಇಂಗ್ಲೇಂಡಿನಲ್ಲಿರುವ ಶೇಕ್ಸ್‌ಪಿಯರ್‌ನ ಮನೆ, ಆಸ್ಟ್ರಿಯಾದಲ್ಲಿರುವ ಮೊಜಾರ್ಟ್‌ನ ಮನೆ, ಐರ್ಲೆಂಡಿನಲ್ಲಿ ಆಸ್ಕರ್‌ವೈಲ್ಡ್‌ನ ಮನೆ ....ಹೀಗೆ ಬೆಳೆಯುತ್ತದೆ ಪಟ್ಟಿ. ವಿಪರ್ಯಾಸವೆಂದರೆ ಮೊಜಾರ್ಟ್‌ನ ಊರಿನ ಹಾದಿಯಲ್ಲಿ ಹಿಟ್ಲರನು ಹುಟ್ಟಿದ ಮನೆಯೂ ಸಿಗುತ್ತದೆ!

ಮಹಾನ್ ವ್ಯಕ್ತಿಗಳ ದರ್ಶನವನ್ನು, ಆಶಯವನ್ನು ಅರ್ಥಮಾಡಿಕೊಳ್ಳಲು ಅವರ ಕೃತಿಗಳು ಸಾಕು. ಅವರ ಹುಟ್ಟೂರನ್ನು, ಮನೆಯನ್ನು ನೋಡಲೇಬೇಕೆಂದಿಲ್ಲ. ಎಲ್ಲರ ಮನೆಗಳನ್ನು ನೋಡುವುದು ಅಸಾಧ್ಯದ ಕೆಲಸ ಕೂಡಾ. ಆದರೆ ನೋಡುವುದರಿಂದ ನಮ್ಮ ಅನುಭವಕ್ಕೆ ಹೊಸದೊಂದು ಆಯಾಮ ಸಿಗುತ್ತದೆ. ಗಾಂಧೀಜಿ ನೆನಪಾದಾಗಲೆಲ್ಲ ನನಗೆ ಸಬರಮತಿ ಆಶ್ರಮದ ಚಿತ್ರ ಕಣ್ಣಿಗೆ ಬರುತ್ತದೆ. ಮೊಜಾರ್ಟ್‌ನ ಸಂಗೀತ

ನೆನಪಾದಾಗ ಆಲ್ಫ್ಸ್ ಪರ್ವತಗಳ ತಪ್ಪಲಿನ ಸಾಜ್‌ಬರ್ಗ್ ಎಂಬ ಪ್ರಶಾಂತ ನಗರದ ಮೇಲೆ ಬೀಸುವ ತಂಗಾಳಿ ನೆನಪಾಗುತ್ತದೆ.

ನೇಪಾಳ ಪ್ರವಾಸದ ಯೋಜನೆ ಹಾಕುವಾಗಲೇ ಹೆಂಡತಿಗೆ ಹೇಳಿದ್ದೆ. "ರಾಜಧಾನಿ ಕಠ್ಮಂಡುವನ್ನು ಬಿಟ್ಟರೂ ಚಿಂತೆ ಇಲ್ಲ ಲುಂಬಿನಿ ಎಂಬ ಸಣ್ಣ ಊರಿಗೆ ಹೋಗಲೇಬೇಕು. ಒಂದು ವಾರವಾದರೂ ತಂಗಬೇಕು" ಎಂದು. ಅಮೇರಿಕಾದಂಥ ದೊಡ್ಡ ದೇಶ ತನ್ನ ಶ್ರೀಮಂತಿಕೆ ಮತ್ತು ದರ್ಪದಿಂದ ಹುಟ್ಟಿಸುವ ಆಕರ್ಷಣೆಗಿಂತ ನೇಪಾಳದಂಥ ಪುಟ್ಟ ಬಡ ದೇಶಗಳು ತಮ್ಮ ಒಡಲಲ್ಲಿ ತುಂಬಿಕೊಂಡ ಚರಿತ್ರೆ, ಸಂಸ್ಕೃತಿ, ಧಾರ್ಮಿಕ ಶ್ರದ್ಧೆ, ಬಡತನ ಮತ್ತು ರಾಜಕೀಯ ಅಸ್ಥಿರತೆಗಳಿಂದ ಆಸಕ್ತಿ ಮೂಡಿಸುತ್ತವೆ. ಲುಂಬಿನಿಯನ್ನು ಸೇರಲು ಬಹುದೂರದ ರಸ್ತೆ ಪಯಣ. ಗುಡ್ಡಗಾಡನ್ನು ಇಳಿದು, ಬಟಾಬಯಲನ್ನು ಹಿಡಿದು ಗಂಟೆಗಟ್ಟಲೆ ಸಾಗಬೇಕು. ವೇಗವೆನ್ನುವುದೇ ಕಾಲಧರ್ಮವಾಗಿರುವಾಗ ಪರ್ವತಗಳ ನಾಡಿನಲ್ಲಿ ರಸ್ತೆಗಳ ಮೂಲಕ ಊರಿಂದ ಊರಿಗೆ ಹೋಗಲು ಹೆಚ್ಚು ಸಮಯ ಬೇಕು. ಆದ್ದರಿಂದ ನೇಪಾಳಿ ಸರ್ಕಾರ ಪುಟ್ಟ ಊರುಗಳಿಗೆಲ್ಲ ಪುಟ್ಟ ವಿಮಾನ ನಿಲ್ದಾಣ ನಿರ್ಮಿಸಿ, ಸುಮಾರು ೨೫ ಜನ ಪ್ರಯಾಣಿಕರನ್ನು ಕೊಂಡೊಯ್ಯುವ ವಿಮಾನಗಳನ್ನು ಹಾರಲು ಬಿಟ್ಟಿದೆ. ಹಳೆಯ ಮೆಟಡಾರ್ ವ್ಯಾನಿಗೆ ಎರಡು ರೆಕ್ಕೆ ಜೋಡಿಸಿದರೆ ಹೇಗಿರುತ್ತದೋ ಹಾಗಿವೆ ಈ ವಿಮಾನಗಳು. ನೇಪಾಳದಂಥ ಪುಟ್ಟ ದೇಶದಲ್ಲಿ ಸುಮಾರು ೩೦ಕ್ಕೂ ಹೆಚ್ಚು ವಿಮಾನ ಸಂಪರ್ಕಗಳಿವೆ! ವಿಮಾನ ದರ ಕೂಡಾ ಶ್ರೀಸಾಮಾನ್ಯನ ಕೈಗೆಟಕುವಂಥದ್ದು. ಗಂಟೆಗೊಮ್ಮೆ ಟ್ಯಾಕ್ಸಿಗಳಂತೆ ಸಂಚರಿಸುವ ಇವು, ವಾರವೊಂದರಲ್ಲಿ ಹಿಮಗಿರಿಯ ಮೇಲೆ ಹಾರಿ ಇಡೀ ನೇಪಾಳವನ್ನು ದರ್ಶನ ಮಾಡಿಸುತ್ತವೆ. ಈ ವ್ಯವಸ್ಥೆ ಭಾರತಕ್ಕೂ ಅನುಕರಣೀಯ. ಕಾರವಾರ, ಶಿವಮೊಗ್ಗ, ಹಾಸನ, ಬೀದರ, ಚಿತ್ರದುರ್ಗ ಮುಂತಾದ ಊರುಗಳಿಗೆ ಕಡಿಮೆ ದರಗಳಲ್ಲಿ ಒಂದೇ ಗಂಟೆಯಲ್ಲಿ ತಲುಪುವ ಅವಕಾಶವಿದ್ದರೆ ಎಷ್ಟೊಂದು ಸಮಯ ಉಳಿಸಬಹುದು?

ಹಿಮ ಪರ್ವತಗಳನ್ನು ಹಿಂದಕ್ಕೆ ಬಿಟ್ಟು ತಂಪು ಗಾಳಿಯನ್ನು ಮರೆತು ರಣಗುಡುವ ಬಿಸಿಲಿಗೆ ಒಡ್ಡಿಕೊಳ್ಳಬೇಕು. ಭಾರತದ ಗಡಿಯತ್ತ ಸಮೀಪಿಸುವಾಗ ಲುಂಬಿನಿ ಸಿಗುತ್ತದೆ. ಪರ್ವತಗಳು ಕಟ್ಟಿಕೊಡುವ ಮಾಯೆಯ ಮಹತ್ವ ತಿಳಿಯುವುದೇ ಆಗ. ನನಗೋ ತಪ್ಪು ಕಲ್ಪನೆಯಿತ್ತು. ಈ ಲುಂಬಿನಿ ಯಾವುದೋ ಶಿಖರಾಗ್ರದಲ್ಲಿರುವ ತಂಪನೆಯ ಗ್ರಾಮ ಎಂದು. ಆ ತಂಪನೆಯ ಊರಿನಲ್ಲಿ ಈ ಬುದ್ಧ ಬೆಳದಿಂಗಳಿನಂತೆ ಅವತರಿಸಿರಬೇಕೆಂದು. ಇಲ್ಲ. ಬುದ್ಧ ಬಿಸಿಲೂರಿನವನು. ನನ್ನ ಮಗಳು ಸಿಹಿ ಪುಟ್ಟಿ ಬಿಸಿಲ ಝಳವನ್ನು ಅನುಭವಿಸುತ್ತಾ ಈ ಬಿಸಿಲೇ ಗೌತಮನನ್ನು ಸನ್ಯಾಸಕ್ಕೆ ದೂಡಿರಬೇಕು ಎಂದಳು, ನಿಜವಿರಬೇಕು. ಎರಡೂವರೆ ಸಾವಿರ ವರ್ಷದ ಹಿಂದೆ ಬಿಸಿಲು ಇನ್ನೂ ಹೆಚ್ಚಿತ್ತೇನೋ! ಬುದ್ಧನಿಗೆ ಜ್ಞಾನೋದಯವಾದದ್ದೂ ವೈಶಾಖ ಶುದ್ಧ ಪೂರ್ಣಿಮೆಯಂದು. ಅಲ್ಲೂ "ಶಾಖ!" why ಶಾಖ?

ಈ ಶಾಖವೆಂಬುದು ಸಾಂಕೇತಿಕ. ಗೌತಮನಿಗೆ ಅಂಥದ್ದೊಂದು ಉರಿ ಅವನ ಮನೋಲೋಕವನ್ನು ನಿರಂತರವಾಗಿ ದಹಿಸುತ್ತಿತ್ತು. ಬದುಕು ಎಂದರೇನು? ಅದರ ಉದ್ದೇಶವೇನು? ರೋಗ, ಮುಪ್ಪು, ಮರಣಗಳನ್ನು ಗೆಲ್ಲುವುದು ಸಾಧ್ಯವೆ? ಮನುಷ್ಯನ ಸಂಕಟಗಳ ಮೂಲ ಯಾವುದು? ಈ ಎಲ್ಲ ಪ್ರಶ್ನೆಗಳೂ ಅವನನ್ನು ಸುಡುತ್ತಿದ್ದವು. ತಾನು ದೊರೆ ಮಗನಾಗಿದ್ದು, ನಾಳೆ ಚಕ್ರವರ್ತಿಯಾಗಿ ಸೇನೆ, ಖಜಾನೆ ಎಲ್ಲವನ್ನು ಬಳಸಿದರೂ ಈ ಪ್ರಶ್ನೆಗೆ ಉತ್ತರ ದೊರಕಲಾರದೆಂದು ಖಚಿತವಾಗಿ ಅನ್ನಿಸಿತು. ಏಕಾಂತದ, ಸನ್ಯಾಸದ ಹಾದಿಯನ್ನು ಹುಡುಕಿಕೊಂಡ. ಆಗಿನ ಕಾಲಕ್ಕೆ ಬುದ್ಧನಿಗೆ ಪ್ರಬುದ್ಧರಾದ ಮೂವತ್ತು ಸಾವಿರ ಜನ ಶಿಷ್ಯರಿದ್ದರಂತೆ. ಈ ಪ್ರಖರತೆಯನ್ನು, ಉತ್ಕರ್ಷವನ್ನು ಅಪಾರ ಸಹಿಷ್ಣುಗುಣವುಳ್ಳ ಹಿಂದೂ ಧರ್ಮವು ತಾಳಿಕೊಳ್ಳುವ ಸ್ಥಿತಿಯಲ್ಲಿರಲ್ಲ. ಆದರೆ ಬೌದ್ಧ ಧರ್ಮವನ್ನು ಚೀನಾ, ಜಪಾನ್, ಥಾಯ್‌ಲ್ಯಾಂಡ್, ಶ್ರೀಲಂಕಾ, ಬರ್ಮಾ, ಕಾಂಬೋಡಿಯಾ ಮುಂತಾದ ದೇಶಗಳು ಪ್ರೀತಿಯಿಂದ ಬರಮಾಡಿಕೊಂಡವು.

...ಲುಂಬಿನಿಯನ್ನು ನೋಡುತ್ತಾ ಹೋದೆ.

ಗೌತಮನ ಹುಟ್ಟೂರು ಎಂಬ ಪುಳಕ ನನ್ನನ್ನಾವರಿಸಿತ್ತು. ಆದರೆ ಆ ಊರಿನ ಸೆಖೆ, ಕೊಳಕು, ಬಡತನ, ಅಜ್ಞಾನ ನನ್ನ ಪುಳಕವನ್ನು ಕಿತ್ತುಕೊಳ್ಳಲು ಸರ್ವಥಾ ಪ್ರಯತ್ನಿಸುತ್ತಿದ್ದವು. ಜೊತೆಗೆ ಮೈ ಸುಡುವ ಬಿಸಿಲು. ಇದು ಒಂದು ವಿರೋಧಾಭಾಸದ ಸ್ಥಿತಿ. ಬಾಹ್ಯ ಮತ್ತು ಆಂತರಿಕ ಜಗತ್ತುಗಳೆರಡೂ ಪೂರ್ಣ ಭಿನ್ನವಾಗಿರುವುದು. ಗಾಂಧೀಜಿಯವರ ಪೋರಬಂದರವೂ ಹಾಗೇ.

ಮಾಯಾದೇವಿ ದೇವಾಲಯ ಶ್ವೇತ ವರ್ಣದಿಂದ ಚೌಕಾಕಾರದಲ್ಲಿ ನಿಂತಿದೆ. ಪರಿಸರ ತುಂಬಾ ಶುಭ್ರವಾಗಿದೆ. ಆರಾಧನೆ, ಅರ್ಚನೆ, ಆಚರಣೆಗಳ ಕಂದಾಚಾರವಿಲ್ಲ. ಇಚ್ಛೆ ಇದ್ದವರು ತಂಪು ಹಾಸಿನ ಮೇಲೆ ಚಕ್ಕಂಬಕ್ಕಳ ಕುಳಿತು ಧ್ಯಾನಿಸಬಹುದು. ಕೇಂದ್ರ ಭಾಗದಲ್ಲಿ ಗೌತಮನು ಜನಿಸಿದ ಜಾಗವೆಂದು ಕಲ್ಲನ್ನಿರಿಸಿದ್ದಾರೆ. ಅದು ಹಸಿರು ಬಣ್ಣದಿಂದ ಕೂಡಿ ಪಾಚಿಗಟ್ಟಿದಂತೆ ಕಾಣುತ್ತದೆ. ಗೌತಮನ ಜನನಕ್ಕೆ ಈ ಕಲ್ಲು ಸಾಕ್ಷಿಯಾಗಿತ್ತೋ ಇಲ್ಲವೋ. ಚರಿತ್ರೆ ಪುರಾಣಗಳು ಸಂಧಿಸುವ ಅಮೂರ್ತ ಸಂಕೇತದಂತೆ ಆ ಶಿಲೆ ಕಾಣಿಸಿತು. ಸಾಮಾನ್ಯ ಜನರಿಗಾಗಿ ಆಕಾರಗಳನ್ನು ಕಾದಿರಿಸುತ್ತಾರೆ. ನೋಡಲು, ಹಿಡಿಯಲು, ನೇತು ಬೀಳಲು ಮತ್ತು ಆರಾಧಿಸಲು ಅವರ ಕೈಗೆ ಕಲ್ಲೋ, ಗೋಡೆಯೋ, ಏನಾದರೊಂದು ಮೂರ್ತ ರೂಪ ಬೇಕು. ಬಹು ಹೊತ್ತು ಅಲ್ಲಿ ನಿಂತೆ. ಹಿಂತಿರುಗಿ ನೋಡಿದರೆ ಮನೆ ಮಂದಿ ಎಲ್ಲ ಪದ್ಮಾಸನ ಹಾಕಿ ಕುಳಿತಿದ್ದಾರೆ!

"ಯಾವುದಾದರೊಂದು ದೌರ್ಬಲ್ಯವನ್ನು, ದುರ್ಗುಣವನ್ನು ಇಲ್ಲಿ ಬಿಟ್ಟು ಬಿಡುವುದು ಉಚಿತ. ಏಕೆಂದರೆ ಇದು ಗೌತಮ ಜನಿಸಿದ ಪವಿತ್ರವಾದ ಜಾಗ. ಏನಾದರೂ

ಶಪಥ ಮಾಡು" ಎಂದಳು ಕನಸು ಪುಟ್ಟಿ. ನಾನು ಇಂಥ ಶಪಥಗಳಲ್ಲಿ ನಂಬಿಕೆ ಇಲ್ಲದವನು. ಆದ್ದರಿಂದ ಜಾಗರೂಕನಾಗಿ ಶಪಥ ಮಾಡಿದೆ. "ಇನ್ನು ಮುಂದೆ ಅನಗತ್ಯವಾಗಿ ಕೋಪಿಸಿಕೊಳ್ಳುವುದಿಲ್ಲ"ಎಂದೆ. "ಈ ನಿನ್ನ ಶಪಥದಲ್ಲಿ 'ಅನಗತ್ಯ' ಎಂಬ ಪದ ಅಗತ್ಯವಿರಲಿಲ್ಲ" ಎಂದಳು. ಕೆಟ್ಟದ್ದನ್ನು ತ್ಯಜಿಸಲು ಮತ್ತು ಒಳ್ಳೆಯದನ್ನು ಮಾಡಲು ಎಲ್ಲಾ ಕಾಲ ಮತ್ತು ಎಲ್ಲಾ ಜಾಗಗಳೂ ಸೂಕ್ತವೇ. ತನ್ನೊಳಗೆ ಗಟ್ಟಿಯಿಲ್ಲದವ ಮಾತ್ರ ಕುಂಟುನೆಪಗಳನ್ನು ಹುಡುಕುತ್ತಾನೆ.

ಮಾಯಾದೇವಿ ದೇವಾಲಯದ ಹೊರಾವರಣದ ಹಸಿರು ಉದ್ಯಾನವನ ಗೌತಮನ ಜನನಕ್ಕೆ ಸೂಕ್ತವಾದ ಪರಿಸರದಂತಿದೆ. ಹುಟ್ಟಿಗೆ ಹಸಿರನ್ನೇ ಆಯ್ಕೆ ಮಾಡಿಕೊಂಡಿರುವ ಗೌತಮ ನಿಜಕ್ಕೂ ಅದೃಷ್ಟಶಾಲಿ.

*__ಓ ಆನಂದ !__ ನನ್ನ ಕಾಲವಾದನಂತರ,*
*ಮುಂದಿನ ದಿನಗಳಲ್ಲಿ ಶ್ರದ್ಧಾಳುಗಳು ಈ ಸ್ಥಳಕ್ಕೆ ನಂಬಿಕೆ, ಕುತೂಹಲ ಹಾಗೂ ಭಕ್ತಿಯಿಂದ ಬರುತ್ತಾರೆ.*
*ನನ್ನ ಜನ್ಮಸ್ಥಳವಾದ ಲುಂಬಿನಿಯು ಆಧ್ಯಾತ್ಮಿಕ ಶಿಸ್ತಿನ ಹಾಗೂ*
*ಆತ್ಯಂತಿಕ ಶಾಂತಿಯ ಮಾರ್ಗವಾಗುತ್ತದೆ. –ಬುದ್ಧ*

ಇದು ಬುದ್ಧನ ವ್ಯಾಖ್ಯೆ, ಬುದ್ಧನ ಬಾಲ್ಯದ ಏಳು ಪ್ರಥಮ ಹೆಜ್ಜೆಗಳು ಇಲ್ಲಿ ಮೂಡಿವೆ. ಸಾಖ್ಯ ದೊರೆ ಶುದ್ಧೋದನನ ಮಡದಿ ಮಾಯಾದೇವಿ ತನ್ನ ತವರೂರಾದ ದೇವದಾಹಕ್ಕೆ ಪ್ರಸವಕ್ಕೆಂದು ಪ್ರಯಾಣಿಸುತ್ತಿದ್ದಾಗ, ವೈಶಾಖ ಶುದ್ಧ ಪೂರ್ಣಿಮೆಯಂದು (ಕ್ರಿ.ಪೂ. ೬೨೩) ಗೌತಮನಿಗೆ ಜನ್ಮ ಕೊಟ್ಟಳು ಎನ್ನುತ್ತದೆ ಪ್ರತೀತಿ. ಸನಿಹದಲ್ಲಿರುವ ಪುಷ್ಕರಿಣಿಯಲ್ಲಿ ಹೆರಿಗೆಗೆ ಮುನ್ನ ಮಿಂದಳೆಂದು ನಂಬುಗೆ. ಇಟ್ಟಿಗೆಯ ಮೆಟ್ಟಿಲುಗಳಿಂದ ಆ ಕೊಳ ಕಲಾತ್ಮಕವಾಗಿದೆ. ಅಚ್ಚುಕಟ್ಟಾಗಿ ಕಾದಿರಿಸಲಾಗಿದೆ, ನವೀಕರಿಸಲಾಗಿದೆ. ಈ ಪುಷ್ಕರಿಣಿಯ ಉತ್ತರ ಬದಿಯಲ್ಲಿ ಅಶೋಕ ಸ್ಥಂಭವಿದೆ. ಕ್ರಿ.ಪೂ.೨೪೯ರಲ್ಲಿ ಇಲ್ಲಿಗೆ ಬಂದು, ಸ್ಥಂಭ ನಿಲ್ಲಿಸಿ, ಶಾಸನ ಕೆತ್ತಿಸಿ, ಗೌತಮನ ಜನ್ಮಸ್ಥಳವನ್ನು ಅಧಿಕೃತವಾಗಿ ದಾಖಲಿಸಿದ ಕೀರ್ತಿ ಸಾಮ್ರಾಟ್ ಅಶೋಕನದು. ಪಾಳಿ ಭಾಷೆಯಲ್ಲಿರುವ ಈ ಶಾಸನದ ಸಾರಾಂಶ:

*ದೇವನಾಂಪ್ರಿಯನಾದ ಚಕ್ರವರ್ತಿ ಅಶೋಕನು ತನ್ನ ಆಳ್ವಿಕೆಯ ೨೦ನೆಯ ವರ್ಷದಲ್ಲಿ, ಸ್ವತಃ, ಶಾಕ್ಯಮುನಿ ಬುದ್ಧನು ಜನಿಸಿದ ಈ ಸ್ಥಳಕ್ಕೆ ಭೇಟಿಯಿತ್ತುದರ ಗುರುತಾಗಿ, ಇಲ್ಲಿ ಒಂದು ಕಲ್ಲಿನ ಕಂಭವು ಸ್ಥಾಪಿಸಲ್ಪಟ್ಟಿತು. ಮಹಾಮುನಿಯಾದ ಬುದ್ಧನು ಈ ಲುಂಬಿನಿ ಗ್ರಾಮದಲ್ಲಿ ಜನಿಸಿದ್ದ ಕಾರಣಕ್ಕಾಗಿ ಈ ಗ್ರಾಮದ ಕರವು ಅದರ ೧/೮ ನೆಯ ಭಾಗಕ್ಕೆ ಕಮ್ಮಿ ಮಾಡಲ್ಪಟ್ಟಿತು.*

ಚೀನೀ ಯಾತ್ರಿಕ ಹುಯೆನ್‌ತ್ಸಾಂಗ್‌ನ ಪ್ರವಾಸಾನುಭವದಲ್ಲೂ ಈ ಜನ್ಮಸ್ಥಳದ ಬಗ್ಗೆ ಆಧಾರಗಳಿವೆ. ಲುಂಬಿನಿಗೆ ಜಗತ್ತಿನಲ್ಲೆಡೆಯಿಂದ ಎಲ್ಲ ಧರ್ಮಗಳ ಜನರೂ ಪ್ರವಾಹದಂತೆ ಹರಿದು ಬರುತ್ತಾರೆ. ಎಲ್ಲ ಶ್ರೀಸಾಮಾನ್ಯರ ತಾಕಲಾಟ, ದಿಗ್ಭ್ರಮೆ, ಸಂಕಟಗಳ ಪ್ರತೀಕವಾದ ಗೌತಮನನ್ನು ನೆನೆಯುತ್ತಾರೆ. ಅವನು ಮಾತ್ರ ಎರಡೂವರೆ ಸಾವಿರ ವರ್ಷಗಳ ಹಿಂದೆ ಧ್ಯಾನಕ್ಕೆ ಕುಳಿತವನು, ಇನ್ನೂ ಹಾಗೆಯೇ ಕುಳಿತು ಮೌನಿಯಾಗಿದ್ದಾನೆ.

ಇಪ್ಪತ್ತೇಳು ಕಿಲೋಮೀಟರು ಚಲಿಸಿದ ಮೇಲೆ ಕಪಿಲವಸ್ತು ಕಾಣಿಸಿತು. ಅದನ್ನೀಗ ಲಾರ್‌ಕೋಟ್ ಅನ್ನುತ್ತಾರೆ. ಸಾಧಾರಣವಾದ ಹಳ್ಳಿಯದು. ಹಳ್ಳಿಯನ್ನು ಹಾದು ಮುಂದೆ ಹೋದರೆ ಲುಂಬಿನಿಯಲ್ಲಿ ಕಾದಿರಿಸಿರುವಂಥದೇ ಒಂದು ವಿಶಾಲ ಉದ್ಯಾನವನ. ಈ ಉದ್ಯಾನವನದಲ್ಲಿ ಶುದ್ಧೋದನನ ಅರಮನೆ ಇತ್ತಂತೆ. ಪುಳಕಿತನಾಗಿ ಆ ಉದ್ಯಾನವನ್ನು ಹೊಕ್ಕೆ. ಗೌತಮನು ಬಾಲ್ಯ ಮತ್ತು ಯೌವ್ವನವನ್ನು ಕಳೆದ ಅಪೂರ್ವ ಜಾಗ. ಗೌತಮನು ಬುದ್ಧನಾಗುವ ಮೊದಲು, ಸಿದ್ಧಿಯ ಅರ್ಥ ಗಳಿಸಿ ಸಿದ್ಧಾರ್ಥನಾಗುವ ಮೊದಲು ಇಪ್ಪತ್ತೊಂಬತ್ತು ವರ್ಷಗಳ ಕಾಲ ರಾಜಕುಮಾರನಾಗಿದ್ದ ಪರಿಸರ ಇದು. ಅರಮನೆಯ ವಿವಿಧ ಪ್ರಾಂಗಣಗಳನ್ನು ಊಹಿಸಬಹುದಾದ ಇಟ್ಟಿಗೆಯ ಅರೆಬರೆ ಆಕೃತಿಗಳು, ವಿನ್ಯಾಸಗಳು ಸಾವಿರಾರು ವರ್ಷಗಳ ಕತೆ ಹೇಳುತ್ತವೆ. ಕತೆಯನ್ನು ಬಾಲ್ಯದಲ್ಲಿ ಕೇಳಿ ಕಲ್ಪಿಸಿಕೊಂಡು ಆನಂದಿಸಿದ್ದವರಿಗೆ ಇವು ಬರಿಯ ಇಟ್ಟಿಗೆಯ ಮುರುಕು ಗೋಡೆ ಅನ್ನಿಸುತ್ತವೆ. ಕಾಲ ಅದೆಷ್ಟು ನಿರ್ಗುಣ ಮತ್ತು ಕ್ರೂರವೆಂದರೆ ಅದು ಒಳಿತನ್ನೂ ಕೆಡುಕನ್ನೂ ಸಮಸಮನಾಗಿ ಸಮಗೊಳಿಸುತ್ತದೆ.

ನಾನೂ. ಮಕ್ಕಳೂ ಈ ಇಟ್ಟಿಗೆ ಕಟ್ಟಡಗಳ ಮೇಲೇರಿ ಏನೇನೋ ಚರ್ಚಿಸತೊಡಗಿದೆವು. ಗೌತಮನು ಇಲ್ಲಿ ಆಟವಾಡಿರಬಹುದು, ಇಲ್ಲಿ ಊಟ ಮಾಡಿರಬಹುದು, ಇಲ್ಲಿ ಪಟ್ಟಾಭಿಷೇಕವಾಗಿರಬಹುದು, ಇದು ಯಶೋಧರೆ– ಗೌತಮರ ಕೋಣೆ ಇರಬಹುದು, ರಾಹುಲನ ಗೆಳೆಯರು ಇಲ್ಲಿ ಆಡಿರಬಹುದು, ಮಾಯಾದೇವಿ ಈ ಗವಾಕ್ಷಿಯಿಂದ ಮಗನನ್ನು ಕೂಗಿರಬಹುದು, ಇದೇ ತಿರುವಿನಲ್ಲಿ ಗೌತಮ, ನಗರ ದರ್ಶನದಲ್ಲಿ ಮುಪ್ಪಿನ ಮುದುಕನನ್ನು, ಹಣ್ಣ್ಣ ಹಣ್ಣ್ಣ ರೋಗಿಯನ್ನು, ಶವಯಾತ್ರೆಯನ್ನು ಕಂಡಿರಬಹುದು, ನಟ್ಟಿರುಳು ಹೀಗೆ ಈ ಬಾಗಿಲಿನಿಂದ ಆಚೆ ಹೋಗಿರಬಹುದು....

...ಆದರೆ ಅಲ್ಲಿ ಅಶಿಸ್ತಾಗಿ ಬೆಳೆದಿದ್ದ ಉದ್ಯಾನವನವನ್ನು ಬಿಟ್ಟರೆ ಅರಮನೆಯೂ, ಕೋಣೆಯೂ, ದ್ವಾರವೂ, ಗವಾಕ್ಷಿಯೂ ಇರಲಿಲ್ಲ. ನಮ್ಮೊಳಗಿದ್ದ ಕತೆಗಳನ್ನು ಆ ಬಯಲು ಉದ್ಯಾನವನ ಮತ್ತು ಇಟ್ಟಿಗೆ ಆಕಾರಗಳ ಜತೆಗಿಟ್ಟು ನಮ್ಮ ನಮ್ಮ ಅರಮನೆಗಳನ್ನು ನಾವೇ ಕಟ್ಟಿಕೊಂಡೆವು. ಮಹಾಭಿನಿಷ್ಕ್ರಮಣ ದ್ವಾರವು ಪೂರ್ವಕ್ಕಿದೆ. ಆ ದ್ವಾರದಿಂದಲೇ ಗೌತಮನು ಮಧ್ಯರಾತ್ರಿಯಲ್ಲಿ ನಿರ್ಗಮಿಸಿದನೆಂದು ಪ್ರತೀತಿ. ಎಷ್ಟು ಅರ್ಥಪೂರ್ಣ! ಪೂರ್ವಕ್ಕೆ ಸೂರ್ಯನನ್ನು, ಜ್ಞಾನವನ್ನು ಹುಡುಕಿ

ಹೋದದ್ದು? ಇಂಥ ಕಾವ್ಯಾತ್ಮಕ ನೋಟ ಮುಗಿಸಿ ಈಚೆಗೆ ಬಂದರೆ ಕಾಯುತ್ತಿದ್ದ ಗಾರ್ಡು "ಕಾಫಿಗೇನಾದ್ರೂ ಕೊಡಿ" ಎಂದ. ರಪ್ಪನೆ ಕಟು ವಾಸ್ತವಕ್ಕೆ ಬಂದೆ. ಬುದ್ಧನ ಇಲ್ಲದ ಅರಮನೆಗೊಬ್ಬ ಗಾರ್ಡು! ಅವನೊಡ್ಡಿದ ರಿಜಿಸ್ಟರಿನಲ್ಲಿ ವಿವರ ದಾಖಲಿಸಬೇಕಂತೆ. ಆ ರಿಜಿಸ್ಟರೂ ಕೂಡಾ ಎರಡೂವರೆ ಸಾವಿರ ವರ್ಷಗಳಷ್ಟು ವಯಸ್ಸಾಗಿದ್ದಂತೆ ದಡ ಮುರಿದಿತ್ತು. ಯಾರೂ ಓದುತ್ತಾರೆ ಅನ್ನಿಸಲಿಲ್ಲ. ಅಚ್ಚಕನ್ನಡದಲ್ಲಿ ನನ್ನ ಅನಿಸಿಕೆಗಳನ್ನು ಬರೆದೆ. ಭಕ್ಷೀಸು ಪಡೆದ ಗಾರ್ಡು ಇದು ಯಾವ ಭಾಷೆ ಅಂತ ಕೂಡಾ ತಲೆ ಕೆಡಿಸಿಕೊಳ್ಳದೆ ಮತ್ತೊಬ್ಬ ಪ್ರವಾಸಿಗರತ್ತ ನಡೆದ.

ಕಪಿಲವಸ್ತುವಿನಿಂದ ಹೊರಟು ಅನೇಕಾನೇಕ ಪ್ರಾಚೀನ ಸ್ಮಾರಕಗಳನ್ನು ನೋಡುತ್ತ ಹೋದರೂ ಗಾಢವಾಗಿ ಅಚ್ಚೊತ್ತಿದ್ದು ಗೌತಮನ ಇಲ್ಲದ ಅರಮನೆ ಮತ್ತು ನಾವೇ ಕಟ್ಟಿಕೊಂಡ ಕಲ್ಪನೆಯ ಅರಮನೆ ಮಾತ್ರ. ಬೌದ್ಧ ಧರ್ಮವು ಪ್ರಚಲಿತವಾಗಿರುವ ಎಲ್ಲ ದೇಶಗಳೂ ಲುಂಬಿನಿಯಲ್ಲಿ ಪೈಪೋಟಿಯಿಂದ ಅದ್ದೂರಿಯಾದ ವರ್ಣರಂಜಿತ ಮೊನಾಸ್ಟ್ರಿಗಳನ್ನು ನಿರ್ಮಿಸಿವೆ. ಸೈಕಲ್ ರಿಕ್ಷಾ ಏರಿ ಇವನ್ನೆಲ್ಲ ಸುತ್ತಿ ಬಂದೆವು. ಆದರೆ ಹೃದಯಕ್ಕೆ ನಾಟಿದ್ದು ಗೌತಮನ ಇಲ್ಲದ ಅರಮನೆಯ ಕತೆ ಹೇಳುವ ಉದ್ಯಾನವನ ಮಾತ್ರ. ನಮ್ಮ ಎದೆಯ ನಿಧಿಯಂತೆ ಪೋಷಿಸಿಕೊಂಡಿದ್ದ ಸುವರ್ಣ ಆಕಾರಗಳು ದೊಪ್ಪನೆ ಕುಸಿದು ಬಿದ್ದು ಘೋರ ನಿರಾಶೆಯಾಗಿ, ಆದರೆ ಆ ನಿರಾಶೆಯಲ್ಲಿಯೇ ಅದೇ ತಾಣದಲ್ಲಿ ನಮ್ಮದೇ ಆದ ಸುವರ್ಣ ಶಿಲ್ಪವನ್ನು ಕ್ಷಣಾರ್ಧದಲ್ಲಿ ಕಲ್ಪಿಸಿಕೊಳ್ಳುವ ಸ್ವೋಪಜ್ಞ ಸೋಜಿಗವನ್ನು ಕಪಿಲವಸ್ತು ಕಟ್ಟಿಕೊಟ್ಟಿತು.

## ಪ್ರವಾಸ ಕಥನ–ಲೇಖಕರು: ನಾಗತಿಹಳ್ಳಿ ಚಂದ್ರಶೇಖರ್ (೧೯೫೮)



ನಾಗತಿಹಳ್ಳಿ ಚಂದ್ರಶೇಖರ್ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿಯಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿಯನ್ನು ಪಡೆದ ಇವರು ಕನ್ನಡ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬಹುಮುಖಿ ವ್ಯಕ್ತಿತ್ವದ ಇವರು ಸಾಹಿತ್ಯ, ರಂಗಭೂಮಿ, ಪ್ರವಾಸ, ಚಲನಚಿತ್ರ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಚಲನಚಿತ್ರಗಳಿಗಾಗಿ ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿ ಮತ್ತು ಫಿಲ್ಮ್‌ಫೇರ್ ಪ್ರಶಸ್ತಿಗಳು ಲಭಿಸಿವೆ. 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ'ದ ಪರಿಕಲ್ಪನೆಯ ಮೂಲಕ ತಮ್ಮ ಹುಟ್ಟೂರನ್ನು ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿದ್ದಾರೆ.

ನಾಗತಿಹಳ್ಳಿ ಚಂದ್ರಶೇಖರ್ ಅವರ ಮೂವತ್ತೊಂದು ಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಹಲವಾರು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ವಲಸೆ ಹಕ್ಕಿಯ ಹಾಡು–

ಅವರ ಪ್ರಮುಖ ಕಾದಂಬರಿ. ಮೂವತ್ತಕ್ಕೂ ಹೆಚ್ಚು ದೇಶಗಳನ್ನು ಸಂದರ್ಶಿಸಿ ಅನೇಕ ಪ್ರವಾಸ ಕಥನಗಳನ್ನು ರಚಿಸಿದ್ದಾರೆ. ಅಯನ, ನನ್ನ ಗ್ರಹಿಕೆಯ ಈಜಿಪ್ಟ್, ದಕ್ಷಿಣ ಧ್ರುವದಿಂ ಮತ್ತು ನನ್ನ ಗ್ರಹಿಕೆಯ ನೇಪಾಳ ಇವರ ಪ್ರಮುಖ ಪ್ರವಾಸಕಥನಗಳು.

ಗೌತಮ ಬುದ್ಧ ಜನಿಸಿದ ನೆಲೆ ಅವನ ವಿಚಾರಗಳನ್ನು ನಂಬಿ ಪಾಲಿಸುವವರ ಪಾಲಿಗೆ ದಿವ್ಯ ಸನ್ನಿಧಿ. 'ಲುಂಬಿನಿ' ಬುದ್ಧನ ಜನ್ಮಸ್ಥಳವೆಂಬ ಕಾರಣದಿಂದ ರೋಮಾಂಚನ ನೀಡುವಂತದ್ದು. ಭಾವನೆ, ಸಂವೇದನೆ, ಭಾವಸ್ಪಂದನೆಗಳಿಂದ ಕೂಡಿದ ಸಂವಹನವೊಂದು ಪ್ರವಾಸಿಗರ ಅನುಭವಕ್ಕೆ ಬರುತ್ತದೆ. ಲೇಖಕರು ಬುದ್ಧನ ಜನ್ಮಸ್ಥಳ ಲುಂಬಿನಿಗೆ ಹೋದಾಗಿನ ಅನುಭವಗಳನ್ನು ನಿರೂಪಿಸಿದ್ದಾರೆ. ನಿರ್ಮಲವಾದ ತೆರೆದ ಮನಸ್ಸಿನ ಸ್ವಾರಸ್ಯಗಳನ್ನು, ಬೆರಗು, ವಿಸ್ಮಯ, ಉತ್ಪ್ರೇಕ್ಷೆಗಳಿಗೆ ಹೊರತಾದ ಚಿಕಿತ್ಸಕ ಜೀವನದೃಷ್ಟಿಯ ಆಪ್ತಶೈಲಿಯನ್ನು ಇಲ್ಲಿ ಕಾಣಬಹುದು.

**ಪದಕೋಶ:**

ದಾರುಣ– ಭೀಕರ; ದಹಿಸು–ಸುಡು; ಪ್ರಖರ–ತೀಕ್ಷ್ಣ, ಬೆಳಗು; ಉತ್ಕರ್ಷ– ಮೇಲ್ಮೈ ಅಭಿವೃದ್ಧಿ; ಪುಳಕ– ರೋಮಾಂಚನ; ಮೂರ್ತ–ಗೋಚರಿಸುವ; ಉಚಿತ– ಯೋಗ್ಯ; ಪ್ರತೀತಿ–ನಂಬಿಕೆ; ತಾಕಲಾಟ–ಘರ್ಷಣೆ; ತಪ್ತ–ನೊಂದ; ಗವಾಕ್ಷಿ– ಬೆಳಕಿಂಡಿ; ಭಕ್ಷೀಸು–ಇನಾಮು, ಬಹುಮಾನ; ಸ್ವೋಪಜ್ಞತೆ–ಸ್ವಂತಿಕೆ.

## I. ಸಂದರ್ಭ ಸೂಚಿಸಿ ವಿವರಿಸಿ:

೧. ಈ ಬಿಸಿಲೇ ಗೌತಮನನ್ನು ಸನ್ಯಾಸಕ್ಕೆ ದೂಡಿರಬೇಕು.

೨. ಇನ್ನು ಮುಂದೆ ಅನಗತ್ಯವಾಗಿ ಕೋಪಿಸಿಕೊಳ್ಳುವುದಿಲ್ಲ.

೩. ಗವಾಕ್ಷಿಯಿಂದ ಮಗನನ್ನು ಕೂಗಿರಬಹುದು.

೪. ಬುದ್ಧನ ಇಲ್ಲದ ಅರಮನೆಗೊಬ್ಬ ಗಾರ್ಡು!

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಗೌತಮ ಜನಿಸಿದ್ದು ಎಲ್ಲಿ?

೨. ನೇಪಾಳದ ವಿಮಾನ ಹೇಗಿತ್ತು?

೩. ಬುದ್ಧನಿಗೆ ಜ್ಞಾನೋದಯವಾದ ದಿನ ಯಾವುದು?

೪. ಮಾಯಾದೇವಿ ದೇವಾಲಯ ಹೇಗಿತ್ತು?

೫. ಅಶೋಕನ ಸ್ತಂಭ ಎಲ್ಲಿದೆ?

೬. ಯಾರ ಪ್ರವಾಸಾನುಭವದಲ್ಲಿ ಲುಂಬಿನಿಯ ಬಗೆಗೆ ವಿವರಗಳಿವೆ?

೭. ಕಪಿಲವಸ್ತುವಿನ ಇಂದಿನ ಹೆಸರೇನು?
೮. ಅರಮನೆಯ ಗಾರ್ಡು ಲೇಖಕರನ್ನು ಏನೆಂದು ಕೇಳಿದನು?
೯. ಲೇಖಕರ ಮನಸ್ಸಿನಲ್ಲಿ ಗಾಢವಾಗಿ ಅಚ್ಚೊತ್ತಿದ್ದು ಯಾವುದು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಮಹಾನ್ ವ್ಯಕ್ತಿಗಳ ದರ್ಶನ ಅರ್ಥವಾಗುವುದು ಹೇಗೆ?
೨. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?
೩. ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳು ಯಾವುವು?

## IV. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಲುಂಬಿನಿ ಪಯಣದ ಅನುಭವಗಳೇನು?
೨. ಗೌತಮನ ಮನಸ್ಸಿನ ಉರಿ ಯಾವ ಬಗೆಯದೆಂದು ಲೇಖಕರು ಊಹಿಸಿದ್ದಾರೆ?
೩. ಮಾಯಾದೇವಿ ದೇವಾಲಯದ ಪರಿಸರ ಹೇಗಿತ್ತು?
೪. ಕಪಿಲವಸ್ತುವಿನಲ್ಲಿ ಲೇಖಕರ ನಿರಾಸೆಗೆ ಕಾರಣವೇನು?
೫. ಇಟ್ಟಿಗೆ ಕಟ್ಟಡಗಳ ಮೇಲೆ ಲೇಖಕರು ಏನೇನು ಚರ್ಚಿಸಿದರು?
೬. ಕಪಿಲವಸ್ತುವಿನ ಉದ್ಯಾನವನದ ಬಗ್ಗೆ ಲೇಖಕರು ನೀಡುವ ವಿವರಗಳನ್ನು ಸಂಗ್ರಹಿಸಿ.

**ಆಕರ:** ನನ್ನ ಗ್ರಹಿಕೆಯ ನೇಪಾಳ- ನಾಗತಿಹಳ್ಳಿ ಚಂದ್ರಶೇಖರ್
ಅಭಿವ್ಯಕ್ತಿ ಪ್ರಕಾಶನ, ಬೆಂಗಳೂರು.

**ಹೆಚ್ಚಿನ ಓದು:**

ನೀಲಾಚಲಗಳ ನಾಡಿನಲ್ಲಿ - ಬಸವರಾಜ ಸಬರದ
ಅಮೇರಿಕಾದಲ್ಲಿ ನಾನು - ಕೃಷ್ಣಾನಂದ ಕಾಮತ್
ಅಮೇರಿಕಾದಲ್ಲಿ ಗೊರೂರು - ಗೊರೂರು ರಾಮಸ್ವಾಮಿ ಅಯ್ಯಂಗಾರ್
ಮಾಸ್ಕೋದಲ್ಲಿ ೨೨ ದಿನಗಳು - ಡಾ. ಜಿ.ಎಸ್. ಶಿವರುದ್ರಪ್ಪ

**ರಕ್ಷಿಸು ಶಿಕ್ಷಿಸಿದವರನ್ನು । ಪ್ರೀತಿಸು ದ್ವೇಷಿಸಿದವರನ್ನು ।**
**ನಗಿಸು ಅಳಿಸಿದವರನ್ನು । ವಂದಿಸು ನಿಂದಿಸಿದವರನ್ನು ।**
**ಇದೇ ಮಾನವ ಧರ್ಮ. -ಲೋಕೋಕ್ತಿ**

# ೬. ಮಹಾತ್ಮರ ಗುರು

**–ಡಾ. ಮುಗಳವಳ್ಳಿ ಕೇಶವ ಧರಣಿ**

**ಸರಕಾರ, ಸಂಘ ಮತ್ತು ಸಂಸ್ಥೆಗಳು ವಿಮುಖವಾದಾಗ, ಸಮಾಜೋದ್ಧಾರ ಕಾರ್ಯಗಳನ್ನು ವ್ಯಕ್ತಿಗಳು ಕೈಗೆತ್ತಿಕೊಳ್ಳುತ್ತಾರೆ. ಹಲವಾರು ಎಡರು ತೊಡರುಗಳು ಕಾಡಿದರೂ ಹಿಮ್ಮೆಟ್ಟದೆ ತಮ್ಮ ಕಾರ್ಯವನ್ನು ಮುಂದುವರಿಸುತ್ತಾರೆ. ಸಮಾಜದ ವಿರೋಧಗಳನ್ನು ಲೆಕ್ಕಿಸದೆ ನಿಸ್ವಾರ್ಥ ಸೇವೆಯಲ್ಲಿ ಮುಳುಗಿರುತ್ತಾರೆ. ಇಡೀ ಬದುಕನ್ನು ಇತರರ ಉದ್ಧಾರಕ್ಕಾಗಿ ಮೀಸಲಿಡುವವರೇ ಮಹಾತ್ಮರು ಎನಿಸಿಕೊಳ್ಳುತ್ತಾರೆ.**

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತೀಯತೆ, ಅಸ್ಪೃಶ್ಯತೆ ಮೊದಲಾದವುಗಳು ಅನಿಷ್ಟ ಪಿಡುಗುಗಳು. ಜಾತೀಯತೆಯ ದಬ್ಬಾಳಿಕೆ, ದೌರ್ಜನ್ಯಗಳನ್ನು ಮೆಟ್ಟಿ ನಿಲ್ಲಲು ದಕ್ಷಿಣ ಭಾರತದಲ್ಲಿ ಆರಂಭವಾದ ಸಾಮಾಜಿಕ ಸುಧಾರಣಾ ಚಳವಳಿಯ ನಾಯಕತ್ವವನ್ನು ಮಹಾತ್ಮಾ ಜ್ಯೋತಿಬಾ ಫುಲೆ, ಶಾಹು ಮಹಾರಾಜ್, ನಾರಾಯಣ ಗುರು, ನಾಲ್ವಡಿ ಕೃಷ್ಣರಾಜ ಒಡೆಯರ್, ಮಹಾತ್ಮ ಗಾಂಧಿ, ಬಾಬಾಸಾಹೇಬ್ ಅಂಬೇಡ್ಕರ್ ಮೊದಲಾದವರು ವಹಿಸಿದ್ದರು. ಇವರಂತೆ ಸ್ಫೂರ್ತಿ, ಪ್ರೇರಣೆ ನೀಡಿ, ಮಾರ್ಗದರ್ಶಕರಾದವರು, ದಕ್ಷಿಣ ಕನ್ನಡ ಜಿಲ್ಲೆಯ ಶೋಷಿತ ಜನಾಂಗದವರ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ ಹಚ್ಚಿದ ಕುದ್ಮುಲ್ ರಂಗರಾವ್.

ಕುದ್ಮುಲ್ ರಂಗರಾವ್ ಇಂದಿಗೆ ನೂರು ವರ್ಷಗಳ ಹಿಂದೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸ್ಪೃಶ್ಯರಲ್ಲಿ ಅರಿವು ಮೂಡಿಸಿ, ಮಕ್ಕಳಿಗಾಗಿ ಜಿಲ್ಲೆಯಲ್ಲಿ ಹತ್ತಾರು ಕಡೆ ಶಾಲೆಗಳನ್ನು ತೆರೆದು, ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಿ ಶಿಕ್ಷಣ ನೀಡುವ ವ್ಯವಸ್ಥೆ ಕಲ್ಪಿಸಿದರು. ವಿಧವೆಯರು ಮತ್ತು ದೇವದಾಸಿಯರ ಕಲ್ಯಾಣಕ್ಕಾಗಿ ಆಶ್ರಮಗಳನ್ನು ನಿರ್ಮಿಸಿ, ಶ್ರೀಮಂತರಿಂದ ನೂರಾರು ಎಕರೆ ಜಮೀನನ್ನು ಕ್ರಯಕ್ಕೆ ಕೊಂಡು ದಲಿತರ ಕೃಷಿ ಮತ್ತು ವಸತಿಗೆ ನಿವೇಶನಗಳನ್ನು ಉಚಿತವಾಗಿ ಹಂಚಿ, ದಲಿತರ ಆಶಾಕಿರಣವಾಗಿ, ಸಂಪ್ರದಾಯ ಶರಣರಿಗೆ ಸಿಡಿಲಾಗಿ ಹೋರಾಡಿದವರು.

ಆಗಿನ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಒಂದಾಗಿದ್ದ ಕಾಸರಗೋಡಿನ ಕುದ್ಮುಲ್ ಎಂಬ ಚಿಕ್ಕ ಗ್ರಾಮದಲ್ಲಿ ಪ್ರತಿಷ್ಠಿತ ಸಾರಸ್ವತ ಬ್ರಾಹ್ಮಣ ಕುಟುಂಬದಲ್ಲಿ ೧೮೫೯ ಜೂನ್ ೨೯ರಂದು ದೇವಪ್ಪಯ್ಯ ಮತ್ತು ಶ್ರೀಮತಿ ಗೌರಿ ದಂಪತಿಗಳ ಮಗನಾಗಿ ರಂಗರಾವ್ ಜನಿಸಿದರು. ಶಿಕ್ಷಣ ಮುಗಿಸಿ ವಕೀಲ ವೃತ್ತಿಯಲ್ಲಿ ತೊಡಗಿದ್ದ ರಂಗರಾವ್ ಬಡವರ ಬಂಧು, ಬಡವರ ವಕೀಲರೆಂದೇ ಪ್ರಸಿದ್ಧರಾದರು. ದನಿ ಇಲ್ಲದವರಿಗೆ ದನಿ ಕೊಟ್ಟು ಆತ್ಮಸ್ಥೈರ್ಯ ತುಂಬಿ ಆಶಾಕಿರಣವಾದರು.

### ತಿರುವು ನೀಡಿದ ಘಟನೆ:

೧೮೮೮ ರಲ್ಲಿ ಮಂಗಳೂರು ಜಿಲ್ಲಾ ಕೋರ್ಟಿನಲ್ಲಿ ನಡೆದ ಅನಿರೀಕ್ಷಿತ ಘಟನೆಯು ರಂಗರಾವ್ ಅವರ ಜೀವನದಲ್ಲಿ ಹೊಸ ತಿರುವು ಸೃಷ್ಟಿಸಿತು. ಬೆಂದೂರು ಬಾಬು ಎಂಬ ಅಸ್ಪೃಶ್ಯ ವ್ಯಕ್ತಿ, ಕೋರ್ಟಿನಲ್ಲಿ ಪೇದೆ ಕೆಲಸಕ್ಕಾಗಿ ಅರ್ಜಿ ಹಾಕಿದ್ದ. ಆತನನ್ನು ಆಗಿನ ಆಂಗ್ಲ ನ್ಯಾಯಾಧೀಶರು ಕೆಲಸಕ್ಕೆ ನೇಮಕ ಮಾಡಿಕೊಂಡರು. ಈ ವಿಷಯ ತಿಳಿದ ಕೆಲವರು ಒಟ್ಟಾಗಿ ಪ್ರತಿಭಟಿಸಿದರು. ನ್ಯಾಯಾಲಯವನ್ನು ಬಹಿಷ್ಕರಿಸಿ, ನ್ಯಾಯಾಧೀಶರಿಗೆ ಕೊಲೆ ಬೆದರಿಕೆ ಹಾಕಿದರು. ಇದನ್ನೆಲ್ಲಾ ಗಮನಿಸಿದ ರಂಗರಾವ್ ವಕೀಲ ವೃತ್ತಿಯನ್ನು ತ್ಯಜಿಸಿ, ಜೀವನಪರ್ಯಂತ ದಲಿತರ ಉದ್ಧಾರಕ್ಕಾಗಿ ತಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಲು ತೀರ್ಮಾನಿಸಿದರು.

ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀಮಂತ ಕುಟುಂಬದ ರಂಗರಾವ್ ಗೌತಮಬುದ್ಧ ಮತ್ತು ಬಸವಣ್ಣನವರ ಸಾಮಾಜಿಕ ಕ್ರಾಂತಿಯಿಂದ ಪ್ರಭಾವಿತರಾಗಿದ್ದರು. 'ಪ್ರಗತಿಗೆ ವಿದ್ಯೆಯೇ ಮೂಲ' ಎಂದು ನಂಬಿದ್ದ ರಂಗರಾವ್ ಶೋಷಿತ ಸಮುದಾಯದ ಮಕ್ಕಳಿಗೆ ಶಿಕ್ಷಣ ನೀಡುವ ಕುರಿತು ಚಿಂತಿಸಿದರು. ಅಂದಿನ ಕಾಲದಲ್ಲಿ ದಲಿತರಿಗೆ ಯಾವುದೇ ಶಾಲೆಗಳಲ್ಲಿ ಪ್ರವೇಶ ಇರಲಿಲ್ಲ. ಅವರನ್ನು ಮುಟ್ಟುವುದಕ್ಕೂ ಕೆಲವರು ಹೇಸುತ್ತಿದ್ದರು. ಸಾರ್ವಜನಿಕ ಕೆರೆ, ಬಾವಿ, ಹೋಟೆಲುಗಳಲ್ಲಿ ದಲಿತರ ಪ್ರವೇಶ ನಿಷಿದ್ಧವಾಗಿತ್ತು.

ದಲಿತರನ್ನು ವಿದ್ಯಾವಂತರನ್ನಾಗಿ ಮಾಡುವುದು ಮತ್ತು ಅವರ ಶ್ರೇಯಸ್ಸಿಗಾಗಿ ದುಡಿಯುವುದು ಅಂದಿನ ಕಾಲದಲ್ಲಿ ಸಮಾಜದ ನಂಬಿಕೆಗೆ ವಿರೋಧವಾಗಿತ್ತು. 'ದಲಿತರು ವಿದ್ಯಾವಂತರಾದರೆ, ಆರ್ಥಿಕವಾಗಿ ಪ್ರಗತಿ ಹೊಂದಿದರೆ, ಜೀತದ ಕೆಲಸವನ್ನು ಯಾರು ಮಾಡುತ್ತಾರೆ?' ಎಂಬ ಭಯ ಸಮಾಜದಲ್ಲಿತ್ತು. ಆದ್ದರಿಂದ ದಲಿತರಿಗೆ ಶಿಕ್ಷಣ ನೀಡುವುದನ್ನು ವಿರೋಧಿಸುತ್ತಿದ್ದರು. ರಂಗರಾವ್ ಅವರು, ಡಿ.ಸಿ.ಎಂ.(ಡಿಪ್ರೆಸ್ಡ್ ಕ್ಲಾಸ್ ಮಿಷನ್) ಎಂಬ ಸಂಸ್ಥೆಯನ್ನು ಸ್ಥಾಪಿಸಿ ಮಂಗಳೂರಿನ ಕಂಕನಾಡಿ, ಮೂಲ್ಕಿ, ಬೋಳೂರು, ಉಡುಪಿ, ಬನ್ನಂಜೆ, ನೇಜಾರು, ಅತ್ತಾವರ, ಬಾಬುಗುಡ್ಡೆ, ದಡ್ಡಲ್ ಕಾಡುಗಳಲ್ಲಿ ಉಚಿತ ಶಾಲೆಗಳನ್ನು ತೆರೆದರು. ಈ ಶಾಲೆಗಳನ್ನು 'ಪಂಚಮ ಶಾಲೆ'ಗಳು ಎಂದು ಕರೆಯುತ್ತಿದ್ದರು.

ಸಂಪ್ರದಾಯನಿಷ್ಠ ಅಧ್ಯಾಪಕರು ಅಸ್ಪೃಶ್ಯರಿಗೆ ವಿದ್ಯೆ ಕಲಿಸಲು ನಿರಾಕರಿಸಿದಾಗ ಕ್ರೈಸ್ತ ಅಧ್ಯಾಪಕರನ್ನು ನೇಮಿಸಿಕೊಂಡರು. ಶಾಲೆಗಳಲ್ಲಿ ಮಧ್ಯಾಹ್ನದ ಊಟಕ್ಕೆ ವ್ಯವಸ್ಥೆ ಮಾಡಿ, ಮಕ್ಕಳು ಶಾಲೆಗೆ ತಪ್ಪದೇ ಬರುವಂತೆ ಪ್ರೋತ್ಸಾಹಿಸಲು ದಿನಕ್ಕೆ ೨ ಪೈಸೆ ನಗದು ಪ್ರೋತ್ಸಾಹ ಧನವನ್ನು ಮಕ್ಕಳ ತಂದೆ-ತಾಯಿಗೆ ನೀಡುತ್ತಿದ್ದರು.

ಕುದ್ಮುಲ್ ರಂಗರಾವ್ ಅಸ್ಪೃಶ್ಯರ ಮಕ್ಕಳ ಮೈ-ಕೈ ತೊಳೆದು, ಅವರನ್ನು ಶುಚಿಗೊಳಿಸಿದರು. ದಲಿತರ ಮನೆಗಳಿಗೆ ಹೋಗಿ ಮಕ್ಕಳ ತಲೆಯನ್ನು ನೇವರಿಸಿ, ಅವರ ಜೊತೆ ಕುಳಿತು, ಊಟ ಮಾಡಿದರು. ಅಸ್ಪೃಶ್ಯರ ಹಟ್ಟಿಗಳಲ್ಲೇ ಮಲಗಿ, ಮನಸ್ಸು ಗೆದ್ದರು.

ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಮನ ಒಲಿಸಿದರು. ಇದರ ಫಲವಾಗಿಯೇ ಜಿಲ್ಲೆಯ ಬಹುಸಂಖ್ಯಾತ ದಲಿತ ಜನ ಸಮುದಾಯದ ಪ್ರತಿಭೆಗಳು, ಬೆಳಕಿಗೆ ಬರತೊಡಗಿದವು. ಶಿಕ್ಷಣ ಮತ್ತು ಉದ್ಯೋಗದಲ್ಲಿ ಅವಕಾಶ ಸಿಕ್ಕರೆ ತಾವೂ ಹೇಗೆ ಉನ್ನತಿಗೆ ಏರಬಲ್ಲೆವು ಎಂಬುದನ್ನು ಅನೇಕ ದಲಿತರು ನಿರೂಪಿಸಿದರು.

ಭಾರತೀಯ ಸಮಾಜಕ್ಕೆ ಅಂಟಿಕೊಂಡು ಬಂದಿದ್ದ ಸಾಮಾಜಿಕ ಜಾಡ್ಯಗಳಲ್ಲಿ ಜೀತಪದ್ಧತಿಯೂ ಒಂದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುತ್ತು ಅನ್ನಕ್ಕಾಗಿ, ಅಲ್ಪ ಸಾಲಕ್ಕಾಗಿ ಧಣಿಗಳ ಮನೆಯಲ್ಲಿ ಬಂಧಿಗಳಾಗಿದ್ದ ನೂರಾರು ಜೀತದಾಳುಗಳನ್ನು ಕುದ್ಮಲ್ ರಂಗರಾವ್ ಶತಮಾನದ ಹಿಂದೆಯೇ ವಿಮೋಚನೆಗೊಳಿಸಿದರು.

ದಲಿತರಿಗೆ ವೃತ್ತಿಪರ ಶಿಕ್ಷಣ ನೀಡಲು ಶೇಡಿಗುಡ್ಡೆ ಎಂಬಲ್ಲಿ ಕೈಗಾರಿಕಾ ತರಬೇತಿ ಶಾಲೆ ಪ್ರಾರಂಭಿಸಿದರು. ಜೀವ ಬೆದರಿಕೆ ಬಂದರೂ ಕುಗ್ಗದೆ, ತಾವು ಸ್ಥಾಪಿಸಿದ್ದ ಡಿ.ಸಿ.ಎಂ. ಮಿಶನ್ ಶಾಲೆಗಳಲ್ಲಿ ಮತ್ತು ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಬಡಗಿ, ನೇಯ್ಗೆ, ತೋಟಗಾರಿಕೆ, ಕಸೂತಿ, ರೇಷ್ಮೆ ಹುಳು ಸಾಕಾಣಿಕೆ ಇತ್ಯಾದಿ ವೃತ್ತಿಗಳನ್ನು ಅವಲಂಬಿಸಲು ಅಗತ್ಯವಾದ ತರಬೇತಿಯನ್ನು ದಲಿತರಿಗೆ ಕೊಡಿಸಿದರು; ಸ್ವಾವಲಂಬಿ ಜೀವನಕ್ಕೆ ದಾರಿ ತೋರಿದರು. ಅನ್ಯರ ಮನೆಯ ಅನ್ನಕ್ಕಿಂತ ಆತ್ಮಗೌರವದ ಗಂಜಿ ಊಟವೇ ದೊಡ್ಡದೆಂದು ತೋರಿಸಿಕೊಟ್ಟರು.

ಕೊರಗ ಜನಾಂಗದವರಿಗೆ ಕೋರ್ಟ್‌ಗುಡ್ಡೆ ಬಳಿ ಸಾಲು ಮನೆಗಳನ್ನು ಕಟ್ಟಿಸಿದರು. ಕುಲ ಕಸುಬಿನಲ್ಲಿ, ಗುಡಿ ಕೈಗಾರಿಕೆಗಳಲ್ಲಿ ತೊಡಗಲು ನೆರವಾದರು. ದಲಿತರ ಆರ್ಥಿಕ ಅಭಿವೃದ್ಧಿಗಾಗಿ, ಸಹಕಾರ ಮನೋವೃತ್ತಿ ಬೆಳವಣಿಗೆಗಾಗಿ ಕೋರ್ಟ್‌ಹಿಲ್ಸ್‌ನಲ್ಲಿ 'ಆದಿ ದ್ರಾವಿಡ ಸಹಕಾರ ಸಂಘ'ವನ್ನು ಸ್ಥಾಪಿಸಿದರು.

ಕುದ್ಮಲ್ ರಂಗರಾವ್ ತಮ್ಮ ಸಾರಸ್ವತ ಬ್ರಾಹ್ಮಣ ಜಾತಿಯವರಿಂದಲೂ ಬಹಿಷ್ಕಾರಕ್ಕೆ ಗುರಿಯಾದರು. ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ದೇವಾಲಯ ಪ್ರವೇಶವನ್ನು ನಿರಾಕರಿಸಲಾಯಿತು. ಕ್ಷೌರಿಕರು ಕ್ಷೌರ ಮಾಡಲು, ಅಗಸರು ಬಟ್ಟೆ ಮುಟ್ಟಲು ನಿರಾಕರಿಸುವಂತಹ ವಾತಾವರಣ ಸೃಷ್ಟಿಯಾಯಿತು. ಹಾದಿಯಲ್ಲಿ ಹೋಗುವಾಗ, ಪುಂಡರು ಅವಮಾನಿಸಿ ಕಲ್ಲು ತೂರಿದರು. ಈ ಅಪಮಾನ, ಕಿರುಕುಳ ಬೆದರಿಕೆಗಳಿಗೆಲ್ಲ ಕುದ್ಮಲ್ ರಂಗರಾವ್ ತಿಲ ಮಾತ್ರವೂ ಅಂಜಲಿಲ್ಲ. ಅವರ ಧ್ಯೇಯನಿಷ್ಠೆ ಇನ್ನೂ ದೃಢವಾಯಿತು; 'ನನ್ನ ಶಾಲೆಯಲ್ಲಿ ಕಲಿತ ದಲಿತ ಜನಾಂಗದ ಮಕ್ಕಳು ವಿದ್ಯಾವಂತರಾಗಿ, ದೊಡ್ಡವರಾಗಿ, ಸರ್ಕಾರಿ ನೌಕರಿಗೆ ಸೇರಿ, ನಮ್ಮೂರ ರಸ್ತೆಗಳಲ್ಲಿ ಕಾರಿನಲ್ಲಿ ಓಡಾಡಬೇಕು. ಆಗ ರಸ್ತೆಯಲ್ಲಿ ಏಳುವ ಧೂಳು ನನ್ನ ತಲೆಗೆ ತಾಗಬೇಕು. ಆಗ ನನ್ನ ಜನ್ಮ ಸಾರ್ಥಕವಾಗುತ್ತದೆ' ಎಂದು ಹೇಳಿದರು (ಅವರ ಈ ಹೇಳಿಕೆಯನ್ನೇ ಅವರ ಸಮಾಧಿಯ ಮೇಲೆ ಬರೆಯಲಾಗಿದೆ).

ದಲಿತರ ವಿಮೋಚನೆ ಆಗಬೇಕಾದರೆ, ಮೊದಲು ದಲಿತ ಮಹಿಳೆಯರ ವಿಮೋಚನೆ ಆಗಬೇಕೆಂದು ಅರಿತಿದ್ದ ಕುದ್ಮುಲ್ ರಂಗರಾವ್ ದಲಿತ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಆದ್ಯತೆ ನೀಡಿದರು. ದೂರದ ಹಳ್ಳಿಗಳಿಂದ ಬರುವ ಹೆಣ್ಣು ಮಕ್ಕಳಿಗಾಗಿ ನಗರದ ಶೇಡಿ ಗುಡ್ಡೆಯಲ್ಲಿ ಹಾಸ್ಟೆಲ್ ತೆರೆದರು. ಅಬಲೆಯರ ಮತ್ತು ವಿಧವೆಯರ ವಿದ್ಯಾಭ್ಯಾಸಕ್ಕಾಗಿಯೂ ಆಶ್ರಮಗಳನ್ನು ನಿರ್ಮಿಸಿದರು. ಆಶ್ರಮಗಳು ಎಲ್ಲಾ ಜಾತಿಯ ಅನಾಥ ಮಹಿಳೆಯರಿಗೆ ಮುಕ್ತವಾಗಿದ್ದವು. ಅವರಿಗೆ ರಕ್ಷಣೆಯೂ ಸಿಗುತ್ತಿತ್ತು. ಜೀವನೋಪಾಯಕ್ಕಾಗಿ ವಿವಿಧ ವೃತ್ತಿಗಳನ್ನು ಅವಲಂಬಿಸಲು ಬೇಕಾದ ತರಬೇತಿಯೂ ದೊರಕುತ್ತಿತ್ತು, ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹವನ್ನು ನೀಡಿ ಅಸ್ಪೃಶ್ಯರ ಒಳಜಾತಿಗಳೊಂದಿಗೆ ವಿವಾಹ ಸಂಬಂಧ ಏರ್ಪಡಿಸಿದರು; ದೇವದಾಸಿಯರ ಮತ್ತು ವಿಧವೆಯರ ಮರುವಿವಾಹ ಮಾಡಿಸಿದರು.

೧೯೧೨ ರಲ್ಲಿ ತಮ್ಮ ಮಗಳು ರಾಧಾಬಾಯಿಯನ್ನು ಮದ್ರಾಸಿನ ಡಾ.ಸುಬ್ರಾಯನ್‌ಗೆ ಕೊಡುವ ಮೂಲಕ, ತಮ್ಮ ಕುಟುಂಬದಲ್ಲೇ ಅಂತರ್ಜಾತಿ ವಿವಾಹಕ್ಕೆ ಅವಕಾಶವನ್ನು ಒದಗಿಸಿದರು. ಈ ಮದುವೆಯ ಪೌರೋಹಿತ್ಯವನ್ನು ಚಕ್ರವರ್ತಿ ರಾಜಗೋಪಾಲಾಚಾರ್ಯ ವಹಿಸಿದ್ದರು. ಆಡಂಬರ, ವಧುದಕ್ಷಿಣೆ, ವರದಕ್ಷಿಣೆ, ದುಂದುವೆಚ್ಚಗಳಿಗೆ ಸಂಪೂರ್ಣವಾಗಿ ಕಡಿವಾಣ ಹಾಕಿದರು. ಇದು ಗಾಂಧೀಜಿಯವರ ಗಮನವನ್ನೂ ಸೆಳೆದು, ಪ್ರಭಾವವನ್ನು ಬೀರಿತು. ಮುಂದೆ ಗಾಂಧೀಜಿಯವರೇ ತಮ್ಮ ಮಗನಿಗೆ ರಾಜಾಜಿಯವರ ಮಗಳನ್ನು ಸೊಸೆಯಾಗಿ ತಂದುಕೊಂಡು, ಅಂತರ್ಜಾತಿ ವಿವಾಹಕ್ಕೆ ಅವಕಾಶ ಒದಗಿಸಿದರು.

ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾದ ಜನರಿಗೆ ರಂಗರಾವ್ ಸ್ವಾಭಿಮಾನ ಮತ್ತು ಘನತೆಯ ಬದುಕು ನಡೆಸಲು ಪ್ರೇರಣೆಯನ್ನು ನೀಡಿದರು. ದಲಿತರು ತಮ್ಮ ದಾಸ್ಯದ ಸಂಕೋಲೆಗಳನ್ನು ಕಳಚಿಕೊಳ್ಳಲು ಅಗತ್ಯವಾದ ಯೋಜನೆಗಳನ್ನು ರೂಪಿಸಿ, ಕೈಗೆತ್ತಿಕೊಂಡರು. ವಿರೋಧ, ಹಣದ ಬೆಂಬಲ ಇಲ್ಲದಾಗ್ಯೂ, ಪತ್ರಿಕೆ, ರೈಲು, ಬಸ್ಸುಗಳಿಲ್ಲದ ಆ ಕಾಲದಲ್ಲಿ, ಕಾಲ್ನಡಿಗೆಯಲ್ಲಿ ಊರೂರು ಅಲೆದು, ದಲಿತರ ಧಮನಿಗಳಲ್ಲಿ ಹೊಸ ಚೈತನ್ಯ ತುಂಬಿದರು.

## ರಾಜಕೀಯ ಮೀಸಲಾತಿ

ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ತಾಳುವ (೧೮೯೧ ಏಪ್ರಿಲ್ ೧೪) ಮೂರು ವರ್ಷ ಮೊದಲೇ ೧೮೮೮ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ದಲಿತ ಸಮುದಾಯಕ್ಕೆ ರಾಜಕೀಯ ಮೀಸಲಾತಿ ಒದಗಿಸಿಕೊಟ್ಟ ಕೀರ್ತಿ ಕುದ್ಮುಲ್ ರಂಗರಾವ್‌ಗೆ ಸಲ್ಲುತ್ತದೆ. ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಬೋರ್ಡ್ ಮತ್ತು ಪುರಸಭೆಗಳಲ್ಲಿ ದಲಿತ ಜನಾಂಗದ ಸದಸ್ಯರಿಗೆ ಅವಕಾಶ ನೀಡಬೇಕೆಂದು ಒತ್ತಾಯಿಸಲು ಜನರನ್ನು ಸಂಘಟಿಸಿ ಹೋರಾಟಕ್ಕಿಳಿದರು. ಅವರ ಅನವರತ ಹೋರಾಟದ ಫಲವಾಗಿ, ಅಂಗರ ಮಾಸ್ತರ್ ಮತ್ತು ಗೋವಿಂದ ಮಾಸ್ತರ್ ಎಂಬ ಇಬ್ಬರು ದಲಿತರು ಪ್ರಪ್ರಥಮ ಬಾರಿಗೆ ಸ್ಥಳೀಯ ಸಂಸ್ಥೆಗಳಿಗೆ ಸದಸ್ಯರಾದರು.

ಕುದ್ಮುಲ್ ರಂಗರಾವ್ ಅವರ ನಿಸ್ವಾರ್ಥ ಸೇವೆ ದೇಶ–ವಿದೇಶಗಳಲ್ಲಿ ಖ್ಯಾತಿ ಪಡೆಯಿತು. ಸಮಾಜ ಸುಧಾರಣೆಯ ಕಾರ್ಯವನ್ನು ಮೆಚ್ಚಿ, ಅಮೆರಿಕಾದ ಖ್ಯಾತ ಉದ್ಯಮಿ ಹೆನ್ರಿ ಫೋರ್ಡ್, ಜಸ್ಟಿಸ್ ವಿಲ್ಬರ್ಟ್, ಡಾ. ಕಾರ್ನಾಟ್ ಹೀಗೆ ಹತ್ತಾರು ಪ್ರಮುಖರು ಡಿ.ಸಿ.ಎಂ. ಸಂಸ್ಥೆಗೆ ಅಭಿನಂದನೆ ಅರ್ಪಿಸಿದರು. ಮಂಗಳೂರಿಗೆ ಅಂದಿನ ಕಾಲದಲ್ಲಿ ಆಗಮಿಸುತ್ತಿದ್ದ ಪ್ರಮುಖರು ಡಿ.ಸಿ.ಎಂ. ಸಂಸ್ಥೆಗೆ ಭೇಟಿ ನೀಡದೆ ಹೋಗುತ್ತಿರಲಿಲ್ಲ. ಗುರುದೇವ ರವೀಂದ್ರನಾಥ ಠಾಗೂರ್, ದೀನಬಂಧು ಸಿ.ಎಸ್.ಆಂಡ್ರೂಸ್, ಡಾ. ಅನಿಬೆಸೆಂಟ್, ಗೋಪಾಲಕೃಷ್ಣ ಗೋಖಲೆ ಮತ್ತು ಜಿ. ಕೆ. ದೇವಧರ್ ಮುಂತಾದವರೆಲ್ಲಾ ಈ ಸಂಸ್ಥೆಗೆ ಭೇಟಿ ನೀಡಿ, ಕುದ್ಮುಲ್ ರಂಗರಾವ್ ಅವರ ಮಾನವೀಯ ಸೇವೆಯನ್ನು ಕಣ್ಣಾರೆ ಕಂಡು, ಅಭಿನಂದಿಸಿದರು.

ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆಯ ಹೆಗ್ಗುರುತೆನಿಸಿದ್ದ ರಂಗರಾವ್ ಅಧಿಕಾರದ ಸ್ಥಾನಗಳನ್ನು ಧಿಕ್ಕರಿಸಿ, ಸೇವಾಕಾರ್ಯವನ್ನು ಆರಿಸಿಕೊಂಡವರು. ತಮಗೆ ಸರ್ಕಾರವು ಕೊಟ್ಟಿದ್ದ 'ರಾವ್ ಸಾಹೇಬ್' ಎಂಬ ಬಿರುದು ಮತ್ತು ನೂರಾರು ಸೇವಾ ಪದಕಗಳು ತಮ್ಮ ಬಳಿಯೇ ಉಳಿದರೆ, ಅಹಂಕಾರ ಸದಾ ಕಾಡಬಹುದು ಎಂದು ಭಾವಿಸಿ ಎಲ್ಲಾ ಬಿರುದು, ಪದಕ, ಪ್ರಶಸ್ತಿ ಪತ್ರಗಳನ್ನು ಬೆಂಕಿಗೆ ಹಾಕಿದರು.

ತಮ್ಮ ಅನಾರೋಗ್ಯ ಹಾಗೂ ಇಳಿ ವಯಸ್ಸಿನಲ್ಲೂ ನಿರಂತರವಾಗಿ ದಲಿತರ ಸೇವೆಯಲ್ಲಿ ಬದುಕನ್ನು ಸವೆಸಿದ ಕುದ್ಮುಲ್ ರಂಗರಾವ್ ಹೃದಯ ಬೇನೆಯ ಖಾಯಿಲೆಗೆ ತುತ್ತಾಗಿ, ೧೯೨೮ ಜೂನ್ ೩೦ರಂದು ನಿಧನರಾದರು. ಅಲ್ಲಿಗೆ ದಲಿತರ ಶ್ರೇಯೋಭಿವೃದ್ಧಿಗಾಗಿ ತುಡಿಯುತ್ತಿದ್ದ ಜೀವಸೆಲೆ ಬತ್ತಿದಂತಾಯಿತು.

**ಅಸ್ಪೃಶ್ಯರಿಂದಲೇ ಚಿರಶಾಂತಿ:**

ಕುದ್ಮುಲ್ ರಂಗರಾವ್ ತಮ್ಮ ಕಡೆಯ ಆಸೆಯನ್ನು ತಮ್ಮ ವಿಲ್‌ನಲ್ಲಿ ಬರೆದಿದ್ದರು. "ಅಸ್ಪೃಶ್ಯ ಜನಾಂಗದಲ್ಲೇ ಅತಿಯಾಗಿ ಹಿಂದುಳಿದವರೆನಿಸಿದ ಜಾಡಮಾಲಿಗಳು ನನ್ನ ಪಾರ್ಥಿವ ಶರೀರಕ್ಕೆ ಶವಸಂಸ್ಕಾರ ಮಾಡಬೇಕು. ಆಗ ಮಾತ್ರ ನನಗೆ ಚಿರಶಾಂತಿ ದೊರೆಯುವುದು."

ಗಾಂಧೀಜಿ ಅವರು ೧೯೩೪ ಫೆಬ್ರವರಿ ೨೪ರಂದು ಮಂಗಳೂರಿಗೆ ಬಂದಾಗ ಡಿ.ಸಿ.ಎಂ. ಸಂಸ್ಥೆಗೆ ಭೇಟಿ ನೀಡಿದರು. ರಂಗರಾವ್ ಮಾಡಿದ ಸೇವಾ ಕಾರ್ಯಗಳನ್ನು ಕಂಡು ಅತ್ಯಂತ ಸಂತಸಗೊಂಡರು. ಸಂಜೆ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ "ಪೂಜ್ಯ ರಂಗರಾವ್‌ರಿಂದ ಸಾರ್ವಜನಿಕ ಸೇವಾ ನಿಷ್ಠೆಯನ್ನು ಮನಗಾಣಿಸಿಕೊಂಡೆ. ಅವರು ನಮಗೆ ಒಂದು ಉತ್ತಮ ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿದ್ದಾರೆ. ಅಸ್ಪೃಶ್ಯ ಜನಾಂಗದ ಪುನರುದ್ಧಾರ ಕಾರ್ಯದಲ್ಲಿ ಮುನ್ನಡೆದ ರಂಗರಾವ್ ನನಗೆ ಸ್ಫೂರ್ತಿ, ಮಾರ್ಗದರ್ಶಕರು. ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ಕುದ್ಮುಲ್ ರಂಗರಾವ್ ನಿಜವಾಗಿಯೂ ನನ್ನ ಗುರುಗಳು" ಎಂದು ಘೋಷಿಸಿದರು. ಹೀಗೆ ಮಹಾತ್ಮರ ಗುರು ಎನಿಸಿದ ಕುದ್ಮುಲ್ ರಂಗರಾವ್ ಮೇರು ಮಹಾತ್ಮರು.

## ವ್ಯಕ್ತಿ ಚಿತ್ರಣ–ಲೇಖಕರು: ಡಾ. ಮುಗಳವಳ್ಳಿ ಕೇಶವ ಧರಣಿ (೧೯೫೬)



ಡಾ. ಮುಗಳವಳ್ಳಿ ಕೇಶವ ಧರಣಿ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಮುಗಳವಳ್ಳಿಯವರು. ಕನ್ನಡ ಸ್ನಾತಕೋತ್ತರ ಪದವಿ ಪಡೆದಿರುವ ಇವರು ಪ್ರಸ್ತುತ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ಸಕಲೇಶಪುರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. "ರಸ್ತೆ ಸುರಕ್ಷತೆ: ಸಮಸ್ಯೆಗಳು ಮತ್ತು ಪರಿಹಾರಗಳು" ಕೃತಿಗೆ ಡಿ.ಲಿಟ್. ಪಡೆದಿದ್ದಾರೆ. ರಸ್ತೆ ಅಪಘಾತಗಳನ್ನು ತಪ್ಪಿಸುವುದು ಹೇಗೆ?, ಜನಸಾಮಾನ್ಯರಿಗೆ ಆರ್.ಟಿ.ಓ. ಕಚೇರಿ ಕಾನೂನು ಸಲಹೆ, ರಸ್ತೆ ಸುರಕ್ಷತೆ ಮಕ್ಕಳಿಗೆ ಕಲಿಸೋಣ, ರಸ್ತೆಯಲ್ಲಿ ರಕ್ತ ಚೆಲ್ಲಿದೆ (ಬೀದಿ ನಾಟಕಗಳು), ರಸ್ತೆ ಸುರಕ್ಷೆ–ಜೀವನ ರಕ್ಷೆ (ಹನಿಗವನಗಳು), ಮೂಢನಂಬಿಕೆಗಳು ಮತ್ತು ವೈಚಾರಿಕತೆ, ಅಂಬೇಡ್ಕರ್ ಅಮರವಾಣಿಗಳು ಇವರ ಕೃತಿಗಳು. ಕುದ್ಮುಲ್ ರಂಗರಾವ್ ರಾಷ್ಟ್ರೀಯ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾಗಿರುವ ಅವರು ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ.

ಸಾಮಾಜಿಕ ಸುಧಾರಣಾವಾದಿ ಚಳವಳಿಯ ಮೊದಲ ತಲೆಮಾರಿನ ವ್ಯಕ್ತಿಗಳಲ್ಲಿ ಕುದ್ಮುಲ್ ರಂಗರಾವ್ ಪ್ರಮುಖರು. ಅಸ್ಪೃಶ್ಯರ ಏಳಿಗೆಗೆ ಅಪಾರವಾಗಿ ಶ್ರಮಿಸಿ ಶೋಷಿತರನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ಮಾಡಿದ ಕುದ್ಮುಲ್ ರಂಗರಾವ್ ಅಜ್ಞಾತವಾಗಿ ಉಳಿದಿದ್ದಾರೆ. ಪ್ರತಿರೋಧಗಳು ಎದುರಾದಾಗಲೂ ಅಸ್ಪೃಶ್ಯರ ಜೊತೆಗೆ ಬೆರೆತು ಅವರ ಮನಸ್ಸು ಗೆದ್ದು ಶಿಕ್ಷಣ ಪಡೆಯುವಂತೆ ಮಾಡಿದರು. ಕುದ್ಮುಲ್‌ರ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸೇವೆ ಗಮನಾರ್ಹ. ರಂಗರಾವ್‌ರ ಕೆಲಸಗಳಿಂದ ಮಹಾತ್ಮ ಗಾಂಧೀಜಿಯವರು ಪ್ರೇರಣೆ ಪಡೆದಿರುವುದು ಬಹು ಮುಖ್ಯ.

### I. ಸಂದರ್ಭ ಸೂಚಿಸಿ ವಿವರಿಸಿ:

೧. ಶೋಷಿತ ಜನಾಂಗದವರ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ.

೨. ಪ್ರಗತಿಗೆ ವಿದ್ಯೆಯೇ ಮೂಲ.

೩. ಜೀತದ ಕೆಲಸ ಯಾರು ಮಾಡುತ್ತಾರೆ?

೪. ಅನ್ಯರ ಮನೆಯ ಅನ್ನಕ್ಕಿಂತ ಆತ್ಮಗೌರವದ ಗಂಜಿ ಊಟವೇ ದೊಡ್ಡದು.

೫. ರಸ್ತೆಯಿಂದ ಏಳುವ ಧೂಳು ನನ್ನ ತಲೆಗೆ ತಾಗಬೇಕು.

೬. ರಂಗರಾವ್ ಅವರಿಂದ ಸಾರ್ವಜನಿಕ ಸೇವಾ ನಿಷ್ಠೆಯನ್ನು ಮನಗಾಣಿಸಿಕೊಂಡೆ.

### II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಶೋಷಿತ ಜನಾಂಗದವರ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ ಹಚ್ಚಿದವರು ಯಾರು?

೨. ಬಡವರ ವಕೀಲರೆಂದು ಪ್ರಸಿದ್ಧರಾದವರು ಯಾರು?
೩. ರಂಗರಾವ್ ಸ್ಥಾಪಿಸಿದ ಸಂಸ್ಥೆಯ ಹೆಸರೇನು?
೪. ರಂಗರಾವ್ ಕೈಗಾರಿಕಾ ತರಬೇತಿ ಶಾಲೆ ಎಲ್ಲಿ ಸ್ಥಾಪಿಸಿದರು?
೫. ರಂಗರಾವ್ ಕೋರ್ಟ್ ಹಿಲ್ಸ್‌ನಲ್ಲಿ ಯಾವ ಸಂಘ ಸ್ಥಾಪಿಸಿದರು?
೬. ಸರ್ಕಾರ ರಂಗರಾವ್ ಅವರಿಗೆ ನೀಡಿದ ಬಿರುದು ಯಾವುದು?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಸಾಮಾಜಿಕ ಸುಧಾರಣಾ ಚಳವಳಿಯ ಪ್ರಮುಖ ನಾಯಕರನ್ನು ಹೆಸರಿಸಿ.
೨. ಮಂಗಳೂರು ಜಿಲ್ಲಾ ಕೋರ್ಟ್‌ನಲ್ಲಿ ನಡೆದ ಘಟನೆ ಯಾವುದು?
೩. ರಂಗರಾವ್ ಸಮಾಧಿಯ ಮೇಲೆ ಬರೆದ ಹೇಳಿಕೆ ಯಾವುದು?
೪. ರಂಗರಾವ್ ಪ್ರಾರಂಭಿಸಿದ್ದ ಹೆಣ್ಣು ಮಕ್ಕಳ ಹಾಸ್ಟೆಲ್‌ನಿಂದ ಉಂಟಾದ ಪ್ರಯೋಜನವೇನು?
೫. ರಂಗರಾವ್ ಅಂತರ್ಜಾತಿ ವಿವಾಹಕ್ಕೆ ನೀಡಿದ ಪ್ರೋತ್ಸಾಹ ಗಾಂಧಿ ಮೇಲೆ ಬೀರಿದ ಪ್ರಭಾವ ಏನು?
೬. ರಂಗರಾವ್ ರಾಜಕೀಯ ಮೀಸಲಾತಿಗಾಗಿ ಹೇಗೆ ಪ್ರಯತ್ನಿಸಿದರು?
೭. ಡಿ.ಸಿ.ಎಂ.ಸಂಸ್ಥೆಗೆ ಯಾರು ಯಾರು ಭೇಟಿ ನೀಡಿದ್ದರು?
೮. ರಂಗರಾವ್ ತಮ್ಮ ಉಯಿಲಿನಲ್ಲಿ ಏನು ಬರೆದಿದ್ದರು?
೯. ಗಾಂಧೀಜಿಯವರು ರಂಗರಾವ್ ಬಗ್ಗೆ ಏನು ಹೇಳಿದರು?

## IV. ಐದಾರು ವಾಕ್ಯಗಳಲ್ಲಿ ಉತ್ತರಿಸಿ:

೧. ರಂಗರಾವ್ ಅಸ್ಪೃಶ್ಯರ ಶಿಕ್ಷಣಕ್ಕಾಗಿ ನೀಡಿದ ಕೊಡುಗೆಯೇನು? ವಿವರಿಸಿ.
೨. ರಂಗರಾವ್ ಅಸ್ಪೃಶ್ಯರನ್ನು ಶಿಕ್ಷಣ ಪಡೆಯಲು ಮನ ಒಲಿಸಿದ ಬಗೆಯನ್ನು ತಿಳಿಸಿ.
೩. ರಂಗರಾವ್ ಅವರ ಸಾಮಾಜಿಕ ಸುಧಾರಣೆಯ ಕೊಡುಗೆಗಳೇನು?

**ಆಕರ:**

**ಮಹಾತ್ಮರ ಗುರು ಕುದ್ಮುಲ್ ರಂಗರಾವ್ – ಮುಗಳವಳ್ಳಿ ಕೇಶವಧರಣಿ ಕುದ್ಮುಲ್ ರಂಗರಾವ್ ರಾಷ್ಟ್ರೀಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಲೋಹಿತ್ ನಗರ, ಮಂಗಳೂರು.**

**ಹೆಚ್ಚಿನ ಓದು:**

| | |
|---|---|
| **ದಲಿತೋದ್ಧಾರಕ ಕುದ್ಮಲ್‌ರಂಗರಾವ್** | **– ಪಿ. ಕಮಲಾಕ್ಷ** |
| **ಕುದ್ಮಲ್ ರಂಗರಾವ್** | **– ಡಾ. ಎಂ.ಎಸ್. ಶೇಖರ್ ಪ್ರಸಾರಾಂಗ,ಮೈಸೂರು** |
| **ಚೋಮನ ದುಡಿ** | **– ಡಾ. ಕೆ. ಶಿವರಾಮ ಕಾರಂತ** |

**ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ**
**ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ**
**ನಮ್ಮ ಕೂಡಲಸಂಗನ ಮನೆಯ ಮಗನೆಂದೆನಿಸಯ್ಯ**
**– ಬಸವಣ್ಣ**

# ೭. ನಿರಾಕರಣೆ

–ಡಾ. ವೀಣಾಶಾಂತೇಶ್ವರ

**ಭಾರತೀಯ ಕಾವ್ಯ, ಪುರಾಣಗಳು, ಸಮಾಜದ ಮೇಲೆ ಪ್ರಭಾವ ಬೀರಿವೆ. ಆದರೂ ಸ್ತ್ರೀಯರು ಶೋಷಣೆಗೆ ಒಳಗಾಗುತ್ತಿರುವುದು ಸಾಮಾನ್ಯ ಸಂಗತಿ. ಶೋಷಣೆಯ ವಿರುದ್ಧ ಪ್ರತಿಭಟಿಸುವ ಶಕ್ತಿಯನ್ನು ಮಹಿಳೆಯರು ಸಂಚಯಿಸಿಕೊಂಡಾಗ ಪುರುಷನಷ್ಟೆ ಸಮರ್ಥವಾಗಿ ಬದುಕಬಲ್ಲಳು.**

ಹೌದೆ? ಇದು ನಿಜವೆ? ಆರ್ಯಪುತ್ರನು ನಿಜವಾಗಿಯೂ ನಾನಿದ್ದಲ್ಲಿಗೆ ಬಂದಿರುವನೆ? ನನ್ನನ್ನು ಕಾಣಲೆಂದು. ತನ್ನೊಂದಿಗೆ ಕರೆದೊಯ್ಯಲೆಂದು ಬಂದಿರುವನೆ? ಬಂದಿರುವವನು ನಿಜವಾಗಿಯೂ ಮಹಾರಾಜ ದುಷ್ಯಂತನೆ? ಅಥವಾ–

ಹಲವು ವರ್ಷಗಳಿಂದ ರಾತ್ರಿ–ಹಗಲೆನ್ನದೆ ಅವಮಾನದ ಅಗ್ನಿಯಲ್ಲಿ ಬೇಯುತ್ತಿರುವ, ನಿರೀಕ್ಷೆಯ ನೋವಿನಲ್ಲಿ ನಲುಗುತ್ತಿರುವ, ತನ್ನದೇ ತಪ್ತ ಮನಸ್ಸಿನ ಹಳವಂಡವೇ ಇದು?– ಇದ್ದರೂ ಇದ್ದೀತು. ಅಂದು ರಾಜಸಭೆಯಲ್ಲಿ ಎಲ್ಲರೆದುರು ದುಷ್ಯಂತನಿಂದ ತಿರಸ್ಕೃತಳಾಗಿ ಹೊರಟು ಬಂದಂದಿನಿಂದ ಇಲ್ಲಿಯವರೆಗೆ ತಾನು ಅನುಭವಿಸಿದ ಯಾತನೆಗೆ ಎಣೆಯುಂಟೆ? ಅನೇಕ ಸಲ 'ಇಲ್ಲ, ಇನ್ನಿದನ್ನು ಸಹಿಸುವುದು ಅಸಾಧ್ಯ' ಅನ್ನಿಸಿ ಮನಸ್ಸು ಕೆಟ್ಟ ಯೋಚನೆಗಳನ್ನು ಮಾಡಿದ್ದಿದೆ. ಮನಸ್ಸಿನ ನೋವು ಹಾಗೆ ತಾಳಿಕೊಳ್ಳುವುದು ಅಶಕ್ಯವೆನಿಸಿದ ಪ್ರತಿಸಾರೆಯೂ ತಾನು ಇದೇ ಕ್ಷಣವನ್ನು ನೆನೆದು, ನಿರೀಕ್ಷಿಸಿ, ಕಲ್ಪಿಸಿ, ಅತಿ ಪ್ರಯಾಸದಿಂದ ತನ್ನನ್ನು ತಾನೇ ನಿಗ್ರಹಿಸಿದ್ದುಂಟು. ಈ ಕ್ಷಣ–'ಆರ್ಯಪುತ್ರ ಬಂದಿದ್ದಾನೆ' ಎಂದು ಕೇಳಿಸಿಕೊಳ್ಳಲು ಕಾತರಿಸಿದ ಕ್ಷಣ–ಅದೆಷ್ಟು ಸಲ ತಾನು ಈ ಕ್ಷಣವನ್ನು ಕಲ್ಪಿಸಿಕೊಂಡು ನಿರೀಕ್ಷೆಯ ನೋವನ್ನು ಸಹಿಸುವ ಶಕ್ತಿ ಪಡೆದದ್ದಿಲ್ಲ? ಈಗಲೂ ಸಹ ಇದು ಬರಿ ಕಲ್ಪನೆಯಾಗಿರಬಹುದೇ?

"ದೇವಿ ಇದೇನು ಹೀಗೆ ಸ್ತಬ್ಧಳಾಗಿ ಕೂತಿರುವೆ? ಕುಮಾರ ಭರತನ ಮುಂಗೈಯಲ್ಲಿಯ ರಕ್ಷಾ ಕರಂಡಕವು ಕೆಳಗೆ ಬಿದ್ದಿತು. ಅದನ್ನು ಆಶ್ರಮಕ್ಕೆ ಬಂದ ಆಗಂತುಕನು ಎತ್ತಿಕೊಂಡರೂ ಏನೂ ಆಗಲಿಲ್ಲ. ನಾನು ಹೇಳುತ್ತಿರುವುದು ಕೇಳುತ್ತಿದೆ ತಾನೇ ದೇವಿ?" –ಸುವ್ರತೆ ಮತ್ತೆ ಕೇಳಿದಳು.

ಹೌದು. ತನಗೆ ಎಲ್ಲವೂ ಕೇಳುತ್ತಿದೆ. ಮಗುವಿನ ಜಾತಕರ್ಮ ಸಮಯದಲ್ಲಿ ಪೂಜ್ಯರಾದ ಮಾರೀಚರು ಕಟ್ಟಿದ ಅಪರಾಜಿತಾ ಬಳ್ಳಿ ಅದು. ತಾಯಿ–ತಂದೆಯ ವಿನಃ ಬೇರೆ ಯಾರಾದರೂ ಮುಟ್ಟಿದರೆ ಹಾವಾಗಿ ಕಚ್ಚುತ್ತದೆ. ಹಾಗಾಗಿಲ್ಲವೆಂದರೆ–ಸಂಶಯವೆ ಇಲ್ಲ.

"ಕುಮಾರ ಭರತನಿಗೂ ಆ ಆಗಂತುಕ ಮಹಾಪುರುಷನಿಗೂ ಆಶ್ಚರ್ಯವೆನಿಸುವಷ್ಟು ಹೋಲಿಕೆ ಇದೆ ದೇವಿ, ನಿಜವಾಗಿಯೂ ಆತ ಮಹಾರಾಜ ದುಷ್ಯಂತನೇ ಇರಬೇಕು. ನೀನೇಕೆ ಹೀಗೆ ಅಲ್ಲಾಡದೆ ಕೂತಿರುವೆ ದೇವಿ? ಬೇಗ ಎದ್ದು ಬರಬಾರದೇ?"–ಸುವ್ರತೆಗೆ ಆತುರ, ಆತಂಕ.

ಮಹಾರಾಜ ದುಷ್ಯಂತ! 'ಜೀವನ ಒಂದು ಸುಂದರ ಕನಸು' ಎಂದು ನಂಬಿಸಿದಾತ. ನಂತರ...... ನಂತರ ಒಡಲಲ್ಲಿ ಆತನ ವಂಶದ ಕುಡಿಹೊತ್ತು ತುಂಬು ಸಂಕೋಚ–ಕಾತರ–ನಂಬಿಕೆಗಳಿಂದ ಆತನೆಡೆ ಹೋದಾಗ 'ಈಕೆ ಯಾರೋ ಗೊತ್ತಿಲ್ಲ' ಎಂದು ಕೈಝಾಡಿಸಿಬಿಟ್ಟ ಪುರುಷೋತ್ತಮ ಮಹಾರಾಜ ದುಷ್ಯಂತ!

ಮುಂದಿನದು ಬರಿ ನೋವಿನ ನೆನಪು. ಮಳೆ ಸುರಿಯುತ್ತಿರುವ ಅದೆಷ್ಟು ರಾತ್ರಿಗಳನ್ನು ತಾನು ಆತನ ನೆನಪಿನಲ್ಲಿ ಕಣ್ಣೀರು ಸುರಿಸುತ್ತ ಕಳೆದು.... ಹೂಗಳು ಅರಳಿ ಪರಿಮಳ ಬೀರುತ್ತಿರುವಾಗ, ಕೋಗಿಲೆಗಳು ಮಾವಿನೆಲೆಗಳ ಹಿಂದೆ ಅಡಗಿ ಹಾಡುತ್ತಿರುವಾಗ, ನವಿಲುಗಳು ಗರಿಬಿಚ್ಚಿ ಕುಣಿಯುವಾಗ, ಅದೆಷ್ಟು ಸಂಜೆ–ಮುಂಜಾವುಗಳನ್ನು ತಾನು ಅತನ ವ್ಯರ್ಥ ನಿರೀಕ್ಷೆಯಲ್ಲಿ ಸಂಕಟಪಡುತ್ತ ಕಳೆದು...... ಇಡಿಯ ಜೀವನವೇ ಆತನಿಗಾಗಿ ಕಾಯುವಿಕೆಯಾಗಿ ಹೋಯಿತು.....

"ಏಳು ದೇವಿ ಶಕುಂತಲಾ, ಹೀಗೆ ದಿಗ್ಭ್ರಮೆಗೊಂಡು ಕೂತುಬಿಡಬೇಡ. ನಿನ್ನ ತಪಸ್ಸು ಸಾರ್ಥಕವಾಯಿತು. ಕೊನೆಗೂ ಮಹಾರಾಜ ದುಷ್ಯಂತನು ನಿನ್ನ ಕಡೆ ಬಂದೇ ಬಿಟ್ಟನು. ತ್ವರೆ ಮಾಡು, ಏಳು..... " ಸುವ್ರತೆ ಮತ್ತು ಸಾನುಮತಿಯರು ಶಕುಂತಲೆಯನ್ನು ಅರ್ಧ ಎಳೆದುಕೊಂಡೇ ಹೊರನಡೆದರು.

ಓಹ್! ನಾರಿಯ ಮನೋವ್ಯಾಪಾರವು ನಿಜವಾಗಿ ವಿಚಿತ್ರವಾದುದು. ಯಾವ ಪುರುಷನಿಗಾಗಿ ಹಲವಾರು ವರ್ಷ ಹಗಲಿಡಿ ಕಾಯ್ದು–ಕಾಯ್ದು, ಯಾರಿಗಾಗಿ ಜೀವನವನ್ನೆ ಒಂದು ತಪಸ್ಸಾಗಿಸಿದೆನೋ ಆತನು ನಿಜವಾಗಿಯೂ ಬಂದಿರುವಾಗ ಮನಸ್ಸಿನಲ್ಲಿ ಇದೆಂತಹ ನಿರ್ಲಿಪ್ತತೆ? ಇದೆಂತಹ ತಾಟಸ್ಥ್ಯ? ಅದೇಕೆ ತನ್ನ ಮನಸ್ಸು ಹೂವಾಗಿ ಅರಳಲೊಲ್ಲದು? ಗರಿಬಿಚ್ಚಿ ಹಾರಲೊಲ್ಲದು? ಇಷ್ಟು ವರ್ಷಗಳಿಂದ ನಿರೀಕ್ಷಿಸಿದ್ದ ಈ ಸಮಯ ಇಂದು ನಿಜವಾಗಿ ಒದಗಿ ಬಂದಾಗ ಇದೇನು, ತನ್ನ ಮನಸ್ಸಿನಲ್ಲಿ ಈ ಬಗೆಯ ವಿಚಿತ್ರ ಕಾಠಿಣ್ಯ?

ಅಂದು ಅರಮನೆಯಲ್ಲಿ ಅಷ್ಟೊಂದು ನಿಷ್ಠುರವಾಗಿ ತನ್ನನ್ನು ಹೊರಗಟ್ಟಿದ ಈ ಮನುಷ್ಯ ಇಂದು ತನ್ನೆದುರು ವಿನೀತನಾಗಿ ಮೊಳಕಾಲೂರಿದ್ದಾನೆ. 'ನಾನಂದು ಯಾವುದೋ ಬುದ್ಧಿ ಮಾಂದ್ಯಕ್ಕೊಳಗಾಗಿ ನಿನ್ನನ್ನು ತಿರಸ್ಕರಿಸಿದೆ. ನನ್ನನ್ನು ಕ್ಷಮಿಸು' ಎಂದು ಬೇಡಿಕೊಳ್ಳುತ್ತಿದ್ದಾನೆ. 'ನನ್ನದು ಮಹಾಪರಾಧವಾಯಿತು. ನಾನು ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದಿರುವೆ. ಈಗ ನೀನು ನನ್ನನ್ನು ಸ್ವೀಕರಿಸುವ ಗಳಿಗೆ ಬಂದಿದೆ'–ಎಂದು ಅರಿಯುತ್ತಿದ್ದಾನೆ.

ಹ್ಞ! ಅಪರಾಧ–ಕ್ಷಮೆ–ಪಶ್ಚಾತ್ತಾಪ ಈ ಶಬ್ದಗಳಿಗೀಗ ನನ್ನ ದೃಷ್ಟಿಯಲ್ಲಿ ಯಾವ ಅರ್ಥವೂ ಉಳಿದಿಲ್ಲ. ನೂರು ಆಸೆ ಹೊತ್ತು ನಿನ್ನೆಡೆ ಬಂದಿದ್ದ ನನ್ನನ್ನು ನೀನು ಎಂದು ತಿರಸ್ಕರಿಸಿದೆಯೋ, ಜೀವನದ ಬಹುಪಾಲು ಮಧುರ ಭಾವನೆಗಳೆಲ್ಲಾ ಆ ದಿನವೇ ಸತ್ತು ಹೋದವು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಈ ಶಕುಂತಲೆಯ ಬದುಕು ಒಂದು ಅಗ್ನಿಕುಂಡವಾಗಿದೆ..... ಬೆಂಗಾಡಾಗಿದೆ..... ದಾವಾನಲವಾಗಿದೆ...... ಬತ್ತಿ ಹೋದ ಸಮುದ್ರವೂ ಆಗಿದೆ. ಇಂತಹ ತಾನು ಈತನನ್ನು ಸ್ವೀಕರಿಸಬೇಕಂತೆ! ಏನಿದು ವಿಧಿಯ ಕ್ರೂರ ಅಪಹಾಸ್ಯ!

"ದೇವಿ, ಕುಮಾರನನ್ನು ಎತ್ತಿಕೋ. ನಿನ್ನೊಡಗೂಡಿಯೇ ಪೂಜ್ಯ ಮಾರೀಚರ ದರ್ಶನ ಪಡೆಯಬಯಸುವೆ."

ಆಹಾ! ಎಂತಹ ಕೋಮಲತೆ, ಮೋಡಿ ಇದೆ ಆತನ ದನಿಯಲ್ಲಿ! ಆತನ ಇಡೀ ವ್ಯಕ್ತಿತ್ವದಲ್ಲಿ. ಅಂತೆಯೇ ತಾನು ಈ ಅವಮಾನದ–ನಿರೀಕ್ಷೆಯ–ಕಾತರದ–ಅಪಾರ ನೋವಿನ ನಿರಂತರ ಅನುಭವಕ್ಕೊಳಗಾದದ್ದು...

ಈಗ ಈತ ಬಂದನೆಂದು ಸಂತೋಷಿಸಲೆ? ಇಷ್ಟು ದಿನಗಳು ಆಚರಿಸಿದ ವ್ರತಗಳು, ಗೈದ ತಪಸ್ಸು, ಮಾಡಿದ ಪೂಜೆ–ಎಲ್ಲಾ ಸಫಲವಾಯಿತೆಂದು ಧನ್ಯಳಾಗಲೇ?

"ಇಲ್ಲ, ಸಾಧ್ಯವಿಲ್ಲ..." ಶಕುಂತಲೆಗೆ ಅರಿವಾಗದಂತೆ ಅವಳಿಂದ ಹೊರಬಿದ್ದ ಮಾತಿಗೆ ಬೇರೆಯೇ ಅರ್ಥ ಕಲ್ಪಿಸಿದ ದುಷ್ಯಂತ: "ಅದೇಕೆ? ನಾಚಿಕೆಯೆ? ನಮಗಿದು ಅಭ್ಯುದಯ ಕಾಲ. ಮಹಾ ಸುದಿನ. ಗುರುಗಳನ್ನು ನಾವಿಬ್ಬರೂ ಒಟ್ಟಾಗಿಯೇ ನೋಡೋಣ.

ತಾನು ಗುರುಗಳೆದುರಿಗೆ ಪತಿ ಹಾಗೂ ಪುತ್ರರೊಡಗೂಡಿ ಹೋಗಲು ಲಜ್ಜೆ ಪಡುತ್ತಿರುವೆನೆಂದು ಭಾವಿಸಿದ್ದಾನೆ ಈತ. ಹೌದು. ಈತನ ಜೊತೆ ಹೋಗಲು ತಾನು ಒಲ್ಲೆನೆಂದು, ಈತನನ್ನು ಸ್ವೀಕರಿಸಲು ತನ್ನ ಅಂತರಾತ್ಮ ಒಪ್ಪುತ್ತಿಲ್ಲವೆಂದು, ಈತ ಎಂದಿಗೂ ಕಲ್ಪನೆ ಕೂಡ ಮಾಡಲಾರ. ಆರ್ಯ ಸ್ತ್ರೀ ಅಲ್ಲವೆ ತಾನು? ಪತಿ ಎಂತಹವನೇ ಇರಲಿ, ಆತನನ್ನು ತಿರಸ್ಕರಿಸುವ ಹೀನ ವಿಚಾರ ಆರ್ಯ ಸ್ತ್ರೀಗೆ ಬರಬಾರದಲ್ಲ!

ಅಂದರೆ ತಾನು ನಿಜವಾಗಿ ಮಹಾರಾಜ ದುಷ್ಯಂತನನ್ನು ತಿರಸ್ಕರಿಸುತ್ತಿದ್ದೇನೆಯೆ? ಯಾವನ ಬರವಿಗಾಗಿ ಇಷ್ಟು ದಿನ ಕಾಯ್ದೆನೋ ಆತ ಕೊನೆಗೊಮ್ಮೆ ಬಂದಿದ್ದಾನೆ. ಜೊತೆಗೆ ಸುಪ್ತವಾಗಿದ್ದುದೊಂದು ತೀವ್ರ ಪ್ರಜ್ಞೆಯನ್ನು ಬಡಿದೆಬ್ಬಿಸಿದ್ದಾನೆ. ಈ ಪ್ರಜ್ಞೆ, ನನ್ನ ಸ್ತ್ರೀತ್ವವು ಅಪಮಾನಿತವಾಗಿದೆ ಎಂಬ ತೀವ್ರವಾದ ಈ ಅರಿವು, ನಾನು ಕಾಯುತ್ತಿರುವಾಗ, ನೋಯುತ್ತಿರುವಾಗ ನನ್ನ ಆಳದಲ್ಲೆಲ್ಲೋ ಅಡಗಿಕೊಂಡಿತ್ತು. ಕಾಯುವುದು–ನೋಯುವುದು ಎಲ್ಲ ಮುಗಿಯಿತೆಂಬ ಈ ಕ್ಷಣದಲ್ಲಿ ನನ್ನೊಳಗೆ ಮೌನವಾಗಿ ಹೂತುಕೊಂಡಿದ್ದ ಈ ಬೇರೆಯದೇ ಒಂದು ಉತ್ಕಟ ಸಂವೇದನೆ ಒಮ್ಮೆಲೆ ಪುಟಿದೆದ್ದಿದೆ...

ಧಿಕ್ಕಾರ! ನಾರಿಯ ಮಧುರ ಭಾವನೆಗಳನ್ನು ಎಗ್ಗಿಲ್ಲದೆ ಹೊಸಕಿ ಹಾಕುವ, ನಂತರ ಬಂದು ಕ್ಷಮೆ ಕೇಳುವ, ಆಕೆ ಕ್ಷಮಿಸಿಯೇ ಕ್ಷಮಿಸುತ್ತಾಳೆಂಬ ಖಚಿತ ನಂಬಿಕೆ ಹೊಂದಿರುವ, ಇಂತಹ ಗಂಡಸಿಗೆ ಧಿಕ್ಕಾರ!

"ಅಮ್ಮಾ, ಈತ ನಿಜವಾಗಿಯೂ ಮಹಾರಾಜ ದುಷ್ಯಂತನೇ? ಈತನೇ ನನ್ನ ತಂದೆಯೆ?"– ಕಣ್ಣುಗಳಲ್ಲಿ ಮುಗ್ಧ ಕುತೂಹಲ ತುಂಬಿಕೊಂಡು ಕೇಳುತ್ತಿದ್ದಾನೆ ಕುಮಾರ ಭರತ. ತನ್ನ ಪ್ರೀತಿಯ ಮಗ. ದುಷ್ಯಂತನ ವಂಶೋದ್ಧಾರಕ. ಪುರುವಂಶದ ಉತ್ತರಾಧಿಕಾರಿ!. . . ತನ್ನ ಪ್ರೀತಿಯ ಮಗ ದುಷ್ಯಂತನ ಉತ್ತರಾಧಿಕಾರಿ ಅಂದಮೇಲೆ ತಾನು ಮಹಾರಾಜನನ್ನು ಹೇಗೆ ಧಿಕ್ಕರಿಸಬಲ್ಲೆ? ತಾನು ಕೇವಲ ಹಿಂದೆ ತಿರಸ್ಕೃತಳಾದ, ಈಗ ಜಾಗೃತಳಾದ ಹೆಣ್ಣು ಮಾತ್ರವಲ್ಲ. ತಾನೀಗ ಒಬ್ಬ ಮಗನ ತಾಯಿ. ಈ ಮಗನ ಅಭಿವೃದ್ಧಿಯೇ ತನ್ನ ಕರ್ತವ್ಯ. ಈ ಮಗನಿಗೆ ಆತನ ಅಧಿಕಾರವನ್ನು ನಾನು ದೊರಕಿಸಿಕೊಡಲೇಬೇಕು. ನನ್ನ ತಾಯಿಯಾದ ಮೇನಕೆ ಮಗುವನ್ನು ತ್ಯಜಿಸಿ ಹೋದದ್ದು ಕ್ಷಮಿಸಲನರ್ಹವಾದ ಕರ್ತವ್ಯಲೋಪವೆಂದು ನನಗೆ ಯಾವಾಗಲೂ ಅನ್ನಿಸಿದ್ದಿದೆ. ನಾನು ತಾಯಿಯ ಕರ್ತವ್ಯ ನಿರ್ವಹಿಸಲೇಬೇಕು. ನನ್ನ ಮಗ ಪುರುವಂಶದ ಯುವರಾಜನಾಗಲೇಬೇಕು. "ನಡೆ ದೇವಿ ಶಕುಂತಲೆ, ಪೂಜ್ಯರು ನಮ್ಮ ನಿರೀಕ್ಷೆಯಲ್ಲಿದ್ದಾರೆ". ಅತ್ಯುತ್ಸಾಹದಿಂದ ಹೇಳಿದ ದುಷ್ಯಂತನನ್ನು ಆಕೆ ಮೌನವಾಗಿ ಹಿಂಬಾಲಿಸಿದಳು.

ಮಹಾರಾಜ ದುಷ್ಯಂತನ ಅರಮನೆಯಲ್ಲಿ ಸಂಭ್ರಮವೋ ಸಂಭ್ರಮ. ಮುನಿ ಕನ್ಯೆಯನ್ನು ತಿರಸ್ಕರಿಸಿದ ನಂತರ ಮಂಕು ಕವಿದಂತಿದ್ದ ಮಹಾರಾಜನೀಗ ಕಳೆದುಕೊಂಡಿದ್ದ ಪತ್ನಿಯನ್ನೂ ವಂಶೋದ್ಧಾರಕನನ್ನೂ ಇಂದು ಮರಳಿ ಅರಮನೆಗೆ ಕರೆತಂದಿದ್ದಾನೆ. ನಗರವಾಸಿಗಳೆಲ್ಲಾ ಯುವರಾಜನನ್ನು ಪಡೆದ ವಿಜಯೋತ್ಸಾಹದಲ್ಲಿದ್ದಾರೆ. ಇಡಿಯ ದಿನ ಮನೆ–ಮನೆಗಳಲ್ಲಿ ಸಂತೋಷ, ಸಂಭ್ರಮ, ಹಬ್ಬದ ವಾತಾವರಣ. ದೇವಾಲಯಗಳಲ್ಲಿ ವಿಶೇಷ ಪೂಜೆ. ಮುತ್ತೈದೆಯರಿಗೆ ವಿಶೇಷ ದಕ್ಷಿಣೆ–ಬಾಗಿನಗಳು. ಅರಮನೆಯ ದಾಸ–ದಾಸಿಯರಿಗೆಲ್ಲ ಉಡುಗೊರೆಗಳು. ಕುಲಪುರೋಹಿತರಿಂದ ಮಹಾ ಅರ್ಚನೆ. ಮಂಗಳಘೋಷ, ಹೋಮ–ಹವನ, ಆಶೀರ್ವಾದ ಇತ್ಯಾದಿ. ಹಿರಿಯ ರಾಣಿ ವಸುಮತಿ ತಾನೇ ಎಲ್ಲದರ ಉಸ್ತುವಾರಿ ವಹಿಸಿದ್ದಾಳೆ.

ಉತ್ಸವದ ಗದ್ದಲ ಮುಗಿದಿದೆ. ಮಹಾರಾಜನೀಗ ಯಾವ ಕ್ಷಣದಲ್ಲಾದರೂ ಬರಬಹುದು. ಅದಕ್ಕೆ ಮೊದಲೇ ಅವಳೊಂದು ಮಹತ್ವದ ನಿರ್ಧಾರ ಮಾಡಬೇಕಾಗಿದೆ. ಅವಳ ಮನಸ್ಸಿನಲ್ಲೊಂದು ಮಹಾವಿಪ್ಲವ ನಡೆಯುತ್ತಿದೆ. ಅವಳೀಗ ಅದಕ್ಕೆ ಕೊನೆ ತೋರಿಸಬೇಕಾಗಿದೆ. ಅವಳ ಆತ್ಮಸಮ್ಮಾನ ಜಾಗೃತವಾಗಿದೆ. ಗೊಡ್ಡು ಸಂಪ್ರದಾಯಗಳ, ರೀತಿ–ನೀತಿಗಳ, ಎಲ್ಲ ಬಗೆಯ ಸಂಕೋಲೆಗಳನ್ನು ಕಿತ್ತೊಗೆದು ತನ್ನ ಆತ್ಮಸಾಕ್ಷಿಗೆ ಮಾತ್ರ ನಿಷ್ಠಳಾಗಿ ಆಕೆ ಈಗ ನಡೆದುಕೊಳ್ಳಬೇಕಾಗಿದೆ.

ದಾಸಿ ಮಂಗಳವಾದ್ಯ ಮೊಳಗಿಸಿ ಮಹಾರಾಜನ ಆಗಮನವನ್ನು ಸಾರುವುದಕ್ಕೂ ಶಕುಂತಲೆಯ ಮನಸ್ಸು ಒಮ್ಮೆಲೆ ಸ್ಥಿಮಿತಕ್ಕೆ ಬಂದು ನಿಶ್ಚಿತ ನಿರ್ಧಾರ ಕೈಗೊಳ್ಳುವುದಕ್ಕೂ ಸರಿಯೋಯಿತು.

ಓಹ್! ಈ ಮಹಾರಾಜ ದುಷ್ಯಂತ..... ಹಲವು ವರ್ಷಗಳ ಹಿಂದೆ ಕಣ್ವ ಮುನಿಗಳ ಆಶ್ರಮದಲ್ಲಿ ಮೊದಲ ಬಾರಿ ಈತ ತನ್ನನ್ನು ಅನುನಯಿಸಿದಾಗ ಹೇಗಿದ್ದನೋ ಇನ್ನೂ ಹೆಚ್ಚೂ ಕಡಿಮೆ ಹಾಗೆಯೇ ಇದ್ದಾನೆ. ಅದೇ ಉದ್ರೇಕಿತ ಮುಖ, ಹಣೆಯ ಮೇಲೆ ಬೆವರಹನಿ ಸಾಲು, ಸಣ್ಣಗೆ ಕಂಪಿಸುವ ಬಾಹುಗಳು... ಧ್ವನಿಯೋ ಅಮೃತಮಯ.

"ದೇವಿ, ನಾನಿಂದು ಪರಮಸುಖಿ!"

"..."

"ವರ್ಷಗಳ ಕಾಲ ತಪಿಸಿರುವ ನನ್ನ ಮನಸ್ಸು ಶಾಂತಗೊಳಿಸುವುದಿಲ್ಲವೆ?"

...ಇಲ್ಲ ಮಹಾರಾಜ, ವರ್ಷಗಳ ಕಾಲ ತಪಿಸಿರುವ ನಿನ್ನ ಮನಸ್ಸು ಶಾಂತವಾಗಬಹುದು. ಹಳೆಯದನ್ನೆಲ್ಲ ಮರೆತು ನೀನು ಮತ್ತೆ ತುಂಬು ಉತ್ಸಾಹದಿಂದ ಹೊಸ ಜೀವನ ಸುರು ಮಾಡಬಹುದು. ಆದರೆ ನೀನು ಗಾಸಿಗೊಳಿಸಿದ ನನ್ನ ಒಳಗು ಮತ್ತೆ ಚೇತರಿಸಲಾರದು. ನೀನು ಹೊಸಕಿ ಹಾಕಿದ ನನ್ನ ಭಾವನೆಗಳು ಮತ್ತೆ ಜೀವ ತಳೆಯಲಾರವು. ಈ ಶಕುಂತಲೆಯ ಆತ್ಮಸಮ್ಮಾನಕ್ಕೆ ಮಾಯಲಾರದ ಗಾಯವಾಗಿದೆ. ಆಕೆ ಇನ್ನೆಂದೂ ಮೊದಲಿನಂತಾಗಲಾರಳು...

"ಇನ್ನೂ ಏನು ಯೋಚಿಸುತ್ತಿರುವೆ ದೇವಿ?"

"ನಿಲ್ಲು ಮಹಾರಾಜ!" ಶಕುಂತಲೆಯ ಧ್ವನಿ ಕಂಚಿನಂತೆ ಮೊಳಗಿತು. ಮಹಾರಾಜನ ಮುಖದ ಮೇಲೆ ಒಮ್ಮೆಲೆ ಮೂಡಿದ ದಿಗ್ಭ್ರಮೆ ಕಂಡು ಶಕುಂತಲೆಗೆ ತನ್ನ ಧ್ವನಿ ಅವಶ್ಯಕತೆಗಿಂತ ಹೆಚ್ಚು ಕಠಿಣವಾಗಿದೆಯೆಂದು ಅನ್ನಿಸಿತು. ಧ್ವನಿಯನ್ನು ಸ್ಥಿಮಿತಕ್ಕೆ ತರಲು ಯತ್ನಿಸಿದಳು.

"ಮಹಾರಾಜ, ನಾನು ಈ ಅರಮನೆಗೆ ಬಂದಿರುವುದು ಕುಮಾರ ಭರತನ ಶ್ರೇಯಸ್ಸಿಗಾಗಿ ಮಾತ್ರ, ಆತನ ವಿದ್ಯಾಭ್ಯಾಸ, ತರಬೇತಿ, ಸರಿಯಾಗಿ ನಡೆಯಬೇಕು ಎಂಬ ಹಂಬಲದಿಂದ ಮಾತ್ರ ನಾನು ಬಂದಿರುವೆ. ನಿನ್ನ ನಂತರ ಅವನು ಈ ಸಾಮ್ರಾಜ್ಯದ ಕೀರ್ತಿಯನ್ನು ಎಲ್ಲ ಕಡೆ ಹರಡುವಂತೆ ನೋಡಿಕೊಳ್ಳಬೇಕಲ್ಲ. ಅವನನ್ನು ಹಾಗೆ ಬೆಳೆಸುವ ಜವಾಬ್ದಾರಿ ನಮ್ಮಿಬ್ಬರದೂ ಅಲ್ಲವೆ? ಈ ಏಕಮಾತ್ರ ಕಾರಣದಿಂದ ನಾನು ಇಲ್ಲಿ ಇರುವೆ."

"ದೇವಿ! ಇದೇನು?" –ದುಷ್ಯಂತನಿಗೆ ಆಘಾತ–"ನೀನಿನ್ನೂ ನನ್ನನ್ನು ಕ್ಷಮಿಸಲಿಲ್ಲವೆ?"

"ಒಬ್ಬರನ್ನೊಬ್ಬರು ಒಪ್ಪಿಕೊಳ್ಳುವ ಸಂದರ್ಭದಲ್ಲಿ ಮಾತ್ರ ಕ್ಷಮೆಗೆ ಅರ್ಥವಿದೆ ಮಹಾರಾಜ. ಆದರೂ ನಿನ್ನ ಮನಸ್ಸಿಗೆ ಸಮಾಧಾನವಾಗುವಂತಿದ್ದರೆ ಇದೋ, ನಿನ್ನನ್ನು ಕ್ಷಮಿಸಿದ್ದೇನೆ."

"ಅಂದರೆ ದೇವಿ, ನೀನೇನು ನನ್ನ ತಪ್ಪಿಗಾಗಿ ಶಿಕ್ಷೆ ಕೊಡಲೆಂದು ಹೀಗೆ ಮಾಡುತ್ತಿದ್ದೀಯಾ? ಅಥವಾ ಇದು ಪ್ರತಿರೋಧವೋ?"

ಶಕುಂತಲೆಯ ದನಿಯಲ್ಲಿ ನೋವು ಇಣುಕಿತು, "ಇಲ್ಲ ಮಹಾರಾಜ, ನಾನು ಶಿಕ್ಷೆ ಕೊಡುವಷ್ಟು ಕಠಿಣ ಮನಸ್ಸಿನವಳಾಗಲೀ ಪ್ರತಿರೋಧ ಮಾಡುವಷ್ಟು ಸಣ್ಣ ಮನಸ್ಸಿನವಳಾಗಲೀ ಅಲ್ಲ. ದಯವಿಟ್ಟು ವಿವರಣೆ ಕೇಳಬೇಡ."

"ದೇವಿ"– ದುಷ್ಯಂತನ ಧ್ವನಿ ಈಗ ಸ್ಪಷ್ಟವಾಗಿ ಕಂಪಿಸುತ್ತಿತ್ತು–"ನಾನು ನಿನ್ನೊಂದಿಗೆ ಕಠಿಣವಾಗಿ ವರ್ತಿಸಿದೆ ನಿಜ. ಆದರೆ ಅದು ನನ್ನ ತಪ್ಪಲ್ಲ. ದೂರ್ವಾಸ ಮುನಿಗಳ ಶಾಪದಿಂದ ಉಂಗುರವು ಕಳೆದುಹೋಗಿ ನನ್ನ ಬುದ್ಧಿಗೆ ಮಾಂದ್ಯವುಂಟಾಗಿ ಇಷ್ಟೆಲ್ಲ ಅನಾಹುತವಾಯಿತೆಂದು ಪೂಜ್ಯರಾದ ಮಾರೀಚರು ಹೇಳಲಿಲ್ಲವೆ?"

ಶಕುಂತಲೆಯ ಬಾಡಿದ ಮುಖದ ಮೇಲೆ ವಿಷಾದದ ಮುಗುಳ್ನಗು ಮೂಡಿತು: "ತಾನು ಮಾಡಿದ ತಪ್ಪಿನಿಂದ ಸುಲಭವಾಗಿ ಪಾರಾಗಲು ಪುರುಷನಿಗೆ ನೂರು ದಾರಿಗಳಿವೆ. ತನ್ನ ಅನುಚಿತ ವರ್ತನೆಯಿಂದ ಬೇರೆಯವರಿಗೆ ಆಗುವ ನೋವಿನ ಹೊಣೆಯಿಂದ ತಪ್ಪಿಸಿಕೊಳ್ಳಲೂ ಆತನಿಗೆ ಹಲವು ಮಾರ್ಗಗಳಿವೆ. ಪುರುಷ ತಪ್ಪು ಮಾಡಿದನೆಂದು ನಮ್ಮ ಸಮಾಜ ಗಂಭೀರವಾಗಿ ಪರಿಗಣಿಸುವುದೂ ಇಲ್ಲ, ಆದ್ದರಿಂದ ಆತನೂ ಲಜ್ಜಿತನಾಗುವುದಿಲ್ಲ... ಮತ್ತು ಇದನ್ನೆಲ್ಲ ನಾನೀಗ ಚರ್ಚೆ ಮಾಡ ಬಯಸುವುದೂ ಇಲ್ಲ."– ಮಾತು ಆಡುತ್ತಿದ್ದಂತೆ ಶಕುಂತಲೆ ಗಂಭೀರಳಾದಳು, "ನಾನು ಹೇಳುವುದಿಷ್ಟೆ: ಮುನಿಗಳ ಶಾಪದಂತಹ ಬಾಹ್ಯ ಕಾರಣಗಳಿಂದ, ಉಂಗುರವು ಕಳೆದುಹೋಯಿತೆಂಬ ಕ್ಷುಲ್ಲಕ ನೆಪದಿಂದ, ಒಬ್ಬ ಗಂಡಸು ಹೆಣ್ಣನ್ನು ದೂರ ಮಾಡುವುದಾದರೆ ಆ ಪ್ರೀತಿಗೆ ಅರ್ಥವಿಲ್ಲ:" ಅಂಥವನನ್ನು ಕೂಡಲು ನನ್ನ ಆತ್ಮಸಮ್ಮಾನ ಒಪ್ಪುವುದಿಲ್ಲ. ಹೆಣ್ಣಾಗಿ ನಾನು ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಲಾರೆ. ಪ್ರಾಜ್ಞನಾದ ನಿನಗೆ ಹೆಚ್ಚಿಗೆ ಹೇಳಲಾರೆ..."

ಹೊರಗಡೆ ನಿಧಾನವಾಗಿ ಕತ್ತಲು ಪಸರಿಸುತ್ತಿತ್ತು. ಭಾರವಾದ ಹೆಜ್ಜೆಗಳನ್ನಿಡುತ್ತ ಪುರುವಂಶದ ಚಕ್ರವರ್ತಿ ಧೀರೋದಾತ್ತ ಪುರುಷ ಶ್ರೇಷ್ಠ ದುಷ್ಯಂತನು ನಿಧಾನವಾಗಿ ಶಕುಂತಲೆಯ ಅಂತಃಪುರದಿಂದ ಹೊರಗೆ ನಡೆದನು.

**ಕತೆ–ಕತೆಗಾರ್ತಿ: ಡಾ. ವೀಣಾಶಾಂತೇಶ್ವರ(೧೯೪೫)**



ಡಾ. ವೀಣಾಶಾಂತೇಶ್ವರ ಬಾಗಲಕೋಟೆಯವರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿ ಈಗ ನಿವೃತ್ತಿ ಹೊಂದಿದ್ದಾರೆ. ನಡೆದದ್ದೇ ದಾರಿ – ಸಮಗ್ರ ಕಥಾ ಸಂಕಲನ. 'ಗಂಡಸರು' ಇವರ ಕಾದಂಬರಿ. ಇವರಂದ ವಿಮರ್ಶಾಕೃತಿಗಳು ಮತ್ತು ಅನೇಕ ಸಂಪಾದಿತ ಕೃತಿಗಳು ಹಾಗೂ ಅನುವಾದಿತ ಕೃತಿಗಳು ಪ್ರಕಟವಾಗಿವೆ. ಅನೇಕ ಸಣ್ಣಕತೆಗಳು ಅನ್ಯಭಾಷೆಗಳಿಗೆ ಅನುವಾದವಾಗಿವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಹಿಂದಿಯಿಂದ ಕನ್ನಡಕ್ಕೆ ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಾನ ಚಿಂತಾಮಣಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ನಿರಾಕರಣೆಯು ದುಷ್ಯಂತ ಮತ್ತು ಶಕುಂತಲೆಯರ ಕತೆಯನ್ನು ಗಮನದಲ್ಲಿಟ್ಟುಕೊಂಡು ವಾಸ್ತವಿಕ ನೆಲೆಯಲ್ಲಿ ಬರೆದ ಅಪರೂಪದ ಕತೆ. ಗಾಂಧರ್ವ ವಿವಾಹವಾದ ದುಷ್ಯಂತ, ಉಂಗುರದ ಕಾರಣಕೊಟ್ಟು ಶಕುಂತಲೆಯನ್ನು ನಿರಾಕರಿಸುತ್ತಾನೆ. ಕಾಲಕ್ರಮೇಣ ಶಕುಂತಲೆಯನ್ನು ತನ್ನ ಅರಮನೆಗೆ ಬರಮಾಡಿಕೊಳ್ಳುವ ಸಂದರ್ಭ. ಸ್ವತಃ ದುಷ್ಯಂತನೆ ಅಂತಃಪುರಕ್ಕೆ ಆಹ್ವಾನ ಕೊಟ್ಟಾಗ ಅಲ್ಲಿಗೆ ಹೋಗಲು ಶಕುಂತಲೆ ನೇರವಾಗಿ ನಿರಾಕರಣೆ ಮಾಡುತ್ತಾಳೆ. ಸ್ತ್ರೀವಾದಿ ನೆಲೆಯಲ್ಲಿ 'ನಿರಾಕರಣೆ' ಕತೆಯನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಬಹುದು.

**ಪದಕೋಶ:**

ತಪ್ತ–ನೊಂದ, ಬೆಂದ; ಹಳವಂಡ–ಹಂಬಲ, ಕಳವಳ, ಏನೇನನ್ನೋ ಬಯಸುವುದು; ಸ್ತಬ್ಧ–ಮೌನ, ಮಂಕಾಗಿ; ಕರಂಡ–ಕರಡಿಗೆ, ಪೆಟ್ಟಿಗೆ; ಜಾತಕರ್ಮ–ನಾಮಕರಣದ ಸಮಾರಂಭ; ದಾವಾನಲ–ಕಾಡ್ಗಿಚ್ಚು; ವಿಪ್ಲವ–ಆಂದೋಲನ, ಪೀಡೆ, ಕ್ರಾಂತಿ, ಬದಲಾವಣೆ; ಪ್ರಾಜ್ಞ–ವಿದ್ವಾಂಸ; ತಿಳುವಳಿಕೆಯುಳ್ಳವನು.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ತಾನು ಅನುಭವಿಸಿದ ಯಾತನೆಗೆ ಎಣೆಯುಂಟೆ?
೨. ನಾನು ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದಿರುವೆ.
೩. ನಮಗಿದು ಅಭ್ಯುದಯ ಕಾಲ, ಮಹಾಸುದಿನ.
೪. "ಅಮ್ಮಾ, ಈತ ನಿಜವಾಗಿಯೂ ಮಹಾರಾಜ ದುಷ್ಯಂತನೇ? ಈತನೇ ನನ್ನ ತಂದೆಯೆ?"
೫. ನಾನು ತಾಯಿಯ ಕರ್ತವ್ಯ ನಿರ್ವಹಿಸಲೇಬೇಕು?
೬. "ನೀನಿನ್ನೂ ನನ್ನನ್ನು ಕ್ಷಮಿಸಲಿಲ್ಲವೇ?"
೭. ಹೆಣ್ಣಾಗಿ ನಾನು ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಲಾರೆ.

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ರಕ್ಷಾ ಕರಂಡವು ಯಾರ ಕೈಯಿಂದ ಕೆಳಗೆ ಬಿದ್ದಿತು?
೨. ಭರತನ ತಂದೆಯ ಹೆಸರೇನು?
೩. ಶಕುಂತಲೆಯ ತಾಯಿಯ ಹೆಸರೇನು?
೪. ಯಾರ ಶ್ರೇಯಸ್ಸಿಗಾಗಿ ಶಕುಂತಲೆಯು ಅರಮನೆಗೆ ಬಂದಿದ್ದಾಳೆ?
೫. ಶಕುಂತಲೆಯ ಅಂತಃಪುರದಿಂದ ದುಷ್ಯಂತ ಹೊರ ನಡೆದದ್ದು ಹೇಗೆ?

## III. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಆರ್ಯ ಪುತ್ರ ಬಂದಿದ್ದಾನೆ ಎಂದಾಗ ಶಕುಂತಲೆಯ ಪ್ರತಿಕ್ರಿಯೆ ಏನು?
೨. ಅಪರಾಜಿತಾ ಬಳ್ಳಿಯ ಗುಣ ಯಾವುದು?
೩. ಶಕುಂತಲೆ ತನ್ನ ಬದುಕು ಏನಾಗಿದೆ ಎಂದು ಯೋಚಿಸುತ್ತಾಳೆ?
೪. ಶಕುಂತಲೆ ಕಂಚಿನ ಧ್ವನಿಯಿಂದ ದುಷ್ಯಂತನಿಗೆ ಹೇಳಿದ್ದೇನು?
೫. ಅರಮನೆಗೆ ಯಾವ ಕಾರಣಕ್ಕಾಗಿ ಬಂದಿದ್ದೆನೆಂದು ಶಕುಂತಲೆ ಹೇಳುತ್ತಾಳೆ?
೬. ದುಷ್ಯಂತರಾಜನು ಶಕುಂತಲೆಯ ಅಂತಃಪುರದಿಂದ ಹೊರ ನಡೆದಾಗ ಆತನ ಮನಃಸ್ಥಿತಿ ಹೇಗಿತ್ತು?

## IV. ಐದು–ಆರು ವಾಕ್ಯಗಳಲ್ಲಿ ವಿವರಿಸಿ:

೧. ಶಕುಂತಲೆ ತನ್ನ ಬದುಕನ್ನು ಅರ್ಥೈಸಿಕೊಂಡದ್ದು ಹೇಗೆ? ತಿಳಿಸಿ.
೨. ದುಷ್ಯಂತ ಮತ್ತು ಶಕುಂತಲೆ ನಡುವೆ ಅಂತಃಪುರದಲ್ಲಿ ನಡೆದ ಮಾತುಗಳನ್ನು ವಿವರಿಸಿ.
೩. ದುಷ್ಯಂತನನ್ನು ನಿರಾಕರಿಸಲು ಶಕುಂತಲೆ ಕೊಡುವ ಕಾರಣಗಳನ್ನು ತಿಳಿಸಿ.
೪. ನಿರಾಕರಣೆ ಕತೆಯಲ್ಲಿ ಬರುವ ಶಕುಂತಲೆ ವ್ಯಕ್ತಿತ್ವವನ್ನು ವಿವರಿಸಿ.
೫. ಪುರುಷ ಸಮಾಜದ ಬಗ್ಗೆ ಶಕುಂತಲೆಯ ನಿಲುವೇನು?

**ಆಕರ:** ಬಿಡುಗಡೆ (ಕಥಾ ಸಂಕಲನ) – ವೀಣಾ ಶಾಂತೇಶ್ವರ,

ಹೆಚ್ಚಿನ ಓದು: ಹೇಮಕೂಟದಿಂದ ಬಂದ ಮೇಲೆ (ಸಣ್ಣಕತೆ) – ಮಾಸ್ತಿ
ಅನಭಿಜ್ಞ ಶಾಕುಂತಲ (ನಾಟಕ) – ಕೆ.ವೈ. ನಾರಾಯಣಸ್ವಾಮಿ
ಶಕುಂತಲೆಯೊಂದಿಗೆ ಕಳೆದ ಅಪರಾಹ್ನ (ಸಣ್ಣಕತೆ) – ವೈದೇಹಿ

**ನೀನು ನಿರ್ಮಿಸಿದಂತೆ ನಿನ್ನ ಪ್ರಪಂಚ ವಿಸ್ತಾರವಾಗುತ್ತದೆ**
**–ಜಾರ್ಜಿಯ ಡೊಗ್ಲಾಸ್ ಜಾನ್ಸನ್**

# ೮. ಕೃಷಿಸಂಸ್ಕೃತಿ ಮತ್ತು ಜಾಗತೀಕರಣ

**–ಸಿ.ಎಚ್. ಹನುಮಂತರಾಯ**

ಗಡಿಬಿಡಿಯ ಬಾಳಿನಲ್ಲಿ ಕೈಗಾರಿಕೀಕರಣ, ಖಾಸಗೀಕರಣ, ಕಂಪ್ಯೂಟರೀಕರಣ ಮತ್ತು ಜಾಗತೀಕರಣಗಳು ಮನುಷ್ಯನನ್ನು ಬಿಗಿದಪ್ಪಿಕೊಂಡಿವೆ. ಮಾನವೀಯತೆಯ ಮೂಲಜಲವೇ ಬತ್ತಿಹೋಗುತ್ತಿರುವ ಅಪಾಯ ಎದುರಾಗುತ್ತಿದೆ. ಅಂತಃಕರಣವಿಲ್ಲದ ಬದುಕು ಮರುಭೂಮಿಯಾಗುತ್ತಿದೆ. ದೇಶಿ ಸಂಸ್ಕೃತಿಯನ್ನು ಜಾಗತೀಕರಣದ ಭೂತ ಮುಕ್ಕುತ್ತಿದೆ. ಭೂಮಿಯನ್ನೇ ನಂಬಿಕೊಂಡಿದ್ದ ರೈತರು ಖಾಸಗೀಕರಣದ ಸಂಕೋಲೆಯಲ್ಲಿ ಸಿಲುಕಿ ತೊಳಲುತ್ತಿದ್ದಾರೆ. ಭೂಮಿ ತಾಯಿಯ ಮಕ್ಕಳು ಅನಾಥರಾಗಿ ಬದುಕುತ್ತಿದ್ದಾರೆ. ಉಳ್ಳವರು ಮತ್ತು ಇಲ್ಲದವರ ನಡುವೆ ಕಂದಕ ನಿರ್ಮಾಣವಾಗಿದೆ.

ಬಹುಕಾಲದಿಂದ ನಮ್ಮ ರೈತ ಚಳವಳಿಗಳನ್ನು ಅವಗಾಹಿಸುತ್ತ ಬಂದವನು ನಾನು. ಸ್ವಾತಂತ್ರ್ಯ ಚಳವಳಿಗೆ ಈ ದೇಶದ ರೈತರು ನೀಡಿದ ಕಾಣಿಕೆ ಅವಿಸ್ಮರಣೀಯವಾದುದು. ಅವರ ತ್ಯಾಗ, ಬಲಿದಾನಗಳಿಲ್ಲದೆ ಹೋಗಿದ್ದರೆ ಸ್ವಾತಂತ್ರ್ಯ ಕೇವಲ ಕನಸಾಗಿ ಉಳಿಯುತ್ತಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ.

ಶಾಲಾ ಪಠ್ಯಕ್ರಮಗಳಲ್ಲಿ ೧೮೫೭ರ ಸಿಪಾಯಿ ದಂಗೆಯ ಬಗ್ಗೆ ಓದಿದ್ದು ಇನ್ನೂ ನೆನಪಿದೆ. ನಿಜವಾಗಿಯೂ ಅದನ್ನು ರೈತ ದಂಗೆಯೆಂದೇ ಕರೆಯಬೇಕು ಎನಿಸುತ್ತದೆ. ಏಕೆಂದರೆ, ಆ ದಂಗೆ ಸ್ಫೋಟಗೊಳ್ಳುವುದಕ್ಕೆ ಕ್ರಾಂತಿಕಾರಕ ವಾತಾವರಣವನ್ನು ರೈತರು ತಮ್ಮ ಚಳವಳಿಗಳ ಮೂಲಕ ಸೃಷ್ಟಿ ಮಾಡಿದ್ದರು. ಬ್ರಿಟಿಷರು ರೈತರಿಂದ ತೆರಿಗೆ ವಸೂಲಿ ಮಾಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ಯಾವ ಅನುಕೂಲಗಳನ್ನೂ ಒದಗಿಸುತ್ತಿರಲಿಲ್ಲ. ಕೆರೆ, ಬಾವಿಗಳ ಸಂರಕ್ಷಣೆ ಮತ್ತು ನಿರ್ಮಾಣ ಕಾರ್ಯಗಳು ಸ್ಥಗಿತಗೊಂಡವೆನ್ನುವಷ್ಟು ಕ್ಷೀಣಗೊಂಡವು. ರೈತರ ಹಳೆಯ ತೆರಿಗೆ ಪದ್ಧತಿಯ ಪ್ರಕಾರ, ಬೆಳೆದ ಬೆಳೆಯಲ್ಲಿ ಒಂದಷ್ಟು ಭಾಗವನ್ನು ಕೊಡಬೇಕೆನ್ನುವ ನಿಯಮವಿತ್ತು. ಬರ ಬಿದ್ದು ಬೆಳೆ ಬಾರದಿದ್ದರೆ ಆ ವರ್ಷವೂ ತೆರಿಗೆ ಪಾವತಿಸಬೇಕಾಯಿತು. ಬ್ರಿಟಿಷರು ತಂದ ಹೊಸ ನಮೂನೆಯ ಜಮೀನ್ದಾರೀ ಪದ್ಧತಿಯಿಂದ ರೈತರು ಹಣದ ರೂಪದಲ್ಲಿ ತೆರಿಗೆ ಪಾವತಿಸಬೇಕಾಯಿತು. ಬೆಳೆ ಬೆಳೆಯಲಿ, ಬೆಳೆಯಾಗದಿರಲಿ ತೆರಿಗೆ ಕಡ್ಡಾಯವಾಯಿತು. ತೆರಿಗೆ ಪಾವತಿಸದ ರೈತನ ಜಮೀನನ್ನು ಬ್ರಿಟಿಷರಿಂದ ನೇಮಕಗೊಂಡಿದ್ದ ಜಮೀನ್ದಾರ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದ. ಹೀಗಾಗಿ ತಮ್ಮ ಜಮೀನುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ರೈತರು ಸಾಲ ಮಾಡಬೇಕಾಯಿತು. ಆ ಮೊದಲು ಇಲ್ಲದಿದ್ದ ಸಾಲ ನೀಡುವ ಸಾಹುಕಾರರ ವರ್ಗವೊಂದು ಹಳ್ಳಿ, ಹೋಬಳಿಗಳಲ್ಲಿ

ತಲೆಯೆತ್ತಿತ್ತು. ಸಾಲ ಮಾಡಿ ಕೃಷಿ ಮಾಡುವ ಪದ್ಧತಿ ರೈತರಿಗೆ ಅಪರಿಚಿತ ಎನ್ನುವಂತಿತ್ತು. ಸಾಲ ನೀಡಿದ ಸಾಹುಕಾರರು ಸಿಕ್ಕಾಪಟ್ಟೆ ಬಡ್ಡಿ ಹಾಕಿ ರೈತರನ್ನು ಸುಲಿಯುತ್ತಿದ್ದರು.

ಇದೆಲ್ಲದರ ಪರಿಣಾಮವಾಗಿ ಹತ್ತೊಂಬತ್ತನೇ ಶತಮಾನದ ಪೂರ್ವಾರ್ಧದಲ್ಲಿ ಮಾನವ ನಿರ್ಮಿತ ಬರಗಳು ಉಂಟಾಗತೊಡಗಿದ್ದವು. ೧೫೦೦ ರಿಂದ ೧೮೫೭ರಷ್ಟು ಹೊತ್ತಿಗೆ ಸುಮಾರು ಇಪ್ಪತ್ತಕ್ಕೂ ಮಿಕ್ಕ ಬರಗಳು ಕಾಣಿಸಿಕೊಂಡವು. ರೈತರು ಎರೆಮಣ್ಣನ್ನು ತಿಂದು ಹೊಟ್ಟೆ ತುಂಬಿಸಿಕೊಂಡ ಸುದ್ದಿಗಳೂ ಹರಡಿದ್ದವು. ಆ ಕಾಲಕ್ಕೆ ಹಸಿವಿನಿಂದ ಸಾಯುವ ರೈತರ ದೇಹಗಳನ್ನು ಅಂತ್ಯಕ್ರಿಯೆ ಮಾಡಲು ಆಗದಂಥ ಸ್ಥಿತಿ ಉಂಟಾಗಿತ್ತು. ಶವಗಳನ್ನು ನಾಯಿ–ನರಿಗಳು ತಿನ್ನುತ್ತಿದ್ದವು. ಮಾನವ ಅಸ್ಥಿಪಂಜರಗಳು ಎಲ್ಲೆಂದರಲ್ಲಿ ಬಿದ್ದಿರುತ್ತಿದ್ದವು. ಈಗಿನ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಬರವನ್ನು ಡೋಗಿ ಬರ ಎಂದು ಕರೆದರು. ಬ್ರಿಟಿಷರ ದರೋಡೆಕೋರ ನೀತಿಗಳ ವಿರುದ್ಧ ಉತ್ತರಪ್ರದೇಶದಲ್ಲಿ ಒಂದೆಡೆ ರೈತರು ಸಿಡಿದೆದ್ದಾಗ ಅವರ ಮೇಲೆ ಗೋಲಿಬಾರ್ ಮಾಡುವಂತೆ ಬ್ರಿಟಿಷ್ ಅಧಿಕಾರಿಗಳು ಭಾರತೀಯ ಸೈನಿಕರಿಗೆ ಆದೇಶಿಸಿದ್ದರು. ಆದರೆ ಸೈನಿಕರು ಗುಂಡುಗಳನ್ನು ರೈತರ ಮೇಲೆ ಹಾರಿಸಲು ನಿರಾಕರಿಸಿದರು. ಆಗ ಬ್ರಿಟಿಷ್ ಸೈನಿಕರು ಮತ್ತು ಭಾರತೀಯ ಸೈನಿಕರು ಸ್ಫೋಟಗೊಳ್ಳಲು ಕಾರಣವಾಯಿತು. ರೈತರು ಮತ್ತು ಭಾರತೀಯ ಸೈನಿಕರ ಸಖ್ಯಕ್ಕೆ ದಾರಿ ಮಾಡಿಕೊಟ್ಟಿತು.

೧೮೫೭ರ ದಂಗೆಯಲ್ಲಿ ಒಂದೂವರೆ ಲಕ್ಷ ಭಾರತೀಯರು ಕೊಲ್ಲಲ್ಪಟ್ಟರು. ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ರೈತರೇ ಆಗಿದ್ದರು. ಸ್ವಾತಂತ್ರ್ಯ ಸಂಗ್ರಾಮದ ದ್ವಿತೀಯ ಘಟ್ಟದಲ್ಲಿ ಬ್ರಿಟಿಷ್ ಸರಕಾರಕ್ಕೆ ತೆರಿಗೆ ಕೊಡಬಾರದು ಎಂದು ಗಾಂಧೀಜಿ ಕರೆಕೊಟ್ಟರು. ಈ ಕರೆಗೆ ರೈತರು ಓಗೊಟ್ಟಿದ್ದರಿಂದ ಸ್ವಾತಂತ್ರ್ಯ ಚಳವಳಿ ಹಳ್ಳಿಹಳ್ಳಿಗಳಿಗೆ ವ್ಯಾಪಿಸಲು ಸಾಧ್ಯವಾಯಿತು.

ಸ್ವಾತಂತ್ರ್ಯವು ರೈತರ ಕೈಗೆ ಸಿಗದೆ ಬಂಡವಾಳ ಶಾಹೀಗಳ ಕೈಗೆ ಸಿಕ್ಕಿತು. ಜಮೀನ್ದಾರಿ ಪದ್ಧತಿಯನ್ನು ಮೂಲೋತ್ಪಾಟನೆ ಮಾಡದೆ ಪಾಳೆಗಾರರನ್ನೆಲ್ಲ ಹಾಗೇ ಉಳಿಸಿಕೊಳ್ಳಲಾಯಿತು. ದೊಡ್ಡ ದೊಡ್ಡ ಕಾರ್ಖಾನೆಗಳ ಮಾಲೀಕರು ತಮ್ಮ ಇಂಡಸ್ಟ್ರಿಗಳ ಕಚ್ಚಾಮಾಲಿಗೆ ಬೇಕೆಂದು ಲಕ್ಷಾಂತರ ಎಕರೆ ಜಮೀನುಗಳನ್ನು ಲಪಟಾಯಿಸಿಕೊಂಡರು. ಸ್ವಾತಂತ್ರ್ಯಕ್ಕಾಗಿ ಸೆಣಸಿದ ಸಾಮಾನ್ಯ ರೈತರ ಬದುಕು ದುಸ್ತರವಾಯಿತು.

ಹೀಗೆ ಸ್ವಾತಂತ್ರ್ಯಾ ನಂತರದ ಪರಿಸ್ಥಿತಿಯಲ್ಲಿ ಭಾರತದ ರೈತ ಹಳೆಯ ಜಮೀನ್ದಾರರು ಮತ್ತು ಬಂಡವಾಳಶಾಹಿ ಜಮೀನ್ದಾರರು ಈ ಇಬ್ಬರಿಂದಲೂ ಶೋಷಣೆಗೆ ಒಳಗಾಗಬೇಕಾಯಿತು. ನಮ್ಮ ಹಸಿರು ಕ್ರಾಂತಿ ಶ್ರೀಮಂತ ರೈತರ ಉದಯಕ್ಕೆ ಸಹಾಯಕವಾಯಿತು. ಕೃಷಿರಂಗದಲ್ಲಿ ಬಡ ಹಾಗು ಕೂಲಿಕಾರ ರೈತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಮಲ್ಟಿಪಲ್ ಆಗತೊಡಗಿತು.

ಮಧ್ಯಮ ಮತ್ತು ಶ್ರೀಮಂತ ರೈತರ ಬೇಡಿಕೆಗಳನ್ನು ಪ್ರಧಾನವಾಗಿಸಿಕೊಂಡ ರೈತ ಹೋರಾಟಗಳು ವಿಶೇಷವಾಗಿ ಎಪ್ಪತ್ತರ ದಶಕದಲ್ಲಿ ಭುಗಿಲೇಳತೊಡಗಿದವು. ರೈತರು ಸರಕಾರಗಳನ್ನು ನಡುಗಿಸತೊಡಗಿದರು. ಕರ್ನಾಟಕದಲ್ಲಿ ಕಾಗೋಡು ರೈತ ಹೋರಾಟವು ಅಭೂತಪೂರ್ವ ನೆಲೆಗಟ್ಟನ್ನು ಒದಗಿಸಿಕೊಟ್ಟಿತು. ದಾಂಡೇಲಿಯಲ್ಲಿ ಹಳಿಯಾಳ ರೈತ ಹೋರಾಟವು ನಡೆಯಿತು. ನರಗುಂದ ಮತ್ತು ಶಿವಮೊಗ್ಗ ರೈತ ಚಳವಳಿಗಳು ನಡೆದವು. ಶಿವಮೊಗ್ಗ ರೈತ ಚಳವಳಿ ಮುಂದೆ ಹೋಳಾಗಿ ಒಡೆಯುತ್ತ ಹೋದದ್ದು ಈಗ ಇತಿಹಾಸ.

ನಮ್ಮ ಕೃಷಿರಂಗದಲ್ಲಿ ಹೊತ್ತಿ ಉರಿಯುತ್ತಿರುವ ಹಲವಾರು ಸಮಸ್ಯೆಗಳಿಗೆ ಜಾಗತೀಕರಣವೇ ಮೂಲಕಾರಣ ಎನ್ನುವ ಅಂಶ ಮೊದಮೊದಲಿಗೆ ರೈತರಿಗೆ ಅರ್ಥವಾಗಲಿಲ್ಲ. ಇಂದಿಗೂ ಈ ವಿಷಯ ಬಡರೈತ ಹಾಗೂ ಕೂಲಿಕಾರರಿಗೆ ಅರ್ಥವಾಗಿಲ್ಲ ಎನ್ನುವ ಮಾತು ಬೇರೆ. ನಮ್ಮ ಬಂಡವಾಳಶಾಹಿ ಜಮೀನ್ದಾರರು ಮತ್ತು ಶ್ರೀಮಂತ ರೈತರಿಗೆ ಜಾಗತೀಕರಣದ ಬಿಸಿ ತಡವಾಗಿಯಾದರೂ ಹತ್ತಿತ್ತು. ಜಾಗತೀಕರಣವು ಇಂದು ಇಡೀ ವಿಶ್ವದ ದೇಶಗಳಲ್ಲಿ ತನ್ನನ್ನು ಹೊಗಳುವ ವರ್ಗವೊಂದನ್ನು ಸೃಷ್ಟಿಸಿದೆ. ಈ ದೇಶದ ಬಂಡವಾಳಶಾಹೀಗಳು ಸಾಮ್ರಾಜ್ಯಶಾಹಿಗಳೊಂದಿಗೆ ಸ್ಪರ್ಧಿಸಲಾಗದೆ ಸೋತು ಒತ್ತಾಯದ ಹಸ್ತಲಾಘವ ಮಾಡಿದರು. ಇದರ ಪರಿಣಾಮವಾಗಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ವದೇಶದಲ್ಲಿ ಪಾಲುಗಾರಿಕೆ ಉದ್ಯಮಗಳನ್ನು ಆರಂಭಿಸಿದವು. ಇದನ್ನೇ ನವವಸಾಹತುವಾದದ ಪರಿಪೂರ್ಣ ರೂಪ ಎನ್ನುವುದು. ಸಾಮ್ರಾಜ್ಯಶಾಹಿಗಳು ವಿವಿಧ ದೇಶಗಳನ್ನು ರಾಜಕೀಯವಾಗಿ ಆಕ್ರಮಿಸಿಕೊಂಡು ತಮ್ಮದೇ ಸರಕಾರ ಸ್ಥಾಪಿಸಿ ಆರ್ಥಿಕವಾಗಿ ಕೊಳ್ಳೆ ಹೊಡೆಯುತ್ತಿದ್ದ ಕಾಲವು ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಕುಸಿಯತೊಡಗಿತು. ಸಾಮ್ರಾಜ್ಯಶಾಹೀಗಳೊಳಗಿನ ಪರಸ್ಪರ ಕಿತ್ತಾಟವು ಜಾಗತಿಕ ಯುದ್ಧದಲ್ಲಿ ಪರ್ಯಾವಸಾನಗೊಂಡಿತು. ಅದೇ ಸಂದರ್ಭದಲ್ಲಿ ವಸಾಹತು ದೇಶಗಳಲ್ಲಿ ದೇಶೀಯ ವಿಮೋಚನಾ ಚಳವಳಿಗಳು ಹುಟ್ಟಿಕೊಂಡವು. ಇದರಿಂದಾಗಿ ಸಾಮ್ರಾಜ್ಯಶಾಹಿಗಳಿಗೆ ತಮ್ಮ ವಸಾಹತು ಆಡಳಿತವನ್ನು ಮುಂದುವರಿಸಲು ಅಸಾಧ್ಯವಾಯಿತು. ಪರಿಣಾಮವಾಗಿ ಎರಡನೇ ಜಾಗತಿಕ ಯುದ್ಧಾನಂತರ ಹಲವಾರು ವಸಾಹತು ದೇಶಗಳು ಸ್ವತಂತ್ರಗೊಳ್ಳುವಂತಾಯಿತು.

ಸ್ವಾತಂತ್ರ್ಯ ಪಡೆದ ಕೆಲವು ರಾಷ್ಟ್ರಗಳು ಸಾಮ್ರಾಜ್ಯಶಾಹಿಗಳ ಶತಮಾನಗಳ ಸತತ ಲೂಟಿಯಿಂದ ಪಾರಾಗಿ ಆರ್ಥಿಕವಾಗಿ ಸುಭದ್ರವಾಗಿದ್ದವು. ಹೀಗಾಗಿ ಅವು ಸಾಮ್ರಾಜ್ಯಶಾಹಿಗಳ ಆರ್ಥಿಕ ಶೋಷಣೆಗೆ ಕೊರಳೊಡ್ಡಬೇಕಾಯಿತು. ತಮ್ಮ ವಸಾಹತುಶಾಹಿ ಸುಲಿಗೆಯಿಂದ ಸಂಪತ್ತು ಕೇಂದ್ರೀಕರಿಸಿಟ್ಟುಕೊಂಡು ಸಾಮ್ರಾಜ್ಯಶಾಹಿಗಳು ಮೂರನೇ ಜಗತ್ತಿನ ಬಡ ರಾಷ್ಟ್ರಗಳನ್ನು ಸಾಲದ ಮೂಲಕ ಬಲೆಗೆ ಹಾಕಿಕೊಳ್ಳತೊಡಗಿದವು. ಸಾಲ ಕೇಳಲು ಹೋದ ರಾಷ್ಟ್ರಗಳಿಗೆ ಹತ್ತು ಹಲವು ಷರತ್ತುಗಳನ್ನು (ಸಾಲಕ್ಕೆ ಸಂಬಂಧಪಡದ) ಹೇರತೊಡಗಿದವು; ಬಡರಾಷ್ಟ್ರಗಳ ಯೋಜನೆಗಳಿಗೆ ದಿಕ್ಸೂಚಿಯಾಗತೊಡಗಿದವು. ಮಹಿಳೆ

ಮತ್ತು ಶಿಶುಕಲ್ಯಾಣ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣಗಳಂಥ ಯೋಜನೆಗಳಿಗಾಗಿ ಹಣ ವ್ಯಯಿಸಬಾರದೆನ್ನುವ ನಿರ್ಬಂಧಗಳನ್ನು ಹೇರತೊಡಗಿದವು. ಬಡರಾಷ್ಟ್ರಗಳು ಅನುತ್ಪಾದಕವಾಗಿಯೇ ಮುಂದುವರಿದು ಕೇವಲ ಖರೀದಿದಾರರಾಗಬೇಕೆನ್ನುವುದು ಸಾಮ್ರಾಜ್ಯಶಾಹಿಗಳ ಇರಾದೆ. ಸಾಮ್ರಾಜ್ಯಶಾಹೀಗಳ ಉತ್ಪಾದನೆಗಳನ್ನು ಬಿಕರಿ ಮಾಡುವ ರೀಟೇಲ್ ಶಾಪ್‌ಗಳಂತಾದವು ಬಡ ರಾಷ್ಟ್ರಗಳು. ಜಾಗತಿಕ ಉತ್ಪನ್ನಗಳ ಗುಣ ನಿಯಂತ್ರಣದ ಸೋಗನ್ನು ಹಾಕಿಕೊಂಡು ಸಾಮ್ರಾಜ್ಯಶಾಹಿ ಪ್ರತ್ಯಕ್ಷವಾಯಿತು. ಪೇಟೆಂಟ್ ಕಾನೂನನ್ನು ತಂದಿತು.

ಭಾರತದಲ್ಲಿ ಬೆಳೆಯುವ ಬಾಸುಮತಿ ಅಕ್ಕಿ, ಬೇವಿನ ಔಷಧಿ ಗುಣಗಳು, ಅರಿಷಿಣದ ಔಷಧಿ ಗುಣ ಇತ್ಯಾದಿಗಳು ತನ್ನ ಸಂಶೋಧನೆಗಳು ಎಂದು ಪೇಟೆಂಟ್ ಮಾಡಿಸಿಕೊಳ್ಳಲಾರಂಭಿಸಿದವು. ಸಾಮ್ರಾಜ್ಯಶಾಹಿ ಕಂಪನಿಗಳು ಅತ್ಯವಶ್ಯಕ ಔಷಧಿಗಳ ಮೇಲೆ ತನ್ನ ಏಕಸ್ವಾಮ್ಯವನ್ನು ಘೋಷಿಸಿ ಇನ್ನು ಮುಂದೆ ಇಲ್ಲಿ ನಮ್ಮ ಪರವಾನಗಿ ಇಲ್ಲದೆ ಏನನ್ನೂ ತಯಾರಿಸಕೂಡದು ಎಂದು ಹೇಳತೊಡಗಿದವು. ಏಡ್ಸ್‌ನಂಥ ವಿನಾಶಕಾರಿ ರೋಗಕ್ಕೆ ಬೇಕಾಗುವ ಮದ್ದುಗಳನ್ನು ಬಡ ರಾಷ್ಟ್ರಗಳು ಕಡಿಮೆ ವೆಚ್ಚದಲ್ಲಿ ತಯಾರಿಸುವುದು ದುಸ್ತರವಾಯಿತು. ಹೀಗಾಗಿ ಪೇಟೆಂಟ್‌ಗಳು ಏಡ್ಸ್ ರೋಗಿಗಳನ್ನು ನುಂಗತೊಡಗಿದವು. ಮೂರನೇ ಜಗತ್ತಿನ ರಾಷ್ಟ್ರಗಳ ಜನರು ಔಷಧ ಪಡೆಯುವ ಹಕ್ಕಿನಿಂದ ವಂಚಿತರಾಗಬೇಕಾಯಿತು.

ಮುಕ್ತ ಮಾರುಕಟ್ಟೆಯಲ್ಲಿ ದಿಗ್ವಿಜಯ ಸಾಧಿಸಲು ಸಾಮ್ರಾಜ್ಯಶಾಹಿಗಳು ಸಸ್ಯಾಹಾರಿ ದನಗಳನ್ನು ಸಹ ಮಾಂಸಾಹಾರಿಗಳನ್ನಾಗಿ ಪರಿವರ್ತಿಸಿಬಿಟ್ಟರು. ಹಲವಾರು ರಾಸಾಯನಿಕಗಳಿಂದ ಕೂಡಿದ ಆಹಾರ ನೀಡಿ ಕುರಿಗಳನ್ನು ದಿಢೀರ್ ಬೆಳವಣಿಗೆಗೆ ಒಳಪಡಿಸುವ ಪ್ರಯೋಗ ನಡೆಸಿದರು. ಅಕಾಲಿಕವಾಗಿ ಬಾತುಕೊಂಡು ಕೊಬ್ಬಿ ಬೆಳೆದ ಕುರಿಗಳು ನೋಡಲು ಮಾತ್ರ ಗೂಳಿಗಳಂತೆ ಕಂಡವು. ಆದರೆ ಅವುಗಳಿಗೆ ರೋಗ ನಿರೋಧಕ ಶಕ್ತಿಯೇ ಇರಲಿಲ್ಲ. ಗುರುತಿಸಲಾಗದ ವಿಚಿತ್ರ ರೋಗಗಳಿಗೆ ಬಲಿಯಾಗಿ ಕುರಿಗಳು ಸಾಯತೊಡಗಿದವು. ಈ ರೀತಿ ರೋಗ ಬಂದ ಸತ್ತ ಕುರಿಗಳನ್ನು ಮೇವಿನೊಂದಿಗೆ ರುಬ್ಬಿ ಆಕಳು, ಎಮ್ಮೆಗಳಿಗೆ ಬೇಕಾಗುವ ಆಹಾರವನ್ನು ತಯಾರಿಸಿ, ಮೂರನೇ ಜಗತ್ತಿನ ರಾಷ್ಟ್ರಗಳ ಮಾರುಕಟ್ಟೆಗೆ ರಫ್ತು ಮಾಡಿದರು. ಮೂರನೇ ಜಗತ್ತಿನ ರಾಷ್ಟ್ರಗಳ ಸರಕಾರಗಳು ಸಾಮ್ರಾಜ್ಯಶಾಹಿಗಳ ಒತ್ತಾಯಗಳಿಗೆ ಮಣಿದು ಕೃಷಿ ವಿರೋಧಿ ನೀತಿಗಳನ್ನು ಅನುಸರಿಸತೊಡಗಿದ್ದರಿಂದ ಬಡವರ ಆಹಾರಧಾನ್ಯ ಬಳಕೆಯಲ್ಲಿ ಕುಸಿತವುಂಟಾಯಿತು.

ನಮ್ಮ ಕರ್ನಾಟಕ ರಾಜ್ಯ ಭೂಸುಧಾರಣಾ ಕಾಯ್ದೆಯ ಪ್ರಕಾರ ರೈತ ಅಥವಾ ರೈತ ಕೂಲಿಕಾರರಲ್ಲದವರು ಕೃಷಿ ಜಮೀನುಗಳನ್ನು ಖರೀದಿಸುವಂತಿಲ್ಲ. ಹಲವಾರು

ವ್ಯಾಪಾರಿಗಳು, ಸಾಲ ಲೇವಾದೇವಿಗಾರರು ಸರಕಾರಕ್ಕೆ ಆದಾಯ ತೆರಿಗೆ ವಂಚಿಸಲು ಜಮೀನುಗಳನ್ನು ಖರೀದಿಸಿ, ತಮ್ಮ ವ್ಯಾಪಾರಿ ಮೂಲದಿಂದ ಬಂದ ಆದಾಯವನ್ನು ಕೃಷಿ ಮೂಲದಿಂದ ಬಂದ ಆದಾಯವೆಂದು ತೋರಿಸುವ ಪ್ರಕರಣಗಳು ನಮ್ಮಲ್ಲಿವೆ.

ಭೂಮಿ ರೈತನಿಗೆ ಉತ್ಪಾದನಾ ಸಾಧನ ಮಾತ್ರವಲ್ಲ ಅವನ ಬದುಕೂ ಆಗಿದೆ. ರೈತನ ಬದುಕಿನ ವ್ಯವಸ್ಥೆಯ ಮೇಲೆ ನಡೆದ ದಾಳಿ ಇದಾಗಿದೆ. ಎಕರೆಗೆ ಆರೇಳು ಲಕ್ಷ ಸಿಕ್ಕೊಡನೆ ರೈತನ ಬದುಕು ಉಜ್ವಲಗೊಂಡಿತೆಂದು ತಿಳಿಯುವುದು ತಪ್ಪು. ಅವನೇ ಮಾರಿಕೊಂಡ ಜಮೀನು ಬಹುರಾಷ್ಟ್ರೀಯ ಕಂಪನಿಯಿಂದ ಲೇಔಟ್ ಮಾಡಿಸಲ್ಪಟ್ಟಾಗ ಅಷ್ಟು ಮೊತ್ತಕ್ಕೆ ೩೦ x ೪೦ ಅಡಿ ಸೈಟ್ ಸಹ ರೈತನಿಗೆ ಸಿಕ್ಕುವುದಿಲ್ಲ. ವ್ಯಾಪಾರದ ತಿಳುವಳಿಕೆ, ಲೇವಾದೇವಿ ಚಾಣಾಕ್ಷತೆಯಿರದ ರೈತ ಆ ಹಣವನ್ನು ವ್ಯರ್ಥವಾಗಿ ಖರ್ಚು ಮಾಡಿ ಅಂತಿಮವಾಗಿ ನೆಲೆರಹಿತನಾಗುವ ಸಾಧ್ಯತೆಗಳೇ ಹೆಚ್ಚು.

ಜಾಗತೀಕರಣದ ಭಾಗವಾಗಿ ನಮ್ಮ ದೇಶಕ್ಕೆ ಖಾದ್ಯ ತಯಾರಿಕಾ ಕಂಪನಿಗಳು, ಹೋಟೆಲ್‌ಗಳು ದಾಳಿಯಿಟ್ಟವು. ವಿದೇಶಗಳಲ್ಲಿ ಈ ಹೋಟೆಲ್‌ಗಳು ಆರೋಗ್ಯಪ್ರಿಯರ ತಿರಸ್ಕಾರಕ್ಕೆ ಗುರಿಯಾಗಿದ್ದವು. ಅಮೇರಿಕಾದ ಸಂಸತ್ತು ಇಂತಹ ಹೋಟೆಲ್‌ಗಳು ತಯಾರಿಸುವ ಖಾದ್ಯಗಳ ಗುಣಮಟ್ಟ ಪರೀಕ್ಷಿಸಲು ಸಮಿತಿಯೊಂದನ್ನು ರಚಿಸಿತ್ತು. ಈ ಕಂಪನಿಗಳು ಖಾದ್ಯ ತಯಾರಿಕೆಗೆ ಬಳಸುವ ಕುರಿ, ಕೋಳಿಗಳಿಗೆ ವಿಶೇಷ ರಾಸಾಯನಿಕಗಳ ಆಹಾರ ತಿನ್ನಿಸಿ ಬೆಳೆಸಲಾಗುತ್ತಿದ್ದ ಅಂಶ ಬೆಳಕಿಗೆ ಬಂದಿತು. ಈ ರೀತಿ ಬೆಳೆಸುವ ಪ್ರಾಣಿಗಳ ಮಾಂಸ ಹೆಚ್ಚು ರುಚಿಕರವಾಗಲೆಂದು ಮತ್ತು ದಿಢೀರ್ ಉಬ್ಬಿಕೊಂಡು ಬೆಳೆಯಲೆಂದು ಅಪಾಯಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತಿರುವ ಅಂಶವು ಬೆಳಕಿಗೆ ಬಂತು.

ಇಂಥ ಪ್ರಾಣಿಗಳನ್ನು ತಿನ್ನುವುದರಿಂದ ಕರುಳಿನ ಕ್ಯಾನ್ಸರ್, ಜ್ವರ, ಮಕ್ಕಳಲ್ಲಿ ಮತ್ತು ವಯಸ್ಕರಲ್ಲಿ ಲೈಂಗಿಕ ಬದಲಾವಣೆಗಳು, ನಪುಂಸಕತ್ವ, ಮಕ್ಕಳಲ್ಲಿ ಅಕಾಲಿಕ ಹರೆಯ ಬರುವಿಕೆ ಮುಂತಾದ ಸಮಸ್ಯೆಗಳು ತಲೆದೋರುವವು ಎಂದು ಅಮೇರಿಕಾದ ತಜ್ಞರು ತಮ್ಮ ಅಧ್ಯಯನದಿಂದ ತೋರಿಸಿಕೊಟ್ಟರು. ಇಂಥ ವಿಷಪೂರಿತ ಮಾಂಸ ಭಕ್ಷಣೆಯಿಂದ ಅಮೇರಿಕನ್ನರು ಹೃದಯ ರೋಗಗಳಿಗೆ ಬಲಿಯಾಗಿರುವುದನ್ನೂ ಪತ್ತೆ ಹಚ್ಚಿದರು. ರಾಸಾಯನಿಕಗಳನ್ನು ಭಕ್ಷಿಸಿ ಬೆಳೆಯುವ ಹಂತದಲ್ಲಿಯೇ ಪ್ರಾಣಿಗಳಿಗೆ ಕ್ಯಾನ್ಸರ್, ಲ್ಯುಕೋಸಿನ್, ಹಂದಿಜ್ವರ ಇತ್ಯಾದಿ ರೋಗಗಳು ಬರಲಾರಂಭಿಸುತ್ತವೆ. ಈ ರೋಗಗಳನ್ನು ತಡೆಗಟ್ಟಲಿಕ್ಕಾಗಿ ಮಾರಣಾಂತಿಕ ರೋಗನಿರೋಧಕ ಔಷಧಿಗಳನ್ನು ಬಳಸಲಾಗುತ್ತದೆ. ಈ ರಾಸಾಯನಿಕಗಳು ಆ ಪ್ರಾಣಿಗಳ ದೇಹದಲ್ಲಿಯೇ ಡಿಪಾಜಿಟ್ ಆಗಿದ್ದು ಮಾಂಸದಲ್ಲಿಯೂ ಇರುತ್ತವೆ. ಮಾಂಸ ಬೇಯುವ ಶಾಖದ ಪ್ರಮಾಣಕ್ಕೆ ಈ ರಾಸಾಯನಿಕಗಳು ಹಾಳಾಗದೆ ಖಾದ್ಯಗಳ ಮೂಲಕ ಮನುಷ್ಯನ ದೇಹಕ್ಕೆ ರವಾನೆಗೊಳ್ಳುತ್ತವೆ.

ಈ ಸಂಗತಿಗಳು ಬಯಲಾದ ಮೇಲೆ ಅಮೇರಿಕನ್ನರು ಇಂತಹ ಹೋಟಲ್‌ಗಳನ್ನು ಜಂಕ್‌ಫುಡ್ ಹೋಟೆಲ್‌ಗಳೆಂದು ಹೀಯಾಳಿಸಲಾರಂಭಿಸಿದರು. ಈ ಹೋಟೆಲ್‌ಗಳನ್ನು ನಡೆಸುವ ಕಂಪನಿಗಳು ಸ್ವದೇಶದಲ್ಲಿ ತಾತ್ಸಾರಕ್ಕೆ ಒಳಗಾಗಿದ್ದರೂ ತಮ್ಮ ಶಾಖೆಗಳನ್ನು ಜಗತ್ತಿನ ನೂರಾರು ದೇಶಗಳಲ್ಲಿ ವಿಸ್ತರಿಸುವುದನ್ನು ಮಾತ್ರ ಬಿಡಲಿಲ್ಲ.

ಇಷ್ಟೆಲ್ಲಾ ವಾಸ್ತವ ಸಂಗತಿಗಳ ಹಿನ್ನೆಲೆಯಲ್ಲಿ ನಾವೆಲ್ಲಾ ಹೆಮ್ಮೆಪಡುವ ವಿಚಾರವೊಂದು ಉಳಿದೆ ಉಳಿಯುತ್ತದೆ. ಅದೆಂದರೆ ಭಾರತೀಯರು ಸಾವಿರಾರು ಸಂಖ್ಯೆಯಲ್ಲಿ ಹಲವು ದೇಶಗಳಲ್ಲಿ ಮೆಚ್ಚುಗೆ ಪಡೆಯುವಂತ ಖಾದ್ಯಗಳನ್ನು ತಯಾರಿಸಿಕೊಡುತ್ತಿದ್ದಾರೆ. ಯಾವೊಂದು ಹೊರ ದೇಶವೂ ಈವರೆಗೆ ಒಂದೂ ವ್ಯತಿರಿಕ್ತ ಅಭಿಪ್ರಾಯವನ್ನು ಕೊಡಲಾಗಿಲ್ಲ. ಈ ಬಾಬತ್ತಲ್ಲೂ ವಿಷವನ್ನುಂಡು ಅಮೃತವನ್ನು ಉಣಬಡಿಸುವ ನಮ್ಮ ರೈತ ಸಂಸ್ಕೃತಿಗೆ ಬದ್ಧವಾಗಿಯೇ ಇದ್ದೇವೆ.

## ಲೇಖನ–ಲೇಖಕರು: ಸಿ. ಎಚ್. ಹನುಮಂತರಾಯ (೧೯೪೭)



ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಕ್ಕಬೆಳವಂಗಲದ ರೈತ ಕುಟುಂಬದಲ್ಲಿ ಜನಿಸಿದ ಸಿ.ಎಚ್.ಹನುಮಂತರಾಯರು ಕನ್ನಡ ನಾಡು ನುಡಿಯ ಬಗ್ಗೆ ಪ್ರೀತಿ, ಕಾಳಜಿಯನ್ನಿಟ್ಟುಕೊಂಡಿದ್ದಾರೆ. ಬಿ.ಎ(ಆನರ್ಸ್) ಹಾಗೂ ಎಲ್.ಎಲ್.ಬಿ. ಪದವಿಯನ್ನು ಪಡೆದ ಇವರು ಬೆಂಗಳೂರಿನ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಸಹ–ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ವಕೀಲ ವೃತ್ತಿಯಲ್ಲಿ ಹೆಸರುಗಳಿಸಿರುವ ಇವರು ರೈತಪರ ಮತ್ತು ಕನ್ನಡಪರ ಹೋರಾಟಗಾರರ ವಿರುದ್ಧ ಹಾಕಿದ ಪ್ರಕರಣಗಳಲ್ಲಿ ಅವರ ಪರ ವಕಾಲತ್ತು ವಹಿಸಿದ್ದಾರೆ. ನ್ಯಾಯಾಲಯಗಳಲ್ಲಿ ಕನ್ನಡದಲ್ಲೆ ವಾದ ಮಂಡಿಸುವ ಕೌಶಲ್ಯ ಅವರಿಗೆ ಒಲಿದಿದೆ. ಹಲವಾರು ಕಾನೂನು ಕಾಲೇಜುಗಳಲ್ಲಿ ಗೌರವ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ 'ವಕೀಲರೊಬ್ಬರ ವಗ್ಯೆರೆಗಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ರಾಜ್ಯ ಸರ್ಕಾರ ಇವರಿಗೆ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಮಾನವಪರ ಹೋರಾಟಗಳು ನೆಲಗಚ್ಚುತ್ತಿವೆ. ಜಾಗತೀಕರಣ ಮನುಷ್ಯನ ಬದುಕುವ ಹಕ್ಕನ್ನು ಕಸಿದುಕೊಂಡಿದೆ. ರೈತಪರ ಹೋರಾಟಗಳು ಸ್ವಾರ್ಥಿಗಳ ಪಾಲಾಗಿ ರೈತರು ದಿಕ್ಕೆಟ್ಟಿದ್ದಾರೆ. ಬಂಡವಾಳಶಾಹಿಗಳು ರೈತರಿಗೆ ಆಸೆ ತೋರಿಸಿ ಭೂಮಿ ಕಸಿಯುತ್ತಿದ್ದಾರೆ. ರೈತರ ಭೂಮಿಗಳು ಕೈಗಾರಿಕೆಗಳಾಗಿ, ಖಾಸಗಿ

ಬಡಾವಣೆಗಳಾಗಿ ಪರಿವರ್ತನೆಗೊಂಡು, 'ಅನ್ನದಾತ'ನೆಂದು ಕರೆಸಿಕೊಂಡ ರೈತ ಅನ್ನ ಇಲ್ಲದವನಾಗುತ್ತಿರುವುದು ದುರಂತ. ಬಡರಾಷ್ಟ್ರಗಳು ಮತ್ತು ಬಡವರು ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕೆಂಬುದರ ಬಗ್ಗೆ ಕಾಳಜಿ ಇಲ್ಲಿದೆ.

ಅವಸರದ ನಡುವೆ ಬದುಕಿಗೆ ಬೇಕಾಗಿರುವ ಮೂಲ ದ್ರವ್ಯವನ್ನೇ ಕಳೆದುಕೊಂಡು, ಬದುಕು ಕಟ್ಟಿಕೊಳ್ಳಲು ಹೊರಟಿರುವ ಚಿತ್ರಣವನ್ನು 'ಕೊಳ್ಳು ಬಾಕು' ಸಂಸ್ಕೃತಿಯ ಮೂಲಕ ತೆರೆದುತೋರುವ ರೀತಿ ಭಿನ್ನವಾಗಿದೆ. ದೇಸಿಯ ಆಹಾರ ಪದ್ಧತಿಗಳು ಮಾಯವಾಗಿ, ಅನಾರೋಗ್ಯಕ್ಕೆ ಗುರಿ ಮಾಡುವ ರಾಸಾಯನಿಕ ಆಹಾರ ಪದಾರ್ಥಗಳು ದೇಹ ಸೇರುತ್ತಿವೆ. ವಿದೇಶಿ ಖಾದ್ಯ ತಿನಿಸುಗಳಿಗೆ ದಾಸರಾಗಿರುವ ಯುವ ಜನಾಂಗವು ಖಿನ್ನತೆ, ಕೋಪ, ಭಯ, ತಲ್ಲಣ, ತಳಮಳ ಮತ್ತು ಆತ್ಮವಿಶ್ವಾಸವಿಲ್ಲದ ಪರಿಸ್ಥಿತಿಗೆ ಒಳಗಾಗುತ್ತಿದ್ದಾರೆ.

**ಪದಕೋಶ:**

ಸಿಪಾಯಿ–ಸೈನಿಕ; ಮೂಲೋತ್ಪಾಟನೆ–ಬೇರುಸಹಿತ ಕೀಳು; ಮುಟ್ಟುಗೋಲು–(ಸಾಲ ವಸೂಲಿ ಮತ್ತಿತರ ಕಾರಣಗಳಿಗಾಗಿ) ಒಬ್ಬರ ಸ್ವತ್ತನ್ನು ಸರ್ಕಾರ ಅಥವಾ ನ್ಯಾಯಾಲಯ ಮುಂತಾದವುಗಳ ಆದೇಶದಂತೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದು; ಪಾಳೆಗಾರ–ಒಂದು ಪ್ರಾಂತ್ಯದ ಸರ್ವಾಧಿಕಾರಿ; ದುಸ್ತರ–ಕಷ್ಟ; ಬಿಕರಿ–ಮಾರಾಟ, ರಿಟೇಲ್ ಶಾಪ್– ಚಿಲ್ಲರೆ ಅಂಗಡಿ; ಇರಾದೆ–ಉದ್ದೇಶ; ಸೋಗು–ವೇಷ; ಬಾತು–ಊದು, ದಪ್ಪ; ಉಜ್ವಲ–ಪ್ರಕಾಶ; ಲೇವಾದೇವಿ–ವ್ಯವಹಾರ; ಡಿಪಾಜಿಟ್–ಶೇಖರಣೆ,ಠೇವಣಿ; ರವಾನೆ–ಸೇರು; ತಾತ್ಸಾರ–ತಿರಸ್ಕಾರ, ಬಾಬತ್–ವಿಷಯ, ಸಂಗತಿ.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಬೆಳೆಯಲಿ ಬೆಳಯದಿರಲಿ ತೆರಿಗೆ ಕಡ್ಡಾಯವಾಯಿತು.

೨. ಶವಗಳನ್ನು ನಾಯಿ ನರಿಗಳು ತಿನ್ನುತ್ತಿದ್ದವು.

೩. ಸ್ವಾತಂತ್ರ್ಯಕ್ಕಾಗಿ ಸೆಣಸಿದ ಸಾಮಾನ್ಯ ರೈತರ ಬದುಕು ದುಸ್ತರವಾಯಿತು.

೪. ರೋಗ ನಿರೋಧಕ ಶಕ್ತಿಯೇ ಇರಲಿಲ್ಲ.

೫. ಹೋಟೆಲ್‌ಗಳು ಆರೋಗ್ಯ ಪ್ರಿಯರ ತಿರಸ್ಕಾರಕ್ಕೆ ಗುರಿಯಾಗಿದ್ದವು.

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

೧. ಲೇಖಕರು ಸಿಪಾಯಿ ದಂಗೆಯನ್ನು ಏನೆಂದು ಕರೆದಿದ್ದಾರೆ?

೨. ರೈತರು ಯಾವ ತೆರಿಗೆಯನ್ನು ಪಾವತಿಸಬೇಕಾಯಿತು?

೩. ಬ್ರಿಟಿಷ್ ಸರಕಾರಕ್ಕೆ ತೆರಿಗೆ ಕಟ್ಟಬಾರದೆಂದು ಯಾರು ಹೇಳಿದರು?

೪. ರೈತರ ಬದಲಿಗೆ ಸ್ವಾತಂತ್ರ್ಯವು ಯಾರ ಕೈಗೆ ಸಿಕ್ಕಿತು?

೫. ಶ್ರೀಮಂತ ರೈತರ ಉದಯಕ್ಕೆ ಯಾವುದು ಸಹಾಯಕವಾಯಿತು?
೬. ದೇಶಗಳಲ್ಲಿ ಯಾವ ರೀತಿಯ ಚಳುವಳಿ ಹುಟ್ಟಿಕೊಂಡವು?
೭. ಜಂಕ್‌ಫುಡ್ ಹೋಟೆಲ್‌ಗಳೆಂದು ಹೀಯಾಳಿಸಿದವರು ಯಾರು?

## 111. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ರೈತರನ್ನು ಶೋಷಣೆ ಮಾಡಿದವರು ಯಾರು?
೨. ರೈತ ಚಳವಳಿಗಳು ಎಲ್ಲೆಲ್ಲಿ ನಡೆದವು?
೩. ಸಾಲ ಕೇಳಲು ಹೋದ ಬಡರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳಾವುವು?
೪. ಕೃಷಿ ಜಮೀನನ್ನು ಯಾರು ಖರೀದಿಸುವಂತಿಲ್ಲ?
೫. ರಾಸಾಯನಿಕಗಳನ್ನು ತಿಂದು ಬೆಳೆಯುವ ಪ್ರಾಣಿಗಳಿಗೆ ಯಾವ ರೋಗಗಳು ಬರುತ್ತವೆ. ?

## 1V. ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಸಿಪಾಯಿ ದಂಗೆಯನ್ನು ರೈತರ ದಂಗೆಯೆಂದು ಲೇಖಕರು ಏಕೆ ಕರೆದಿದ್ದಾರೆ?
೨. ಹತ್ತೊಂಬತ್ತನೆಯ ಶತಮಾನದಲ್ಲುಂಟಾದ ಬರದ ಪರಿಣಾಮಗಳೇನು?
೩. ರೈತ ಚಳವಳಿಗಳ ಬಗ್ಗೆ ಬರೆಯಿರಿ.
೪. ಭೂ ಸುಧಾರಣಾ ಕಾಯ್ದೆ ಎಂದರೇನು? ಅದರ ಪರಿಣಾಮಗಳೇನು?
೫. ನಮ್ಮ ಆರೋಗ್ಯದ ಮೇಲೆ ವಿದೇಶಿ ಹೋಟೆಲ್‌ಗಳು ನಡೆಸಿದ ದಾಳಿಗಳೇನು?

**ಆಕರ:** ವಕೀಲರೊಬ್ಬರ ವಗ್ಗೈರೆಗಳು: – ಸಿ. ಎಚ್. ಹನುಮಂತರಾಯ
ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

**ಹೆಚ್ಚಿನ ಓದಿಗಾಗಿ:** – ಕರ್ನಾಟಕ ರೈತ ಚಳವಳಿಗಳು ನಾಲ್ಕು ಸಂಪುಟಗಳು,
– ಎಂ.ಜಿ. ನಾಗರಾಜ್
ಪ್ರತಿಭಾವಂತ ಸಂಸದೀಯಪಟು ಪುಸ್ತಕ ಮಾಲಿಕೆ.
ಕರ್ನಾಟಕ ವಿಧಾನ ಮಂಡಲ, ವಿಧಾನಸೌಧ,
ಬೆಂಗಳೂರು.

**ಮತ್ತೆ ನೆಲದ ಎದೆಯ ಮೇಲೆ ತೆನೆಯ ಧ್ವಜವು ನಿಲ್ಲಲಿ**
**ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ.**
**– ದ.ರಾ.ಬೇಂದ್ರೆ**

# ೯. ಚತುರನ ಚಾತುರ್ಯ

**–ಯಾದವಕವಿ**

'ಧೈರ್ಯಂ ಸರ್ವತ್ರ ಸಾಧನಂ'ಎಂಬ ಲೋಕೋಕ್ತಿಯಂತೆ, ಧೈರ್ಯದಿಂದ ಕಾರ್ಯಪ್ರವೃತ್ತರಾದಾಗ ಯಶಸ್ಸು ಕಟ್ಟಿಟ್ಟ ಬುತ್ತಿ. ತೊಂದರೆಗೆ ಸಿಲುಕಿದಾಗ ಕೊರಗದೆ ಅದನ್ನು ಎದುರಿಸುವುದು ಮುಖ್ಯ. ಸಮಯೋಚಿತ ಪ್ರಜ್ಞೆಯಿಂದ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣ. ಪ್ರಸಕ್ತ ಕಾಲದಲ್ಲಿ ಸಮಯೋಚಿತ ಪ್ರಜ್ಞೆ ತೀರಾ ಆವಶ್ಯಕ.

ಒಂದು ಕುಗ್ರಾಮದೊಳ್ಚತುರನಾದೋರ್ವ ನಾಪಿತನು ವಾಸಮಾಡಿರುವನವನು ಅದೇ ಗ್ರಾಮವಾಸಿಯಾಗಿರುವೋರ್ವ ಪಂಚಾಂಗವನ್ನೋರೆವ ಪಾಮರನಾದ ಪಾರುವನಿರುವನವನೊಳಿವನತ್ಯಂತ ವಿಶ್ವಾಸಮಂ ತಾಳಿ, ಅವನೆಡೆಗೆ ಪೋಗಿ ವಂದಿಸಿ, ಕೇಳುತ್ತವನೊರೆದಂತೆ ಮಾಡುತ್ತಿರುವನ್. ಆ ಗ್ರಾಮಕ್ಕೆ ನಾಲ್ಕು ಯೋಜನದಲ್ಲಿರುವ ಮಹಾಕ್ಷೇತ್ರದೊಳು ಮಹಾದೇವನ ಮಹೋತ್ಸವ ಪ್ರಸಕ್ತಮಾಗಿ ದೇಶದೇಶಗಳಿಂದನೇಕ ಜನರ್ಯೆತಂದು, ಪರಿಷದಾಗುವುದು. ಮೋರಿಯನ್ನೂದುವದರಲ್ಲಿಯುಂ ಪ್ರವೀಣನಾಗಿರುವ ನಾಪಿತನು ಮಹಾದೇವೋತ್ಸವಕ್ಕೆ ತಾನಲ್ಲಿಗೈದಿದಡೆ, ದೇವತಾ ಯಾತ್ರೆಯೂ ದ್ರವ್ಯಸಂಪಾದನೆಯೂ ಎರಡು ಸಂಭವಿಕುಮೆಂದು ಮನದೊಳಾಲೋಚನೆಯ ಮಾಡಿ, ವಿಪ್ರನಡೆಗೈತಂದು ತೆರಳುವರೆ ಮುಹೂರ್ತಮಂ ಬೆಸಗೊಳ್ಳಲು, ಆ ಪಾರುವನಿಗೊಂದು ತಿಳಿಯದಾದಡೆಯು ನಾಳೆಯುದಯದೊಳೆಂದು ಪೇಳಲವನ ವಾಣಿಯೋಳ್ಪರಮವಿಶ್ವಾಸಮನ್ನೊಂದಿರುವನಾದ ಕಾರಣದಿಂದ ರವಿಯುದಯದೋಳ್ತೆರಳಿ ನಾಪಿತನು ಮಾರ್ಗದಲ್ಲಿ ಮಹಾವಿಪಿನದೊಳಗೋರ್ವನೇ ಬರುತಿರಲ್ಮಾನುಷರ ಮಾಂಸರುಚಿಯನ್ನರಿದ ಮಹೋಗ್ರಮಾದೊಂದು ಶಾರ್ದೂಲನೆದುರಾಗಿ ಬಂದು ನಾಪಿತನ ಕಂಡು ಮಹಾಟ್ಟಹಾಸಮಂ ಮಾಡಲು ಮಾನುಷಗೆ ಮೃತ್ಯುರೂಪಾಗಿರುವ ಪುಂಡರೀಕಮಂ ಕಂಡು ಮರಣಂ ನಿಶ್ಚೈಸಿ, ಪತ್ನಿಪುತ್ರರನಾಥರಾದರವರಿಗಿನ್ನೇನು ಗತಿಯೆಂದು ಹಂಬಲಿಸುತ್ತಿರಲು; ಘೋರ ತರಮಾಗಿರುವ ಪುಲಿಯು, ಅನಿತರೊಳ್ಸಮಿಪಮನ್ನೈದಲು, ಆ ನಾಪಿತನು ಯತನಮಂ ಮಾಡಿ ನೋಡುವೆನೆಂದು ಶರಗ ಸಂವರಿಸಿ ಕರಗಳಿಂ ಭುಜಾಸ್ಫೋಟಮಂ ಮಾಡಿ, ಮಹಾಟ್ಟಹಾಸಮಂ ಗೈಯ್ಯುತ್ತೆಲವೋ ಶಾರ್ದೂಲ ಹೃಷ್ಟಪುಷ್ಟಾಂಗನಾದ ನೀನೆಮಗೆ ದೈವವಶದಿಂ ದೊರತೆ, ಬಾ, ಮುಂದಕ್ಕಡಿ ಇಡುವುದೆಂದು ಕರದೊಳಿರುವ ರಜ್ಜುವನ್ನದರ ಕೊರಳಿಂಗೆ ಕಟ್ಟುವನಂತೆ ಸನ್ನಾಹಗೈಯ್ಯುತ್ತ, ಹಾ! ಎಂದು ನಗುತ, ಬಾ, ಬಾ, ಮುಂದಕ್ಕಡಿಯಿಡು ಎಂದು ಕೂಗುತ್ತ, ನಡೆತರಲು; ಆ ಪುಲಿಯು, ಇವನ ಧೈರ್ಯಾಟ್ಟಹಾಸ ಸನ್ನಾಹಗಳ ನೋಡಿ ಮಾನುಷನು ತನ್ನ ನೋಡಿ ಮಹಾಟ್ಟಹಾಸಮಂ ಗೈಯ್ಯುತ್ತೆನ್ನನಡಿಗಡಿಗೆ ಮುಂದಕ್ಕಡಿಯಿಟ್ಟು ಬಾ ಎಂದು

ಘರ್ಜಿಸುತ್ತಿರುವನಿದೇನಚ್ಚರಿಯು! ತನ್ನ ಕಟ್ಟುವನಂತೆ ರಜ್ಜುವಮಂ ಸರಿಸವಮಂ ಮಾಡುವನಿದೇನು ಕಾರಣಮೋ? ಎಂದು ಶಂಕೆಯಂ ತಾಳಿ ನುಡಿದುದೆಲವೋ, ಮಾನುಷನ ತಿಂದು ತೇಗುವ ತನ್ನ ನೀಂ ಕಂಡು ಮಹಾಟ್ಟಹಾಸಮಂ ಮಾಡೆ ನೀನ್ಯಾರು? ಪೇಳೆಂದು ಕೇಳಲು; ಆ ದಿವಾಕೀರ್ತಿಯು ಎಲವೋ ಮೂಢ ಜಂತುವೆ ಸಮಸ್ತ ಲೋಕಾಧಿಪತಿಯಾದ ಮಹೇಂದ್ರನು ವ್ಯಾಘ್ರಯಜ್ಞಮನ್ನುಪಕ್ರಮಿಸಿರುವುದನರಿಯಾ? ತಾನು ಮೊದಲಾಗಿ ಐದು ಮಂದಿ ಗಂಧರ್ವರಂ ಕರೆದು ಮಾನುಷರಾಗಿ ಧರಣಿಯನ್ನೈದಿ ಓರ್ೋರ್ವರು ನೂರು ನೂರು ವ್ಯಾಘ್ರಗಳ ಪಿಡಿದು ತಂದೊಪ್ಪಿಸುವುದೆಂದು ಕಟ್ಟಳೆಯ ಮಾಡಿ ಕಳುಹಿರುವರಾದ ಕಾರಣ ತಾವೈತಂದಿರುವೆವಾನು ತೊಂಭತ್ತುನಾಲ್ಕುಶಾರ್ದೂಲಗಳ ಪಿಡಿದು ಮಹೇಂದ್ರನಡಿಗಳಿಂಗೊಪ್ಪಿಸಿದೆನಿನ್ನಾರು ಪುಂಡರೀಕಗಳು ಶೇಷಮಾಗಿರುವುದದಕ್ಕೆ ನಿನ್ನೆ ಆ ಮಹಾರಣ್ಯದಲ್ಲಿ ನಿನ್ನ ಪೋಲುವ ಪುಲಿಯೊಂದು ಸಿಕ್ಕಿದುದದಂ ಕಕ್ಷ್ಯದಲ್ಲಿ ಕಟ್ಟಿರಿಸಿರುವೆನಿಂದು ನೀನೋರ್ವನಾದ್ಯೆ. ರಾಜ್ಞೆಯಿಂ ದೋರದೆ ಮಾನುಷರ ತಿಂದು ತೇಗುವ ನಿನ್ನ ಸಾಮರ್ಥ್ಯಮಂ ಬಲ್ಲೆ, ಬಾ ಬೇಗ ಮುಂದಕ್ಕಡಿಯಿಟ್ಟು, ಇನ್ನು ಮೂರೊಂದು ದೊರೆಯೆ ತಾ ಕೃತಕೃತ್ಯನೆಂದು ಘರ್ಜಿಸುತ್ತ ಬರಲು; ಆ ತರಕ್ಷುವು, ಮನದೊಳತ್ಯಂತ ಭೀತಿಯಂ ತಾಳಿ ಮೆಲ್ಲನೆಲ್ಲಿ ನಿಮ್ಮ ಕಕ್ಷ್ಯದೊಳಿರುವ ತರಕ್ಷುವನು ತೋರೆನ್ನಲು ಆ ನಾಪಿತನು ಭೀತಿಯಿಂ ಮೆಲ್ಲನೆ ನುಡಿದ ವ್ಯಾಘ್ರನಂ ನೋಡಿ ಮನದಲುತ್ಸಾಹದಿಂದೆಲವೋ ತನ್ನಂ ಪರೀಕ್ಷೆಯಂ ಮಾಡುವೆಯಾ? ಹಾಗಾದಡೀಗ ನೋಡೆಂದು ಹಡಪದಲ್ಲಿರುವ ಕೈಪಿಡಿಯ ತೆಗೆದು ವ್ಯಾಘ್ರನಿಗೆ ತೋರಲು, ಆ ದ್ವೀಪಿಯು ದರ್ಪಣದೊಳತಿ ಸ್ಥೂಲಮಾಗಿ ಕಾಣುತ್ತಿರುವ ತನ್ನ ಪ್ರತಿಬಿಂಬವಂ ನೋಡುತ್ತತ್ಯಂತ ಭೀತಿಯಂ ತಾಳುತ್ತಹಹ, ತನಗಿಂತಲತಿಶಯಮಾದ ಈ ಮಹಾದ್ವೀಪಿಯಂ ಪ್ರಾದೇಶಮಾತ್ರ ಪ್ರದೇಶದೊಳು ಕಟ್ಟಿರುವನಿವನು ಮಾನುಷನೇ ಶಿವಶಿವಾ! ತಾನಿವನು ನರನು, ತಿಂಬುವನೆಂದು ಎದುರಾಗಿ ಬಂದು ಕೆಟ್ಟೆನಿನ್ನೇನು ಗತಿಯೆಂದು ನಿಶ್ಚೇತನಾದ ಶಾರ್ದೂಲನಂ ಕಂಡು ಕೈಪಿಡಿಯ ಹಡಪದೊಳಗಿರಿಸಿ ನೋಡಿದೆಯಲಾ ಎಂದು ಘರ್ಜಿಸುತ್ತ, ರಜ್ಜುವಂ ಕೊರಳಿಂಗೆ ಹಾಯ್ಕುತ್ತಿರಲು, ಆ ದ್ವೀಪಿಯವನಡಿಗೆ ಪೊಡಮಟ್ಟು ದಮ್ಮಯ್ಯ ತನ್ನನುಳಿಹಿಬಿಡು ಬಹುಮಂದಿ ಮಾನುಷನ ತಿಂದ ತನ್ನ ಗುಹೆಯೆಡೆಯೊಳನೇಕ ರತ್ನ ಭೂಷಣ ದ್ರವ್ಯವಿರುವುದದಂ ನೀಡುವೆನು. ತನ್ನ ಪಿಡಿದೊಯ್ಯಬೇಡೆಂದು ಬಲು ದೈನ್ಯದಿಂ ಬೇಡುತ್ತ, ತಿರೆಯಲ್ಲಿಬಿದ್ದು ಪೊರಳುತ್ತಿರಲು; ಹಾಗಾದಡೆಲ್ಲಿ? ನಿನ್ನ ಗುಹೆಯಂ ನೋಡುವೆನೆಂದು ನುಡಿಯಲಾ ಪುಲಿಯು ಗಡಗಡನೆ ನಡುಗುತ್ತ ಗುಹೆಯಡಿಗೆ ಕರೆದೊಯಿದು ತೋರಲು; ನಾಪಿತನು ನರಕಪಾಲಾಸ್ಥಿಗಳ್ಮೆದೆಗಳಿಂ ಮೇದೋಮಾಂಸ ರಕ್ತಪ್ರವಾಹದಿಂ ಕರ್ದಮಿತಮಾಗಿರುವ ಪ್ರದೇಶದೋಳ್ರಾಸಿ ರಾಸಿಯಾಗಿ ಬಿದ್ದಿರುವನೇಕ ದ್ರವ್ಯಭೂಷಣಗಳಂ ತಾನು ಹೊರುವಂತೆ ಕಟ್ಟಿ, ಎಲವೋ ಶಾರ್ದೂಲ ನಿನ್ನನ್ನುಳುಹಿ ಬಿಟ್ಟಿರುವೆ ಧರ್ಮದಿಂ ಜೀವಿಸು ಪೋಗು ತನ್ನಂತೆ ಇನ್ನೂ ನಾಲ್ವರಿದೇ ರೀತಿಯಿಂ ತಿರೆಯಲ್ಲಿ ತಿರುಗುತ್ತಿಹರವರ ದೃಷ್ಟಿಪಥಕ್ಕೆ ಬೀಳದೆಚ್ಚರದೊಳಿರುವುದೆಂದೊರೆದುದು ಜನನಿಯುದರದಿಂ ಬಂದೆನೆಂದು ಜವದೊಳಲ್ಲಿಂ ತೆರಳಿ ಹಿಂದಿರುಗಿ ನಿಲಯಕ್ಕೆ ನಡೆತಂದು

ತಾನು ತಂದ ಭೂಷಣ ದ್ರವ್ಯದೊಳಗರ್ಧಮಂ ವಿಪ್ರನಿಗೆ ತಂದಿತ್ತು ತನ್ನ ಮನೆಗೈತಂದು ಸುಖದಿಂದ ಕಾಲಕ್ರಮಣವಂ ಮಾಡುತ್ತಿರಲು, ವತ್ಸರವತಿಕ್ರಮಿಸಿ, ಆ ಮಹಾದೇವನುತ್ಸವವು ಯಥಾಪೂರ್ವಮಾಗಿ ಸಂಪ್ರಾಪ್ತಮಾಗಲಾ ಮೋರಿಯೊದುವ ದಿವಾಕೀರ್ತಿಯು ಮೊದಲ ಸಂವತ್ಸರದಿ ದೇವತಾಯಾತ್ರೆಯಂ ಮಾಡುವೆನೆಂದು ತೆರಳಿ ಧನದಾಶೆಯಿಂ ಹಿಂದಿರುಗಿ ಪರಮದುರಿತಕ್ಕೆ ಗುರಿಯಾದೆನದರಿಂದೀಗಲಾದಡೆಯು ಪೋಗಿ ಜಗದೊಡೆಯ ನಡಿದಾವರೆಯ ದರುಶನ ಮಾಡಿ ಬರುವೆನೆಂದು ಆಲೋಚನೆಯುಮಾಡಿ, ವಿಪ್ರನೆಡೆಗೈತಂದು, ಲಗ್ನಮಂ ಪೇಳಬೇಕೆಂದು ಬೆಸಗೊಳ್ಳಲು, ಆ ಹಾರುವನು ಮೊದಲಿನಂತಿವನು ಧನಾರ್ಜನೆಗೆ ಪೋಗುವನು. ಮೊದಲು ತನಗಂತಿತ್ತ ಇವನೆಂತು ತಂದನೋ? ಕಾಣೆ ನದರಿಂದೀಗಲಿವನೊಡನೆ ತಾನು ತೆರಳುವೆನೆಂದು ಯೋಚಿಸುತ್ತೆಲವೋ ನಾಪಿತನೆ, ತಾನು ದೇವತಾಪ್ರಾರ್ಥನೆಯ ಮಾಡಿರುವೆನದರಿಂದ ನಾಳೆಯುದಯವಾದೈದು ಘಳಿಗೆಯ ಮೇಲೆ ತೆರಳುವೆನೆಂದು ವಾಚಿಸಲು; ಆ ದಿವಾಕೀರ್ತಿಯು ಅವನೊಡನೆ ತೆರಳಿ ಮತ್ತೊಂದು ಮಾರ್ಗದೊಳ್ನಡೆದು ವಿಪಿನಮಂ ಪೊಕ್ಕು ಬರುತ್ತಿರಲು, ಪೂರ್ವದಲ್ಲಿ ಈ ನಾಪಿತನ ಕರದಲ್ಲಿ ಸಿಲುಕಿ ಮಹಾಪದವನ್ನೈದಿರ್ದ ಶಾರ್ದೂಲನು, ತತ್ಕಾಲದೊಳಗಿಂದಿವನ ಮುಖದಿಂ ತಾನು ಮುಕ್ತನಾದೊಡೆ, ಸಜಾತೀಯ್ಯರಂ ಬಹುವಿಧ ಮಾಂಸರಕ್ತಗಳಿಂ ಸತ್ಕರಿಸಿ, ನಿನ್ನಂಯು ಸಮ್ಯಗಾರಾಧಿಸುವೆನೆಂದು ಬೇಡಿರ್ದುದಾದ ಕಾರಣ, ಅಂದೆ ಬಲುಭೀತಿಯಿಂದಾಗಹನಮನ್ನುಳಿದಿವರ್ಕೈತರುವರಣ್ಯಮಂ ಸೇರಿ, ಅಂದು ಮೊದಲಾಗಿ ಅನೇಕ ಪಶುಮೃಗಗಳಂ ಸಂಹರಿಸಿ ಜತೆಗೈದು ಸಜಾತೀಯುರಾದನೇಕ ವ್ಯಾಘ್ರಗಳನ್ನಾತಿಥ್ಯಮಂ ಗೈಯ್ಯುವರೆ ಕರೆಯುತ್ತಪರಿಮಿತ ಶಾರ್ದೂಲಗಳನ್ನೊಡಗೂಡಿ ನಡೆತರಲು: ಎಲ್ಲಿ ನೋಡಿದಡೆಯುಂ ಫುಲಿಗಳೇ ಕಾಣುತ್ತಿಹುದು ಶಿವಶಿವಾ! ಈ ವಿಪ್ರನೆನ್ನೊಡನೆ ನಡೆತಂದು ಫುಲಿಯ ತುತ್ತಾದ ನಿನ್ನೇನಗೈವೆವಾಕಸ್ಮಿಕದಿ ಮೃತ್ಯು ಬಂದೊದಗಲು ನೋಡುವೆನೆಂದು ದ್ವಿಜನಿಂ ಸಹಿತ ಮಹಾವೃಕ್ಷಮನ್ನೇರಿ ನುಡಿದನು ಅಯ್ಯಾ ಹಾರುವನೇ ನೀನಂಜದಿರು; ದೃಢವಾದ ಶಾಖೆಯಂ ಭುಜಗಳಿಂದಪ್ಪಿ ಚಲಿಸದೆ ಕುಳ್ಳಿರುವುದೆಂದು ಮೆಲ್ಲನೊರೆಯುತ್ತಿರುವನಿತರೊಳಾ ಶಾರ್ದೂಲ ಸಮೂಹವು ಸಮವಾಗಿ ವಿಶಾಲಮಾಗಿರುವದೇ ವೃಕ್ಷದಡಿಯ ಶಾಡ್ವಲಪ್ರಾದೇಶದೊಳ್ಬಂದು ಕುಳ್ಳಿರಲು; ಆ ಮಹೋಗ್ರಪುಂಡರೀಕಗಳ ತಂಡ ತಂಡಗಳ ಕಂಡು ಭೂಸುರನ ಹರಣ ನೆತ್ತಿಯನ್ನಡರೆ, ನಾಪಿತನು ನೋಡಿ ಇಂದುಳಿವ ಸಂದರ್ಭಮಂ ಕಾಣೆ ಶಿವಶಿವಾ! ಎಂದು ಬಹುವಿಧದಿ ಯೋಚಿಸುತ್ತಿರಲು; ಆ ಶಾರ್ದೂಲ ಚಿರಕಾಲದಿಂ ಸಂಹರಿಸಿ ಸಂಗ್ರಹಿಸಿದ ಮನುಷ್ಯ ಮೃಗ ಪಶುವೆ ಮೊದಲಾದ ಶವ ಶರೀರಗಳ ತಂದು ಆ ವ್ಯಾಘ್ರಗಳಿಂಗೆ ನೀಡಲಾ ಘೋರ ಜಂತುಗಳು ಶವ ಶರೀರಗಳ ನಖಗಳಿಂ ಪಲ್ಗಳಿಂ ಖಂಡಿಸುತ್ತ ಖಂಡಗಳ ಬಗೆ ಬಗೆದು ತಿಂದು, ರಕ್ತವ ಸವಿಯುತ್ತಿರಲದರೊಳೊಂದು ಹೆಗ್ಗಡಿಯಾದ ವ್ಯಾಘ್ರನು ಈ ಶಾರ್ದೂಲನಂ ಕುರಿತಿದೇನಯ್ಯಾ ತರಕ್ಷುವೇ ತಮಗೆ ನೀವಾತಿಥ್ಯಮನ್ನೆಸಗೆ ಕಾರಣಮದೇನೆಂದು ಕೇಳಲು, ಆ ದ್ವೀಪಿಯು ತನ್ನ ವೃತ್ತಾಂತವನ್ನೊರೆಯುಲಾ ಹೆಗ್ಗಡಿಯು, ನರ ತನ್ನ

ತನುವನ್ನುಳುಹಿಕೊಂಬರಿದೊಂದು ಸಂವಿಧಾನಮಂ ಮಾಡಿ ನಿನ್ನ ವಂಚಿಸಿದನೆಂದಾಡಲು; ಆ ಹುಲಿಯು, ಅಯ್ಯಾ ಶಾರ್ದೂಲ ಪ್ರವರನೇ ಕೇಳು, ತನಗಿಂತಧಿಕವಾಗಿದ್ದ ನಿಮ್ಮಂತಿರುವೊಂದು ಮಹಾ ವ್ಯಾಘ್ರನಂ ಪ್ರತ್ಯಕ್ಷವಾಗಿ ಪ್ರಾದೇಶ ಮಾತ್ರ ಪ್ರದೇಶದೊಳ್ಕಟ್ಟಿರ್ದನದಂ ನೋಡಿ ಭೀತಿಯಿಂ ಬಹು ಪ್ರಕಾರದಿಂದ ಗಂಧರ್ವನಂ ಬೇಡಿ ತನುವನ್ನುಳುಹಲಾಗಿ ಬಹುಧನವ ತೋರಲವನು ದಯಗೈದು ತನ್ನಂತೆ ಇನ್ನೂ ನಾಲ್ವರೈತರುವರವರ ದೃಷ್ಟಿಪಥಕ್ಕೆ ಬೀಳದಿರೆಂದರುಹಿ ತನ್ನನ್ನುಳುಹಿ ತೆರಳಿದನಾದರದೊಳಾನು ನಿಮಗಾತಿಥ್ಯಮಂ ಮಾಡುವೆನೆಂದು ಮಹಾದೇವನಂ ಬೇಡಿಕೊಂಡಿರ್ದನೆಂದು ನುಡಿಯುತ್ತಿರುವನಿತರೋಳ್ರಕ್ತ ಮಾಂಸಗಳ ತಿಂದು ವ್ಯಾಘ್ರಗಳೇಕ ಕಾಲದೊಳು ಮಹೋತ್ಸಾಹದಿಂದಬ್ಬರಿಸಿ ಘರ್ಜಿಸಲು ಧರೆಯು ಕಂಪಿಸಿತು; ಕಾಂತಾರವೆಲ್ಲವನೇಕ ಸಿಡಿಲೆರಗಿದಂತೆ ಶಬ್ದಮಯಮಾಗೆ, ತರಹರಿಸಲಾರದಾ ವಿಪ್ರನಾ ಗಾಗ್ರದಿಂ ದೊಪ್ಪನಾ ವ್ಯಾಘ್ರಗಳ ಮಧ್ಯದಲ್ಲಿ ಬೀಳಲು; ನಾಪಿತನ ಹಹ! ಪಾಪಿ ವ್ಯರ್ಥವಾಗಿ ಹರಣಂ ನೀಗುವೆಯಾ? ಮೋಸ ಬಂದುದೇಂಗೈವೆನೆಂದು ಯೋಚಿಸಿನ್ನೇನು! ಕೆಟ್ಟು ಪೋಪುದು ಯತನಮಂ ಮಾಡಿ ನೋಡುವೆನೆಂದು ಎಲವೋ, ಗಂಧರ್ವ ನೀಂ ಧುಮುಕಿದುದು ಲೇಸಾಯ್ತು. ಮುಂಚಿತಮಾಗಿ ಆ ಗಡ್ಡದ ಹೆಗ್ಗಡಿಯ ವ್ಯಾಘ್ರನಂ ಪಿಡಿ ಪಿಡಿ ಪಿಡಿ ಎಂದು ವನಮೆಲ್ಲ ಕಂಪಿಸುವಂತೆ ಮಹಾಟ್ಟಹಾಸಮಂಗೈದು ಬೊಬ್ಬಿರಿಯಲು, ಆ ಹುಲಿಗಳೆಲ್ಲಾ ಆಹಾ! ಗಂಧರ್ವನೆಲ್ಲರನ್ನೇಕಕಾಲದೊಳ್ಪಿಡಿಯೆ ಪ್ರಚ್ಛನ್ನನಾಗಿ ಅಡಗಿರ್ದನೆಂದು ಭೀತಿಯಿಂದ ತಾವೆಲ್ಲ ಸಿಕ್ಕಿದುವೆಂದು ನಿಶ್ಚೈಸಿ, ಪಲಾಯನವಮಾಡಿ ಹಿಂದಿರುಗಿ ನೋಡಲಮ್ಮದೆ ಭೀತಿಯಿಂದಿಗ್ದೇಶಗಳನ್ನೈದಲು, ಆ ವಿಪಿನದೊಳಗಿಂತು ಭೀತಿಯಿಂ ಮೈಮರೆದು ಪಲಾಯನವ ಮಾಡುತ್ತಿರುವ ಶಾರ್ದೂಲನಂ ನರಿ ಕಂಡಿದೇನಚ್ಚರಿಯೆಂದು ಎಲವೋ ಸಮಸ್ತ ಪ್ರಾಣಿಗಳು ನಿನಗಂಜಿ ಪಲಾಯನ ಮಾಡುವರು, ನೀನಿಂತು ಬೆದರಿ ತೆರಳುವುದುಚಿತಮಲ್ಲೊಂದು ನಿಮಿಷನಿಂದು ವೃತ್ತಾಂತಮಂ ತಿಳುಹು, ಭಯವೇನು, ತಾನಿರುವೆನಂಜದಿರೆಂದು ಸಂತಯಿಸಿ ಕೇಳಲು, ಆ ದ್ವೀಪಿಯದರ ಭರವಸದಿಂದ ಮೆಲ್ಲಮೆಲ್ಲನೆ ವೃತ್ತಾಂತಮೆಲ್ಲವಂ ಪೇಳಿ, ತನ್ನ ಪಿಡಿಯೆ ಗಂಧರ್ವನೈತರುವನೆಂದು ಭೀತಿಯಿಂದರುಹಲು, ನರಿಯದಂ ಕೇಳಿ, ಮಾನವನು ಬಲು ಚಾತುರ್ಯಮನ್ನೆಸಗಿದನು, ಮರಣ ಭಯದಿಂ ನೆಲಕ್ಕುರುಳೆ ಮರದ ಮೇಲಿರುವನಿವನು ಸಾಯುವನೆಂದು ಚಮತ್ಕಾರಮಂ ಮಾಡಿ ನುಡಿದ ಮಾತ್ರಕ್ಕೆ ಕಾಲ್ಗೆಟ್ಟು ಭೀತಿಯಿಂ ಪಲಾಯನವ ಮಾಡುವರೇ, ಸುಡು ನಿನ್ನ ಧೈರ್ಯಮನ್ನೀಕ್ಷಣದಿ ನಿನ್ನಿಂದ ಮಾನುಷಾಧಮನ ಕೊಲ್ಲಿಸುವೆನು, ತೋರು ನೀನಾ ತಾಣಮಂ, ತನ್ನೊಡನೆ ತೆರಳೆಂದು ನುಡಿಯಲು; ಆ ದ್ವೀಪಿ ನರಿಯಂ ಕುರಿತು, ಮೇಲಿಂದ ಧುಮುಕಿ, ತನ್ನನ್ನೇ ಮುಂಚಿತವಾಗಿ ಪಿಡಿಯೆಂದು ಕೂಗಿದವನು ಮಾನುಷನದೆಂತಾಗುವಂ ತನಗೆ ಧೈರ್ಯಮಿನಿತಿಲ್ಲ ತಾನೈತರಲಾರೆನೆಂದು ಭೀತಿಗೊಳ್ಳಲು, ಆ ನರಿಯು ನಾನಾವಿಧೋಪಾಯದಿಂದದನ್ನೊಡಬಡಿಸಿ, ಧೈರ್ಯಮಂ ಪೇಳಿ, ತಾ ಮುಂದೆ

ಪೋಗುವೆನು, ತನ್ನೊಡನೆ ಪಿಂದೆ ನೀನೈತರುವುದೆಂದು ಭೀತಿಯಂ ಕಳೆದು ಮಾನವರು ಚತುರರೆಂದವನು ಮಾಡಿದ ಸಂದರ್ಭಮಂ ತಿಳುಹಿ ನಂಬಿಗೆಯನ್ನಿತ್ತದನ್ನೊಳಗೊಂಡು ಹಿಂದಿರುಗಿ, ಅದೇ ಕಾನನವ ಪೊಕ್ಕು ಬರುತ್ತಿರಲು.

ಇತ್ತ ನಾಪಿತನು ಪುಲಿಗಳೆಲ್ಲ ಪಲಾಯನವ ಮಾಡೆ, ಮೆಲ್ಲನಾ ವೃಕ್ಷದಿಂದಿಳಿದು ಮೂರ್ಛಿತನಾದ ವಿಪ್ರನಂ ಸಂತೈಸಿ, ಅಯ್ಯಾ ಮೊದಲೇ ಮಾರ್ಗ ಸುಪಥಮಲ್ಲ; ನೀವೈತರಬೇಡಿ ಎಂದು ಪೇಳಿದಡೆ ಉಕ್ಕ್ಯಾಳಗೈದಿದಿರಿ ಆದಡೆಯು, ಇನಿತು ಮಾತ್ರ ಧೈರ್ಯವಿಲ್ಲದಡೆ ಮುಂದೇನುಗತಿ ಶಿವಶಿವಾ! ಎಂದು ಮೃದುವಾದ ಶಾಡ್ವಲ ಪ್ರದೇಶಮಾದ ಕಾರಣದಿಂ ಕರ ಪಾದಗಳು ಮುರಿಯದೆ ಯಥಾಸ್ಥಿತಮಾಗಿರಲಿದೇ ಪುಣ್ಯಮೆಂದವನಿಂ ಸಹಿತನಾಗಿ, ಸಾಕು ದೇವರ ಸೇವೆ, ಊರ ಸೇರುವೆವೆಂದು ಹಿಂದಿರುಗಿ ಜವದಿಂದ ನಡೆಯುತ್ತೆ ಬರುತ್ತಿರಲು, ಬಂದುದೆದುರಾಗಿ ಮಹಾ ಶಾರ್ದೂಲನಿಂ ಸಹಿತ ನರಿಯಂ ಕಂಡು ನಾಪಿತನು ಆಹ! ಪಲಾಯನವ ಮಾಡುತಿರ್ದ ಹುಲಿಯನ್ನೊಡಗೊಂಡು ಬರುವುದೀ ನರಿ; ಅರಣ್ಯ ಜಂತುಗಳಲ್ಲಿ ಮಹಾಬುದ್ಧಿಶಾಲಿಯಾದುದಿದು; ಸರ್ವಸತ್ವಗಳಲ್ಲಿ ಮಹಾಸತ್ವಶಾಲಿಯಾದುದೀ ಪುಲಿಯು, ಇವೆರಡೊಂದಾಗಿ ನಡೆತಂದ ಬಳಿಕ ತಾವು ಉಳಿಯುವುದೆಂತು ಶಿವಶಿವಾ! ಯತನಮಂ ಮಾಡಿ ನೋಡುವೆನೆಂದು ಪುಲಿಯಿಂ ಸಹಿತ ಸಮೀಪಕ್ಕೆ ಬಂದ ನರಿಯಂ ಕುರಿತು, ಎಲವೋ ರಂಡಾಪುತ್ರದುರ್ಜಂತುವೇ, ಮೂರು ದಿನದೊಳಗಾಗಿ ಐದು ಪುಲಿಗಳ ಪಿಡಿದು ತಂದು ನಿಮಗೊಪ್ಪಿಸುವೆನೆಂದು ಶಪತಪೂರ್ವಕವಾಗಿ ತಮ್ಮೊಡನೆ ಪೇಳಿ ಐದು ದಿನಕ್ಕಾಗಿ ಒಂದನಾಮಧೇಯ ವ್ಯಾಘ್ರನಂ ಪಿಡಿದು ತಂದೆಯಾ? ಎಂದು ಘರ್ಜಿಸುತ್ತ ನೆಲದ ಮೇಲಿರುವ ಕಲ್ಲುಗಳ ತೆಗೆದು ಬೀರಲು; ಆ ವ್ಯಾಘ್ರನು ಆಹ! ಈ ನರಿಯು ತನ್ನ ಮೋಸದಿಂ ಗಂಧರ್ವಗೊಪ್ಪಿಸಲ್ಕರತಂದುದಿದರ ವಂಚನೆಯನ್ನರಿಯದೀ ಪಾಪಿಯಾಲಾಪಮಂ ನಂಬಿ ಕೆಟ್ಟೆನೀನ್ನೇನು ಗತಿಯೆಂದು ಹಿಂದಿರುಗಿ ಪಲಾಯನ ಗೈದು, ದಿಗ್ದೇಶಮನ್ನೈದಲು; ಆ ನರಿಯು ನಾಪಿತನ ಪಾಷಾಣ ಪ್ರಹಾರದಿಂದಸುವನಿಗಲಾ ದಿವಾಕೀರ್ತಿಯು ಜವದಿಂದರಣ್ಯಮಂ ದಾಂಟಿ, ಇಂದು ಜನನಿಯುದರದಿಂ ತಾವು ಜನಿಸಿದವೆಂದು ವಿಪ್ರನಿಂ ಸಹಿತನಾಗಿ ಗ್ರಾಮಮನ್ನೈದಿದನು.

### ಕವಿ–ಕಥಾನಕ : ಯಾದವಕವಿ (ಕಿ.ಶ. ೧೮೦೦)

'ಕಲಾವತೀ ಪರಿಣಯಂ' ಗ್ರಂಥದ ಕರ್ತೃ ಯಾದವ ಕವಿ. ಚಿಕ್ಕಬಳ್ಳಾಪುರ ಇವನ ಜನ್ಮಸ್ಥಳ. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪಂಡಿತನಾಗಿದ್ದನೆಂದು ತಿಳಿದುಬರುತ್ತದೆ. ಉಭಯಕವಿ ವಿಚಕ್ಷಣ, ಉಭಯ ಕವಿತಾವಿಶಾರದ ಇವನ ಬಿರುದುಗಳು.

ವಿದ್ಯಾವಂತನಲ್ಲದ ನಾಪಿತನೊಬ್ಬ ತೊಂದರೆಗಳು ಎದುರಾದ ಸಂದರ್ಭಗಳಲ್ಲಿ ತನ್ನ ಜಾಣ್ಮೆಯಿಂದ ಪ್ರಾಣಾಪಾಯವನ್ನು ತಪ್ಪಿಸಿಕೊಳ್ಳುವ ಪ್ರಸಂಗ ಇದು. ಹೆದರದೆ ಮುನ್ನುಗ್ಗುವ ಹಾಗು ಯುಕ್ತಿಯಿಂದ ಸಮಸ್ಯೆಯನ್ನು ಎದುರಿಸುವ ಚಾಣಾಕ್ಷತೆ ಈ ಕತೆಯಲ್ಲಿದೆ.

**ಪದಕೋಶ:**

ನಾಪಿತ–ಕ್ಷೌರಿಕ, ದಿವಾಕೀರ್ತಿ; ಒರೆ–ಹೇಳು; ಪಾಮರ– ಮುಗ್ಧ, ಮೂಢ, ದಡ್ಡ; ಪಾ(ಹಾ)ರುವ(ಪಾರ್ವ) –ಬ್ರಾಹ್ಮಣ; ಹೇಳಿಕೆ; ಯೋಜನ–ಎರಡು ಗಾವುದ, ಹನ್ನೆರಡು ಮೈಲು; ಪರಿಷ–ಜಾತ್ರೆ; ಮೋರಿ– ವಾಲಗ, ವಾದ್ಯ; ದ್ರವ್ಯ–ಸಂಪತ್ತು; ವಿಪ್ರ–ಬ್ರಾಹ್ಮಣ; ವಾಣಿ–ಮಾತು, ನುಡಿ, ಸಂಗೀತ, ಸರಸ್ವತಿ; ಬೆಸಗೊಳ್–ಕೇಳು,ವಿಚಾರಿಸು; ವಿಪಿನ–ಕಾಡು, ಕಾಂತಾರ; ಕರ–ಕೈ, ಕಿರಣ, ತೆರಿಗೆ; ಸಂವರಿಸಿ–ಒಟ್ಟುಗೂಡಿಸಿ, ಸರಿಪಡಿಸಿ, ಹಿಂದೆಸರಿಸಿ; ಶಾರ್ದೂಲ–ಹುಲಿ, ಪುಂಡರೀಕ, ವ್ಯಾಘ್ರ, ದ್ವೀಪಿ, ತರಕ್ಷು ; ಹೃಷ್ಟಪುಷ್ಟಾ–ಸುಖದಿಂದ ಕೊಬ್ಬಿರುವ, ಚೆನ್ನಾಗಿ ಬೆಳೆದ; ರಜ್ಜು–ಹಗ್ಗ, ಪಾಶ; ಕಟ್ಟಳೆ–ನಿಯಮ; ಸನ್ನಾಹ– ಸಿದ್ಧತೆ; ಜಂತು– ಕ್ಷುದ್ರ ಪ್ರಾಣಿ; ಉಪಕ್ರಮ–ಪ್ರಾರಂಭ, ತೊಡಗು; ಶೇಷ–ಉಳಿದ, ಮಿಕ್ಕಿದ್ದು, ಪ್ರಸಾದ, ಸರ್ಪ; ಕಕ್ಷ–ಕಂಕುಳ, ಬಗಲು; ಹಡಪ–ಕ್ಷೌರದಸಲಕರಣೆ ಚೀಲ; ಕೈಪಿಡಿ–ಕೈಗನ್ನಡಿ; ದರ್ಪಣ–ಕನ್ನಡಿ; ಸ್ಥೂಲ–ಶಕ್ತಿಶಾಲಿ, ದಪ್ಪ, ಸರಿಸುಮಾರು, ಅಂದಾಜು; ಪ್ರಾದೇಶಮಾತ್ರಪ್ರದೇಶ–ಹೆಬ್ಬೆರಳು ಮತ್ತು ತೋರು ಬೆರಳ ನಡುವಿನ ಸ್ಥಳ; (ಪಾ)ಹಾಯ್ಕು–ಹಾಕು; ಸಾಧ್ವಸದಿ–ಭಯದಿಂದ; ಪೊಡಮಡು–ನಮಸ್ಕರಿಸು; ನರಕಪಾಲಾಸ್ಥಿಮೆದೆಗಳ್ (ನರ + ಕಪಾಲ + ಅಸ್ಥಿ +ಮೆದೆಗಳ್) – ತಲೆಬುರುಡೆ ಮೂಳೆ ರಾಶಿಗಳು; ಮೇದ–ಕೊಬ್ಬು; ಕರ್ದಮಿತ–ಕೆಸರಾಗಿರುವ; ದೃಷ್ಟಿಪಥ–ಕಣ್ಣಿಗೆ; ವತ್ಸರ–ವರ್ಷ; ಸಂಪ್ರಾಪ್ತ–ಸಂಭವಿಸು; ಜವ–ವೇಗ, ಯಮ; ದುರಿತ–ಪಾಪ;(ಗಟಿಗೆ)ಘಳಿಗೆ–ಸಮಯ, ಒಂದು ದಿನದ ೧/೬೦ ಭಾಗ, ೨೪ ನಿಮಿಷಗಳು; ಪೂರ್ವ–ಮುಂಚೆ, ಹಿಂದಿನ, ದಿಕ್ಕು; ಮಹಾವೃಕ್ಷ–ದೊಡ್ಡ ಮರ; ಶಾಖೆ–ಕೊಂಬೆ; ಶಾಡ್ವಲ–ಹಸಿರಾದ; ಹರಣ–ಪ್ರಾಣ ತೆಗೆ; ಚಿರಕಾಲ–ಬಹಳಸಮಯ; ನಖ–ಉಗುರು; ಖಂಡಿಸು–ತುಂಡು ಮಾಡು, ಕತ್ತರಿಸು; ಖಂಡ–ತುಂಡು, ಚೂರು; ಹೆಗ್ಗಡಿ–ಹಿರಿಯ, ಒಡೆಯ, ಮುಖ್ಯಸ್ಥ; ಪ್ರವರ–ಪೀಳಿಗೆಯ ವಿವರಣೆ; ಸಂವಿಧಾನ–ತಂತ್ರ; ನಗಾಗ್ರ–ಮರದ ತುದಿ, (ನಗ–ಮರ,ಒಡವೆ,ಬೆಟ್ಟ); ಪ್ರಚ್ಛನ್ನ–ಅಡಗಿಕೊಂಡು, ಮರೆಯಾಗಿ, ಕಣ್ಣಿಗೆ ಕಾಣದಂತೆ; ನೋಡಲಮ್ಮದೆ–ಇಷ್ಟಪಡದೆ; ದಿಗ್ದೇಶ(ದಿಕ್+ದೇಶ)–ದಿಕ್ಪಾಲು; ತಾಣ–ಸ್ಥಳ, ಜಾಗ; ಉಕ್ಯಾಳ–ಉತ್ಸಾಹ, ಉಬ್ಬಿಹೋಗು; ಪಾಷಾಣ–ಕಲ್ಲು, ವಿಷ; ಅಸು–ಪ್ರಾಣ; ಸಮ್ಯಗ್–ಒಳ್ಳೆಯ; ಜನನಿ– ತಾಯಿ.

**I. ಸಂದರ್ಭ ಸಹಿತ ವಿವರಿಸಿ:**

೧. ಪತ್ನಿ ಪುತ್ರರನಾಥರಾದರವರಿಗಿನ್ನೇನು ಗತಿ

೨. ಇನ್ನು ಮೂರೊಂದು ದೊರೆಯೆ ತಾ ಕೃತಕೃತ್ಯನೆಂದು

೩. ಜನನಿಯುದರದಿಂ ಬಂದೆನೆಂದು ಜವದೊಳಲ್ಲಿಂತೆರಳಿ

೪. ಮೊದಲು ತನಗಂತಿತ್ತ ಇವನೆಂತು ತಂದನೋ?

೫. ಎಲವೋ ಗಂಧರ್ವ, ನೀ ಧುಮುಕಿದುದು ಲೇಸಾಯ್ತು

೬. ಇವೆರಡೊಂದಾಗಿ ನಡೆತಂದ ಬಳಿಕ ತಾವು ಉಳಿಯುವುದೆಂತು

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಹುಲಿ ಕಾಡಿನಲ್ಲಿ ಯಾರಿಗೆ ಎದುರಾಗಿ ಬಂದಿತು?
೨. ಮಾಹೇಂದ್ರನು ಯಾವ ಯಜ್ಞವನ್ನು ಕೈಗೊಂಡಿದ್ದನು?
೩. ಹುಲಿ ಕನ್ನಡಿಯಲ್ಲಿ ಕಂಡಿದ್ದೇನು?
೪. ಹುಲಿಯು ನಾಪಿತನಿಗೆ ಏನನ್ನು ನೀಡುತ್ತೇನೆಂದಿತು?
೫. ನಾಪಿತನು ತಂದ ದ್ರವ್ಯದಲ್ಲಿ ವಿಪ್ರನಿಗೆ ಎಷ್ಟು ಕೊಟ್ಟನು?
೬. ಹುಲಿಯ ಹಿಂಡನ್ನು ಕಂಡು ಹೆದರಿದ ನಾಪಿತ ಮತ್ತು ವಿಪ್ರರು ಎಲ್ಲಿ ಅಡಗಿಕೊಂಡರು?
೭. ವಿಪ್ರನು ಮರದಿಂದ ಎಲ್ಲಿಗೆ ಬಿದ್ದನು?
೮. ನರಿಗೆ ಏಕೆ ಆಶ್ಚರ್ಯವುಂಟಾಯಿತು?
೯. ಅರಣ್ಯ ಜಂತುಗಳಲ್ಲಿ ಬುದ್ಧಿಶಾಲಿಯಾದ ಪ್ರಾಣಿ ಯಾವುದು?
೧೦. ನರಿ ಯಾವ ಹೊಡೆತಕ್ಕೆ ಪ್ರಾಣ ಬಿಟ್ಟಿತು?

## III. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಮಹಾದೇವನ ಉತ್ಸವಕ್ಕೆ ನಾಪಿತನು ತೆರಳಿದ ಉದ್ದೇಶವೇನು?
೨. ಹುಲಿಯ ಗುಹೆಯಲ್ಲಿ ನಾಪಿತ ಏನೇನನ್ನು ಕಂಡನು?
೩. ಎರಡನೆಯ ಬಾರಿ ಮಹಾದೇವನ ಉತ್ಸವಕ್ಕೆ ನಾಪಿತ ತೆರಳಿದ್ದೇಕೆ?
೪. ಕಾಡಿನಲ್ಲಿ ಹುಲಿಗಳೆಲ್ಲಾ ದಿಕ್ಕಾಪಾಲಾಗಿ ಏಕೆ ಓಡಿದವು?
೫. ನರಿಯೊಡನೆ ಬರುತ್ತಿರುವ ಹುಲಿಯುನ್ನು ಕಂಡ ನಾಪಿತನು ಏನೆಂದುಕೊಂಡನು?
೬. ನರಿಯನ್ನು ನಾಪಿತ ಹೇಗೆ ಗದರಿದನು?

## IV ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕತೆ ಯಾವುದು?
೨. ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.
೩ ವ್ಯಾಘ್ರಗಳ ಮಧ್ಯೆ ಬಿದ್ದ ವಿಪ್ರನನ್ನು ಉಳಿಸಿಕೊಳ್ಳಲು ನಾಪಿತನು ಮಾಡಿದ ಉಪಾಯವೇನು?
೪. ಪಲಾಯನ ಮಾಡುತ್ತಿದ್ದ ಹುಲಿಯನ್ನು ನರಿ ಹೇಗೆ ಸಮಾಧಾನ ಪಡಿಸಿ ಹಿಂದಕ್ಕೆ ಕರೆತಂದಿತು?
೫. ಮೂರ್ಛೆ ಹೋದ ವಿಪ್ರನನ್ನು ನಾಪಿತನು ಹೇಗೆ ಸಂತೈಸುತ್ತಾನೆ?

**ಭಾಷಾಭ್ಯಾಸ: ಸಮಾನಾರ್ಥ:** ಭಾಷೆಯಲ್ಲಿ ಒಂದೇ ಅರ್ಥವನ್ನು ಸೂಚಿಸುವ ಹಲವು ಪದಗಳು ಚಲಾವಣೆಯಲ್ಲಿರುತ್ತವೆ. ಸಣ್ಣ ವ್ಯತ್ಯಾಸ ಮತ್ತು ಒಂದೇ ಅರ್ಥದ ಛಾಯೆಯನ್ನು ಸೂಚಿಸಲು ಇಂಥ ಪದಗಳ ಸೃಷ್ಟಿ ಆಗಿರುತ್ತದೆ. ಅನ್ಯಭಾಷೀಯ ಪದಗಳನ್ನು ಸಮಾನಾರ್ಥದಲ್ಲಿ ಬಳಸಲಾಗುವುದು. ಉದಾ: ಹುಲಿ – ವ್ಯಾಘ್ರ, ಶಾರ್ದೂಲ, ಪುಂಡರೀಕ, ತರಕ್ಷು, ದ್ವೀಪಿ. ಕಾಡು – ವಿಪಿನ, ಕಾಂತಾರ, ವನ, ಅರಣ್ಯ, ಅಡವಿ. **ಇದೇ ರೀತಿಯಲ್ಲಿ ಸಮಾನಾರ್ಥ ಪದಗಳನ್ನು ಗಮನಿಸಿ.**

## V. ಟಿಪ್ಪಣಿ:

'ಕಲಾವತೀ ಪರಿಣಯಂ' ಕೃತಿಯು ಗದ್ಯರೂಪದಲ್ಲಿದೆ ಹನ್ನೆರಡು ಆಶ್ವಾಸಗಳಲ್ಲಿ ಹೇಳಿರುವ ಕತೆಯನ್ನು ಹೀಗೆ ಸಂಗ್ರಹಿಸಬಹುದು. ಸೌರಾಷ್ಟ್ರದೇಶದ ಅಧಿಪತಿ ಕುವಲಯಾಪೀಡನೆಂಬುವನು ಸರ್ವಮಂಗಳೆಯ ಕರುಣದಿಂದ ಕಲಾವತಿ ಎಂಬ ಕನ್ಯಾರತ್ನವನ್ನು ಪಡೆದನು. ಪುತ್ರಿ ಪ್ರಾಪ್ತವಯಸ್ಕಳಾಗಲು, ಅವಳನ್ನು ವರಿಸಲು ಬಂದವರು ಆ ಪುರದ ರಕ್ಕಸಿಯನ್ನು ಸಂಹರಿಸಬೇಕೆಂಬ ನಿಬಂಧನೆ ಇತ್ತು. ಅದನ್ನು ಸಾಧಿಸಲಾಗದೆ ಪರಾಜಿತರಾದವರಲ್ಲಿ ಕಾಶ್ಮೀರದ ಅಧಿಪತಿ ವಿಜಯವರ್ಮನೂ ಒಬ್ಬ. ಆದರೆ ಸೌಭೀರ ದೇಶದ ಲೀಲಾವತಿಯೆಂಬ ರಾಜಧಾನಿಯ ಅಧಿಪತಿ ಬೃಹದ್ರಥ ಆ ಪುರದ ಉದ್ಯಾನವನದಲ್ಲಿದ್ದ ಕಲಾವತಿಯನ್ನು ಬಯಸಿದ. ಅವನ ಬಯಕೆಯನ್ನು ತಿರಸ್ಕರಿಸಿದ ಕಲಾವತಿಯನ್ನು ಕುರಿತು "ನಿನ್ನನ್ನು ಪಾಣಿಗ್ರಹಣ ಮಾಡಿಕೊಂಡು ನಿನ್ನನ್ನು ತೊರೆಯುವೆ" ಎಂದು ಪ್ರತಿಜ್ಞೆ ಮಾಡಿದ. ಅವಳೂ ಸಹ "ನಿನ್ನಿಂದಲೇ ಮಗನನ್ನು ಪಡೆದು ನಿನ್ನನ್ನು ಯುದ್ಧದಲ್ಲಿ ಆತನಿಂದ ಸೋಲಿಸುವೆ" ಎಂದು ಪ್ರತಿ ನುಡಿದಳು. ಮುಂದೆ ಬೃಹದ್ರಥ ಸ್ವಯಂವರದ ನಿಯಮದಂತೆ ರಕ್ಕಸಿಯನ್ನು ಸಂಹಾರ ಮಾಡಿ ಈಕೆಯನ್ನು ವಿವಾಹವಾಗಿ ನಂತರ ತ್ಯಜಿಸಿ ತನ್ನ ಪಟ್ಟಣವನ್ನು ಸೇರಿದ. ಕೆಲ ತಿಂಗಳ ನಂತರ ಮಂತ್ರಿ ಕುಮಾರ ಕಲಾಧರನೊಡನೆ ಈಕೆ ಆತನ ಸಹೋದರಿ ಮದನಮಂಜರಿಯಂತೆ ಮಾರುವೇಷಗಳಿಂದ ಬಂದು ಬೃಹದ್ರಥನನ್ನು ಕಂಡು ವಿಶ್ವಾಸ ಗಳಿಸಿದಳು. ಕಾಲಕ್ರಮದಲ್ಲಿ ಕಲಾವತಿ ಅರಸನೊಡನೆ ಸ್ನೇಹ ಗಳಿಸಿ ಕುಂಡಲಶ್ರವನೆಂಬ ಪುತ್ರನನ್ನು ಪಡೆದಳು. ನಂತರ ನಿಜವನ್ನು ತಿಳಿಸಿದ ಬೃಹದ್ರಥನಿಗೆ ಸ್ತ್ರೀಬಲ್ಮೆಯನ್ನು ಕಂಡು ಆಶ್ಚರ್ಯವಾಯಿತು.

ಕುಂಡಲಶ್ರವ ಬೆಳೆದು ಸದೃಢಶಾಲಿಯಾಗಿ, ಒಮ್ಮೆ ಅರಣ್ಯಮಧ್ಯದಲ್ಲಿ ಸಂಚರಿಸುತ್ತಿರಲು ಶಾಪಮುಕ್ತನಾದ ವಿದ್ಯಾಧರನೊಬ್ಬ ಇವನು ಮಹಾಪುರುಷನೆಂದು ತಿಳಿದು, ಇಂದ್ರಜಾಲ, ಮಹೇಂದ್ರಜಾಲ ಮೊದಲಾದ ವಿದ್ಯೆಗಳನ್ನು ಕಲಿಸಿ ಬೀಳ್ಕೊಟ್ಟನು. ನಂತರ ಕುಂಡಲಶ್ರವ

ದಿಗ್ವಿಜಯ ಕೈಗೊಂಡು ಸಮಸ್ತ ರಾಜರನ್ನೂ ಜಯಿಸಿದ. ಕೊನೆಗೆ ತಂದೆ ಬೃಹದ್ರಥನನ್ನು ಎದುರಿಸುವ ಸಂದರ್ಭ ಒದಗಿ ಅಸ್ತ್ರಪ್ರತ್ಯಸ್ತ್ರಗಳಿಂದ ಯುದ್ಧ ಮಾಡಿ ಗೆದ್ದ. ಕಲಾವತಿ ಪ್ರತಿಜ್ಞೆ ನೆರವೇರಿದೊಡನೆಯೇ ಪತಿಪತ್ನಿಯರ ಸಮಾಗಮವಾಯಿತು. ಬೃಹದ್ರಥ ತನ್ನ ಮಗನಿಗೆ ವಿಜಯವರ್ಮನ ಪುತ್ರಿಯನ್ನು ತಂದುಕೊಂಡು ವಿವಾಹ ನಡೆಸಿ ರಾಜ್ಯಾಭಿಷೇಕ ಮಾಡಿದನು.

**ಆಕರ:** ಕಲಾವತೀ ಪರಿಣಯಂ – ಯಾದವಕವಿ

**ಹೆಚ್ಚಿನ ಓದು:** ಪಂಚತಂತ್ರ – ದುರ್ಗಸಿಂಹ

ಆಪತ್ತಿಗಾದವನೆ ನಂಟ – ಗಾದೆ

❖❖❖❖❖

# ನಾಟಕ

# ಬೋಳೇಶಂಕರ

**–ಡಾ.ಚಂದ್ರಶೇಖರ ಕಂಬಾರ**

## ಪಾತ್ರಗಳು:

ಕೋಡಂಗಿ

ಭಾಗವತ

ಬೋಳೇಶಂಕರ

ಸರದಾರ ಸೋಮಣ್ಣ

ಸರದಾರನ ಹೆಂಡತಿ

ಸಾವ್ಕಾರ ಕಾಮಣ್ಣ

ಸಾವ್ಕಾರಣ್ಣನ ಹೆಂಡತಿ

ಪಿಶಾಚಿಗಳು ೧, ೨, ೩

ರಾಜ

ಮಂತ್ರಿ

ರಾಜಕುಮಾರಿ

ಹುಡುಗಿಯರು

ಸೈನಿಕರು

ಸೈತಾನ

ಸೇವಕರು

ಸಿಪಾಯಿಗಳು

ಜನರು

*ನಗರೀಕರಣದಿಂದ ನಾಡಿನ ಮೂಲ ಸಂಸ್ಕೃತಿ ನೆಲೆ ಕಳೆದುಕೊಳ್ಳುತ್ತಿದ್ದು ಗ್ರಾಮೀಣ ಬದುಕು ಅಸ್ಥಿರವಾಗಿದೆ. ಶ್ರಮಜೀವನಕ್ಕೆ ಬೆಲೆ ಇಲ್ಲವಾಗಿದ್ದು ದುರಾಸೆಯ, ದೌರ್ಜನ್ಯದ, ಸ್ವಾರ್ಥಿಗಳ ತಾಣಗಳಾಗಿ ನಗರಗಳು ಮೈದಾಳುತ್ತಿವೆ. ಅಧಿಕಾರಕ್ಕಾಗಿ ಹಾತೊರೆಯುತ್ತ ಭೋಗದ ಬದುಕಿನ ಆಕರ್ಷಣೆಗಳಿಗೆ ಒಳಗಾಗಿರುವ ಇಂದಿನ ಜನತೆ ಪರಂಪರೆ, ಮೌಲ್ಯಗಳನ್ನು ಕಡೆಗಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಅಧಿಕಾರ ವಿಮುಖತೆ, ಶ್ರಮಜೀವನ, ಸರಳ ಬದುಕನ್ನೆ ಮೌಲ್ಯವಾಗಿಸಿ ಹಸಿರೇ ಉಸಿರು ಎಂಬುದನ್ನು ತಿಳಿಸುವುದರಲ್ಲಿ ನಾಟಕ ಯಶಸ್ವಿಯಾಗಿದೆ.*

*ಗ್ರಾಮೀಣ ಸಂಸ್ಕೃತಿಯ ಪ್ರತಿನಿಧಿಯಾದ ಬೋಳೇಶಂಕರನು ಹೊಸ ಬದುಕಿನ ಕನಸನ್ನು ಕಂಡವನು. ರಾಜನಾಗಲೀ, ಮಂತ್ರಿಯಾಗಲೀ ದುಡಿದು ತಿನ್ನಬೇಕೇ ಹೊರತು ಸೋಮಾರಿಗಳಾಗಬಾರದು ಎಂಬ ಚಿಂತನೆ ಅವನದು. ರಾಜ್ಯದಲ್ಲಿ ಸೈನ್ಯ ಇರಬಾರದು, ತೆರಿಗೆಗಳು, ನಾಣ್ಯಗಳು ಇರಬಾರದು, ರಾಜ–ರಾಣಿ ಎಲ್ಲರೂ ದುಡಿದು ತಿನ್ನಬೇಕು. ದುಡಿಯದ ಸೋಮಾರಿಗಳಿಗೆ ತಿನ್ನುವ ಹಕ್ಕಿಲ್ಲ ಎಂಬುದು ಅವನ ಸಿದ್ಧಾಂತ.*

*ಹಸಿರನ್ನು ಬದುಕನ್ನಾಗಿಸಿಕೊಂಡ ಅವನಿಗೆ ಲೋಭ–ಮೋಹಗಳಿಲ್ಲ. ರಾಜ್ಯದ ಅಧಿಕಾರವನ್ನೇ ತಿರಸ್ಕರಿಸುವ ಇವನು ರಾಜಕುಮಾರಿಯನ್ನು ಮದುವೆಯಾಗಿ ಅವಳನ್ನೂ ಶ್ರಮಿಕಳನ್ನಾಗಿಸುವುದು ವಿಶೇಷವಾಗಿದೆ. "ಒಬ್ಬ ಒಳ್ಳೆ ಕೆಲಸ ಮಾಡುವುದು ಪುಣ್ಯದ ತುರಾಯಿಗಳನ್ನು ರುಮಾಲಿಗೆ ಸಿಕ್ಕಿಸಿಕೊಳ್ಳಲಿಕ್ಕೆ ಅಲ್ಲ, ಅದು ಅವನ ಜೀವನ ರೀತಿ ಅಷ್ಟೆ" ಎಂಬ ಮಾತು ನಿಷ್ಕಲ್ಮಷ ಬದುಕನ್ನು ತಿಳಿಸುತ್ತದೆ.*

*ನೀರು, ತನ್ನ ಗುಣಕ್ಕನುಗುಣವಾಗಿ ಸ್ವಚ್ಛಂದವಾಗಿ ಹರಿಯುತ್ತ ತನ್ನ ನಿಯಮಗಳನ್ನು ಪಾಲಿಸುತ್ತದೆಯೋ ಹಾಗೇ ಮನುಷ್ಯನಾದವನು ಸಹಜವಾಗಿ ಬದುಕಬೇಕು ಎಂಬುದು ಅವನ ಆದರ್ಶ. 'ಸಮಾಜವನ್ನು ತಿದ್ದಲು ನಿಯಮಗಳು, ಕಾನೂನುಗಳು ಇರಬಾರದು, ದಾರಿತಪ್ಪಿದವರಿಗೆ ಗಾದೆ ಬಲ್ಲವರು ಬುದ್ಧಿ ಹೇಳುತ್ತಾರೆ' ಎಂದು ಸರಳ ಬದುಕಿನ ಸೂತ್ರಗಳನ್ನು ಮುಂದಿಟ್ಟಿದ್ದಾನೆ. 'ಕೆಲಸ ಮಾಡಿದವರು ಊಟ ಮಾಡಿದ ನಂತರ ಸೋಮಾರಿಗಳ ಊಟ' ಎಂದು ಹೇಳುವ ಮೂಲಕ ಶ್ರಮಕ್ಕೆ, ದುಡಿಮೆಗೆ ಪ್ರಾಮುಖ್ಯತೆಯನ್ನು ನೀಡಿದ್ದಾನೆ.*

*ನಗರವೆಂಬುದು ಅವನ ಪಾಲಿಗೆ ಕೊಳೆ ಚರಂಡಿಯ, ಕೊಚ್ಚೆ ನೀರಿನ, ನಕ್ಷತ್ರವಿಲ್ಲದ, ಬೆಳಕಿರದ ಸೀಮೆಯಾಗಿದೆ. ಮಿಲ್ಲಿನ ಹೊಗೆಯಿಂದ ತುಂಬಿದ ಆಕಾಶ, ಸೈರನ್ನಿನ ದನಿ– ಇವುಗಳಿಂದ ಆತ್ಮವಿಲ್ಲದ ಸಿಟಿಯಾಗಿದೆ. ನಗರದ ಬದುಕಿನಿಂದ ಬಿಡುಗಡೆ ಪಡೆದು ಕಣ್ಣುಗಳಿಗೆ ಕನಸು ಕೊಡುವ, ಯೌವನವನ್ನು ಕಾಪಾಡುವ, ಎಳೆಯರಿರುವ ಒಲವಿನ ಸೀಮೆ ಹಸಿರಿನ ತವರೂರಿನ ಬಯಕೆಯುಳ್ಳವನಾಗಿದ್ದಾನೆ.*

*ಪ್ರಸ್ತುತ ನಾಟಕದಲ್ಲಿ ಶಿವಾಪುರದ ಮೂರುಜನ ಸಹೋದರರಾದ ಸರದಾರ ಸೋಮಣ್ಣ, ಸಾವ್ಕಾರ ಕಾಮಣ್ಣ, ಬೋಳೇಶಂಕರ –ಇವರುಗಳನ್ನು ತಮ್ಮ ಬಲೆಗೆ ಬೀಳಿಸಲು ಸೈತಾನ ಕಳುಹಿಸಿದ ೩ ಪಿಶಾಚಿಗಳು ಬರುತ್ತವೆ. ಅಧಿಕಾರದ ಆಸೆ, ಧನದ ಮೋಹಕ್ಕೆ ಬಲಿಯಾದ ಸರದಾರ ಸೋಮಣ್ಣ, ಸಾವ್ಕಾರ ಕಾಮಣ್ಣ ಇವರುಗಳು ಪಿಶಾಚಿಗಳ ಬಲೆಗೆ ಬೀಳುತ್ತಾರೆ. ನಿಸ್ವಾರ್ಥಿ, ಶ್ರಮಜೀವಿ, ನೇರ ನಡೆನುಡಿಯವನಾದ ಬೋಳೇಶಂಕರನನ್ನು ಸೆಳೆಯಲು ಪ್ರಯತ್ನಿಸಿ ಪಿಶಾಚಿಗಳೇ ಸೋಲುವ ಪ್ರಸಂಗ ಈ ನಾಟಕದ ವಸ್ತುವಾಗಿದೆ.*

## ಬೆಪ್ಪು ತಕ್ಕಡಿ

ಕೋಡಂಗಿ : ಹೋಯ್ ಭಾಗವತಣ್ಣಾ

ಭಾಗವತ : ಏನಪ್ಪ?

ಕೋಡಂಗಿ : ಎಷ್ಟೊತ್ತಾಯ್ತು ಕುಣೀತಾ ಇದ್ದೀನಿ. ಕರೆದು ಮಾತಾಡಿಸೋದೇ ಇಲ್ಲವೆ?

ಭಾಗವತ : ಮಾತಾಡಿಸಬೇಕ? ಯಾರಪ್ಪ ನೀನು?

ಕೋಡಂಗಿ : ನಾನು ಯಾರೂಂತ ಗೊತ್ತಿಲ್ಲವೆ? ನನ್ನನ್ನೊಮ್ಮೆ ಕಂಡವರು ಮತ್ತೆ ಮರೆಯೋದು ಸಾಧ್ಯವೇ

ಇಲ್ಲ ಮಾರಾಯರೇ, ನನ್ನ ಕಥೆ ಕೇಳಿ ಎಷ್ಟು ಜನ ನಗಾಡುತ್ತ ಸಂತೋಷ ಪಡುತ್ತಾರೆ ಗೊತ್ತ?

ಭಾಗವತ : ಅಷ್ಟು ಖ್ಯಾತನೇನಪ್ಪಾ ನೀನು?

ಕೋಡಂಗಿ : ಅಯ್ಯೋ ಖ್ಯಾತನಲ್ಲದಿದ್ದರೆ ಈಕಡೆ ಬರುತ್ತಿದ್ದೆನಾ? ಯಾಕೆ ಬಂದೆ ಕೋಡಂಗೀ ಅನ್ನಿ.

ಭಾಗವತ : ಯಾಕೆ ಬಂದೆ ಕೋಡಂಗೀ?

ಕೋಡಂಗಿ : ನೀವೇನೋ ಕಥೇ ಮಾಡ್ತೀರಂತೆ. ಕಥೆ ಕೇಳಿದರೆ ಆರೋಗ್ಯಕ್ಕೆ ಒಳ್ಳೇದಂತಲ್ಲ. ಐಲೀ ಕಡೆ ನನ್ನ ಆರೋಗ್ಯ ಕೆಟ್ಟಿದೆ, ಅದಕ್ಕೇ ಕಥೆ ಕೇಳೋಣ ಅಂತ ಬಂದೆ.

ಭಾಗವತ : ಯಾವ ಕಥೆ ಹೇಳೋಣಪ್ಪ?

ಕೋಡಂಗಿ : ಹಳೇಕಥೆ ಬೇಡ ಸ್ವಾಮಿ, ಹಿಂದೆ ನಡೆದದ್ದೂ ಅಲ್ಲ, ಈಗ ಹಾಲಿ ನಡೆಯುತ್ತಿರೋ ಕಥೆಯೂ ಅಲ್ಲ. ಮುಂದೆ ನಡೀಬೇಕಾದ್ದು ಹೇಳಲಾ ಕೋಡಂಗೀ ಅನ್ನಿ.

ಭಾಗವತ : ಹೇಳಲಾ ಕೋಡಂಗೀ?

ಕೋಡಂಗಿ : ಹೇಳಿ ಸ್ವಾಮಿ.

ಭಾಗವತ : ಹಾಗಿದ್ದರೆ ಕೇಳಂಯ್ಯಾ: ಒಂದಾನೊಂದು ಕಾಲದಲ್ಲಿ ಒಂದಾನೊಂದೂರು–

ಕೋಡಂಗಿ : ಒಂದಾನೊಂದೂರು ಅಂದರೆ ನಮ್ಮೂರು ಆದೀತೋ?

ಭಾಗವತ : ನಿಮ್ಮೂರು ಯಾವುದು?

ಕೋಡಂಗಿ : ಶಿವಾಪುರ.

ಭಾಗವತ : ಆದೀತು.

ಕೋಡಂಗಿ : ಶಿವಾಪುರವಾಗೋದಾದರೆ ನನ್ನ ಮಿತ್ರ ಉರ್ಫ್ ಯಜಮಾನನ ಕಥೇ ಆಗಬಹುದಲ್ಲಾ?

ಭಾಗವತ : ಯಾರಪ್ಪ ನಿನ್ನ ಮಿತ್ರ ಉರ್ಫ್ ಯಜಮಾನ?

ಕೋಡಂಗಿ : ಬೆಪ್ತಕ್ಕಡಿ ಬೋಳೇಶಂಕರ

ಭಾಗವತ : ಏನಪ್ಪಾ ಅವನ ವಿಶೇಷ?

ಕೋಡಂಗಿ : ಅಯ್ಯೋ ಎಷ್ಟೂಂತ ಹೇಳ್ತೀರಾ? ಅವನ ವಿಶೇಷ ಎಷ್ಟಿವೆ ಅಂದರೆ ಒಂದೂ ಹೇಳಾಕಾಗೋದೇ ಇಲ್ಲ.

ಭಾಗವತ : ನೀನು ಅವನಲ್ಲಿ ಕೆಲಸಕ್ಕಿದ್ದೀಯೊ?

ಕೋಡಂಗಿ : ಹೌದು

ಭಾಗವತ : ಎಷ್ಟಪ್ಪ ನಿನ್ನ ಸಂಬಳ?

ಕೋಡಂಗಿ : ದಿನಕ್ಕೆ ಕೆನ್ನೆ ಮೇಲೆ ಹತ್ತೇಟು.

ಭಾಗವತ : ದಿನಕ್ಕೆ ಹತ್ತಾದರೆ ತಿಂಗಳಿಗೆ ಮುನ್ನೂರಾಯ್ತು, ವರ್ಷಕ್ಕೆ ಮೂರು ಸಾವಿರದ ಆರು ನೂರೇಟಾಯ್ತು, ತಗಳಪ್ಪ ಯಾರಿಗುಂಟು ಯಾರಿಗಿಲ್ಲ? ಇಷ್ಟು ಸಂಬಳ ತಗಂಡೇನಪ್ಪ ಮಾಡ್ತೀ?

ಕೋಡಂಗಿ : ಬ್ಯಾಂಕಿನಲ್ಲಿ ಕೂಡಿಸಿಟ್ಟು ಮದುವೆ ಆದ ಮೇಲೆ ಹೆಂಡತಿಗೆ ಕೊಡ್ತೀನಿ.

ಭಾಗವತ : ಭಲೆ, ದೊಡ್ಡ ಶ್ರೀಮಂತನಪ್ಪ ನೀನು. ಈಗೇನು ನಿನ್ನ ಕಥೆ ಹೇಳಲಾ? ಬೋಳೇಶಂಕರನ ಕಥೆ ಹೇಳಲಾ?

ಕೋಡಂಗಿ : ಯಜಮಾನರ ಕಥೆ ಹೇಳಿ ಸ್ವಾಮಿ.

ಭಾಗವತ : ಆಯ್ತುಪ್ಪ ಒಂದಾನೊಂದು ಕಾಲದಲ್ಲಿ ಒಂದಾನೊಂದೂರು ಶಿವಾಪುರದಲ್ಲಿ ಬೆಪ್ತಕ್ಕಡಿ ಬೋಳೇ ಶಂಕರ ಅಂತಿದ್ದ. ಅವನ ತಂದೆ ಯಾರು?

ಕೋಡಂಗಿ : ಅವರಪ್ಪ

ಭಾಗವತ : ಅವರಪ್ಪ ಯಾರು?

ಕೋಡಂಗಿ : ಅವನ ತಂದೆ

ಭಾಗವತ : ಅವನ ತಂದೆ ಯಾರು?

ಕೋಡಂಗಿ : ಅವರಪ್ಪನ ತಂದೆಯ ಅಪ್ಪನ ತಂದೆಯ ಅಪ್ಪನ ತಂದೆ. ಸ್ವಾಮೀ ಆ ಕುಟುಂಬ ಎಷ್ಟು ಹಳೇದು ಅಂದರೆ ಅದರ ಮೂಲ ಪುರುಷ ಯಾರೂಂತ್ಲೇ ಗೊತ್ತಿಲ್ಲ.

ಭಾಗವತ : ಮೂಲಪುರುಷ ಮಂಗನಂಥ ಮಾನವನೊ?

ಕೋಡಂಗಿ : ಮಂಗನಂಥಾ ಮಾನವನೋ, ಮಾನವನಂಥಾ ಮಂಗನೊ–ಅಂತೂ ಭಾರೀ ಪುರಾತನ ವಂಶ ಸ್ವಾಮಿ. ಅದೇನೋ ಮಂಗನಂಥ ಮಾನವ ಅಂದಿರಲ್ಲಾ, ನಿಜ ಇರಬೇಕು, ಯಾಕಂತೀರೊ ನಮ್ಮ ಮಿತ್ರನ ವಂಶದವರಿಗೆ ಈಗಲೂ ಮೀಸೆ ದಾಡಿ ಬೆಳೆಯುತ್ತವೆ. ದಿನಾ ಬೋಳಿಸಿಕೊಳ್ತಾರೆ.

ಭಾಗವತ : ಭಾರೀ ಹಳೇ ಮನೆತನ ಅಂತಾಯ್ತು, ಇನ್ನು ಮುಂದೆ ಕಥೆ ಹೇಳೋಣವಾ ಕೋಡಂಗಿ?

ಕೋಡಂಗಿ : ಹೇಳಿ ಸ್ವಾಮಿ,

ಭಾಗವತ : ಹಾಗಿದ್ದರೆ ಶಿವಾಪುರದ ಬಗ್ಗೆ ಒಂದು ಹಾಡು ಹೇಳಿ ಕುಣಿ. ಆಮೇಲೆ ಕಥೆ ಸುರು ಮಾಡೋಣ. (ಕೋಡಂಗಿ ಹಾಡುತ್ತಾ ಕುಣಿಯುತ್ತಿರುವಾಗ ಬೆಪ್ತಕ್ಕಡಿ ಬೋಳೇಶಂಕರ ನೆಲ ಉಳುತ್ತ ಬರುತ್ತಾನೆ.)

ಕೋಡಂಗಿ : **ಕಾಯ್ದ ಕಂಗಳ ಕೂಲು ಮಾಡುವ**
**ಹುಲ್ಲು ಎಲ್ಲಿದೆ ಹೇಳಿರಿ.**
**ತೆರೆಯ ಚಿಮುಕಿಸಿ ಕರಿಯ ಪಾಪವ**
**ತೊಳೆವ ತೊರೆಯನು ತೋರಿರಿ**
**ಅರಳಿ ಕತ್ತಲ ದೂರ ಮಾಡುವ**
**ಸೂರ್ಯಕಾಂತಿಯ ತೋರಿರಿ.**
**ಉಗುರು ಬೆಚ್ಚನೆ ಪ್ರೀತಿ ಎಲ್ಲಿದೆ.**
**ಅಲ್ಲಿ ಶಿವಪುರ ಎನ್ನಿರಿ.**

ಭಾಗವತ : ಆ ಶಿವಾಪುರದಲ್ಲಿ ಮಾನವರು ವಾಸವಾಗಿದ್ದರು. ಆ ಮಾನವರಲ್ಲಿ ಮೂರು ಜನ ಅಣ್ಣ ತಮ್ಮಂದಿರು. ದೋಡ್ಡೋನು ಒಂದು ಸರದಾರ ಸೋಮಣ್ಣ. ಆಳೋದಕ್ಕೆ ಹುಟ್ಟಿದವನು ಕುರಿ ಕೋಳಿ ಕೊಂದವನು. ಅವು ಸಿಗದಿದ್ದರೆ ಮತ್ತು ಸಾಧ್ಯವಾದರೆ ಮನುಷ್ಯರನ್ನೂ ಕೊಲ್ಲಬಲ್ಲವನು. ಎರಡನೆಯವನು ಒಂದು ಸಾವ್ಕಾರ ಕಾಮಣ್ಣ. ಹೊಟ್ಟೆ ಮಜಬೂತಣ್ಣ. ಅದಕ್ಕೇ ಅವನ ಉರ್ಫ್‌ನಾಮೆ ಡಬ್ಬಣ್ಣ, ಎಣಿಸೋದರಲ್ಲಿ ಜಾಣ. ಹಸು ಎಣಿಸುತ್ತಾನೆ, ಹಣ ಎಣಿಸುತ್ತಾನೆ. ಯಾರ್‍ಯಾರ ಜಮೀನು ಎಷ್ಟೆಕರೆ ಐತಣ್ಣ ಅಂದರೆ ತಕ್ಷಣ ಅಂಕಿಯೊಳಗೇ ಹೇಳುವಾತ. ಇನ್ನೂ ಮೂರನೆಯವನು ಬೆಪ್ತಕ್ಕಡಿ ಬೋಳೇಶಂಕರ, ಅವನಿಗೆ ಅವನಾಯ್ತು, ಭೂಮಿ ಸೀಮೆ ಆಯ್ತು, ಮಳೆ ಬೆಳೆ ಆಯ್ತು, ಒಂದು ನೊಣ ನೋಯಿಸಿದವನಲ್ಲ. ಮಳೆ ಬರೋದನ್ನು ಒಂದು ವಾರಕ್ಕೆ ಮುಂಚೇನೇ ಹೇಳಬಲ್ಲ, ನಿಂತ ನೀರಿಗೆ ಹರಿಯೋದಕ್ಕೆ ಕಾಲುವೆ ತೋಡಬಲ್ಲ.ಹಕ್ಕೀ ಹಾಡಿನ ಅರ್ಥ ಹೇಳಬಲ್ಲ, ಹೂವಿಗೆ ಬೀಳುವ ಕನಸು ಹೇಳಬಲ್ಲ, ಇನ್ನೇನಪ್ಪ ಅಂದರೆ ಕೈಬೆರಳಿಲ್ಲದೆ ಎಣಿಸೋದಕ್ಕೆ ಬರೋದಿಲ್ಲ.

ಕೋಡಂಗಿ : ಅಷ್ಟೇ ಅಲ್ಲ, ಒಂದಿನ ಅವರಣ್ಣ ಹಣಕೊಟ್ಟು "ಎಣಿಸಿ ಎಷ್ಟಿದೆ ಹೇಳೋ ಬೆಪ್ತಕ್ಕಡಿ" ಅಂದ. ಎಣಿಸಿ ಮೂರು ಕೈಯಿದೆ ಅಂದ. ಅವರಣ್ಣ ಬಿದ್ದೂ ಬಿದ್ದೂ ನಕ್ಕ. ಅವನ ಹೆಂಡತಿ ಬಿದ್ದೂ ಬಿದ್ದೂ ನಕ್ಕಳು. ಬಿದ್ದೂ ಬಿದ್ದೂ ನಕ್ಕದ್ದರಿಂದ ಅವರ ತಲೆಗೆ ಏಟಾಯ್ತು, ಆವಾಗ ಬೋಳೇ ಶಂಕರ ಏನೆಂದ ಗೊತ್ತ ಭಾಗವತರೇ: "ಅಯ್ಯೊ ಕೋಡಂಗೀ, ಇದರ ನೀತಿ ಏನಪ್ಪಾ ಅಂದರೆ ಇನ್ನೊಬ್ಬರನ್ನು ನೋಡಿ ಬಿದ್ದೂ ಬಿದ್ದೂ ನಗಬಾರದು. ನಕ್ಕರೆ ಗೊತ್ತಲ್ಲ–ತಲೆಗೆ ಏಟಾಗುತ್ತೆ".

ಭಾಗವತ : ಹಾಗಿದ್ದರೆ ಎಣಿಸೋದರಲ್ಲಿ ನೀನು ಜಾಣನೋ?

ಕೋಡಂಗಿ : ಓಹೊ.

ಭಾಗವತ : ಹಾಗಿದ್ದರೆ ಹೇಳಪ್ಪ: ನಿನ್ನ ಹತ್ತಿರ ಹತ್ತು ರೂಪಾಯಿದೆ. ಕಳ್ಳ ಬಂದು ಐದು ತಗೊಂಡು ಹೋದರೆ ಎಷ್ಟುಳೀತು?

ಕೋಡಂಗಿ : ನನ್ನ ಹತ್ತಿರ ಹಣ ಇಲ್ಲ ಭಾಗವತ ರೇ

ಭಾಗವತ : ಇದೆ. ನಾನೇ ಕೊಟ್ಟೆ ಅಂತ ಇಟ್ಕೊಳಪ್ಪ

ಕೋಡಂಗಿ : ಇನ್ನೊಬ್ಬರ ಹಣ ನನಗೆ ಬೇಡ ಸ್ವಾಮಿ.

ಭಾಗವತ : ಅಯ್ಯೋ ಇದೆ ಅಂತ ಇಟ್ಕೊಳ್ಳಯ್ಯಾ.

ಕೋಡಂಗಿ : ಹೂ. . . ಇದೆ.

ಭಾಗವತ : ಹತ್ತಿದೆ. ಕಳ್ಳ ಬಂದು ಐದನ್ನೊಯ್ದ, ಎಷ್ಟುಳೀತು?

ಕೋಡಂಗಿ : (ಬೆರಳೆಣಿಸಿ ಲೆಕ್ಕ ಮಾಡಿ) ಐದು.

ಬೋಳೇಶಂಕರ : ಕೋಡಂಗೀ ಹಾಗೆಲ್ಲ ತಪ್ಪು ಉತ್ತರ ಹೇಳಬಾರದು. ಕಳ್ಳ ಬಂದು ಐದನ್ನಿಟ್ಟು ಐದ್ಯಾಕೆ ಒಯ್ತಾನೆ? ಸಿಕ್ಕರೆ ಅಷ್ಟೂ ತಕ್ಕೊಂಡೇ ಹೋಗ್ತಾನೆ. ಆದ್ದರಿಂದ ಏನೂ ಉಳೀಲಿಲ್ಲ ಅನ್ನು.

ಭಾಗವತ : ಭಲೆ! ಯಾರಯ್ಯಾ ಈ ಬೃಹಸ್ಪತಿ?

ಕೋಡಂಗಿ : ಇವರೇ ನಮ್ಮ ಕಥಾನಾಯಕರು ಸ್ವಾಮಿ, ಹ್ಯಾಗಿದಾರೆ?

ಭಾಗವತ : ಪರವಾ ಇಲ್ಲವೆ!

ಕೋಡಂಗಿ : ಯಾಕಿಲ್ಲ? ಅದೂ ಇದೆ ಭಾಗವತರೇ, ನಮ್ಮ ಕಥಾನಾಯಕರು ಎಷ್ಟು ತಿಳಿದುಕೊಂಡಿದ್ದಾರೆ ಅಂದರೆ ಅವರ ಜೀವಮಾನವಿಡೀ ಒಂದೇ ಒಂದು ಸಂಶಯ ಬಂದಿಲ್ಲ ಅವರಿಗೆ.

ಬೋಳೇಶಂಕರ : ಯಾಕಪ್ಪ ಸಂಶಯ ಬರಬೇಕು? ನೀವು ಓದೋದು ಎಣಿಸೋದು ಯಾವುದಕ್ಕಾಗಿ? ಸಮಾಜದಲ್ಲಿ ಚೆನ್ನಾಗಿ ಬದುಕಬೇಕು ಅಂತ ತಾನೆ? ಚೆನ್ನಾಗಿ ಬದುಕಿದರಾಯ್ತು, ಸಂಶಯ ಯಾಕೆ ಬರುತ್ತದೆ ಹೇಳಿ. ನೀವು ಹೀಗೇ ಮಾತಾಡ್ತ ಇರಿ ನಾನೊಂದು ಹಾಡು ಹೇಳ್ತೇನೆ, ಯಾಕೆಂದರೆ ಹೊಲದಲ್ಲಿರೋವಾಗ ಹಾಡದೆ ಇರಲಿಕ್ಕಾಗೋದಿಲ್ಲ.

**ಈ ಕಾಡು ನದಿ ಮಣ್ಣು ದೇವರ ಕಾಯಾ**
**ಏನಂತ ಹಾಡಲಿ ದೇವರ ಮಾಯಾ॥**
**ಹೊಳೆಯುವ ನೀರಿನ ತೆರೆಗಳ ನಗಿಸುತ**
**ಕಿರಣವ ಹೆಣೆಯುವ ಸೂರ್ಯನಿಗೆ**
**ಏನೆನ್ನಲೇ ಶಿವನೇ ಏನೆನ್ನಲೇ॥**
**ಚಿಮ್ಮುವ ಹೂವಿನ ಘಮ್ಮಾನ ವಾಸನೆ**
**ಸುಮ್ಮಾನ ಸಡಗರಕೇನೆನ್ನಲೇ।**
**ಸುಡುಗಾಡದೊಳಗಡೆ ಹೂಬಿಡುವ ಮುಳ್ಳಿಗೆ**
**ಏನೆಂಬ ಹೆಸರಿಂದ ಕರೆಯುವೆನೇ॥**

**ಬದುಕಿನ ಈ ಖುಷಿಗೆ ಕುರುಡಾದ ಮಂದಿಗೆ**
**ಕಿಲುಬಿದ ಮನಸಿಗೆ ಏನೆನ್ನಲೇ।**
**ಸೈತಾನನ ಒಕ್ಕಲಾಗಿ ಕೆಟ್ಟಾಸೆಗಳ ಬಿತ್ತಿ**
**ನರಕಗಳ ಬೆಳೆವವರಿಗೇನೆನ್ನಲೇ॥**

**ಕಷ್ಟ ಸಾವಿರವಿರಲಿ ದುಃಖ ಸಾವಿರವಿರಲಿ**
**ಈ ಬದುಕು ನನಗಿರಲಿ ಶಿವದೇವರೇ।**
**ಸಾವಿರ ಮುಳ್ಳಿರಲಿ ಆದರು ಅದರಲ್ಲಿ**
**ಒಂದಾರೆ ಅರಳಿದ ಹೂವಿರಲಿ ಶಿವನೇ॥**

(ಈ ಹಾಡು ನಡೆಯುತ್ತಿರವಾಗ ಸರದಾರ ಸೋಮಣ್ಣ, ಸಾವ್ಕಾರ ಕಾಮಣ್ಣ ಇಬ್ಬರೂ ತಂತಮ್ಮ ಹೆಂಡದಿರ ಜೊತೆ ಬಂದು ಹೊಲದ ಕೆಲಸ ಮಾಡುವರು. ಬೋಳೇಶಂಕರನಂಥ ಸಂತೋಷ ಅವರಲ್ಲಿಲ್ಲ. ಒತ್ತಾಯಕ್ಕಾಗಿ ಕೆಲಸ ಮಾಡುತ್ತಿದ್ದವರಂತೆ ಕಾಣುತ್ತಾರೆ, ಹಾಡು ಮುಗಿದಾಗ ಬಿರುಗಾಳಿ ಬೀಸುತ್ತದೆ. ಬೋಳೇಶಂಕರನ ದನ ಮುಂದೆ ಸಾಗದೆ ನಿಲ್ಲುತ್ತವೆ.)

ಬೋಳೇಶಂಕರ : ಮರದೆಲೆ ಬಾಡುತ್ತಿವೆ. ಯಾರದೋ ನಿಟ್ಟುಸಿರಿನ ಹಾಗೆ ಗಾಳಿ ಬೀಸುತ್ತಿದೆ. ಮೋಡ ಉರಿಯುತ್ತಿರುವ ಹಾಗೆ ಕಾಣಿಸುತ್ತಿದೆ. ಯಾಕಿದ್ದೀತು?

ಸ. ಹೆಂಡತಿ : ರೀ ನನ್ನ ಕರೆದಿರಾ?

ಸರದಾರ : ನಾನೂ ಅದನ್ನೇ ಕೇಳೋಣ ಅಂತಿದ್ದೆ: ನೀ ನನ್ನ ಕರೀಲಿಲ್ಲವೆ?

ಸ.ಹೆಂಡತಿ : ರೀರೀ ಒಂದು ಕೆಲಸ ಮಾಡ್ತೀರಾ?

ಸರದಾರ : ಏನದು?

ಸ.ಹೆಂಡತಿ : ಅಗೋ ಅಲ್ಲಿದೆಯಲ್ಲ, ಎತ್ತರವಾದ ಬೆಟ್ಟ. ಅದರ ನೆತ್ತೀ ಮೇಲಿಂದ ಕೆಳಕ್ಕೆ ನೀವು ನೆಗೆದರೆ ಎಷ್ಟು ಚೆನ್ನಾಗಿರುತ್ತಲ್ಲವ ನೋಡೋದಕ್ಕೆ!

ಸರದಾರ : ಏನೇ ನಿನ್ನ ಮೈಯಲ್ಲಿ ಹುಷಾರಿದೆ ತಾನೆ?

ಸ.ಹೆಂಡತಿ : ಬೇಗ ಹೋಗಿ ನೆಗೀರಿ ಅಂದರೆ. ಇಲ್ಲದಿದ್ದರೆ ನಾನೇ ನೆಗೀತೀನಿ ಅಷ್ಟೆ.

ಸರದಾರ : ಬೇಕಾದರೆ ಇಬ್ಬರೂ ನೆಗಿಯೋಣ, ಅದಕ್ಕೇನಂತೆ. ಆದರೆ ಅದ್ಯಾಕೆ ಈ ಪರಿ ಆಸೆ ಆಗ್ತಿವೆ ಇಬ್ಬರಿಗೂ? ಒಂದು ಮಾತು ತಮ್ಮನನ್ನ ಕೇಳೋಣ ಇರು. (ಇಬ್ಬರೂ ಆಗಲೇ ಬೆಟ್ಟದ ಕಡೆ ಅವಾಕ್ಕಾಗಿ ನೋಡುತ್ತಿರುವ ಸಾವ್ಕಾರಣ್ಣ, ಅವನ ಹೆಂಡತಿ ಹತ್ತಿರ ಹೋಗುತ್ತಾರೆ.)

ಸಾವ್ಕಾರಣ್ಣ : ಅಣ್ಣಾ, ನಿನಗೆ ಆ ಬೆಟ್ಟದ ಮೇಲಿಂದ ಬೀಳೋಣ ಅಂತ ಅನ್ನಿಸುತ್ತ?

ಸರದಾರ : ಎಲಾ ಇವನ! ಅದನ್ನೇ ಕೇಳೋಣ ಅಂತ ಬಂದೆ ಕಣಪ್ಪ. ನಿನಗೂ ಹಾಗೇ ಅನ್ನಿಸ್ತಿದೆಯಾ?

ಸಾ. ಹೆಂಡತಿ : ನನಗೂ ಅಷ್ಟೇ.

ಸಾವ್ಕಾರಣ್ಣ : ನಮಗೆಂದೂ ಹಿಂದೆ ಹೀಗಾದದ್ದಿಲ್ಲ, ಬೋಳೇಶಂಕರನಿಗೂ ಹೀಗೆ ಆಗುತ್ತೇನೋ ಕೇಳೋಣ ಬಾ. (ಅವನ ಬಳಿಗೆ ಹೋಗುವರು)

ಸರದಾರ : ಅಯ್ಯಾ ಬೆಪ್ತಕ್ಕಡಿ, ಆ ಬೆಟ್ಟದ ತುದಿಯಿಂದ ಹಾರಿ ಬೀಳೋಣ ಅಂತ ನಿನಗೇನಾದರೂ ಅನ್ನಿಸುತ್ತ?

ಬೋಳೇಶಂಕರ : ನಿಮಗೆ ಹಾಗನ್ನಿಸುತ್ತ?

ಸರದಾರ : ನಮಗೆಲ್ಲರಿಗೂ ಹಾಗನ್ನಿಸುತ್ತ ಇದೆ. ನಿನಗೂ ಅನ್ನಿಸ್ತಿದೆಯೆ?

ಬೋಳೇಶಂಕರ : ಇಲ್ಲವಲ್ಲ.

ಸಾವ್ಕಾರಣ್ಣ : ಹೇಳಿ ಕೇಳಿ ಬೆಪ್ತಕ್ಕಡಿ ಬೋಳೇಶಂಕರ; ಅವನಿಗೇನನ್ನಿಸುತ್ತೆ?

ಬೋಳೇಶಂಕರ : ಆದರೆ ಮನುಷ್ಯ ಹೌದೋ?

ಸರದಾರ : ನಾವು ನಾಲ್ವರಿಗೂ ಅನ್ನಿಸಿದ್ದು ನಿನಗೊಬ್ಬನಿಗೇ ಅನ್ನಿಸೋದಿಲ್ಲ ಅಂದರೆ ಅದೂ ಅನುಮಾನವೇ.

ಸಾವ್ಕಾರಣ್ಣ : ಅಣ್ಣಾ, ಅಕಾ ಆ ಬೆಟ್ಟದ ಮೇಲೆ ಕೆಂಪು ಹೂವಿನ ಮೆಳೆ ಇದೆಯಲ್ಲ, ಅದರ ಮರೆಯಲೊಬ್ಬ ದೇವತೆ ನಿಂತುಕೊಂಡು ಕೈಮಾಡಿ ಕರೆದಂತೆ ಕಾಣಿಸೋದಿಲ್ಲವ?

ಸರದಾರ : ಹೌದು ದುಂಡಗೆ ಉರಿಯೋ ಕಣ್ಣಿವೆ!

ಸಾ. ಹೆಂಡತಿ : ಹೌದು ಹೊಳೆಯೋ ಹಲ್ಲಿವೆ!

ಸ.ಹೆಂಡತಿ : ಎತ್ತಿನ ಹಾಗೆ ಕೊಂಬಿವೆ! ಆದರೆ ಆ ದೇವತೆಗಳು ಇಬ್ಬರಿದ್ದಾರೆ.

ಬೋಳೇಶಂಕರ : ದೇವತೆಗಳಾಗಿದ್ದರೆ ನನಗೂ ಕಾಣಿಸಬಹುದಿತ್ತಲ್ಲ?

ಸ.ಹೆಂಡತಿ : ಮನುಷ್ಯರಿಗೆ ಮಾತ್ರ ದೇವತೆಗಳು ಕಾಣಿಸೋದು.

ಸಾ.ಹೆಂಡತಿ : ನಿನಗೆ ದೆವ್ವಭೂತ ಮಾತ್ರ ಕಾಣೋದು ಸಾಧ್ಯ.

ಬೋಳೇಶಂಕರ : ಒಮ್ಮೊಮ್ಮೆ ಪಿಶಾಚಿಗಳು ಈ ರೀತಿ ಆಟ ಆಡೋದಿದೆ. ಭಕ್ತಿಯಿಂದ ಒಮ್ಮೆ ಶಿವನ ಹೆಸರು ತಗೊಂಡು ಆ ಕಡೆ ನೋಡಿ. ನನಗಂತೂ ಬೆಟ್ಟ ಮೆಳೆ ಬಿಟ್ಟು ಇನ್ನೇನೂ ಕಾಣಿಸಲಿಲ್ಲ. ಏನೂ ಅನ್ನಿಸಲೂ ಇಲ್ಲ. ಹಾ ನಿಮ್ಮನ್ನೋಡಿ ನಗಬೇಕಂತ ಒಂದು ಬಾರಿ ಅನ್ನಿಸಿದ್ದು ನಿಜ.

ಸಾ.ಹೆಂಡತಿ : ದೊಡ್ಡ ಮನುಷ್ಯ ಅಲ್ಲವೆ! ತಿಂದ ರೊಟ್ಟಿ ಲೆಕ್ಕ ಕೂಡ ಗೊತ್ತಾಗೋದಿಲ್ಲ, ನಮ್ಮನ್ನೋಡಿ ನಗಬೇಕನ್ನಿಸ್ತಂತೆ.

ಸಾ.ಹೆಂಡತಿ : ನೋಡಿ, ಬೆಪ್ತಕ್ಕಡಿಗೆ ಮನುಷ್ಯರು ಅಂದರೆ ಅಷ್ಟಕಷ್ಟೆ, ಎತ್ತಿನ ಜೊತೆಗಿದ್ದಾಗಷ್ಟೆ ಅವನಿಗೆ ಸಂತೋಷವಾಗೋದು. ಯಾಕೆಂದರೆ ಎತ್ತಿಗಿಂತ ತನಗೆ ಜಾಸ್ತಿಬುದ್ಧಿ ಇದೆ ಅಂತ ಅವನಿಗ್ಗೊತ್ತು.

ಬೋಳೇಶಂಕರ : ನೋಡಿ, ನಾನು ದಡ್ಡ ಇರಬಹುದು. ಆದ್ದರಿಂದ ನೀವೇನು ಹೇಳ್ತೀರಿ ಅಂತ ಅರ್ಥವಾಗಲಿಲ್ಲ, ಅರ್ಥವಾದರೂ ನಾನು ಒಪ್ಪೋದಿಲ್ಲ. ಆಯ್ತಲ್ಲ ನನಗನ್ನಿಸಿದ್ದನ್ನು ಹೇಳಿದ್ದೇನೆ. ನಿಮಗೆ ನಂಬಿಕೆ ಬರದಿದ್ದರೆ ಸೀದಾ ನೀವು ನರಕಕ್ಕೆ ಹೋಗಬಹುದು. (ಕೆಲಸಕ್ಕೆ ತೊಡಗುವನು)

ಸ.ಹೆಂಡತಿ : ನಮಗೆ ನರಕಕ್ಕೆ ಹೋಗು ಅನ್ನೋನ್ನ ನೋಡಿಕೊಂಡು ಸುಮ್ಮನೇ ಇದ್ದೀರಲ್ಲರೀ, ನೀವೇನು ಗಂಡಸರ? ಪ್ರಾಣಿಗಳ? ಈ ಪ್ರಾಣಿಯಂಥವನ ಜೊತೆಗಿರೋದಕ್ಕಿಂತ ಯಾರೋ ರಾಜರ ಕೈಲಿ ಸಿಪಾಯಿ ಆಗಿರೋದು ಮೇಲು.

ಸಾ.ಹೆಂಡತಿ : ಈ ಬೆಪ್ತಕ್ಕಡಿ ಜೊತೆ ಇರೋದಕ್ಕಿಂತ ಯಾರದೋ ಅಂಗಡೀಲಿ ಲೆಕ್ಕ ಬರೀತ ಜೀವನ ಮಾಡೋದು ಮೇಲು.

ಸ. ಹೆಂಡತಿ : ರೀ ಆಸ್ತಿ ಪಾಲು ಮಾಡಿ ಈಸಿಕೊಳ್ಳಿ. ಬೇಕಾದ ಹಾಗೆ ಪಾಳೇಗಾರನಾಗಿ ಇರಬಹುದು.

ಸಾ.ಹೆಂಡತಿ : ರೀ ಆಸ್ತಿ ಭಾಗ ಮಾಡಿ. ನಮಗೆ ಬಂದಷ್ಟರಿಂದಲೇ ಹೊಟ್ಟೆಮೇಲೆ ಕೈಯಾಡಿಸಿಕೊಂಡು ಸಾಪ್ಕಾರಾಗಿ ಇರಬಹುದು.

ಸರದಾರ : ಅಯ್ಯಾ ಕಾಮಣ್ಣಾ, ನಮಗಿರೋ ಆಸ್ತಿ ಮೂರು ಭಾಗ ಮಾಡಿ ಒಂದು ಭಾಗ ನನಗೆ ಕೊಡು–ಎಲ್ಲಾದರು ಪಾಳೇಗಾರಿಕೆ ಮಾಡಿ ಕೊಂಡಿರುತ್ತೇನೆ. ಆದರೆ ಖಂಡಿತ ಈ ಬೆಪ್ತಕ್ಕಡಿ ಜೊತೆ ಇರೋಲ್ಲ.

ಸಾಪ್ಕಾರಣ್ಣ : ನಾನೂ ಅಷ್ಟೆ, ಬೇಕಾದರೆ ಯಾರದೋ ಜಮಾ ಖರ್ಚು ಬರೆದುಕೊಂಡಿದ್ದೇನು, ಈ ಬೆಪ್ತಕ್ಕಡಿ ಜೊತೆಗಿರೋದಿಲ್ಲ.

ಬೋಳೇಶಂಕರ : ನೋಡಿ; ನೀವಾಗಲಿ ನಿಮ್ಮ ಹೆಂಡಂದಿರಾಗಲಿ ಹೊಲದಲ್ಲಿ ದುಡಿದವರಲ್ಲ, ಕಷ್ಟಪಟ್ಟವರಲ್ಲ.

ಸ.ಹೆಂಡತಿ : ಅಂದರೆ ನಿನ್ನೊಬ್ಬನ ಕಷ್ಟದಿಂದಾನೇ ನಾವೆಲ್ಲ ಬದುಕಿದೆವು ಅಂತಲ ನಿನ್ನ ಮಾತಿನರ್ಥ?

ಸರದಾರ : ಅಯ್ಯಾ ಆಸ್ತಿ ಮೂರು ಭಾಗ ಮಾಡಿ ಒಂದು ಭಾಗ ನೀ ತಗೋ.

ಸ.ಹೆಂಡತಿ : ಒಂದು ಭಾಗವಾದರೂ ಇವನಿಗ್ಯಾಕೆ? ಇವನಿಗೇನು ಹೆಂಡತೀನೇ?

ಮಕ್ಕಳೇ? ಮುಂದೆ ಕೂಡ ಇವನಿಗೆ ಹೆಣ್ಣುಕೊಡುವಂಥ ಉದಾರಿ ದಯವಂತರ್‍ಯಾರಿಲ್ಲ. ದಿನಾ ಅನ್ನ ಹಾಕಿದರೂ ತಿರುಪೆ ಹುಡುಗಿ ಕೂಡ ಇವನನ್ನು ಮದುವೆಯಾಗೋದಕ್ಕೆ ದಯಮಾಡಿ ಒಪ್ಪೋದಿಲ್ಲ.

ಬೋಳೇಶಂಕರ : ನಿಮ್ಮಿಬ್ಬರ ಹಿಂದೆ ಪಿಶಾಚಿಗಳು ನಿಂತು ಮಾತಾಡುತ್ತಿವೆ ಅಂತ ನನಗ್ಗೊತ್ತು. ನಿಮಗೇನು ಬೇಕೋ ಅದನ್ನು ತಗೊಳ್ಳಿ.

ಸಾ. ಹೆಂಡತಿ : ಎಲಾ ಬೆಪ್ಪತಕ್ಕಡಿ! ನಮಗೆ ಪಿಶಾಚಿಗಳು ಅಂತಾನೆ ಕೇಳಿದೇನೆ ಅಕ್ಕಾ?

ಸ.ಹೆಂಡತಿ : ಕೇಳಿಸಿಕೊಂಡು ಸುಮ್ಮನೇ ನಿಂತಿದೀರಲ್ಲರೀ ನೀವೇನು ಗಂಡಂದಿರಾ?

ಸಾವ್ಕಾರಣ್ಣ : ಇನ್ನು ತಡೆದು ಪ್ರಯೋಜನವಿಲ್ಲ, ನೋಡಣ್ಣಾ–ದುಡ್ಡಿರೋ ಪೆಟ್ಟಿಗೆ ಆಭರಣ ನನಗಿರಲಿ; ಒಳ್ಳೆ ಗದ್ದೆ; ತೋಟ, ಹೊಲವೆಲ್ಲಾ ನಿನಗೆ: ನದಿ ಹತ್ತಿರ ಕಲ್ಲು ಮರಡಿ ಇದೆಯಲ್ಲ ಅದು ಬೆಪ್ಪತಕ್ಕಡಿಗೆ. ಸರಿಯೇನೋ?

ಬೋಳೇಶಂಕರ : ನಿಮಗೇನು ಬೇಕೋ ಅದನ್ನು ತಗಂಡು ನಿಮ್ಮ ಪಿಶಾಚಿಗಳ ಸಮೇತ ಹೋಗಿ.

ಸರದಾರ : ಮತ್ತೆ ಪಿಶಾಚಿ ಅಂತೀಯಾ?

ಸಾವ್ಕಾರಣ್ಣ : ನಾವು ಕೇಳಿದ್ದನ್ನು ಕೊಟ್ಟಿದ್ದಾನೆ. ಮತ್ತೆ ಕೋಪ ಯಾಕೆ? ಬಾರಣ್ಣಾ ಹೋಗೋಣ. (ಹೋಗುವರು)

ಬೋಳೇಶಂಕರ : ನಾನು ಧಡ್ಡ ಅಂತ ಅವರ ಅಭಿಪ್ರಾಯ. ಸ್ವಂತ ಅಭಿಪ್ರಾಯ ಇಟ್ಟುಕೊಳ್ಳೋದಕ್ಕೆ ಎಲ್ಲಾರಿಗೂ ಹಕ್ಕಿದೆ. ನನಗೂ ಇದೆ. ಆದರೆ ನಾನ್ಯಾರ ಮ್ಯಾಲೂ ನನ್ನ ಅಭಿಪ್ರಾಯ ಹೇರೋದಿಲ್ಲ ಅಷ್ಟೆ.

**ನಗಬೇಕೋ ಅಣ್ಣಾ ನಗಬೇಕೋ ನೀನು**
**ಹೂವಿನ ಹಾಗೇನೇ ನಗಬೇಕೋ.**
**ಮುಳ್ಳು ಹಾಸಿಗೆ ಮ್ಯಾಲೆ ಮಲಗಿದ್ದರೂ ಚೆಂಗು**
**ಲಾಬಿ ಹೂವಿನ ನಗೆಯ ನಗಬೇಕೊ.**

## ನಗಬೇಕೋ ತಮ್ಮಾ ನಗಬೇಕೊ

**(ಭಾಗವತರಿಗೆ ಅಣಕಿಸಿ ಹಾಡುತ್ತ ಕುಣಿಯುತ್ತ ಪಿಶಾಚಿಯ ಪ್ರವೇಶ)**

ಪಿಶಾಚಿ ೧ : **ನಗಬೇಕೋ ತಮ್ಮಾ ನಗಬೇಕೋ॥**
**ಬೆರಳು ಕಣ್ಣಿಗೆ ಚುಚ್ಚಿ ಕಣ್ಣಿನ ಕನಸಿಗೆ,**
**ಗಾಯವಾದುದ ನೋಡಿ ನಗಬೇಕೋ।**
**ನಕ್ಕರೆ ಕಟ್ಟಿಸಿದ ಚಿನ್ನದ ಹಲ್ಲುಗಳು**
**ಸಟ್ಟನೆ–ಸಿಡಿದು ಬಿದ್ದಿರಬೇಕೋ॥**

ನಮಸ್ಕಾರ. ನನ್ನ ಪರಿಚಯ ಮಾಡಿಕೊಡ್ಲೋದಕ್ಕೆ ಭಾಗವತರು ಹೆದರುತ್ತಾರಾದ್ದರಿಂದ ನನ್ನ ಬಗ್ಗೆ ನಾನೇ ಹೇಳಿಕೊಳ್ಳುತ್ತೇನೆ. ನಾನು ಪಿಶಾಚಿ. ಸೈತಾನನ ಪರಿವಾರದಲ್ಲಿದ್ದವನು. ಸೈತಾನನ ಬಲಭುಜವೋ ಎಡಭುಜವೊ ಅಂತ ಹೇಳಿಕೊಳ್ಳಲಾರೆ. ಆದರೆ ಖಂಡಿತ ಸೈತಾನನ ಕೈ ಬೆರಳಿಗೋ ಕಾಲ್ಬೆರಳಿಗೋ ಸಮನಾಗಬಲ್ಲ ಶಕ್ತಿ ಇದ್ದವನು. ಹೇಳಿಕೊಳ್ಳುವಷ್ಟು ದುಷ್ಟತನ ನನ್ನಲ್ಲಿಲ್ಲ. ಅದಕ್ಕೇ ಸೈತಾನದೊರೆ ಮೊದಲೇಟಿಗೆ ನನ್ನ ನಂಬೋದೇ ಇಲ್ಲ. ಬೇರೆ ಪಿಶಾಚಿಗಳು ನಿಮ್ಮ ಆನಂದದಲ್ಲಿ ವಿಷ ಬೆರಸಿ ಹುಲಿ ಸಿಂಹ, ದುರ್ದೈವ, ಸೋಲುಗಳಾಗಿ ನಿಮ್ಮನ್ನು ಕಾಡುತ್ತಾರೆ. ನಾನಂಥಾ ಶಕ್ತಿವಂತನಲ್ಲವಾದ್ದರಿಂದ ನೊಣವೋ, ಸೊಳ್ಳೆಯೋ ಆಗಿ, ನಿಮ್ಮ ನೆಮ್ಮದಿಯನ್ನು ಕೆಡಿಸಿ, ಕೊನೇಪಕ್ಷ ನಿಮಗೊಂದು ಅಂಟು ರೋಗ ಅಂಟಿಸಿ ಜನ್ಮ ಸಾರ್ಥಕ ಮಾಡಿಕೊಳ್ಳೋ ಪೈಕಿ ನಾನು.

ನೀವೆಲ್ಲ ದೊಡ್ಡ ಮನುಷ್ಯರೆ, ನಿಮಗೆ ದೌರ್ಬಲ್ಯಗಳಿವೆ, ಅವುಗಳ ಒಳಗಿನಿಂದ ನಾವು ಪಿಶಾಚಿಗಳು ನಿಮ್ಮನ್ನು ಪ್ರವೇಶಿಸುತ್ತೇವೆ. ಒಮ್ಮೆ ಒಳಕ್ಕಿಳಿದರಾಯ್ತು. ನಿಧಾನವಾಗಿ ದಿನಾ ಇಷ್ಟಿಷ್ಟೆ ಹಬ್ಬುತ್ತೇವೆ. ಮುಂದೊಂದು ದಿನ ಕಿಡಿ ತಾಗಿದರೆ ಮದ್ದಿನ ಭಂಡಾರವಾಗಿ ಸಿಡಿಯುತ್ತೇವೆ.

ಸೈತಾನದೊರೆ ಆಗಲೇ ನೀವು ನೋಡಿದಿರಲ್ಲ ಬೋಳೇಶಂಕರ ಮತ್ತವನ ಅಣ್ಣಂದಿರಲ್ಲಿ ವಿರಸ ಹುಟ್ಟಿಸಿ ಮೂವರನ್ನೂ ನರಕಕ್ಕೆ ಕರೆದು ತನ್ನಿ ಅಂತ ನಾವು ಮೂವರನ್ನು ಭೂಲೋಕಕ್ಕೆ ಕಳಿಸಿದ್ದಾರೆ. ಬೋಳೇಶಂಕರ ನ ಅಣ್ಣಂದಿರೇ ವಾಸಿ. ಕೊಳೆತ ಬಲೆಹಾಕಿ ಎಳೆದರೂ ಬರುವಂಥವರು. ನನ್ನ ಅಣ್ಣಂದಿರು ತಲೆ ತುರಿಸಿಕೊಳ್ಳುವ ಮೊದಲೇ ಇವರು ವಶವಾಗಿದ್ದರು. ನನ್ನ ಅಣ್ಣಂದಿರು ಅವರ ಹಿಂದೆ ನಿಲ್ಲುವುದಷ್ಟೆ

ತಡ, ನೀವೇ ನೋಡಿದಿರಲ್ಲ ಬೆಟ್ಟದ ತುದಿಯಿಂದ ನೆಗೆದು ಬೀಳೋದಕ್ಕೆ ಹ್ಯಾಗೆ ಚಡಪಡಿಸುತ್ತಿದ್ದರು ಅಂತ. ನನ್ನ ಗಿರಾಕಿ ಇದ್ದಾನಲ್ಲ ಬೆಪ್ತಕ್ಕಡಿ ಬೋಳೇಶಂಕರ, ಮಹಾ ಪಾಕಡಾ. ಆಸ್ತಿ ಭಾಗ ಮಾಡಿಕೊಡೋವಾಗ ಅಣ್ಣತಮ್ಮಂದಿರು ಜಗಳಾಡಿ ಕಣ್ಣು ಕಿವಿ ಕಿತ್ತಾಡುತ್ತಾರೆ ಅಂತ ಅಂದುಕೊಂಡಿದ್ದೆವು. ಈ ಬೆಪ್ತಕ್ಕಡಿ ಅವರು ಕೇಳಿದ್ದನ್ನೆಲ್ಲಾ ಕೊಟ್ಟು ಬಿಟ್ಟನೇ! ಇವನ ಪಂಚೇಂದ್ರಿಯಗಳೋ ಎಲ್ಲರಿಗಿಂತ ಚುರುಕು. ಇವನ ಅಣ್ಣಂದಿರ ಹಿಂದೆ ನನ್ನ ಅಣ್ಣಂದಿರು ಗಾಳಿಯಾಗಿ ನಿಂತಿದ್ದರೆ ಪತ್ತೆ ಮಾಡಿ ಹೇಳಿಯೇ ಬಿಟ್ಟನೇ! ಪಿಶಾಚಿಯಾಗಿ ಇಷ್ಟು ವರ್ಷ ಸರ್ವೀಸಾಯ್ತು, ನನ್ನ ಅನುಭವಕ್ಕೆ ಮಸಿ ಬಳಿಯುವಂಥ ಇಂಥ ಪಾಕಡಾನ್ನ ನಾನಿನ್ನೂ ನೋಡಿರಲಿಲ್ಲವೇ! ಮಾತಿಗೊಮ್ಮೆ ನಾವು ಕೇಳಬಾರದ ಹೆಸರು ಹೇಳೋದೇನು . . . . . ತಂತಾನೇ ಮಾತಾಡಿಕೊಳ್ಳೋದೇನು. . . . . ಅಬ್ಬ . . . . . ಇದೀಗ ಅವನು ಮರದ ನೆರಳಲ್ಲಿಟ್ಟ ರೊಟ್ಟಿ ಕದೀತೀನಿ. ಹಸಿದು ಬಂದು ರೊಟ್ಟಿ ಯಾರು ಕದ್ದರು ಅಂತ ವಾಚಾಮಗೋಚರ ಬೈದಾಡತಾನೆ. ಅಷ್ಟಾದರೆ ಅವನ ಮನಸ್ಸನ್ನ ಅದೇ ಮಾರ್ಗವಾಗಿ ಪ್ರವೇಶಿಸಬಹುದು. (ರೊಟ್ಟಿಕದ್ದು ಅದೃಶ್ಯವಾಗಿ ನಿಲ್ಲುವನು. ಬೋಳೇಶಂಕರ ಹಸಿದು ಉಳೋದನ್ನ ನಿಲ್ಲಿಸಿ ರೊಟ್ಟಿ ಹುಡುಕುವನು.)

ಬೋಳೇಶಂಕರ : ರೊಟ್ಟಿ ಇತ್ತಲ್ಲ! ಹಸಿದವರ್‍ಯಾರೋ ತಗಂಡು ತಿಂದಿರಬೇಕು. ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ನಾನೇನು ಸಾಯುವುದಿಲ್ಲ. ಉಳಿದ ಕೆಲಸ ಬೇಗನೆ ಮುಗಿಸಿ ಹೋಗಿ ಉಂಡರಾಯ್ತು. (ಕೆಲಸಕ್ಕೆ ಹೋಗುತ್ತಾನೆ)

ಪಿಶಾಚಿ ೧ : (ಕಾಣಿಸಿಕೊಂಡು) ಎಲಾ ಅಯೋಗ್ಯ! ಹಸಿದರೂ ಇವನಿಗೆ ಕೋಪ ಬರಲಿಲ್ಲವೆ? ಆಗಲಿ ಬಾಯಾರಿಕೆಗೆ ಈ ವಿಶೇಷ ಪಾನಕ ಕೊಡ್ತೀನಿ. ಕುಡಿದು ಪ್ರಾಣಿಗಳ ಹಾಗೆ ಒದರಾಡುತ್ತ ಉರುಳಾಡೋದನ್ನ ನೋಡಿ ಸಂತೋಷ ಪಡ್ತೀನಿ. (ಬೋಳೇಶಂಕರನ ಮುಂದೆ ಪಾನಕ ಇಡುವುದು. ಬೋಳೇಶಂಕರ ಬಂದು)

ಬೋಳೇಶಂಕರ : ತುಸು ನೀರಾದರೂ ಕುಡಿಯೋಣ. (ಶಿವ ಎನ್ನುತ್ತ ಪಿಶಾಚಿ ಇಟ್ಟ ಪಾನಕ ಕುಡಿಯುವನು. ಹೊಟ್ಟೆ ನೋವಾಗಿ ಹಿಡಿದುಕೊಳ್ಳುವನು. ಇದನ್ನು ಕಂಡು ಪಿಶಾಚಿಗೆ ಸಂತೋಷವಾಗುತ್ತದೆ. ಬೋಳೇಶಂಕರ ತನಗೇನೂ ಆಗಿಲ್ಲವೆಂಬಂತೆ ಪುನಃ ಕೆಲಸಕ್ಕೆ ಹೋಗುವನು)

ಪಿಶಾಚಿ ೧ : ಎಲಾ ಇವನ! ತನ್ನ ಪಾಡಿಗೆ ತಾನು ಪುನಃ ಕೆಲಸಕ್ಕೆ ತೊಡಗಿದನೆ! ಒಂದು ತೊಟ್ಟು ಪಾನಕ ಅಂದರೇ ಒಂದು ನರಕ ಇದ್ದ ಹಾಗೆ. ಅಂಥಾದ್ದರಲ್ಲಿ ಪಾತ್ರೆ ತುಂಬ ಪಾನಕ ಕುಡಿದು ಸುಮ್ಮನೆ ಕೆಲಸ ಮಾಡುತ್ತಿದ್ದಾನೆ! (ಮನುಷ್ಯರಂತೆ ವೇಷ ಬದಲಿಸಿ ಬೋಳೇಶಂಕರನ ಮುಂದೆ ಹೋಗಿ ನಿಲ್ಲುತ್ತದೆ)

ಪಿಶಾಚಿ ೧ : ನಮಸ್ಕಾರಣ್ಣಾ,

ಬೋಳೇಶಂಕರ : ಶರಣು ಶರಣಾರ್ಥಿ.

ಪಿಶಾಚಿ ೧ : ಏನಣ್ಣಾ ಬೋಳೇಶಂಕರಾ, ದುಡಿದೂ ದುಡಿದೂ ದಣಿದಿದ್ದೀಯಾ, ಒಂದಾಟ ಎರಡು ಎರಡು ಸೇರಿ ಐದಾಗೋ ಆಟ ಆಡೋಣವ?

ಬೋಳೇಶಂಕರ : ಎರಡು ಎರಡು ಸೇರಿ ನಾಲಕ್ಕಾಗಬೇಕು, ಐದಾಗೋದು ಅಂದರೆ.. ನೀನೇನು ಕೆಲಸ ಮಾಡ್ತೀಯ?

ಪಿಶಾಚಿ ೧ : ಕೆಲಸ ಯಾಕೆ ಮಾಡಬೇಕು? ಎರಡು ಎರಡು ಸೇರಿ ಐದೋ ಆರೋ ಆಗೋದಾದರೆ ಕ್ಷಣದಲ್ಲಿ ಎಂಟೋ ಹತ್ತೋ ಗಿಟ್ಟತ್ತೆ ಸಾಲದಾ?

ಬೋಳೇಶಂಕರ : ಹಾಗಾದರೆ ನೀನು ಸಿಟಿಗಳಲ್ಲಿ ರಸ್ತೆ ಪಕ್ಕ ಕೂತು ಇಸ್ಪೀಟೆಲೆ ಹಾಕ್ತಾರಲ್ಲ ಆ ಪೈಕೀನ?

ಪಿಶಾಚಿ ೧ : ಯಾಕಣ್ಣಾ ಹಿಂಗಂತೀಯಾ?

ಬೋಳೇಶಂಕರ : ಯಾಕೆಂದರೆ ನಿನ್ನ ಕೂಡೋ ಆಟ ಅಂಥದ್ದು ಅದಕ್ಕೆ.

ಪಿಶಾಚಿ ೧ : ಬೇಡ ಬಿಡು; ಕಳೆಯೋ ಆಟ ಆಡೋಣವ? ನೋಡಣ್ಣಾ ನಿನ್ನ ಹತ್ತಿರ ಹತ್ತು ರೂಪಾಯಿದೆ. ಐದನ್ನು ನನಕ್ಕೊಟ್ಟರೆ ಎಷ್ಟುಳೀತು ಹೇಳು ನೋಡೋಣ?

ಬೋಳೇಶಂಕರ : ಹತ್ತು. ಹ್ಯಾಗಂದರೆ ನಾನು ನಿನಗೆ ಐದು ರೂಪಾಯಿ ಕೊಡೋದಿಲ್ಲ.

ಪಿಶಾಚಿ ೧ : ಕೊಡದಿದ್ದರೆ ನಾನು ಬಂದು ಕದೀತೀನಿ.

ಬೋಳೇಶಂಕರ : ಕದ್ದರೆ ಕೈ ಮುರೀತೀನಿ.

ಪಿಶಾಚಿ ೧ : ಏನಂದೆ?

ಬೋಳೇಶಂಕರ : ಇಲ್ಲಿಂದ ತೊಲಗದಿದ್ದರೆ ಕಾಲು ಮುರೀತೀನಿ. ನಾನೇನಾದರೂ ರಾಜನಾದರೆ ನಿಮ್ಮಂಥ ಸೋಂಬೇರಿಗಳಿಗೆ ಊಟ ಹಾಕೋದೇ ಇಲ್ಲ. ನಿಮ್ಮಂಥ ನರಭಕ್ಷಕರು ಇರೋ ದೇಶವನ್ನು ಆ ಶಿವನೇ ಕಾಪಾಡಬೇಕು. (ಪಿಶಾಚಿ ಅಯ್ಯಯ್ಯೋ ಎಂದು ಕಿವಿಮುಚ್ಚಿಕೊಂಡು ಓಡುತ್ತದೆ)

## ಜಯವು ನರಕದ ಮಾಲಿಕ

(ಕುಡಿದ ಪಿಶಾಚಿಗಳು ಹಾಡುತ್ತ ಬರುತ್ತವೆ. ಒಂದನೆಯದು ಚಿಂತೆ ಮಾಡುತ್ತ ಕೂತಿದೆ)

ಪಿಶಾಚಿಗಳು : **ಜಯವು ನರಕದ ಮಾಲಿಕ**
**ನಿನ್ನ ಖುಶಿಗೀ ಪಾನಕ**
**ಎಲುಬಿನೊಳಗಡೆ ಇಳಿದು ಆತ್ಮದ**
**ಖಾಲಿ ತುಂಬುವ ಪಾನಕ**
**ಅಡಿಗಡಿಗೆ ನಡೆಗೆಡಿಸಿ ಪಾತಾಳಕ್ಕೆ ತಳ್ಳುವ ಪಾನಕ॥**

ಪಿಶಾಚಿ ೩ : ಅದ್ಯಾಕೆ ನಾನು ಕುಡಿದಾಗೆಲ್ಲ ಈ ಲೋಕ ತೂರಾಡ್ತದೆ?

ಪಿಶಾಚಿ ೨ : ಸೆಗಣಿ ಮೇಲೆ ಕಾಲಿಟ್ಟರೂ ಜಾರೋದಿಲ್ಲ ನಾನು, ಗೊತ್ತ?

ಪಿಶಾಚಿ ೩ : ನೀನು ಕುಡಿದದ್ದು ನೀರು; ಹೆಂಡ ಅಂತ ತಿಳಿದುಕೊಂಡಿದ್ದೀಯಾ ಅಷ್ಟೆ.

ಪಿಶಾಚಿ ೨ : ನೀರಿನ ವೈರಿ ಕಣ್ಲಾ ನಾನು. ನೀರು ಬೆರಸೋದೇ ಇಲ್ಲ. ನೇರ ಹಾಗ್ಹಾಗೇ ಮೈ ಚರ್ಮ ತುಂಬೋತನಕ ಕುಡೀತೀನಿ. ನೀರು ಕುಡಿಯೋನು ಅಂತ ನನಗಂತೀಯಾ ಬೇಕೂಫಾ? ನಿನ್ನಮ್ಮ ನೀರು ಕುಡಿಯೋಳು, ನಿನ್ನಪ್ಪ ನೀರು ಕುಡಿಯೋನು.

ಪಿಶಾಚಿ ೩ : ಥೂ ಮನುಷ್ಯರ ಥರ ಮಾತಾಡಿ ಪಿಶಾಚಿಗಳಿಗೆ ಅವಮಾನ ಮಾಡ್ತೀಯಲ್ಲೋ?

ಪಿಶಾಚಿ ೨ : ನನಗೇ ಮನುಷ್ಯ ಅಂತೀಯೇನೋ ಖದೀಮಾ? ನೀ ಮನುಷ್ಯ, ನಿನ್ನಪ್ಪ ಮನುಷ್ಯ.

ಪಿಶಾಚಿ ೩ : ಸಕಾಲದಲ್ಲಿ ಬಾಯಿ ಮುಚ್ಚದಿದ್ದರೆ ಅನ್ನಬಾರದ್ದನ್ನು ಅಂದುಬಿಡ್ತೇನೆ.

ಪಿಶಾಚಿ ೨ : ಹೆದರಿಕೆ ಹಾಕ್ತೀಯೇನೋ ಬಡವಾ? ನಿನ್ನ ತಾತ ಮನುಷ್ಯ ನಿನ್ನಜ್ಜ ಮನುಷ್ಯ.

ಪಿಶಾಚಿ ೩ : ನನ್ನ ತಾಳ್ಮೆ ಪರೀಕ್ಷೆ ಮಾಡ್ತಾ ಇದ್ದೀಯ.

ಪಿಶಾಚಿ ೨ : ನಿನ್ನಜ್ಜಿ ಮುತ್ತಜ್ಜಿ–ಅವರೆಲ್ಲಾ ಮನುಷ್ಯರು ಕಣೊ.

ಪಿಶಾಚಿ ೩ : ನಿನ್ನಮ್ಮ ದೇವತೆ ಕಣೊ.

ಪಿಶಾಚಿ ೨ : (ಆಘಾತಹೊಂದಿ) ಏನಂದೆ ನನ್ನಮ್ಮ ದೇವತೆ ಅಂದೆಯಾ! ಅಯ್ಯೊ ಅಯ್ಯೊ ಸೈತಾನ ತಂದೇ, ನೀನೇ ಕಾಪಾಡೋ ಎಪ್ಪಾ. . . . (ಅಳುವನು) ಅಯ್ಯೋ ದೇವತೆ ಅಂದೆಯಲ್ಲೋ ನನ್ನಮ್ಮನ್ನ. ಹ್ಯಾಗೋ

ಅವಳ ಮುಖ ನೋಡಲಿ? ಅವಳಿಗೆ ಈ ವಿಷಯ ಗೊತ್ತಾದರೆ. . . . ಅಯ್ಯೋ. . . ಯಜಮಾನರಿಗೆ ಹೇಳಿ ನರಕದಿಂದ ನಿನ್ನನ್ನ ಹೊರಗೆ ಹಾಕಿಸದಿದ್ದರೆ ನಾನು ಪಿಶಾಚೀನೇ ಅಲ್ಲ.

ಪಿಶಾಚಿ ೩ : ನಮ್ಮಿಬ್ಬರ ಜಗಳದಲ್ಲಿ ಯಾಕಣ್ಣಾ ಯಜಮಾನರ ಹೆಸರು ತರಬೇಕು?

ಪಿಶಾಚಿ ೨ : ಮತ್ತೆ ನೀ ನನ್ನಮ್ಮನಿಗೆ ದೇವತೆ ಅಂದದ್ದು?

ಪಿಶಾಚಿ ೩ : ಅಲ್ಲವೋ, ನಾವು ಪಿಶಾಚಿಗಳು. ಸುಳ್ಳು ಹೇಳೋದೇ ನಮ್ಮಲ್ಲಿ ಸಭ್ಯತೆ ಅಲ್ಲವೆ?

ಪಿಶಾಚಿ ೨ : ಅಂದರೆ?

ಪಿಶಾಚಿ ೩ : ಅಂದರೆ ನಾ ನಿನ್ನಮ್ಮನ್ನ ದೇವತೆ ಅಂದದ್ದು ಸುಳ್ಳು ಸುಳ್ಳೇ ಕಣ್ಣಾ।

ಪಿಶಾಚಿ ೨ : ಹಂಗೇಳು ಮತ್ತೆ.

ಪಿಶಾಚಿ ೩ : ನೀ ನನಗೆ ಮನುಷ್ಯ ಅಂದದ್ದು ಸುಳ್ಳು ತಾನೆ?

ಪಿಶಾಚಿ ೨ : ಓಹೋ.

ಪಿಶಾಚಿ ೩ : ಬಾ ಹೋಗೋಣ. ಬೋಳೇಶಂಕರನ ಹತ್ತಿರ ಹೋದನಲ್ಲ ತಮ್ಮ, ಅವನಿಗೇನಾಯ್ತು ನೋಡೋಣ.

ಇಬ್ಬರೂ : **ಜಯವು ನರಕದ ಮಾಲಿಕ**
**ನಿನ್ನ ಖುಶಿಗೀ ಪಾನಕ**
**ಒಂದು ಗುಟುಕು ಪೂರಕ**
**ಎರಡು ಗುಟುಕಿಗೆ ಮಾರಕ**
**ಮೂರು ಗುಟುಕಿಗೆ ತಾರಕ**
**ನಾಲ್ಕು ಗುಟುಕಿಗೆ ನಾರಕ॥**

ಪಿಶಾಚಿ ೩ : ಅರೆ, ನಮ್ಮ ತಮ್ಮ ಇಲ್ಲೇ ಕುಂತವ್ನೆ.

ಪಿಶಾಚಿ ೨ : ಯೋ ದ್ರಾಬೆ, ಏನೋ ಮಾಡ್ತ ಇದ್ದೀಯ?

ಪಿಶಾಚಿ ೧ : ನನ್ನ ದುರ್ದೈವದ ಮೇಲೆ ಒಂದಿಷ್ಟು ಉಗೀತಾ ಇದ್ದೀನಿ.

ಪಿಶಾಚಿ ೨ : ನಿನಗೆ ನೀನೇ ಮರ್ಯಾದೆ ಮಾಡಿಕೊಳ್ತೀಯಲ್ಲಪ್ಪ, ನಮಗೂ ಅವಕಾಶ ಕೊಡು ಥೂ!. (೧ನೇ ಪಿಶಾಚಿಯ ಮೇಲೆ ಉಗಿಯುವನು)

ಪಿಶಾಚಿ ೩ : ನಗಾಡಿ ಹಾಡೋ ಕಾಲದಲ್ಲಿ ಏಟು ತಿಂದ ನಾಯೀ ಹಾಗೆ ಕೂತಿದ್ದೀಯಲ್ಲ, ಏನು ಕಥೆ?

ಪಿಶಾಚಿ ೧ : ನಿಮಗೆ ಸಂತೋಷವಾಗಿರೋದಕ್ಕೆ ಕಾರಣಗಳಿರಬೇಕು, ನನಗಿಲ್ಲ.

ಹೋಗಲಿ ನಿಮ್ಮ ಕೆಲಸವೇನಾಯ್ತು ಹೇಳಿ.

ಪಿಶಾಚಿ ೩ : ಆಗೋದೇನು, ಇಬ್ಬರೂ ಅಣ್ಣಂದಿರು ನೀನು ಯಾರನ್ನು ತೋರಿಸಿದರೆ ಅವರ ಕರುಳು ಕಿತ್ತು ತಿನ್ನುತ್ತಾರೆ. ಅವರಿಬ್ಬರೂ ತಂತಮ್ಮ ಹೆಂಡದಿರನ್ನು ಕೊಂದು ಕುಣಿದಾಡೋ ದೃಶ್ಯ ನೋಡಬೇಕೋ? ಬೇಕಿದ್ದರೆ ಹೇಳು.

ಪಿಶಾಚಿ ೨ : ನಿನಗೆ ಮನರಂಜನೆ ಬೇಕಿದ್ದರೆ ಹೇಳು. ಆ ಮೀಸೆ ಮತ್ತು ಹೊಟ್ಟೆಯವನನ್ನ ಹಿಡಿದುಕೊಂಡು ಬರೋದು ಎರಡು ನಿಮಿಷದ ಕೆಲಸ.

ಪಿಶಾಚಿ ೧ : ಇದನ್ನೆಲ್ಲ ಹ್ಯಾಗೆ ಸಾಧಿಸಿದಿರಿ?

ಪಿಶಾಚಿ ೩ : ಸರದಾರ ಸೋಮಣ್ಣ ಇದ್ದಾನಲ್ಲಾ–ಮೊದಲು ಅವನ ಮೀಸೆ ಹುಲುಸಾಗಿ ಬೆಳೆಯೋ ಹಾಗೆ ಮಾಡಿದೆ. ಬೆಳೀತೋ ಇಲ್ಲವೋ; ಶೂರಧೀರ ಅಂತ ಜಂಬ ಕೊಚ್ಚಿಕೊಳ್ಳೊ ಹಾಗೆ ಮಾಡಿ ಮೀಸೆ ತೀಡಿಕೊಳ್ಳೋ ಹಾಗೆ ಮಾಡಿದೆ. ಆ ಮೇಲೆ ಒಬ್ಬ ರಾಜನ ಹತ್ತಿರ ಕಳಿಸಿದೆ. ರಾಜ ಇವನನ್ನು ಸೇನಾಪತಿ ಮಾಡಿದ. ಆದರೂ ಇವನ ಮೀಸೆ ಬೆಳೀತಾನೇ ಇತ್ತು. ಮೀಸೆ ಎಷ್ಟಪ್ಪ ಬೆಳೀತು ಅಂದರೆ ಅವನಿಗೆ ದೇಶವೇ ಕಾಣದಾಯ್ತು. ಯಾರ್‍ಯಾರನ್ನೋ ತುಳಿದ. ಯಾರ್‍ಯಾರನ್ನೋ ಎಡವಿದ. ಕೊನೆಗೆ ಇಂಡಿಯಾ ದೇಶದ ರಾಜನ ಮೇಲೆ ದಂಡೆತ್ತಿ ಹೋಗೋ ಹಾಗೆ ಮಾಡಿದೆ. ಇಂಡಿಯಾ ದೇಶದ ರಾಜನಿಗಾದರೆ ಕಣ್ಣು ಸರಿಯಾಗಿ ಕಾಣಿಸುತ್ತಿತ್ತು. ಜೊತೆಗೆ ಹುಲ್ಲಿನಿಂದ ಒಂದು ಲಕ್ಷ್ಯ ಸೈನ್ಯ ತಯಾರಿಸಿಕೊಟ್ಟಿದ್ದೆ. ಕೊನೆಗೆ ನಮ್ಮ ಮೀಸೆ ಸೋತು ಸೆರೆ ಸಿಕ್ಕ. ಇಂಡಿಯಾದ ರಾಜ ಅವನ ಮೀಸೆಗೆ ಮಣ್ಣು ಹಚ್ಚಿ ತಾನೇ ಖುದ್ದಾಗಿ ಆ ಮೀಸೆ ಬೋಳಿಸಿ ಇವನನ್ನು ಜೈಲಲ್ಲಿಟ್ಟಿದ್ದಾನೆ. ಈಗ ನಾನು ಮಾಡಬೇಕಾದ್ದು ಒಂದೇ ಸಣ್ಣ ಕೆಲಸ, ಅವನನ್ನು ಮುಗಿಸೋದು.

ಪಿಶಾಚಿ ೧ : ನೀನೇನು ಮಾಡಿದೆಯಣ್ಣ?

ಪಿಶಾಚಿ ೨ : ನನ್ನ ಬಗ್ಗೆ ನೀವ್ಯಾರೂ ಯೋಚನೆ ಮಾಡೋದೇ ಬೇಡ. ಸಾವ್ಕಾರ ಡಬ್ಬೂನನ್ನ ಸರಿಯಾಗಿ ಹಿಡಿದು ಬಿಟ್ಟಿದ್ದೀನಿ. ಈಗವನ ಹೊಟ್ಟೆ ಎಷ್ಟು ದೊಡ್ಡದಾಗಿದೆಯೆಂದರೆ ಅವನು ತನ್ನ ಮೊಳಕಾಲು ನೋಡಿದರೆ ಗುರುತು ಹಿಡಿಯೋದೇ ಇಲ್ಲ. ಹ್ಯಾಗಪ್ಪ ಇದನ್ನೆಲ್ಲ ಮಾಡಿದೆ ಅಂದರೆ ಮೊದಲು ಅವನಿಗೆ ಐದೆಲೆ ಆಟ ಕಲಿಸಿ ಎರಡು ಎರಡು ಸೇರಿ ಐದಾಗೋದನ್ನು ತೋರಿಸಿದೆ. ಆಸೆ ಜಾಸ್ತಿ ಆಯ್ತು, ಮೋಸ ಮಾಡಿದ,

ಕಳ್ಳತನ ಮಾಡಿದ, ಇತ್ತೀಚೆಗಂತೂ ಖೋಟಾ ನೋಟಿನ ವ್ಯವಹಾರವೆಲ್ಲ ಅವನದೇ, ಖೋಟಾ ನೋಟಿನವನ ಹೆಂಡತಿ ಯಾವತ್ತು ವಿಧವೆ ಅಂತಾರಲ್ಲ ಹಾಗೆ. ನೀನು ಯಾವಾಗ ಆಗಲಿ ಅಂದರೆ ಆವಾಗ ಅವನನ್ನು ಸೆರೆ ಹಿಡಿಸಿ ಕೊಲ್ಲ್ಲೋದಕ್ಕೆ ನಾನು ರೆಡಿ, ಆಯ್ತಲ್ಲಯ್ಯಾ, ನಿನ್ನ ಕಥೆ ಏನು?

ಪಿಶಾಚಿ ೧ : ಕಷ್ಟಕ್ಕಿಟ್ಟುಕೊಂಡಿದೆ.

ಪಿಶಾಚಿ ೨ : ಅಂಥಾದ್ದೇನಯ್ಯಾ?

ಪಿಶಾಚಿ ೧ : ಅವನ ಸಹವಾಸ ಭಾರೀ ಕಷ್ಟ ಕಣ್ರಯ್ಯಾ, ಯಾವ ಪಟ್ಟು ಹಾಕಿದರೂ ನುಣುಚಿಕೊಳ್ತಾನೆ. ನಾನು ಚಾಪೆ ಕೆಳಗೆ ನುಗ್ಗಿದರೆ ಅವನು ರಂಗೋಲಿ ಕೆಳಗೆ ನುಸುಳ್ತಾನೆ. ಅಪ್ಪ ಅಂದರೆ ನಿಮ್ಮಪ್ಪ ಅಂತಾನೆ.

ಪಿಶಾಚಿ ೩ : ಯಾರು ಬೆಪ್ತಕ್ಕಡೀನಾ?

ಪಿಶಾಚಿ ೧ : ಅವನೇ ಕಣಯ್ಯಾ! ಬದುಕಿನ ಬಗ್ಗೆ ಅವನಿಗೆ ಒಂದೂ ತಕರಾರಿಲ್ಲ ಗೊತ್ತ?

ಪಿಶಾಚಿ ೨ : ಹೋಗಲಿ, ನೀನು ಏನೇನು ಪ್ರಯತ್ನ ಮಾಡಿದೆ ಹೇಳು?

ಪಿಶಾಚಿ ೧ : ಪಿಶಾಚಿ ಥರ ಬೈದಾಡಲಿ ಅಂತ ರೊಟ್ಟಿ ಕದ್ದೆ, ಸಿಟ್ಟಿಗೇಳಲಿಲ್ಲ. ತಂತ್ರಿಯಾಗಲಿ ಅಂತ, ಹಸಿದು ಕ್ರೂರಿಯಾಗಲಿ ಅಂತ, ಕೊಚ್ಚೆಯಲ್ಲಿ ಬಿದ್ದು ಉರುಳಾಡಲಿ ಅಂತ ಪಾನಕ ಮಾಡಿಕೊಟ್ಟೆ. ಹೊಟ್ಟೆ ನೋವು ಅಂತ ಒಂದು ಸಾರಿ ಹೊಟ್ಟೆ ಹಿಡಿದುಕೊಂಡದ್ದೆಷ್ಟೋ ಅಷ್ಟೆ. ಯಾವುದಕ್ಕೂ ಜಪ್ಪಯ್ಯಾ ಅನ್ನೋಲ್ವೆ! ನಾವು ಉದ್ದೇಶಪೂರ್ವಕ ಮರೆತವನ ಹೆಸರನ್ನು ಕ್ಷಣಕ್ಕೊಮ್ಮೆ ಸ್ಮರಿಸುತ್ತಿದ್ದರೆ ಅವನ ಹತ್ತಿರ ಹೋಗೋದು ಹ್ಯಾಗೆ?

ಪಿಶಾಚಿ ೨ : ಎಲಾ ಅಯೋಗ್ಯ? ಬೆಪ್ತಕ್ಕಡಿ ಇಂಥಾ ದೇವತೆ ಅಂತ ಗೊತ್ತಿರಲಿಲ್ಲವೆ?

ಪಿಶಾಚಿ ೩ : ಯಜಮಾನರಿಗಿದು ಗೊತ್ತಾದರೆ ನಿನ್ನನ್ನ ಫಂಡರಾಪುರವೋ, ಸಾವಳಿಗಿ ಮಠವೋ ಇಂಥ ಯಾವುದಾದರು ಪುಣ್ಯಕ್ಷೇತ್ರದಲ್ಲಿ ಎಸೆಯೋದು ಗ್ಯಾರಂಟಿ.

ಪಿಶಾಚಿ ೨ : ಕೈಲಾಸದಲ್ಲಿ ಎಸೆದರೂ ಅಶ್ಚರ್ಯ ಇಲ್ಲವೆ!

ಪಿಶಾಚಿ ೧ : ಏನಾದರೂ ಬದುಕೋ ಉಪಾಯ ಹೇಳ್ರಯ್ಯಾ ಅಂದರೆ......

ಪಿಶಾಚಿ ೩ : ಹೀಗೆ ಮಾಡಿದರೆ ನಿನಗೆ ಸಹಾಯವಾಗುತ್ತ ನೋಡು; ಹ್ಯಾಗೂ ಸರದಾರ ಸೋಮಣ್ಣ ಸಾವ್ಕಾರ ಕಾಮಣ್ಣ ನಮ್ಮ ಕೈಯಲ್ಲಿದ್ದಾರೆ. ಹೇಳಿದ ಹಾಗೆ ಕೇಳ್ತಾರೆ. ಅವರನ್ನು ಅಲ್ಲಲ್ಲೆ ಕೊಲ್ಲೋದರ ಬದಲು ಬೆಪ್ತಕ್ಕಡಿ ಹತ್ತಿರ ಕಳಿಸಿದರೆ ಹ್ಯಾಗೆ?

ಪಿಶಾಚಿ ೨ : ಹ್ಯಾಗೇನು ಸರಿಯಾಗೇ ಇರುತ್ತೆ. ಇಬ್ಬರಿಗೂ ಅವನ ನೆಮ್ಮದಿ ನೋಡಿ ಹೊಟ್ಟೆ ಉರಿಯುತ್ತೆ. ಹೊಟ್ಟೆ ಉರಿದರೆ ಜಗಳಾಡ್ತಾರೆ. ಜಗಳಾಡಿದರೆ ಬೆಪ್ತಕ್ಕಡೀನೂ ರೇಗಿ ಶಾಪ ಹಾಕ್ತಾನೆ. ಅಲ್ಲಿಗೆ ನಮ್ಮ ಸೀಮೆಯಲ್ಲಿ ಅವನೊಂದು ಹೆಜ್ಜೆ ಹಾಕಿದ ಹಾಗೆ.

ಪಿಶಾಚಿ ೩ : ನಾವಿಬ್ಬರೂ ನಿನ್ನ ಸಹಾಯಕ್ಕೆ ಅಲ್ಲೇ ನಿಂತಿರುತ್ತೇವೆ. ನಾವು ಮೂವರೂ ಪಿಶಾಚಿಗಳನ್ನು ಮೀರುವ ತಾಕತ್ತು ಅವನಲ್ಲಿದೆ ಅನ್ನೋದನ್ನು ನಾನಂತೂ ನಂಬೋದಿಲ್ಲ.

ಪಿಶಾಚಿ ೧ : ಸದ್ಯಕ್ಕೆ ನಮಗಿರೋ ಉಪಾಯ ಇದೊಂದೇ.

## ಭೋಂ ಭೋಂ ಶಂಕರ ಬೋಳೇಶಂಕರ

**(ಕೆಲಸ ಮಾಡುತ್ತ ಬೋಳೇಶಂಕರ ಬರುವನು. ಜೊತೆಗೆ ಕೋಡಂಗಿಯೂ ಇದ್ದಾನೆ)**

ಕೋಡಂಗಿ : ಹೊಟ್ಟೆನೋವು ಅಂತಿ ತುಸು ಆರಾಮ ತಗೋ ಮಾರಾಯಾ.

ಬೋಳೇಶಂಕರ : ಆರಾಮ ತಗೊ ಅಂತ ನೀ ಅಂತೀಯಾ. ನನ್ನ ಹೊಟ್ಟೆ ನೋಯುತ್ತೆ ಅಂದರೆ ಜೀವನ ನಿಲ್ಲುತ್ತ? ಹೋಗಲಿ ನಾ ನಿಲ್ಲಿಸಿದ ಕೆಲಸ ನೀನು ಮುಂದುವರಿಸ್ತೀಯ? ನೀನೋ ಸೋಂಬೇರಿ.

ಕೋಡಂಗಿ : ಬೆಳಿಗ್ಗೆಯಿಂದ ಕೆಲಸ ಮಾಡ್ತಾನೇ ಇದ್ದೀನಲ್ಲಪ.

ಬೋಳೇಶಂಕರ : ಏನೇನು ಮಾಡಿದೆ ಹೇಳು.

ಕೋಡಂಗಿ : ಹದಿನೆಂಟು ರೊಟ್ಟಿ ತಿಂದೆ, ಎಂಟು ಮುದ್ದೆ ನುಂಗಿದೆ, ಸೊಲಗಿ ಅನ್ನ ಉಂಡೆ, ಒಂದು ಗಡಿಗೆ ಅಂಬಲಿ ಕುಡಿದೆ, ಗಡದ್ದಾಗಿ ಮೂರು ಗಂಟೆ ನಿದ್ದೆ ಮಾಡಿದೆ.

ಬೋಳೇಶಂಕರ : ಭಾರೀ ಕೆಲಸ ಮಾಡಿದೆ ಬಿಡು, ನೀನು ಹೀಗೇ ಮಾಡ್ತ ಇರು; ನಿನಗೆ ತುಂಡು ರೊಟ್ಟಿ ಸಿಕ್ಕದ ಹಾಗೆ ಮಾಡ್ತೀನಿ.

| | | |
|---|---|---|
| ಪಿಶಾಚಿ ೧ | : | (ಕಾಣಿಸಿಕೊಂಡು) ಹೊಟ್ಟೆ ನೋಯುತ್ತಿದ್ದರೂ ನೆಮ್ಮದಿಯಿಂದ ಕೆಲಸ ಮಾಡುತ್ತಿದ್ದಾನಲ್ಲ,ಇರಲಿ ಈಗಿವನ ನೇಗಿಲಿಗೆ ದೊಡ್ಡ ಬೇರಾಗಿ ತೊಡಕಿ ಬಿಡ್ತೀನಿ, ಹ್ಯಾಗೆ ಬಿಡಿಸಿಕೊಳ್ತಾನೋ ನೋಡೇಬಿಡುವಾ. (ಪಿಶಾಚಿ ಮಾಯವಾಗುತ್ತದೆ. ತಕ್ಷಣ ನೇಗಿಲು ನಿಲ್ಲುತ್ತದೆ) |
| ಬೋಳೇಶಂಕರ | : | ಕೋಡಂಗೀ, ಇಲ್ಲೆಲ್ಲೂ ಅಕ್ಕಪಕ್ಕ ಮರ ಇಲ್ಲ ಅಲ್ಲವ? |
| ಕೋಡಂಗಿ | : | ಇಲ್ಲ. |
| ಬೋಳೇಶಂಕರ | : | ಹಿಂದೆಂದೂ ಇರಲಿಲ್ಲ, ಅಲ್ಲವ? |
| ಕೋಡಂಗಿ | : | ಇರಲಿಲ್ಲ. |
| ಬೋಳೇಶಂಕರ | : | ಆದರೂ ನೇಗಿಲಿಗೆ ಬೇರು ತಗಲಿದೆಯಲ್ಲ! |
| ಕೋಡಂಗಿ | : | ತಗಲಿದೆಯಲ್ಲ! |
| ಬೋಳೇಶಂಕರ | : | ಗುದ್ದಲಿ ತಗೊಂಬಾ, ಅಗಿದು ನೋಡ್ತೋಣ. (ಇಬ್ಬರೂ ಅಗಿಯತೊಡಗುವರು. ಬೋಳೇಶಂಕರ 'ಐಸಾ' ಕೋಡಂಗಿರಾಜಾ 'ಐಸಾ' ಇತ್ಯಾದಿ ಹೇಳುತ್ತ ಅಗಿಯತ್ತಿದ್ದಂತೆ ಕೋಡಂಗಿ ಚೀರಿ ದೂರ ಓಡುವನು) |
| ಕೋಡಂಗಿ | : | ಅಯ್ಯೋ ಹಾವು! ಹಾವು!. .. . . . . . |
| ಬೋಳೇಶಂಕರ | : | (ಎತ್ತಿ ತೆಗೆಯುತ್ತ) ಹಾವಲ್ಲವೋ, ಎಂಥದೋ ವಿಚಿತ್ರ ಪ್ರಾಣಿ, ಹಾಳಾದ್ದು ಒದ್ದಾಡ್ತ ಇದೆ. ಶಿವಾ ಶಿವಾ. . . . . |
| ಪಿಶಾಚಿ ೧ | : | (ಪ್ರತ್ಯಕ್ಷವಾಗಿ) ಅಯ್ಯಯ್ಯೋ ಆ ಹೆಸರೆತ್ತಬೇಡಿ. ದಮ್ಮಯ್ಯಾ ನಿಮ್ಮ ಕೈ ಮುಗೀತೀನಿ. |
| ಬೋಳೇಶಂಕರ | : | ಯಾವ ಹೆಸರು? |
| ಪಿಶಾಚಿ ೧ | : | ಆಗಲೇ ಹೇಳಿದಿರಲ್ಲ, ಆ ಹೆಸರು. |
| ಬೋಳೇಶಂಕರ | : | ಕೋಡಂಗೀ ಹೆಸರು ಹೇಳಿದರೆ ಅಷ್ಟು ಹೆದರಿ ಕೊಳ್ತೀಯಾ? |
| ಕೋಡಂಗಿ | : | ಮತ್ತೆ ನಾ ಅಂದರೆ ಏನಂದುಕೊಂಡೆ? ನನ್ನ ಹೆಸರು ಹೇಳಿದರೆ ಸಾಕು–ಹಾವು, ಮುಂಗಸಿ, ಇಲಿ, ಇರುವೆ, ಹೆಗ್ಗಣಗಳು ಗಡಗಡಾಂತ ನಡುಗುತ್ತವೆ. ಆದರೆ ಅವುಗಳನ್ನು ಕಂಡರೆ ನಾನು ಹೆದರ್ತೀನಿ. |
| ಬೋಳೇಶಂಕರ | : | (ಪಿಶಾಚಿಗೆ) ಈತನ್ನ ಕಂಡರೆ ನೀನ್ಯಾಕೆ ಹೆದರಬೇಕು? |
| ಕೋಡಂಗಿ | : | ಹಸಿದಾಗ ಹಾಗ್ಹಾಗೇ ನುಂಗತೀನಿ ಅಂತ ಗೊತ್ತಿಲ್ಲವೆ ಅವಕ್ಕೆ? |

ಪಿಶಾಚಿ ೧ : ಅವನಿಗಲ್ಲ ಹೆದರಿದ್ದು, ನೀವು ಆಗಾಗ ಸ್ಮರಿಸೋ ಆ ಹೆಸರಿಗೆ.

ಬೋಳೇಶಂಕರ : ಅಂದರೆ ಶಿವನ ಹೆಸರಿಗಾ?

ಪಿಶಾಚಿ ೧ : ಅಯ್ಯಯ್ಯೋ ಆ ಹೆಸರು ಹೇಳಬೇಡಿ?

ಬೋಳೇಶಂಕರ : ಶಿವನ ಹೆಸರು ಹೇಳಬಾರದ?

ಪಿಶಾಚಿ ೧ : ದಯವಿಟ್ಟು ಹೇಳಬೇಡಿ. ನೀವು ಹೇಳಿದ್ದನ್ನ ಮಾಡ್ತೀನಿ.

ಬೋಳೇಶಂಕರ : ಏನು ಮಾಡಬಲ್ಲೆ?

ಪಿಶಾಚಿ ೧ : ನೀವು ಹೇಳಿದ್ದನ್ನು.

ಬೋಳೇಶಂಕರ : (ತಲೆ ಕೆರೆದುಕೊಂಡು) ಹಾಗಾದರೆ ನನ್ನ ಹೊಟ್ಟೆ ನೋಯ್ತ ಇದೆ. ವಾಸಿ ಮಾಡಬಲ್ಲೆಯಾ?

ಪಿಶಾಚಿ ೧ : ಓಹೊ, ಈ ಕ್ಷಣವೆ ಮಾಡಬಲ್ಲೆ. (ಹೋಗಿ ನೆಲ ಅಗಿದು ಮೂರು ಬೇರು ತರುತ್ತದೆ) ಇದನ್ನ ಯಾರೇ ನುಂಗಲಿ, ಅವರಿಗಿರೋ ಯಾವುದೇ ರೋಗ ತಕ್ಷಣ ವಾಸಿ ಆಗುತ್ತೆ.

ಬೋಳೇಶಂಕರ : (ನುಂಗುವನು) ಪರವಾ ಇಲ್ಲವೆ! ಹೊಟ್ಟೆನೋವೆಲ್ಲ ಮಾಯವಾಯ್ತು!

ಪಿಶಾಚಿ ೧ : ನಾನು ಹೋಗಲಾ?

ಬೋಳೇಶಂಕರ : ಇರಣ್ಣ, ಇನ್ನೊಂದು ವಿಷಯ ಹೇಳು: ಅದ್ಯಾಕೆ ನಿನಗೆ ಶಿವನ ಹೆಸರು ಕೇಳಿದರೆ ಆಗೋದಿಲ್ಲ?

ಪಿಶಾಚಿ ೧ : ಅಯ್ಯಯ್ಯೋ ಹೇಳಬೇಡಿ ಸಾಯತೀನಿ . . . . . ಸಾಯತೀನಿ.

ಕೋಡಂಗಿ : (ಜೋರಿನಿಂದ) ಶಿವ ಶಿವ ಶಿವ . . . . . ಸಾಂಬಸದಾಶಿವ ಬೋಳೇಶಂಕರ ಭೋಂ ಭೋಂ ಶಂಕರ ಪಾರ್ವತಿ ಶಂಕರ (ಪಿಶಾಚಿ ಕೇಳಲಾರದೆ ಕಿವಿ ಮುಚ್ಚಿಕೊಂಡು ತಿರುಗಿ ನೆಲದಲ್ಲಿ ಹೂತುಕೊಳ್ಳುತ್ತದೆ.)

## ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ

ಕೋಡಂಗಿ : ಹೋಯ್ ಭಾಗವತರೆ

ಭಾಗವತ ಏನಪ್ಪ ಬೋಳೇಶಂಕರನ ಅಡಿಗೆ ಮನೆಯಲ್ಲಿ ಏನಾಗ್ತಿದೆ ಹೇಳಪ್ಪ.

ಕೋಡಂಗಿ : ಚಕ್ಕುಲಿ, ಕೋಡಬಳೆ, ಕರಜಿಕಾಯಿ, ಹೋಳಿಗೆ, ಲಾಡು, ಜಿಲೇಬಿ– ಎಲ್ಲಾ ತಿನಿಸಿನ ವಾಸನೆ ಬರ್ತಾ ಇದೆಯಲ್ಲ ಭಾಗವತರೇ!

ಭಾಗವತ : ಇದ್ನೆಲ್ಲ ಯಾರಪ್ಪಾ ಮಾಡ್ತಿದಾರೆ?

ಕೋಡಂಗಿ : ಎಲಾ ಎಲಾ ಹೌದಲ್ಲಾ ಭಾಗವತರೇ, ಇವರು ಬೋಳೇಶಂಕರನ ಅಣ್ಣಂದಿರಲ್ಲವೇ? ಜಗಳವಾಡಿ ಪಾಲಿಗೆ ಬಂದದ್ದನ್ನು ತಗೊಂಡು ದೇಶ ಆಳ್ತೀವಿ ಅಂತ ಹೋದವರು ಪುನಃ ಬೆಪ್ತಕ್ಕಡಿ ಮನೆಗೇ ಬಂದಿದ್ದಾರೆ! ಪಿಶಾಚಿಗಳನ್ನು ಸುಲಭವಾಗಿ ಓಡಿಸಬಹುದು. ಇವರನ್ನು ಓಡಿಸಲಿಕ್ಕಾಗೋದಿಲ್ಲ ಭಾಗವತರೇ. . . ಅಗೋ ಅವನೇ ಬಂದ ನಿಭಾಯಿಸಲಿ. (ಮೇಲಿನ ಕೋಡಂಗಿಯ ಮಾತು ನಡೆಯುತ್ತಿರುವಂತೆಯೇ ಸರದಾರ ಸೋಮಣ್ಣ, ಸಾವ್ಕಾರ ಡಬ್ಬು, ಅವರ ಹೆಂಡದಿರು ಬೋಳೇಶಂಕರನ ಮನೆಯಲ್ಲಿ ಐಷಾರಾಮವಾಗಿ ಅಡಿಗೆ ಮಾಡುತ್ತಿದ್ದಾರೆ. ಇನ್ನೊಂದು ಕಡೆಗೆ ಪಿಶಾಚಿಗಳು ಕಾಣಿಸಿಕೊಳ್ಳುತ್ತವೆ.)

ಪಿಶಾಚಿ ೩ : ಬೋಳೇಶಂಕರ ಬರ್ತಿದಾನೆ.

ಪಿಶಾಚಿ ೨ : ಹುಷಾರಾಗಿರಬೇಕು.

ಪಿಶಾಚಿ ೩ : ಸರದಾರನಿಗಿಂತ ಅವನ ಹೆಂಡತೀನೇ ವಾಸಿ.

ಪಿಶಾಚಿ ೨ : ಡಬ್ಬೂನ ಹೆಂಡತೀನೂ ಅಷ್ಟೆ.

ಪಿಶಾಚಿ ೩ : ಅವಳ ಬಾಯಲ್ಲೆರಡು ಕೋರೆ ಹಲ್ಲು ಮೂಡಿಸಿದ್ದೀನಿ.

ಪಿಶಾಚಿ ೨ : ಹಾಗೇ ಅವಳ ಜೊಲ್ಲಿಗೆ ವಿಷ ಬೆರಸು. ಡಬ್ಬೂನ ಹೆಂಡತಿಗೆ ಎರಡು ಕೊಂಬು ಮೂಡಿಸಿದ್ದೀನಿ.

ಪಿಶಾಚಿ ೩ : ಅವುಗಳಲ್ಲಿ ಒಂದೊಂದು ಚೂರಿ ಇಡು.

ಪಿಶಾಚಿ ೨ : ಗಂಡಸರ ಬಾಯಲ್ಲಿ ಮದ್ದಿಡೋಣ. ಹೆಂಗಸರ ಕೈಯಲ್ಲಿ ಬೆಂಕಿ ಇಡೋಣ. ಕಿಡಿ ತಾಗಿದರೆ ಸಾಕು, ಬೆಪ್ತಕ್ಕಡಿ ನರಕದ ಶಾಪಗಳನ್ನೆಲ್ಲ ಅವರ ಮೇಲೆ ಸುರೀಬೇಕು.

ಪಿಶಾಚಿ ೩ : ಎರಡೇ ಗಳಿಗೇಲಿ ಮನೆ ಸ್ಮಶಾನವಾಗಬೇಕು.

ಪಿಶಾಚಿ ೨ : ಅಗೋ ಬಂದ. (ಬೋಳೇಶಂಕರ ಗಳೆ ಸಾಮಾನಿನೊಂದಿಗೆ ಬರುವನು)

ಸರದಾರ : ತೋಟದಿಂದ ಈಗ ಬಂದೆಯಾ ಬೋಳೇಶಂಕರ ? ನಾ ನಿನ್ನ ಜೊತೆಗೆ ಇರೋಣ ಅಂತ ಬಂದೆ. ಇದ್ದ ಕೆಲಸ ಹೋಯ್ತು, ಇನ್ನೊಂದು ಕೆಲಸ ಸಿಕ್ಕೋವರೆಗೂ ನನಗೂ ನನ್ನ ಹೆಂಡತಿಗೂ ನೀನೇ ದಿಕ್ಕು. ಇಲ್ಲ ಅನ್ನಬೇಡ.

ಡಬ್ಬು : ಚೆನ್ನಾಗಿದ್ದೀಯಾ ಶಂಕರ? ನೋಡಿದರೇ ಗೊತ್ತಾಗುತ್ತಲ್ಲ–ಎಷ್ಟು ಚೆನ್ನಾಗಿದ್ದೀಯಾ ಅಂತ. ಪುನಃ ಆಸ್ತಿ ಕೇಳಲಿಕ್ಕೆ ಬಂದವರಲ್ಲ ನಾವು ಏನು ಮಾಡೋದು ಹೇಳು.

ಬೋಳೇಶಂಕರ : ಓಹೊ ಹೀಗಾಯ್ತೊ!

ಸರದಾರ : ಈಗ ನೀನು ದೊಡ್ಡ ಮನಸ್ಸು ಮಾಡಬೇಕು.

ಸ.ಹೆಂಡತಿ : ನಿನ್ನ ಮನೆಗೆ ಅತಿಥಿಯಾಗಿ ಬಂದವರು ಯಾರೆಂದು ತಿಳಿದುಕೊ. ನಿನ್ನ ದೊಡ್ಡ ಅಣ್ಣ ಸೇನಾಪತಿಯಾಗಿ ದೇಶ ಆಳಿದವರು. ಸಣ್ಣ ಅಣ್ಣ ಸಾವ್ಕಾರನಾಗಿ ಸರಕಾರ ಕೊಂಡು ಮಾರಿದವರು. ನಾವಿರೋತನಕ ಸೇವೆ ಮಾಡಿ ಧನ್ಯನಾಗೋ ಅವಕಾಶ ತಾನಾಗೇ ಬಂದಾಗ ಬಿಟ್ಟುಕೊಡಬೇಡ.

ಸಾ.ಹೆಂಡತಿ : ಅಷ್ಟಾಗಿ ನಾವು ಕೂತು ತಿನ್ನೋದಿಲ್ಲ. ನಮ್ಮ ಕೂಳು ನಾವು ತಾನೇ ಬೇಯಿಸಿಕೊಳ್ಳಬೇಕು? ನಿನಗೊಂದು ಹೆಂಡತಿಯೇ, ಸಂಸಾರವೇ? ಅದು ಈ ಜನ್ಮದಲ್ಲಿ ಸಾಧ್ಯವೂ ಇಲ್ಲ.

ಬೋಳೇಶಂಕರ : ಆಗಲೇಳಿ ಅದಕ್ಕೇನಂತೆ, ಎಲ್ಲರೂ ನನ್ನ ಜೊತೆಗಿರಿ. ಆಗಲೇ ಅತ್ತಿಗೆ ಹೇಳಿದ ಹಾಗೆ ಅನ್ನಬೇಯಿಸಿ ಹಾಕೋದಕ್ಕೆ ನನಗೂ ಯಾರು ಇಲ್ಲ. ಈಗಲಾದರೂ ಹೆಂಗಸಿನ ಕೈ ಅನ್ನ ಉಣ್ಣಬಹುದು. (ಸಾಮಾನು ಇಡಲು ಬೇರೆ ಕಡೆ ಹೋಗುವನು)

ಸ. ಹೆಂಡತಿ : ನೋಡಿ, ನಿಮ್ಮ ತಮ್ಮನಿಗೆ ಕೂಳು ಕುದಿಸಿ ಹಾಕೋದಕ್ಕೆ ನಾವು ಅವನ ಆಳುಗಳಲ್ಲ.

ಸರದಾರ : ಆದರೆ ನಾವಿರೋದು ಅವನ ಮನೇಲಲ್ಲವೆ?

ಸ.ಹೆಂಡತಿ : ಅದು ನಿಮಗ್ಗೊತ್ತು. ಒಂದೇ ಕರುಳು ಹಂಚಿಕೊಂಡವರಿಗೆ ಇಷ್ಟು ಆಶ್ರಯ ಕೊಡೋದೇನು ಹೆಚ್ಚಲ್ಲ. ಅದು ತಮ್ಮನ ಕರ್ತವ್ಯ, ಪುಣ್ಯದ ಕೆಲಸ.

ಸಾ.ಹೆಂಡತಿ : ಬೇಕಾದರೆ ಕೂಳು ನಾವು ಬೇಯಿಸ್ತೀವಿ. ಅವನು ಹೊರಗಡೆ ದನದ ಕೊಟ್ಟಿಗೇಲಿ ಊಟ ಮಾಡಲಿ. ಅಕಾ ಅವನು ಒಳಗಡೆ ಊಟಕ್ಕೆ ಬರೋದಕ್ಕೆ ತಯಾರಾಗ್ತಿದಾನೆ.

ಸಾವ್ಕಾರ : ಅವನ ದಡ್ಡತನವೇ ನಮಗೆ ಆಸರೆ. ಅದಕ್ಕೇನಾದರೂ ನೋವಾದರೆ ನಾವಿಲ್ಲಿ ಇರಲಿಕ್ಕಾಗುತ್ತೇನೆ?

ಸಾ.ಹೆಂಡತಿ : ಹಾಕಿದ್ದನ್ನ ತಿನ್ನೋ ನಾಯಿ ಅದು. ನೋವಾದದ್ದು ಅದಕ್ಕೆಲ್ಲಿ ಗೊತ್ತಾಗುತ್ತೇರಿ?

ಸರದಾರ : ಬೇಕಾದರೆ ನಾವಿಬ್ಬರೂ ಅವನ ಜೊತೆ ಕೊಟ್ಟಿಗೇಲಿ ಕೂತು ಊಟ ಮಾಡ್ತೀವಿ. ನೀವು ಆಮೇಲೆ ಒಳಗೆ ಊಟ ಮಾಡಿ.

ಸ.ಹೆಂಡತಿ : ಹಾಗಿದ್ದರೆ ಆಮೇಲೆ ನಿಮ್ಮನ್ನೂ ನಾವು ಒಳಕ್ಕೆ ಸೇರಿಸೋದಿಲ್ಲ, ಹುಷಾರ್.

ಸಾವ್ಕಾರ : ಇದೊಳ್ಳೇದಾಯ್ತು!

ಸಾ.ಹೆಂಡತಿ : ಅವನ್ನ ನೋಡಿದರೆ ಕಣ್ಣುಬೇನೆ ಬರುತ್ತೆ. ಥೂ ಅಸಾಧ್ಯ ಕೊಳಕ.

ಸ.ಹೆಂಡತಿ : ಬರ್‍ತೀದಾನೆ, ಈಗೇನು ನೀವೇ ಹೇಳ್ತೀರೋ, ನಾವೇ ಹೇಳೋಣವೊ?

ಸಾವ್ಕಾರ : ಹೇಳ್ತೀನಿರೇ. (ಬೋಳೇಶಂಕರ ಊಟಕ್ಕೆ ರೆಡಿಯಾಗಿ ಬರುವನು)

ಬೋಳೇಶಂಕರ : ಒಬ್ಬನ ಜೀವನದಲ್ಲಿ ಇಂಥ ಸುದಿನಗಳು ಬರೋದು ಅಪರೂಪ. ಜೊತೆ ಕೂತು ಊಟ ಮಾಡಿ ಎಷ್ಟು ದಿನಗಳಾದವು! ಬನ್ನಿ ಅಣ್ಣತಮ್ಮಂದಿರು ಒಟ್ಟಿಗೆ ಊಟ ಮಾಡೋಣ. ಹೆಣ್ಣಿದ್ದ ಮನೆಯ ಸೌಭಾಗ್ಯವೇ ಬೇರೆ. ಅತ್ತಿಗೆಯವರ ಹಸ್ತಗುಣದಿಂದ ಅಡಿಗೆ ಮನೆಯಾಗಲೇ ಪರಿಮಳ ಭರಿತವಾಗಿದೆ, ಬನ್ನಿ.

ಸಾವ್ಕಾರ : ಅಯ್ಯಾ ಬೋಳೇಶಂಕರಾ, ಸದ್ಯ ನೀನೊಬ್ಬನೇ ಊಟ ಮಾಡು. ನಾವು ಆಮೇಲೆ ಮಾಡ್ತೀವಿ.

ಬೋಳೇಶಂಕರ : ಆಗಲೇಳಿ, ನಿಮಗಿನ್ನೂ ಹಸಿವಾಗಿರ್ಲಿಕ್ಕಿಲ್ಲ, ನನಗಾಗಿದೆ. ನಾನು ಊಟ ಮಾಡ್ತೀನಿ.

ಸರದಾರ : ತವಮ್ಮಾ ಬೋಳೇಶಂಕರಾ, ಊಟಕ್ಕೆ ನೀನು ಕೊಟ್ಟಿಗೆ ಹತ್ತಿರ ಕೂತಿರ್‍ತೀಯಾ?

ಬೋಳೇಶಂಕರ : ಆಗಲೇಳು, ಅದಕ್ಕೇನಂತೆ, ಬೇಕೆಂದರೆ ಊಟ ಕಟ್ಟಿಕೊಡಲಿ ತೋಟದಲ್ಲೇ ಊಟ ಮಾಡಿ ಮಲಕ್ಕೋತೇನೆ.

ಸಾವ್ಕಾರ : ಹಾಗೇ ಬೆಳಿಗ್ಗೆದ್ದು ಒಂದಷ್ಟು ಮರ ಕಡಿದು ಬಿಡಪ್ಪ, ನಮಗೆರಡು ಮನೆ ಕಟ್ಟಿಸಿಕೊಟ್ಟರೆ ಚೆನ್ನಾಗಿರುತ್ತೆ. ನಿನ್ನ ಮನೆಯಲ್ಲೇ ಎಷ್ಟಂತ ಇರೋದು?

ಬೋಳೇಶಂಕರ : ಹಾಗೇ ಆಗಲೇಳು.

ಸರದಾರ : ಹಾಗೇ ಬೆಳಿಗ್ಗೆದ್ದು ನನ್ನ ಕುದುರೆಗೆ ಒಂದಷ್ಟು ಹುಲ್ಲು ತಾರಪ್ಪ.

ಬೋಳೇಶಂಕರ : ಆಗಲೇಳು ಅದಕ್ಕೇನಂತೆ.

ಸಾ.ಹೆಂಡತಿ : ಇಕಾ ಕಟ್ಟಿದ ಬುತ್ತಿ ತಯಾರಾಗೇ ಇದೆ.

ಬೋಳೇಶಂಕರ : ಆಗಲೇಳಿ, ಆಮೇಲೆ ಕೋಡಂಗಿಗೆ ಊಟ ಹಾಕಿ. (ಉಳಿದವರೆಲ್ಲ ಮರೆಯಾಗಿ ಬೋಳೇಶಂಕರ ಮತ್ತು ಕೋಡಂಗಿ ಮುಂದೆ ಬರುತ್ತಾರೆ)

ಕೋಡಂಗಿ : ಅದೇನೋ ಸರಿ. ನೀ ಮಾಡೋ ಪುಣ್ಯಗಳ ಲೆಕ್ಕ ಚಿತ್ರಗುಪ್ತರು ಸರಿಯಾಗಿ ಬರೆದುಕೊಳ್ಳುತ್ತಿದ್ದರೆ ಸರಿ. ಅವರು ತೆಪ್ಪಗೆ ಮಲಗಿದ್ದರೆ ನೀನು ಎಷ್ಟು ಒಳ್ಳೆ ಕೆಲಸ ಮಾಡಿದರೇನು ಪ್ರಯೋಜನ?

ಬೋಳೇಶಂಕರ : ಒಬ್ಬ ಒಳ್ಳೆ ಕೆಲಸ ಮಾಡೋದು ಪುಣ್ಯದ ತುರಾಯಿಗಳನ್ನ ರುಂಬಾಲಿಗೆ ಸಿಕ್ಕಿಸಿಕೊಳ್ಳಲಿಕ್ಕಲ್ಲ. ಅದಿರ್‍ಲಯ್ಯಾ, ಊಟ ಬಿಟ್ಟು ನೀಯಾಕೆ ಬಂದೆ?

ಕೋಡಂಗಿ : ನನಗಿವತ್ತು, ಊಟ ಬೇಡ ಅನ್ನಿಸ್ತು, ನಾನೂ ತೋಟದಲ್ಲೇ ಮಲಗತೀನಿ. ನಿನ್ನ ಅಣ್ಣಂದಿರ ನಡತೆ ನನಗೆ ಸರಿ ಕಾಣಲಿಲ್ಲ.

ಬೋಳೇಶಂಕರ : ಯಾಕೆ ಹಾಗಂದೆ?

ಕೋಡಂಗಿ : ಚೆನ್ನಾಗಿದೆ, ಜೇಬು ನಿಂದು, ಹಣ ನಿಂದು ಅವರು ಖರ್ಚು ಮಾಡುತ್ತಾರಂತೆ. ಇದ್ಯಾವ ಸೀಮೆ ಲೆಕ್ಕ?

ಬೋಳೇಶಂಕರ : ಅದಕ್ಕೆ ಅಂತಲೇ ನಿನಗೆ ಕಮಂಗಿ ಅನ್ನೋದು. ಅಗೊ ಆ ಹಸಿರನ್ನ ನೋಡು. ಹಸಿರನ್ನ ಪ್ರೀತಿಸಬೇಕಾದರೆ ನೀನು ಪುಸ್ತಕದ ಭಾಷೆಯಲ್ಲಿ ಸಮರ್ಥಿಸಿ ಕೊಳ್ಳಬೇಕಾದ್ದಿಲ್ಲ. ಅಂತಃಕರಣ ತೆರೆದರೆ ಸಾಕು; ಅದು ಒಳಗೆ ಪ್ರವೇಶಿಸುತ್ತದೆ. ಒಳಗಿನ ಕೊಳೆ ತೊಳೆದು ಹೃದಯವನ್ನು ಪರಿಶುದ್ಧವಾದ ಸ್ವಚ್ಛವಾದ ಕೊಳದ ಥರ ಮಾಡುತ್ತದೆ. ಅಯ್ಯಾ ಕೋಡಂಗಿ, ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ ಕಾಣಯ್ಯಾ ನಾನು.

ಕೋಡಂಗಿ : ನಿನಗೂ ಪಿಶಾಚಿ ಕಾಟವೊ ಏನೋ! ಏನೇನೋ ಮಾತಾಡಲಿಕ್ಕೆ ಸುರು ಮಾಡಿದೆ. ನಡಿ ನಡಿ. . . . . . (ಅವರು ಮರೆಯಾಗುತ್ತಿರುವಂತೆ ನಿರಾಶರಾದ ಪಿಶಾಚಿಗಳು ಬರುತ್ತವೆ)

ಪಿಶಾಚಿ ೩ : ಜಗಳ ಆಗಲೇ ಇಲ್ಲವೆ!

ಪಿಶಾಚಿ ೨ : ನಾವಿಟ್ಟ ಮದ್ದೆಲ್ಲ ಈ ಬೆಪ್ತಕ್ಕಡಿ ಮುಂದೆ ಒದ್ದೆಯಾಯ್ತು!

ಪಿಶಾಚಿ ೩ : ತಮ್ಮ ಹೇಳಿದ ಹಾಗೆ ಇವನು ಅಸಾಧ್ಯನೇ ಸರಿ. ಇವನನ್ನ ಹೀಗಲ್ಲ ದಾರಿಗೆ ತರೋದು. ಈ ಬೆಪ್ತಕ್ಕಡಿ ಹತ್ತಿರ ತಮ್ಮ ಕೊಟ್ಟ ಬೇರಿದೆಯಲ್ಲವೆ? ನಾನು ಹೋಗಿ ರಾಜಕುಮಾರೀನ್ನ ಹಿಡೀತೇನೆ. ಬೇರಿರೋದರಿಂದ ರಾಜಕುಮಾರಿಯ ರೋಗ ವಾಸಿ ಮಾಡಬೇಕಂತ ಬರ್ತಾನೆ. ದಾರಿಯಲ್ಲಿ ಯಾವುದೋ ವೇಷದಲ್ಲಿ ಅವನನ್ನ ಭೇಟಿ ಮಾಡಿ ಆ ಬೇರು ಕಿತ್ತುಕೊ. ಅರಮನೆಗೆ ಬಂದ ಮೇಲೆ ವಾಸಿ ಮಾಡಲಿಕ್ಕಾಗೋದಿಲ್ಲವಲ್ಲ–ಆವಾಗ ರಾಜನಿಂದ ನಾನವನ ಕತ್ತು ಕುಯ್ಸಿ ಹಾಕ್ತೀನಿ, ಹ್ಯಾಗಿದೆ ಉಪಾಯ?

ಪಿಶಾಚಿ ೨ : ಖಂಡಿತ ಚೆನ್ನಾಗಿದೆ, ನಡಿ.

## ಎಲ್ಲರಂಥವಳಲ್ಲ ನಮ್ಮಾಕಿ

ಕೋಡಂಗಿ : **ಎಲ್ಲರಂಥವಳಲ್ಲ ನಮ್ಮಾಕಿ**
**ಸಲ್ಲು ಸಲ್ಲಿಗೆ ತುರುಬು ಕಟ್ಟಾಕಿ॥**
**ಹಲ್ಲು ಕಿರಿಯೋದನ್ನ ಕಲಿಸಿ**
**ಜುಟ್ಟು ಹಿಡಿದು ನಡೆಸಿದಾಕಿ.**

ಬೋಳೇಶಂಕರ : ಏನಯ್ಯಾ ಕೋಡಂಗೀ ತುಂಬ ಖುಶಿಯಿಂದಿರೋ ಹಾಗಿದೆ.

ಕೋಡಂಗಿ : ಡಂಗುರ ಕೇಳಲಿಲ್ಲವೆ?

ಬೋಳೇಶಂಕರ : ಇಲ್ಲವಲ್ಲ ಏನು ವಿಷಯ?

ಕೋಡಂಗಿ : ರಾಜಕುಮಾರಿಗೆ ಹೊಟ್ಟೆನೋವು!

ಬೋಳೇಶಂಕರ : ಅದಕ್ಕೆ ಸಂತೋಷಪಡ್ತಿದ್ದೀಯಾ?

ಕೋಡಂಗಿ : ಹಂಗಲ್ಲಪ, ಅದನ್ನ ವಾಸಿ ಮಾಡಿದವರಿಗೆ ಭಾರೀ ಬಹುಮಾನ ಕೊಡ್ತಾರಂತೆ.

ಬೋಳೇಶಂಕರ : ಹೌದು, ವಾಸಿ ಮಾಡಿದವರಿಗೆ, ನಿನಗಲ್ಲವಲ್ಲ.

ಕೋಡಂಗಿ : ನೀನು ಹೀಗೆ ಕೈಬಿಟ್ಟರೆ ನಾನು ಬದುಕೋದುಂಟೆ ಬೋಳೇಶಂಕರ? ನಿನ್ನ ಹತ್ತಿರ ಆ ಬೇರು ಇದೆಯಲ್ಲ. . . . .

ಬೋಳೇಶಂಕರ : ಯಾವುದಪ್ಪ?

ಕೋಡಂಗಿ : ಅದೇ ನಿನ್ನ ಹೊಟ್ಟೆನೋವಿಗಾಗಿ ಮೊನ್ನೆ ಆ ಪಿಶಾಚಿ ಕೊಟ್ಟಿತ್ತಲ್ಲ?

ಬೋಳೇಶಂಕರ : (ಜೇಬುಗಳಲ್ಲಿ ಹುಡುಕಿ) ಹೌದು, ಇದೆ.

ಕೋಡಂಗಿ : ಅದನ್ನು ಕೊಟ್ಟರೆ ಹೋಗಿ ರಾಜಕುಮಾರಿಗೆ ಕೊಟ್ಟು ವಾಸಿ ಮಾಡಿ ಬಹುಮಾನ ಗಿಟ್ಟಿಸಿಕೊಂಡು ಬರೋಣ ಅಂತ. ಬಹುಮಾನದಲ್ಲಿ ನಿನಗೂ ಅಷ್ಟೋ ಇಷ್ಟೋ ಕೊಟ್ಟೇ ಕೊಡ್ತೀನಯ್ಯಾ

ಬೋಳೇಶಂಕರ : ಅದಕ್ಕೇನಂತೆ ಕೊಡೋಣ ಬಿಡು. ಒಬ್ಬರಿಗೆ ನೋವಿದ್ದಾಗ ಮದ್ದಿಟ್ಟುಕೊಂಡು ಸುಮ್ಮನೆ ಇರಲಿಕ್ಕಾಗತ್ತ? ಅರಮನೆಗೆ ಯಾವಾಗ ಹೋಗ್ತೀಯಾ?

ಕೋಡಂಗಿ : ಕೊಟ್ಟರೆ ಈಗಲೇ ಹೋಗ್ತೀನಿ. ಆದರೆ ಒಂದನುಮಾನ, ಸಾಮಾನ್ಯವಾಗಿ ರಾಜಕುಮಾರಿಯ ರೋಗ ವಾಸಿ ಮಾಡಿದವರಿಗೆ ರಾಜಕುಮಾರೀನ್ನೇ ಮದುವೆ ಮಾಡಿಕೊಡೋದು ಕಥೆಗಳಲ್ಲಿ ಪದ್ಧತಿ ಅಲ್ಲವ?

ಬೋಳೇಶಂಕರ : ಭಲೆ, ಆಗಲೇ ಅದನ್ನೂ ಯೋಚನೆ ಮಾಡಿಬಿಟ್ಟಿದ್ದೀಯಲ್ಲಯ್ಯಾ!

ಕೋಡಂಗಿ : ಓಹೊ. (ಮುದುಕಿಯೊಬ್ಬಳು ಅಳುತ್ತ ಬರುವಳು)

ಬೋಳೇಶಂಕರ : ಯಾಕಮ್ಮ ಏನಾಗಿದೆ ನಿನಗೆ ಅಳೋದಕ್ಕೆ?

ಮುದುಕಿ : ಅಯ್ಯೋ ಹೊಟ್ಟೆನೋವು ಸ್ವಾಮಿ, ಕರುಳು ಕಿತ್ತು ಬಾಯಿಗೆ ಬರುತ್ತಿವೆ. ಏನು ಮದ್ದು ಕುಡಿದರೂ ವಾಸಿ ಆಗದು ಸ್ವಾಮಿ, ಅಯ್ಯೋ. .. .

ಬೋಳೇಶಂಕರ : ತಗೋ ಬೇಗನೆ ಬಾಯಲ್ಲಿಟ್ಟುಕೊಂಡು ಅಗಿ, ಶಿವ ನಿನಗೆ ಒಳ್ಳೇದ್ಮಾಡ್ಲಿ. (ಬೇರು ಕೊಡ ಹೋಗುವನು)

ಮುದುಕಿ : ಅಯ್ಯಯ್ಯೋ ಆ ಹೆಸರು ಹೇಳಬೇಡಿ, ನನ್ನ ಹೊಟ್ಟೆನೋವು ಜಾಸ್ತಿಯಾಗುತ್ತೆ;

ಬೋಳೇಶಂಕರ : ಶಿವನ ಹೆಸರು ಹೇಳಿದರೆ ತಾನೆ?

ಮುದುಕಿ : ಹೌದು ಅಯ್ಯಯ್ಯೋ. . . . .

ಕೋಡಂಗಿ : ಶಿವ ಶಿವ ಶಿವ. . . . (ಈಗ ಮುದುಕಿಯ ರೂಪ ಹೋಗಿ ಪಿಶಾಚಿಯ ರೂಪ ಬರುತ್ತದೆ)

ಬೋಳೇಶಂಕರ : ಎಲಾ ಅನಿಷ್ಟವೆ ಮತ್ತೆ ಬಂದೆಯೊ?

ಪಿಶಾಚಿ೨ : ನಾನು ಬೇರೆ, ನಿನ್ನಣ್ಣ ಸಾವ್ಕಾರ ಡಬ್ಬೂನ ಜೊತೆಗಿದ್ದವನು.

ಬೋಳೇಶಂಕರ : ನೀನು ಯಾರಾದರೂ ಆಗಿರು. ನಿನ್ನ ತಮ್ಮನಿಗಾದ ಗತಿಯೇ ನಿನಗೂ ಕಾದಿದೆ. ಶಿವಾ ಶಿವಾ.

ಪಿಶಾಚಿ ೨ : ಅದನ್ನು ಹೇಳಬೇಡ. ನೀನು ಏನು ಹೇಳಿದರೂ ಮಾಡುತ್ತೇನೆ.

ಬೋಳೇಶಂಕರ : ನೀನೇನು ಮಾಡಬಲ್ಲೆ?

ಪಿಶಾಚಿ ೨ : ನಿನಗೆ ಬೇಕಾದಷ್ಟು ಚಿನ್ನದ ನಾಣ್ಯ ಕೊಡಬಲ್ಲೆ.

ಬೋಳೇಶಂಕರ : ಆಗಲೇಳು, ಸ್ವಲ್ಪ ಚಿನ್ನದ ನಾಣ್ಯ ಕೊಡು, ನೋಡೋಣ.

ಪಿಶಾಚಿ ೨ : ಆ ತೆನೆಯಿಂದ ಕಾಳು ಉದುರಿಸಿ ಕೈಮುಟ್ಟು. (ಬೋಳೇಶಂಕರ ಹಾಗೇ ಮಾಡುವನು) ಈಗ ಹೇಳು:

**ಹಂಡೋಲ ಬಂಡೋಲ ಚಿಗರಿ ಚಿಕಲಕ ಬಕಲಕ**
**ಸಾಲಕುದರಿ ಹನುಮಂತರಾಯಾ**
**ಧಾನ್ಯವೆಲ್ಲಾ ನಾಣ್ಯವಾಗ್ಲಿ ನಾಣ್ಯವೆಲ್ಲಾ ಚಿನ್ನವಾಗ್ಲಿ**
**ಬಚ್ಚಾಬೋಲ್**
**ಬೋಲಾತಿಬೋಲ್ ಹ್ರಾಂ ಲಂಗೋಟಿ ಕೋಲ್**
(ಬೋಳೇಶಂಕರ ಹಾಗೇ ಅನ್ನುವನು, ಧಾನ್ಯವೆಲ್ಲ ಚಿನ್ನದ್ದಾಗತ್ತದೆ)
ಈಗ ನಾನು ಹೋಗಲಾ?

ಬೋಳೇಶಂಕರ : ಇರಯ್ಯಾ. ಈ ಚಿನ್ನವನ್ನೆಲ್ಲಾ ಮೊದಲು ಧಾನ್ಯಮಾಡು. ಇಷ್ಟು ಧಾನ್ಯ ಪೋಲಾದರೆ ಹೇಗೆ?

ಪಿಶಾಚಿ ೨ : ಆ ಮಂತ್ರಾನ್ನೇ ತಿರಗಮುರುಗ ಹೇಳಿ, ಹೀಗೆ:
**ಕಲಬಕ ಕಲಕಚಿ ರಿಗಚಿ ಲಂಡೋಲ ಕಿರಿ**
**ಸಾಲಕುದರಿ ಹನುಮಂತರಾಯಾ**
**ಚಿನ್ನವೆಲ್ಲಾ ನಾಣ್ಯಾವಾಗ್ಲಿ ನಾಣ್ಯವೆಲ್ಲಾ ಧಾನ್ಯವಾಗ್ಲಿ**
**ಬಚ್ಚಾಬೋಲ್**
**ಬೋಲಾತಿ ಬೋಲ್ ಹ್ರೀಂ ಲಂಗೋಟಿ ಕೋಲ್**
(ಈಗ ಚಿನ್ನ ಧಾನ್ಯವಾಗುತ್ತದೆ)

ಬೋಳೇಶಂಕರ : ಮಕ್ಕಳಿಗೆ, ಈ ಆಟ ತೋರಿಸಿದರೆ ತುಂಬ ನಗಾಡುತ್ತಾರಲ್ಲಾ!

ಪಿಶಾಚಿ ೨ : ಈಗ ನಾನು ಹೋಗಲಾ?

ಬೋಳೇಶಂಕರ : ಆಗಲೇಳು; ಶಿವ ನಿನಗೆ ಒಳ್ಳೆದನ್ನು ಮಾಡಲಿ.

ಪಿಶಾಚಿ ೨ : ಅಯ್ಯಯ್ಯೋ ಆ ಹೆಸರು ಹೇಳಬೇಡಿ.

ಕೋಡಂಗಿ : ಶಿವ ಶಿವ ಶಿವ ಶಿವಶಂಕರ ಭೋಂ ಭೋಂ ಶಂಕರ ಬೋಳೇಶಂಕರ. (ಕೇಳಲಾರದೆ ಪಿಶಾಚಿ ಅಲ್ಲೇ ಸುತ್ತಿರಿಗಿ ಸಾಯುತ್ತದೆ.)

## ಸಿಕ್ಕಳಾ ರಾಜಕುಮಾರಿ

(ರಾಜಕುಮಾರಿ ಮಲಗಿ ನರಳುತ್ತಿದ್ದಾಳೆ. ಪಕ್ಕದಲ್ಲಿ ರಾಜ, ಮಂತ್ರಿ)

ರಾಜ : ಮೂರು ದಿನಗಳಿಂದ ರಾಜಕುಮಾರಿ ಹೀಗೇ ನರಳುತ್ತಿದ್ದಾಳೆ. ಇವಳ ಹೊಟ್ಟೆನೋವನ್ನ ವಾಸಿ ಮಾಡುವಂಥ ಒಬ್ಬ ವೈದ್ಯನೂ ಸಿಕ್ಕಲಿಲ್ಲವೆ ಮಂತ್ರಿಗಳೆ?

ಮಂತ್ರಿ : ಇಲ್ಲ ಪ್ರಭು; ಯಾರ ವೈದ್ಯವೂ ರಾಜಕುಮಾರಿಯ ಮೇಲೆ ಪರಿಣಾಮ

ಬೀರುತ್ತಿಲ್ಲ. ನಮ್ಮ ರಾಜ್ಯದಲ್ಲಷ್ಟೇ ಅಲ್ಲದೆ ಪರ ರಾಜ್ಯಗಳಲ್ಲೂ ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವ ವೈದ್ಯರಿಗೆ ಯೋಗ್ಯ ಬಹುಮಾನ ಕೊಡುವುದಾಗಿ ಡಂಗುರ ಸಾರಿಸಿದ್ದೇನೆ.

ರಾಜಕುಮಾರಿ : ಅಯ್ಯೋ ನೋವು, ಹೊಟ್ಟೆನೋವಪ್ಪಾ.........

ರಾಜ : ಮಂತ್ರಿ, ಮಗಳು ಈ ಪರಿ ಸಂಕಟ ಪಡೋದನ್ನ ನೋಡಲಾರೆ. ಇವಳ ನೋವು ವಾಸಿ ಮಾಡಿದವರಿಗೆ ಅರ್ಧರಾಜ್ಯ ಕೊಡತೀನಿ ಅಂತ ಡಂಗುರ ಸಾರಿಸು.

ಮಂತ್ರಿ : ಅಪ್ಪಣೆ ಪ್ರಭು, (ಹೊರಡುವನು)

ರಾಜಕುಮಾರಿ : ಅಯ್ಯಯ್ಯೋ ನೋವು ತಡಿಲಾರೆ.

ರಾಜ : ಮಂತ್ರಿ ನಿಲ್ಲು. ಈ ನೋವು ವಾಸಿ ಮಾಡಿದವರಿಗೆ ಇಡೀ ರಾಜ್ಯ ಕೊಡತೀನಿ ಅಂತ ಡಂಗುರ ಸಾರು.

ಮಂತ್ರಿ : ಹಾಗೇ ಆಗಲಿ ಪ್ರಭು (ಹೊರಡುವನು)

ರಾಜಕುಮಾರಿ : ಅಯ್ಯೋ ಅಪ್ಪಾ, ಸಾಯತೇನೆ, ನನಗೆ ವಿಷ ಕೊಡಿ.

ರಾಜ : ಅಯ್ಯಾ ಮಂತ್ರಿ ರಾಜ್ಯವನ್ನಲ್ಲದೆ ರಾಜಕುಮಾರೀನ್ನೂ ಮದುವೆ ಮಾಡಿಕೊಡ್ತೀನಿ ಅಂತ ಡಂಗುರ ಸಾರಯ್ಯಾ

ಮಂತ್ರಿ : ಅಪ್ಪಣೆ ಪ್ರಭು. (ಹೊರಡುವಷ್ಟರಲ್ಲಿ ಸೇವಕ ಬಂದು ಸಮಸ್ಕರಿಸಿ ನಿಲ್ಲುವನು)

ಸೇವಕ : ಪ್ರಭು ಬೆಪ್ತಕ್ಕಡಿ ಬೋಳೇಶಂಕರ ಬಂದವನೆ. ಅವನ ಹತ್ತಿರ ಮದ್ದಿದೆಯಂತೆ.

ಮಂತ್ರಿ : ಬೆಪ್ತಕ್ಕಡಿಗಳಿಗೆಲ್ಲಾ ಸಗ್ಗುವ ರೋಗ ಅಲ್ಲವಯ್ಯಾ ಇದು. ರಾಜಕುವಾರಿಗೆ ಬಂದಿರೋದು, ರಾಜರೋಗ. ಆದ್ದರಿಂದ ರಾಜವೈದ್ಯರೇ ಬರಬೇಕು.

ರಾಜ : ಎಲ್ಲರನ್ನೂ ನೋಡಿದ್ದಾಯ್ತಲ್ಲ ಮಂತ್ರಿಗಳೇ.

ಮಂತ್ರಿ : ಪ್ರಭು ಬಹುಮಾನದ ಆಸೆಯಿಂದ ಹಾದಿಬೀದಿ ದಾಸಯ್ಯಗಳೆಲ್ಲ ವೈದ್ಯ ಮಾಡೋದಕ್ಕೆ ಬರ್ತಿದಾರೆ. ಅವರನ್ನ ತಡೆಯೋದೇ ಕಷ್ಟವಾಗಿದೆ.

ರಾಜಕುಮಾರಿ : ಬೆಪ್ತಕ್ಕಡಿ–ಅದು ಅವನ ಹೆಸರ? ವಿಶೇಷಣವ?

ಸೇವಕ : ಎರಡೂ ಹೌದು.

ರಾಜ : ಯಾರು ನೋಡಿದರೂ ಪ್ರಯೋಜನ ಇಲ್ಲ ಅಂದಮೇಲೆ ಸಾಮಾನ್ಯ ಬೆಪ್ತಕ್ಕಡೀನೂ ನೋಡಲೇಳು. ಕರೆತಾರಯ್ಯ ಅವನ್ನ.(ಸೇವಕ ಹೋಗಿ ಬೋಳೇಶಂಕರ ಹಾಗೂ ಕೋಡಂಗಿಯನ್ನ ಕರೆತರುವನು.)

ಬೋಳೇಶಂಕರ : ಪ್ರಭುಗಳಿಗೆ ನಮಸ್ಕಾರ. ತಾವು ನಂಬುಗೆ ಇಡೋದಾದರೆ ರಾಜಕುಮಾರಿಗೆ ನಾನು ಮದ್ದು ಕೊಡಬಲ್ಲೆ.

ರಾಜ : ನಾಟಿ ವೈದ್ಯವೊ?

ಬೋಳೇಶಂಕರ : ಹೌದು ಪ್ರಭು.

ರಾಜ : ಅಪಾಯವೇನೂ ಇಲ್ಲ ತಾನೆ?

ಬೋಳೇಶಂಕರ : ಇದನ್ನ ಸೇವಿಸಿದವರು ಖಂಡಿತ ಸಾಯೋದಿಲ್ಲ.

ಮಂತ್ರಿ : ಎತ್ತಿಕೊಳ್ತಾನೇ ಸಾವು ಅಂತೀಯಲ್ಲಯ್ಯಾ, ನೀನೇನು ವೈದ್ಯನೋ, ಗೋರಿ ಅಗಿಯೋ ಕೆಲಸದವನೊ?

ಬೋಳೇಶಂಕರ : ಎರಡೂ ಅಲ್ಲ, ಸಾಮಾನ್ಯ ರೈತ ಸ್ವಾಮೀ.

ಮಂತ್ರಿ : ಇದ್ಯಾಕೋ ಸರಿಹೋಗಲಿಲ್ಲ ಪ್ರಭು, ರಾಜವೈದ್ಯರಿಗಾಗದ್ದು ರೈತನಿಂದ ವಾಸಿ ಆಗುತ್ತೆ ಅಂದರೆ......ಬಹುಮಾನದ ಆಸೆಗಾಗಿ......

ಬೋಳೇಶಂಕರ : ಅದಕ್ಕೇ ನಂಬುಗೆ ಇಡೋದಾದರೆ ಅಂದೆ.

ರಾಜಕುಮಾರಿ : ಅಯ್ಯೋ ಅಪ್ಪಾ ನೋವಿನಿಂದಾ ಸಾಯತೇನೆ......

ರಾಜ : ಅದೇನು ವೈದ್ಯ ಮಾಡುತ್ತೀಯೋ ಮಾಡಿಬಿಡಯ್ಯಾ

ಬೋಳೇಶಂಕರ : ರಾಜಕುಮಾರಿ ಈ ಬೇರನ್ನ ಬಾಯಲ್ಲಿಟ್ಟುಕೊಂಡು ಜಗಿದು ನುಂಗಬೇಕು, ಶಿವ ನಿಮಗೆ ಒಳ್ಳೇದನ್ಮಾಡುತ್ತಾನೆ. (ರಾಜಕುಮಾರಿಯ ಹಾಸಿಗೆ ಕೆಳಗಿರೋ ಪಿಶಾಚಿ "ಅಯ್ಯಯ್ಯೋ ಹಾಗನ್ನಬೇಡ, ದಯಮಾಡಿ" ಎಂದು ಹೇಳಿದ್ದನ್ನ ಕೇಳಿ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಕೂಡಲೇ ಕೋಡಂಗಿ "ಶಿವ ಶಿವ ಶಿವ" ಎಂದು ಕೂಗುತ್ತಾನೆ. ಪಿಶಾಚಿ ೩ ನಡುಗುತ್ತ ಹೊರ ಬರುತ್ತದೆ. ಮಂತ್ರಿ ಮತ್ತು ಸೇವಕ ಹೆದರಿ ಓಡುತ್ತಾರೆ. ರಾಜ ಮೂರ್ಛೆ ಬೀಳುತ್ತಾನೆ)

ಬೋಳೇಶಂಕರ : ಎಲಾ ಅನಿಷ್ಟವೇ ಮತ್ತೆ ಬಂದೆಯಾ?

ಪಿಶಾಚಿ ೩ : ನಾನಲ್ಲ ಮೊದಲು ನಿನಗೆ ಸಿಕ್ಕವನು ನನ್ನ ತಮ್ಮ. ನಾನು ನಿನ್ನಣ್ಣ ಸರದಾರ ಸೋಮಣ್ಣನ ಹತ್ತಿರ ಇದ್ದವನು.

ಬೋಳೇಶಂಕರ : ನೀನು ಯಾರಾದರು ಆಗಿರು, ನಿನ್ನ ತಮ್ಮಂದಿರಿಗಾದ ಗತಿಯೇ ನಿನಗೂ ಕಾದಿದೆ. (ಹೊಡೆಯ ಹೋಗುವನು)

ಕೋಡಂಗಿ : ಇರು ಇರು ಮಿತ್ರಾ, ಇದೇನು ಲಾಭ ಕೊಡುತ್ತದೊ ನೋಡೋಣ ಇರು.

ಪಿಶಾಚಿ ೩ : ಅಯ್ಯಯ್ಯೋ ದಮ್ಮಯ್ಯಾ ನನ್ನನ್ನ ಬಿಟ್ಟು ಬಿಡು, ಬೇಕಾದರೆ ನಿನಗೆ ಸಹಾಯ ಮಾಡತೀನಿ.

ಬೋಳೇಶಂಕರ : ಏನು ಮಾಡಬಲ್ಲೆ?

ಪಿಶಾಚಿ ೩ : ಸಿಪಾಯಿಗಳನ್ನು ಮಾಡಬಲ್ಲೆ.

ಬೋಳೇಶಂಕರ : ಅವರಿಂದೇನುಪಯೋಗ?

ಪಿಶಾಚಿ ೩ : ನೀನೇನು ಹೇಳಿದರೂ ಮಾಡುತ್ತಾರೆ.

ಬೋಳೇಶಂಕರ : ಅವರು ಹಾಡಬಲ್ಲರೋ?

ಕೋಡಂಗಿ : ಅವರು ಕುಣಿಯಬಲ್ಲರೋ?

ಪಿಶಾಚಿ ೩ : ನೀನು ಇಷ್ಟಪಟ್ಟರೆ ಹಾಡುತ್ತಾರೆ.

ಬೋಳೇಶಂಕರ : ಆಗಲೇಳು, ಸ್ವಲ್ಪಜನ ಸಿಪಾಯಿಗಳನ್ನು ಮಾಡಿ ತೋರಿಸು.

ಪಿಶಾಚಿ ೩ : ಹುಲ್ಲಿನ ಹೊರೆ ತಗೊಂಬಂದು ನೆಲದ ಮೇಲೆ ನಿಲ್ಲಿಸು.

ಬೋಳೇಶಂಕರ : ಇರು. ಕೋಡಂಗೀ ಕುದುರೆ ಲಾಯದಿಂದ ಒಂದು ಹೊರೆ ಹುಲ್ಲು ತಗಂಬಾ (ಕೋಡಂಗಿ ಓಡುವನು) ನಿಜ ಹೇಳು, ರಾಜಕುಮಾರೀನ್ನ ನೀನು ಯಾಕೆ ಹಿಡಿದೆ?

ಪಿಶಾಚಿ ೩ : ನೀನು ಇಲ್ಲಿಗೆ ಬರಲಿ ಅಂತ.

ಬೋಳೇಶಂಕರ : ನಿಮ್ಮನ್ನ ನನ್ನಲ್ಲಿಗೆ ಕಳಿಸಿದವರು ಯಾರು?

ಪಿಶಾಚಿ ೩ : ನಮ್ಮ ಯಜಮಾನ; ಸೈತಾನ ದೊರೆ. (ಕೋಡಂಗಿ ಬರುವನು)

ಬೋಳೇಶಂಕರ : ಈಗ ಮಾಡು

ಪಿಶಾಚಿ ೩ : (ಹುಲ್ಲನ್ನ ನೆಲದ ಮೇಲೆ ನಿಲ್ಲಿಸಿ)

**ಹಂಡೋಲ ಬಂಡೋಲ**
**ಚಿಗರಿ ಚಿಕಲಕ ಬಕಲಕ**
**ಸಾಲಕುದರಿ ಹನುಮಂತರಾಯಾ**

**ಹುಲ್ಲಿನೆಸಳು ಸಿಪಾಯಾಗ್ಲಿ**
**ಬಚ್ಚಾ ಬೋಲ್**
**ಬೋಲಾತಿ ಬೋಲ್ ಹ್ರಾಂ ಲಂಗೋಟಿ ಕೋಲ್**
(ಈಗ ಒಂದೊಂದು ಹುಲ್ಲೆಸಳಿನಿಂದ ಒಬ್ಬೊಬ್ಬ ಜವಾನ ಬರುತ್ತಾನೆ)

ಬೋಳೇಶಂಕರ : ಚೆನ್ನಾಗಿದೆ, ಆಟ ತುಂಬ ಚೆನ್ನಾಗಿದೆ. ಇದನ್ನು ತೋರಿಸಿದರೆ ಮಕ್ಕಳು ತುಂಬ ಖುಷಿ ಪಡುತ್ತಾರೆ!

ಪಿಶಾಚಿ ೩ : ಈಗ ನಾನು ಹೋಗಲಾ?

ಬೋಳೇಶಂಕರ : ಇರಯ್ಯಾ. ಈ ಸಿಪಾಯಿಗಳನ್ನು ಮೊದಲಿನ ಹಾಗೇ ಹುಲ್ಲು ಮಾಡು. ಇಲ್ಲದಿದ್ದರೆ ಒಳ್ಳೇ ಹುಲ್ಲು ದಂಡವಾಗುತ್ತದೆ.

ಪಿಶಾಚಿ ೩ : **ಮಂತ್ರವನ್ನು ತಿರುಗಾ ಮುರುಗಾ ಹೀಗೆ ಹೇಳಿ;**

ಕಲಬಕ ಕಲಕಚಿ ರಿಗಚಿ ಲಂಡೋಲ್ ಕಿರಿ

ಸಾಲಕುದರಿ ಹನುಮಂತರಾಯಾ

ಎಲ್ಲಾ ಸಿಪಾಯಿ ಹುಲ್ಲಾಗ್ಲಿ ಬಚ್ಚಾಬೋಲ್

ಬೋಲಾತಿಬೋಲ್ ಹ್ರೀಂ ಲಂಗೋಟಿ ಕೋಲ್

(ಈಗ ಪುನಃ ಸಿಪಾಯಿಗಳೆಲ್ಲ ಹುಲ್ಲು ಹೊರೆಯಾಗುವರು)

ಪಿಶಾಚಿ ೩ : ನಾನಿನ್ನು ಹೋಗಲಾ?

ಕೋಡಂಗಿ : ಆಯ್ತು ಹೊರಡು ಶಿವ ಶಿವ ಶಿವ ಶಿವ ಭೋಂ ಭೋಂ ಶಂಕರ, ಬೋಳೇಶಂಕರ . . . . . .

ಪಿಶಾಚಿ ೩ : ಅಯ್ಯಯ್ಯೋ ಆ ಹೆಸರೆತ್ತಬೇಡಿ. ಸಾಯತೀನಿ.. . . . . . ಅಯ್ಯಯ್ಯೋ.
(ಪಿಶಾಚಿ ತಂತಾನೆ ಸುತ್ತಿ ಸುತ್ತಿ ಸಾಯುತ್ತದೆ)

# ಬಿಸಿಲು ಬೆಳಗುವ ಹಸಿರ ಸಿರಿನಾಡ ಸೀಮೆ

## (ಭಾಗವತ ಮತ್ತು ಕೋಡಂಗಿ)

ಕೋಡಂಗಿ : ಇವತ್ತು ನೀವು ನನ್ನ ಜೊತೆ ಅರಮನೆಗೆ ಬರಬೇಕಿತ್ತು ಭಾಗವತರೇ, ರಾಜಕುಮಾರಿಯ ಹೊಟ್ಟೆ ನೋವು ವಾಸಿ ಮಾಡಿದೆ. ಮೂರು ಪಿಶಾಚಿಗಳನ್ನು ಬಾಯಾರೆ ಕೊಂದು ಬಂದೆ. ನಾಡಿಗೆ ವಸಂತ ಮಾಸವನ್ನು ಕೈಯಾರೆ ಕರೆದುಕೊಂಡು ಬಂದೆ.

ಭಾಗವತ : ನಿನ್ನ ಜೊತೆ ಬೆಪ್ತಕ್ಕಡಿ ಬೋಳೇಶಂಕರ ಇರಲಿಲ್ಲವೋ?

ಕೋಡಂಗಿ : ಆ ಬೆಪ್ತಕ್ಕಡೀನೆ? ನಿಮಗೂ ಬುದ್ಧಿ ಬ್ಯಾಡವಾ ಭಾಗವತರೇ ಆ ಬೆಪ್ತಕ್ಕಡಿಗೊಂದು ತಲೇನ? ಬೆರಳಿನ ಗಂಟು ಹಿಡೀದೇ ಐದೆಣಿಸೋದಕ್ಕೆ ಬರೋದಿಲ್ಲ, ಆ ಧಡ್ಡ ಇದನ್ನೆಲ್ಲ ಮಾಡಬಲ್ಲನ? ಮನುಷ್ಯ ಮತ್ತು ಪಿಶಾಚಿಗಳ ಮಧ್ಯೆ ವ್ಯತ್ಯಾಸ ತಿಳಿಯೋದಿಲ್ಲ ಅವನಿಗೆ, ಮೋಸ ಹೋಗಲಿಕ್ಕೆ ಹುಟ್ಟಿರೋ ಆ ಬೆಪ್ತಕ್ಕಡಿ ಬೋಳೇಶಂಕರ. (ಬೋಳೇಶಂಕರ ಬರುವನು, ಅವನನ್ನು ನೋಡಿ ತಕ್ಷಣ ಮಾತು ಬದಲಿಸಿ) ಅಂತ ಏನೇನೋ ಹೇಳ್ತಿದಾರೆ, ಆವಾಗ ನಾ ಹೇಳಿದೆ: ತಮ್ಮಂದಿರಾ ನಮ್ಮ ಬೋಳೇಶಂಕರ ಅಂದರೆ ಏನಂದುಕೊಂಡಿರಿ? ಅಂತ

ಬೋಳೇಶಂಕರ : ನನ್ನ ಪರ ವಕೀಲಿ ಮಾಡಿದ್ದಕ್ಕಾಗಿ ನೋಡಯ್ಯಾ ನಿನಗೆ ಬೆಳ್ಳಿ ಚಮಚಾಗಿರಿ ಕೊಟ್ಟಿದ್ದೇನೆ, ಬದುಕಿಕೋ ಹೋಗು. (ಅಷ್ಟರಲ್ಲಿ ಮಂತ್ರಿ ಬರುವನು)

ಮಂತ್ರಿ : ಅಯ್ಯಾ ಯಾರಲ್ಲಿ

ಕೋಡಂಗಿ : ಮಂತ್ರಿ ಮಹಾಶಯರಿಗೆ ನಮಸ್ಕಾರ. ಬಹುಮಾನ ಕೊಡೋದಕ್ಕೆ ಬಂದಿರಿ ತಾನೇ?

ಮಂತ್ರಿ : ಬೆಪ್ತಕ್ಕಡಿ ಬೋಳೇಶಂಕರ, ಯಾರು?

ಕೋಡಂಗಿ : ನಾನೇ.

ಮಂತ್ರಿ : ರಾಜಕುಮಾರಿಗೆ ಮದ್ದು ಕೊಟ್ಟವನು ನೀನೇಯಾ?

ಕೋಡಂಗಿ : (ತನ್ನಲ್ಲಿ) ಏನೋ ಅಪಾಯವಾಗಿದೆ. ಈಗ ಬೋಳೇಶಂಕರನನ್ನು ಅವನ ದಡ್ಡತನ ಕಾಪಾಡ ಬೇಕಷ್ಟೆ. (ಪ್ರಕಾಶ) ನಾನಲ್ಲ ಸ್ವಾಮಿ, ನನ್ನ ಮಿತ್ರ ಅಗೋ ಅಲ್ಲಿದ್ದಾನೆ ನೋಡಿ. ಅಯ್ಯಾ ನನ್ನ ಗಳಸ್ಯ ಕಂಠಸ್ಯ, ಮಹಾಮಂತ್ರಿಗಳು ನಿನ್ನ ಧಡ್ಡತನಕ್ಕೆ ಬಹುಮಾನ ಕೊಡಬಂದಿದ್ದಾರೆ

ತಗೊಂಡು ನೀನು ಹುಟ್ಟಿದ್ದನ್ನ ಸಾರ್ಥಕ ಮಾಡಿಕೊ.

ಬೋಳೇಶಂಕರ : ನಮಸ್ಕಾರ ಸ್ವಾಮಿ.

ಮಂತ್ರಿ : ನಿಮ್ಮ ಸುದೈವಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಬೋಳೇಶಂಕರ : ಯಾಕೆ ಸ್ವಾಮಿ ಇಂಥಾ ದೊಡ್ಡ ಮಾತು?

ಮಂತ್ರಿ : ನೀವು ಕೊಟ್ಟ ಮದ್ದಿನಿಂದ ರಾಜಕುಮಾರಿಯ ಹೊಟ್ಟೆನೋವು ವಾಸಿಯಾದ್ದು ಮಾತ್ರವಲ್ಲ ನಿಮಗೇ ಅವಳನ್ನು ಕೊಟ್ಟು ಮದುವೆ ಮಾಡಿ, ರಾಜನನ್ನಾಗಿ ಮಾಡಬೇಕಂತ ರಾಜರು ತಮ್ಮ ತೀರ್ಮಾನವನ್ನು ಸಾರಿಬಿಟ್ಟಿದ್ದಾರೆ. ಬೇಗನೆ ಬಂದು ಸದರಿ ಪದವಿಗಳನ್ನು ನೀವು ಒಪ್ಪಿಕೋಬೇಕು.

ಬೋಳೇಶಂಕರ : ಇದು ಏಕಪಕ್ಷೀಯವಾದ ತೀರ್ಮಾನ, ಇದಕ್ಕೆ ನನ್ನ ಅನುಮತಿಯೂ ಬೇಕಲ್ಲವೆ?

ಮಂತ್ರಿ : ಇಷ್ಟು ಸುಂದರವಾದ ಕಾಣಿಕೆಗಳನ್ನು ಯಾರು ಬೇಡ ಅಂತಾರೆ ಸ್ವಾಮಿ?

ಬೋಳೇಶಂಕರ : ನಾನಂತೀನಲ್ಲ.

ಮಂತ್ರಿ : ಮಹಾರಾಜರಲ್ಲಿ ಹೀಗೆಂದು ಅರಿಕೆ ಮಾಡಿಕೊಳ್ಳಲ?

ಬೋಳೇಶಂಕರ : ದಯವಿಟ್ಟು, ನದಿಯನ್ನು ಬಂಧಿಸಲಾಗೋದಿಲ್ಲ, ಬಂಧಿಸಿದರೆ ನೀರಿಗೆ ಅದರದೇ ಆದ ನಿಯಮಗಳಿವೆ ಅಂತ ಹೇಳಿ.

ಮಂತ್ರಿ : ಆ ನಿಯಮಗಳು ಯಾವುವು ಅಂತ ತಿಳಿಯಬಹುದೊ?

ಬೋಳೇಶಂಕರ : ನಾನು ರಾಜನಾದರೆ ರಾಜ್ಯದಲ್ಲಿ ಸೈನ್ಯ ಇರೋದಿಲ್ಲ, ತೆರಿಗೆಗಳು ಇರೋದಿಲ್ಲ, ನಾಣ್ಯಗಳು ಇರೋದಿಲ್ಲ, ರಾಜರಾಣಿಯರಿಂದ ಹಿಡಿದು ಎಲ್ಲರೂ ದುಡೀತಾರೆ. ಎಲ್ಲರೂ ಉಣ್ಣುತ್ತಾರೆ, ದುಡಿಯುದ ಸೋಂಬೇರಿಗಳಿಗೆ ಖಂಡಿತ ಅವಕಾಶವಿಲ್ಲ.

ಕೋಡಂಗಿ : ಅಂದರೆ ನಾವು ಉಪವಾಸ ಸಾಯಬೇಕಂತಲ?

ಬೋಳೇಶಂಕರ : ಅದೇನಿದ್ದರೂ ದುಡಿದವರು, ಮುದುಕರು–ಮಕ್ಕಳು, ದುರ್ಬಲರು ಉಂಡಾದ ಮೇಲೆ ನಿಮ್ಮ ಸರದಿ.

ಕೋಡಂಗಿ : ನನಗೀಗ ನನ್ನ ಪೂರ್ವಜರೆಲ್ಲರ ಸಿಟ್ಟು ಬರ್‍ತಾ ಇದೆ. ನೀನು ಹೊಸ ರಾಜನ ಹಾಗಲ್ಲ, ಕಟುಕನ ಹಾಗೆ ಕಾಣಿಸ್ತೀಯಪ.

ಮಂತ್ರಿ : ಅನ್ಯರ ದಾಳಿಗಳಿಂದ ಪ್ರಜೆಗಳಿಗೆ ರಕ್ಷಣೆ ಬೇಡವೆ?

ಬೋಳೇಶಂಕರ : ಬಂದವರು ಏನು ಕೊಳ್ಳೆ ಹೊಡೆಯುತ್ತಾರೆ? ಏನಾದರೂ ಸಂಗ್ರಹಿಸಿದ್ದರಲ್ಲವೆ? ವಿನಿಮಯ ಕೆಲಸದಿಂದಾದರೆ, ನಾಣ್ಯದ ಅಗತ್ಯವಿಲ್ಲ, ನಾಣ್ಯ ಇಲ್ಲ ಎಂದಾದರೆ ಸಂಗ್ರಹ ಬೇಕಿಲ್ಲ.

ಮಂತ್ರಿ : ಕಾನೂನು, ಅದರ ರಕ್ಷಣೆ. . .

ಬೋಳೇಶಂಕರ : ದಾರಿ ತಪ್ಪಿದವರಿಗೆ ಗಾದೆ ಬಲ್ಲವರು ಬುದ್ಧಿ ಹೇಳುತ್ತಾರೆ; ಸಾಲದೆ?

ಕೋಡಂಗಿ : ಇವತ್ತು ಭೂಮಿ ಆಕಾಶ ಎರಡೂ ಸರಿಯಿಲ್ಲ. ವಾಯು ಮಂಡಲ ಹ್ಯಾಗೆ ಹ್ಯಾಗೋ ಬೀಸುತ್ತಿದೆ.

ಮಂತ್ರಿ : ಜೀವನ ಪದ್ಧತಿ ಇಷ್ಟು ಸರಳವಾಗಿರೋದು ಸಾಧ್ಯವೇ?

ಬೋಳೇಶಂಕರ : ಈ ತನಕ ಅನೇಕ ಪದ್ಧತಿಗಳನ್ನು ನೋಡಿದೆವಲ್ಲ. ಅವೆಲ್ಲ ವಿಭಿನ್ನ ಶೈಲಿಯಲ್ಲಿ ಎಂಜಲು ತಿನ್ನೋದನ್ನ ಕಲಿಸಿದವು, ಅಷ್ಟೆ, ಇದಕ್ಕಿಂತ ಸರಳ ಮತ್ತು ಉಪಯುಕ್ತ ಪದ್ಧತಿಗಳಿದ್ದಾವು. ಅದೇನಿದ್ದರೂ ಈ ವಿಧಾನದ ಮೂಲಕ ತಿಳಿಯಬೇಕಷ್ಟೆ.

ಮಂತ್ರಿ : ಯಾವುದನ್ನೂ ಮಹಾರಾಜರಲ್ಲಿ ಅರಿಕೆ ಮಾಡುತ್ತೇನಪ್ಪ.

ಕೋಡಂಗಿ : ನೋಡಿ ಸ್ವಾಮಿ, ನಿಜ ಹೇಳಬೇಕೆಂದರೆ ಬೋಳೇಶಂಕರ ಈ ಮಾತುಗಳನ್ನು ಹೇಳಿರೋದು ಕೇವಲ ದೇಶಪ್ರೇಮದಿಂದ. ಅವನ ಹಾಗೆ ಈ ದೇಶವನ್ನು ಪ್ರೀತಿಸುವವರು ಇನ್ನೊಬ್ಬರಿಲ್ಲ. ಈ ದೇಶದಲ್ಲಿರೋ ಹೊಲಸು ಕೂಡ ಚಂದ. ಇಷ್ಟು ಚಂದವಾದ ಹೊಲಸು ಬೇರೆಲ್ಲೂ ಇಲ್ಲ ಅಂತ ಅವನೇ ಹೇಳಿದ್ದು. ಆದ್ದರಿಂದ ರಾಜನೆದುರಿಗೆ ಹೇಳೋವಾಗ ಕೇವಲ ದೇಶಪ್ರೇಮದಿಂದ ಪ್ರೇರಿತನಾಗಿ ಹೇಳಿದ್ದು, ಅನ್ಯಥಾ ಭಾವಿಸಬೇಡಿ ಅಂತ ಸ್ವಲ್ಪ ಸಾರಿಸಿ ಹೇಳಿ.

ಮಂತ್ರಿ : ಆಗಲಪ್ಪ (ಹೋಗುವನು)

ಬೋಳೇಶಂಕರ : ಅಯ್ಯೋ ಕೋಡಂಗಿ, ಯಾಕೆ ಹೀಗೆ ತಬ್ಬಿಬ್ಬಾಗಿ ನಿಂತೆ? ವಸಂತೋತ್ಸವ ಬಂದಿದೆ ನಮಗೆ ಲಭ್ಯವಾಗಿರೋ ಮಜಕೂರುಗಳನ್ನ ಮಕ್ಕಳಿಗೆ ತೋರಿಸಿ ಸಂತೋಷ ಪಡೋಣ ನಡಿಯಯ್ಯಾ ಅಂದರೆ.. . . .

ಕೋಡಂಗಿ : ನಿಜ ನಿಜ, ನಾವು ಹಾಡೋದಕ್ಕೆ ಬೇಕಾದಷ್ಟು ಕಾರಣಗಳಿವೆ, ರಾಜರು ಕೊಡಲಿ, ಬಿಡಲಿ ಮಗಳನ್ನು ಕೊಡತೇನೆ ಅಂತ ಅಂದರಲ್ಲ; ಅದೇನು ಸಾಮಾನ್ಯವಾದ ಮಾತೆ? ಆ ಒಂದು ಮಾತಿಗೇ ಸಾವಿರ ಬಾರಿ ಲಾಗಹಾಕಬೇಕು. ನೀನು ಹುಲ್ಲು ತಗೊಂಬಾ; ನಾನು ಧಾನ್ಯ ತರುತ್ತೇನೆ. ಅಲ್ಲೀತನಕ ಭಾಗವತರೇ ಸಿಟಿಯ ಕಗ್ಗತ್ತಲೆಯಿಂದ

ಪಾರಾಗಲು ಯತ್ನಿಸಿದವರ ಹಾಡನ್ನು ಹೇಳಿ. (ಇಬ್ಬರೂ ಹೋಗುವರು)

## ಹಾಡಿನ ಒಡೆಯಾ ಬಾರಯ್ಯಾ

ಭಾಗವತ : **ತಾಯಿ ಭಾರತ ಮಾತೆ ಜಯಜಯಾ ಎಂದು**
**ಕೂಗಿದೆವು ಗಾಂಧಿಗೂ ಜಯವಾಗಲೆಂದು**
**ಆತ್ಮವಿಲ್ಲದ ಸಿಟಿಯ ಮಧ್ಯದಲಿ ಬಂದು**
**ನಕ್ಷತ್ರ ಇರಲಿಲ್ಲ ಆಕಾಶದಲ್ಲಿ**
**ಎಷ್ಟೂ ಬೆಳಕಿರಲಿಲ್ಲ ಇಡಿ ಸೀಮೆಯಲ್ಲಿ**
**ಕತ್ತು ಸಹ ಮುಳುಗಿತ್ತು ಕರಿ ನೀರಿನಲ್ಲಿ**
**ನೆಲೆಯ ಕಾಣಿಸಲಿಲ್ಲ ಗಟ್ಟಿ ನೆಲ ಕುಸಿದು**
**ಈಜಿದೆವು ಬೆಳಕಿರುವ ಸೀಮೆ ಸಿಗಲೆಂದು**
**ಆತನಕ ಮೈಯಲ್ಲಿ ಬಲವು ಬರಲೆಂದೇ**
**ಕೂಗಿದೆವು ಗಾಂಧಿಗೂ ಜಯವಾಗಲೆಂದೇ**
**ಯಾರಿಗಾದರೂ ನಮ್ಮ ದನಿ ಕೇಳಲೆಂದು**
**ಈಜಿದೆವು ಸಿಟಿದೈವ ಕಾಪಾಡಲೆಂದು**
**ಕಣ್ಣೀರು ನೀರುಗಳ ಬೆರಸಿ ಹಾಡಿದೆವು**
**ದಿಕ್ಕಿಗೂ ನಮ್ಮ ದನಿ ಕೇಳಿಸಲೇ ಇಲ್ಲ**
**ನಮ್ಮ ದನಿ ನಮಗೇನೆ ಬಂತು ತಿರುತಿರುಗಿ**
**ಹಾಡಲಿರುವುದು ಭಂಡ ಗಾಳಿ ಹಾಡನ್ನು**
**ನಮ್ಮ ಪಾಲಿಗೆ ಬೆಳಕು ಇನ್ನಿಲ್ಲವೆಂದು**
**ಆಯ್ತು, ಬೆಳಗಿನ ನಿಮ್ಮ ರೇಡಿಯೋದಲ್ಲಿ**
**ಕೇಳಿ ನಲಿಯಿರಿ ನಾವು ಮುಳುಗಿರುವ ಗೀತೆ.**

(ಹಾಡು ಮುಗಿಯುವುದರೊಳಗೆ ಬೋಳೇಶಂಕರ ಬಂದಿದ್ದಾನೆ. ಮಕ್ಕಳು ಹುಡುಗಿಯರೂ ಸೇರುತ್ತಿದ್ದಾರೆ. ಕೋಡಂಗಿಯೂ ಬರುತ್ತಾನೆ.)

ಕೋಡಂಗಿ : ಅಯ್ಯಾ ಮಿತ್ರ ಅಗೋ ಆ ಮುದಿಮಂತ್ರಿ ಪುನಃ ಬಂದು ಕರೀತಿದಾನೆ.

ಬೋಳೇಶಂಕರ : ಯಾಕಂತೆ ಹೋಗಿ ಕೇಳು. (ಮಂತ್ರಿ, ರಾಜಕುಮಾರಿ, ಒಬ್ಬ ಸೇವಕಿಯ ಜೊತೆ ಕೋಡಂಗಿ ಬರುವನು)

ಕೋಡಂಗಿ : ನಿನ್ನ ಷರತ್ತಿಗೆ ಮಹಾರಾಜರ ಒಪ್ಪಿಗೆ ಇದೆಯಂತೆ. ರಾಜಕುಮಾರಿ ನಿನ್ನ ಧಡ್ಡತನವನ್ನು ಮನಸಾರೆ ಮೆಚ್ಚಿ ಹುಡುಗಿಯರ ಜೊತೆ ಹಾಡೋದಕ್ಕೆ ಬಂದಿದ್ದಾಳೆ ಬಾ.

ಮಂತ್ರಿ : ಹೌದು ಮಹಾರಾಜ.

ಬೋಳೇಶಂಕರ : ಹಾಗೇ ಆಗಲೇಳು, ಶಿವನ ಇಚ್ಛೆ ಇದ್ದ ಹಾಗಾಗಲಿ.

ಕೋಡಂಗಿ : ಇನ್ನು ಮೇಲೆ ಬೋಳೇಶಂಕರನೇ ಈ ದೇಶದ ಮಹಾರಾಜ. ರಾಜಕುಮಾರಿ ಜೊತೆ ಮದುವೆ ಆಗಲಿದ್ದಾನೆ. ನಂಬಿಕೆ ಇಲ್ಲದಿದ್ದರೆ ಇಕೋ ಮಂತ್ರಿಗಳು ಬಂದಿದ್ದಾರೆ, ಕೇಳಿ ಖಾತ್ರಿ ಮಾಡಿಕೊಳ್ಳಿ. (ರಾಜಕುಮಾರಿ ನಾಚುವಳು)

ಮಂತ್ರಿ : ಹೌದು ಹೌದು.

ಬೋಳೇಶಂಕರ : ಲೇ ಹುಡಿಗೇರಾ,

ಹೊಗಳಿ ಹಾಡಿದರೆ ನೀವು ನನ್ನನ್ನ, ಕೊಡುತ್ತೀನಿ ಅದ್ಭುತ ಬಹುಮಾನವನ್ನ.

ಹುಡುಗಿಯರು : ಏ ಬರ್ರೆ ಮೇಳ ಹೇಳ್ರಿ ।

**ಬೋಳೇಶಂಕರ ಶಿವ ।**
**ಬೆಪ್ತಕ್ಕಡಿ ಸದಾಶಿವ ।**
**ಅವ್ ನೋಡ ಶೂರ**
**ಸೀಮೆ ಸರದಾರ**
**ಹಾಡಿನ ಒಡೆಯಾ ಬಾರಯ್ಯಾ ॥**

**ಉಲ್ಲಾಸ ಚೆಲ್ಲವನೆ**
**ಚಿಂತೆ ಜಾಲಾಡುವನೆ**
**ಶಿವ ಶಿವ ಎಂಬರು**
**ಎದ್ದರು ಕೂತರು**
**ಊರಿನ ಜನ ದನ ಎಲ್ಲಾರು ॥**

**ಕಲ್ಲಿಗೆ ಕಲ್ಲಂತ**
**ಹೇಳಿದ ಸತ್ಯವಂತ**
**ಹುಲ್ಲಿನ ಪೆಂಟಿ**
**ಚಿನ್ನದ ಗಟ್ಟಿ**
**ಹುಲ್ಲೇನೆ ಮಿಗಿಲಂತ ಆಯ್ದವಗೆ ॥**

**ಅವ್ವ ಎಲ್ಲರಿಗಿಂತ**
**ದೊಡ್ಡ ತಲೆಯಾತ**
**ಎಡ ಯಾವುದಂತ**
**ಬಲ ಯಾವುದಂತ**
**ತೋರಿದ ಮೊದಲನೆ ಬುದ್ಧಿವಂತ॥**

ಬೋಳೇಶಂಕರ : ಹೊಗಳಿದ್ದಕ್ಕೆ ವಂದನೆಗಳು, ಆದರೂ ನಿನ್ನ ಹಾಡು ಚೆನ್ನಾಗಿರಲಿಲ್ಲಮ್ಮ.

ಹುಡುಗಿ ೧ : ಅದೆಲ್ಲಾ ಕೇಳೋದಿಲ್ಲಾ ನೀನೀಗ ಬಹುಮಾನ ಕೊಡಲೇಬೇಕು.

ಬೋಳೇಶಂಕರ : ಎಷ್ಟು ಚೆನ್ನಾಗಿ ಕೆಟ್ಟ ಹಾಡು ಹಾಡಿದಿರಿ ಅಂತ ಬಹುಮಾನ ಕೊಡಬೇಕ?

ಹುಡುಗಿ ೨ : ಹಾಗಂತ ಹೇಳಲಿಲ್ಲವ ನೀನು?

ಬೋಳೇಶಂಕರ : ಕೋಡಂಗೀ, ಜೋಳದ ಚೀಲ ಎಲ್ಲಿಟ್ಟೆ?

ಕೋಡಂಗಿ : ಇಲ್ಲಿದೆ.

ಬೋಳೇಶಂಕರ : ಆಯ್ತು ಬಹುಮಾನ ಕೋಡ್ತೇನೆ. ಎಲ್ರು ಕಣ್ಣು ಮುಚ್ಚಿಕೊಳ್ಳಿ ನೋಡೋಣ, ನಾನು ಹೇಳೋ ತನಕ ಯಾರು ತಪ್ಪಿ ಕೂಡ ಕಣ್ಣು ಬಿಡಬಾರದು.

ಎಲ್ಲರೂ : ಮುಚ್ಚಿಕೊಂಡಿವಿ.

ಬೋಳೇಶಂಕರ : ಕೋಡಂಗಿ ಹತ್ತೆಣಿಸುತ್ತಾನೆ. ಎಣಿಸಿದ ಮೇಲೇ ಕಣ್ಣು ಬಿಡಬೇಕು (ಜೋಳದ ಚೀಲದ ಹತ್ತಿರ ಹುಡಿಗೇರು, ಮಕ್ಕಳ ಕಡೆಗೆ ಬೆನ್ನು ತಿರುಗಿಸಿ ನಿಂತು ಮಂತ್ರ ಹಾಕುತ್ತಾನೆ)

ಕೋಡಂಗಿ : ಒಂದು ಎರಡು ಮೂರು . . . ನಾಲ್ಕು ಐದು ಆರು ಏಳು ಎಂಟು ಒಂಬತ್ತೋ. . . ಹತ್ತೋ!

ಬೋಳೇಶಂಕರ : ಎಲ್ಲಿ, ಕಣ್ಣು ತೆಗೀರಿ.(ಚಿನ್ನದ ನಾಣ್ಯಗಳನ್ನು ಎಸೆಯುವನು. ಎಲ್ಲರೂ ಚಕಿತರಾಗಿ ಗಲಾಟೆ ಮಾಡುತ್ತ ನನಗೆ ತನಗೆ ಎಂದು ಆಯ್ದುಕೊಳ್ಳುವರು. ಇನ್ನಷ್ಟು ಮತ್ತುಷ್ಟು ಎಸೆಯುವರು. ಮತ್ತೂ ಆನಂದದಿಂದ ಆಯುವರು)

ಹುಡುಗಿ ೧ : ಬೆಪ್ತಕ್ಕಡಿ ನನಗೆ ಇನ್ನೆರಡು ಎಸೆಯಣ್ಣ.

ಹುಡುಗಿ ೩ : ನನಗೆರಡು.

ಹುಡುಗಿ ೪ : ನನಗೆರಡೇ ಎರಡು ಕೊಟ್ಟು ಬಿಡು.

ಬೋಳೇಶಂಕರ : ನನ್ನಹತ್ತಿರ ಇನ್ನೇನೂ ಉಳಿದಿಲ್ಲ. ಇನ್ನೊಂದು ಸಲ ಇನ್ನಷ್ಟು ಕೊಡತೀನಿ. ಈಗ ಕುಣಿಯೋಣ, ನಿಮ್ಮ ಹಾಡು ಹೇಳಿ.

ಹುಡುಗಿ ೨ : ನಮ್ಮ ಹಾಡು ಚೆನ್ನಾಗಿಲ್ಲ ಅಂತೀಯಾ, ನಮಗಿಂತ ಚೆನ್ನಾಗಿ ಯಾರು ಹಾಡ್ತಾರೆ ತೋರಿಸು ನೋಡೋಣ.

ಬೋಳೇಶಂಕರ : ತೋರಿಸಲ? ಇರು ಹಾಗಾದರೆ, ಕೋಡಂಗೀ ಹುಲ್ಲಿನ ಹೊರೆ ಎಲ್ಲಿಟ್ಟೆ?

ಕೋಡಂಗಿ : ಅಕೋ ಆ ಗೋಡೆ ಹಿಂದೆ.

ಬೋಳೇಶಂಕರ : ಸರಿ ಹಾಗದರೆ. ಎಲ್ಲಿ ಎಲ್ಲರೂ ಕಣ್ಣು ಮುಚ್ಚಿ ನೋಡೋಣ. ಕೋಡಂಗೀ ನೀ ಹತ್ತರತನಕ ಎಣಿಸು.

ಕೋಡಂಗಿ : ಒಂದು ಎರಡು ಮೂರು ನಾಲ್ಕು
ಐದು ಆರು ಏಳು ಎಂಟು
ಒಂದೆರಡ್ಮೂರ್ನಾಲ್ಕ್
ಐದಾರೇಳೆಂಟ್
ಒಂಬತ್ತು ಹತ್ತು.

(ಗೋಡೆಯ ಮರೆಯಿಂದ ಹಾಡು ಕೇಳಿಸತೊಡುಗುವುದು, ಬಂದೂಕುಧಾರಿ ಸಿಪಾಯಿಗಳು ಸಾಲಾಗಿ ಹಾಡುತ್ತ ಬರುವರು, ಸಿಪಾಯಿಗಳು ಹಾಡುತ್ತ ಕವಾಯತು ಮಾಡುವರು.)

ಸೈನಿಕರು : **ಜಯವು ನಮ್ಮ ಕೋವಿಗೆ**
**ದೇವರಂಥ ಕೋವಿಗೆ**
**ವಿಜಯಲಕ್ಷ್ಮಿ ಒಲಿದು ಬರಲಿ ನಮ್ಮ ಕೋವಿಗೆ**
**ನುಗ್ಗಿ ನಡೆವ ಒದ್ದು ನಡೆವ ಕುಣಿವ ಕೋವಿಗೆ**
**ಕೆಂಪು ಭಾಷೆಯಾಡುವೆಮ್ಮ ಕರಿಯ ಕೋವಿಗೆ**
**ಗುಂಡು ಮಳೆಯ ಸುರಿಸಿ ಶಾಂತಿ ಬೆಳೆವ ಕೋವಿಗೆ**
**ಸಿಡಿವುದಕ್ಕೆ ತಾರೆಗಳಿಗೆ**
**ಹಾಡಲಿಕ್ಕೆ ಸೈರನ್ನಿಗೆ**
**ಒದೆವ ಕಾಲ ನೆಕ್ಕುವಂಥ ನಾಯಿ ವಿದ್ಯೆ ಕಲಿಸುವ**
**ಕೋವಿಗೆ ಜಯವಾಗಲೆಂದು ಬನ್ನಿ ಬನ್ನಿ ಹೇಳುವ.**

ಬೋಳೇಶಂಕರ : ಮಕ್ಕಳ್ರಾ, ಕೋವಿಗೆ ಜಯವಾಗಲಿ ಅಂತ ಹಾಡ್ತೀರಲ್ಲ. ಬುದ್ಧಿ ಇದೆಯ ನಿಮಗೆ? ಇನ್ನೂ ಬೇರೆ ಹಾಡಿಲ್ಲವ ನಿಮ್ಮ ಹತ್ತಿರ.

ಸೈನಿಕ : ಸಿಟಿ ಬಗ್ಗೆ ಒಂದು ಹಾಡಿದೆ, ಹೇಳೋಣವೆ?

ಬೋಳೇಶಂಕರ : ಹೇಳಿ.

ಸೈನಿಕರು : **ಮಿಲ್ಲಿನ ಹೊಗೆ ದಟ್ಟೈಸಿದೆ ಬಾನ್ನೀಲಿಯ ತುಂಬ**
**ಸೈರನ್ನಿನ ದನಿ ತುಂಬಿದೆ ಎಳೆ ಕಿವಿಗಳ ತುಂಬ**
**ಕೊಳೆಗೇರಿಯ ಕೊಚ್ಚೆಯಲ್ಲಿ ತೇಲಾಡಿದ ಮಕ್ಕಳು**
**ಆಲದೆಲೆಯ ಮೇಲಾಡುವ ಕ್ಯಾಲೆಂಡರ ಕೃಷ್ಣರು**
**ತಂಬೆಲರಿನ ತುಂಬಾ ಇದೆ ಪೆಟ್ರೋಲಿನ ನಾತ**
**ವಾಹನಗಳ ತುಟಿತುಟಿಯಲ್ಲಿ ತುಳುಕಿದೆ ನವನೀತ**
**ಕಪ್ಪಾಗಿವೆ ಕುಂಡದ ಗಿಡಬಳ್ಳಿಯ ಎಲೆ ಹೂವು**
**ಲಾಲ್‌ಬಾಗಿನ ತರುಲತೆಯಲಿ ಅರಳಿರುವವು ನೋವು.**

ಬೋಳೇಶಂಕರ : ನಮ್ಮೂರು ಶಿವಾಪುರದ ಬಗ್ಗೆ ಹಾಡು ಹೇಳ್ರಯ್ಯಾ ಅಂದರೆ,

ಸೈನಿಕ : ನಮಗೆ ಗೊತ್ತಿಲ್ಲ.

ಬೋಳೇಶಂಕರ : ಹಾಗಿದ್ದರೆ ನಾ ಹೇಳಿದ ಹಾಗೆ ಹೇಳಿ.

ಬೋಳೇಶಂಕರ : **ಜಯ ಜಯಾ ಶಿವಪೂರಿಗೆ**
**ಹಸಿರಿನ ತವರೂರಿಗೆ**
**ಹಾಡು ಬೆಳೆವ ಕಾಡಿಗೆ**
**ನಮ್ಮ ಛಳಿಗೆ ಬಿಸಿಯಾಗುವ**
**ಕಣ್ಣುಗಳಿಗೆ ಕನಸು ಕೊಡುವ**
**ಯೌವನವನು ಕಾಪಾಡುವ**
**ಮುಳ್ಳಿನಲ್ಲು ಹೂಹೂಗಳ ನಗೆಯ ನಗುವ ಸೀಮೆಗೆ**
**ಜಯ ಜಯ ಶಿವಪೂರಿಗೆ॥**

**ಹಕ್ಕಿಯ ಸಖೀಗೀತಗಳಿಗೆ**
**ರಾಗ ತಾಳ ಹಾಕಿ ಕುಣಿವ**
**ಎಳೆಯರಿರುವ ಊರಿಗೆ.**
**ನೀರಿಗಿಂತ ಆಳವಾದ**
**ಒಲವ ಬಲ್ಲ ಸೀಮೆಗೆ**
**ನೀರಿನಲ್ಲಿ ಮೀನ ಹೆಜ್ಜೆ**
**ಗುರುತು ಹಿಡಿವರೂರಿಗೆ.**

**ಸುಕ್ಕಿನ ಗೆರೆ ಸಾಣೆ ಹಿಡಿವ**
**ಜಾಣ ಮುದುಕರೂರಿಗೆ.**
**ಆಳದಲ್ಲಿ ಲಾವಣಿಗಳನುಳ್ಳ**
**ನದಿಯ ಊರಿಗೆ.**

**ಋತುಮಾನದ ಪೈರು ಬೆಳೆವ**
**ದಂಟಿಗೆಂಟು ತೆನೆಗಳಿರುವ**
**ತೆನೆಗೆ ಒಂದು ಹಾಡುವಂಥ**
**ಹಕ್ಕಿಯಿರುವ ಊರಿಗೆ.**
**ಜಯ ಜಯ ಶಿವಪೂರಿಗೆ॥**

ಬೋಳೇಶಂಕರ : ಕೋಡಂಗಿ, ಊರ ತುಂಬ ಇವರ ಮೆರವಣಿಗೆ ಮಾಡಿಸು. ಊರಲ್ಲಿರೋ ಮಕ್ಕಳೂ ಹೆಂಗಸರು ನೋಡಲಿ. ಆಮೇಲೆ ತೋಟದ ಹತ್ತಿರ ಕರೆದುಕೊಂಡು ಬಾ, ತಿಳಿಯಿತೊ?(ಸೈನಿಕರು ಹಾಡುತ್ತ ಕೋಡಂಗಿಯ ಬೆನ್ನು ಹತ್ತುವರು)

## ಚಿನ್ನವ ಪೊಗಳಯ್ಯಾ

**(ಕೆಲಸದಲ್ಲಿ ತೊಡಗಿರುವ ಬೋಳೇಶಂಕರನಲ್ಲಿಗೆ ಸಾವ್ಕಾರ ಓಡಿ ಬರುತ್ತಾನೆ)**

ಸಾವ್ಕಾರ : ಬೋಳೇಶಂಕರಾ, ಬೋಳೇಶಂಕರಾ ಎಂಥ ಕೆಲಸ ಮಾಡಿದೆ? ಬೇಜವಾಬ್ದಾರೀ ಹುಡಿಗೇರಿಗೆ ಆಡೋ ಮಕ್ಕಳಿಗೆ ಚಿನ್ನದ ನಾಣ್ಯ ಕೊಟ್ಟೆಯಂತಲ್ಲ. ನನಗೇ ಕೊಡಬಾರದಿತ್ತೇ? ನನಗೆ ತುಸು ಹಣ ಸಿಕ್ಕಿದ್ದರೆ ವ್ಯಾಪಾರ ಮಾಡಿ ಅದು ಪ್ರಪಂಚದ ಮೂಲೆ ಮೂಲೆಯಲ್ಲಿ ಚಿನ್ನದ ಮೊಟ್ಟೆಯಿಡೋ ಹಾಗೆ ಮಾಡ್ತಿದ್ದೆ.

ಬೋಳೇಶಂಕರ : ಅದಕ್ಕೇನಂತೆ ಹಾಗೇ ಆಗಲೇಳು, ನಿನಗೀಗಲೂ ನಾನು ಚಿನ್ನದ ನಾಣ್ಯ ಕೊಡಬಲ್ಲೆ. ಆದರೆ ಧಾನ್ಯದಿಂದ ನಾಣ್ಯ ಮಾಡಬೇಕಾಗುತ್ತೆ, ಪರವಾಯಿಲ್ಲವೆ?

ಡಬ್ಬು : ಯಾಕಿರುತ್ತೆ ಬಿಲ್‌ಕುಲ್ ಪರವಾ ಇಲ್ಲ ಮಾರಾಯಾ.

ಬೋಳೇಶಂಕರ : ನನ್ನ ಹತ್ತಿರ ಧಾನ್ಯ ಹೆಚ್ಚಿಗಿಲ್ಲವಲ್ಲ, ಎಷ್ಟು ಬೇಕೀಗ?

ಡಬ್ಬು : ಒಂದೆರಡು ಚೀಲವಾದರೂ ಬೇಕು.

ಬೋಳೇಶಂಕರ : ಹಾಗೇ ಆಗಲೇಳು (ಧಾನ್ಯದ ಚೀಲದ ಹತ್ತಿರ ನಿಂತು)

**ಹಂಡೋಲ್ ಬಂಡೋಲ್ ಚಿಗುರಿ**

**ಚಿಕಲಕ ಬಕಲಕ**

**ಸಾಲಕುದರಿ ಹನುಮಂತರಾಯಾ**

**ಧಾನ್ಯವೆಲ್ಲಾ ನಾಣ್ಯವಾಗ್ಲಿ**

**ನಾಣ್ಯವೆಲ್ಲಾ ಚಿನ್ನಾ ಆಗ್ಲಿ**

**ಬಚ್ಚಾಬೋಲ್**

**ಬೋಲಾತಿಬೋಲ್ ಹ್ರಾಂ ಲಂಗೋಟಿ ಕೋಲ್**

ಡಬ್ಬು : ಅಬ್ಬ! ಇದೆಲ್ಲಾ ಅಸಲಿ ಚಿನ್ನ ಏನಪ್ಪಾ?

ಬೋಳೇಶಂಕರ : ನೀನೇ ನೋಡಿಕೊಳ್ಳಣ್ಣಾ.

ಡಬ್ಬು : ಕಣ್ಣುಗಳನ್ನೇ ನಂಬಲಿಕ್ಕಾಗುತ್ತಿಲ್ಲ, ಅಬ್ಬಬ್ಬ ಅಸಲೀ ಚಿನ್ನದ ನಾಣ್ಯಗಳು!

ಬೋಳೇಶಂಕರ : ಈ ಚಿನ್ನದಿಂದ ತಿರಗಾ ಧಾನ್ಯ ಮಾಡಬೇಕಾದರೆ–

ಡಬ್ಬು : ಬೇಡಬೇಡ, ಚಿನ್ನ ಸಾಕನ್ನೋದುಂಟೆ?

ಬೋಳೇಶಂಕರ : ಹೌದು, ಚಿನ್ನ ತಿಂದು ಬದುಕಲಾಗುತ್ತ?

ಡಬ್ಬು : ಇಲ್ಲ, ಹಾಗಂತ ಮಣ್ಣು ತಿಂದೂ ಬದುಕಲಾಗೋದಿಲ್ಲ ತಮ್ಮ, ಚಿನ್ನ ಅಂದರೆ ಏನಂದು ಕೊಂಡೆ–

**ಚಿನ್ನವ ಹೊಗಳಯ್ಯಾ ನಾಣ್ಯವ ಹೊಗಳಯ್ಯಾ**
**ಜಗದಲಿ ಚಿನ್ನವೇ ಮಿಗಿಲೆಂದು ಹೊಗಳು.**
**ಹೊಗಳುದಕೆ ನಾಲಗೆ ಏಳದಿದ್ದರೆ ಬಾಯಿ**
**ಮುಚ್ಚಿಕೊಂಡಿರುವುದೆ ಮಿಗಿಲೆಂದು ಹೇಳು**
ಎರಡೆರಡು ಸೇರಿದರೆ ಎಷ್ಟಾಯ್ತಪ್ಪ?

ಬೋಳೇಶಂಕರ : ನಾಲ್ಕು.

ಡಬ್ಬು : ತಪ್ಪು.

**ಎರಡೆರಡು ಸೇರಿದರೆ ಏಳೆಂಟು ಆಗುವ**

**ಅದ್ಭುತಕೆ ತಲೆಬಾಗಿ ಬಾಯ್ತುಂಬ ಹೊಗಳು.**

**ಹೊಗಳುದಕೆ ನಾಲಗೆ ಏಳದಿದ್ದರೆ ಬಾಯಿ**

**ಮುಚ್ಚಿಕೊಂಡಿರುವುದೆ ಮಿಗಿಲೆಂದು ಹೇಳು.**

ಕೈಯಿಂದ ಕೆಲಸ ಮಾಡತೀಯಾ, ತಲೆಯಿಂದ ಕೆಲಸ ಮಾಡ್ತೀಯಾ ನೀನು?

ಬೋಳೇಶಂಕರ : ಕೈಯಿಂದ.

ಡಬ್ಬು : **ಕೂತಲ್ಲೆ ತಲೆಯಿಂದ ಕಾಯಕ ಮಾಡುತ್ತ**
**ಲೋಕವನಾಳುವವನ ಮಹಿಮೆಯ ಹೊಗಳು.**
**ಹೊಗಳುದಕೆ ನಾಲಗೆ ಏಳದಿದ್ದರೆ ಬಾಯಿ**
**ಮುಚ್ಚಿಕೊಂಡಿರುವುದೆ ಮಿಗಿಲೆಂದು ಹೇಳು**
**ಚಿನ್ನದ ನಾಣ್ಯದ ಮ್ಯಾಲಿನ ಗೊಂಬೆಯ**
**ನುಡಿಗಳನೆಂದಾರೆ ಕೇಳಿರುವೆಯಾ?**

ಬೋಳೇಶಂಕರ : ಇಲ್ಲ.

ಡಬ್ಬು : **ಮಾತಾಡೋ ರಾಜನ ಹಾಡುವ ರಾಣಿಯ**
**ನುಡಿಗಳನೆಂದಾರೆ ಕೇಳಿರುವೆಯಾ?**

ಬೋಳೇಶಂಕರ : ಇಲ್ಲ

ಡಬ್ಬು : **ಕೇಳದಿದ್ದರೆ ಬಾಯಿ ಮುಚ್ಚಿಕೊಂಡಿರುವುದೆ**
**ಸಾವಿರ ಪಾಲಿಗೆ ಮಿಗಿಲೆಂದು ಹೇಳು.**

ಬೋಳೇಶಂಕರ : ಬಾಯಮುಚ್ಚಿರುವುದೆ ಸಾವಿರ ಪಾಲಿಗೆ ಮಿಗಿಲು. ಚಿನ್ನ ನೋಡಿ ನಿನಗಿಷ್ಟು ಸಂತೋಷವಾಗುತ್ತದೆ ಅಂತ ಗೊತ್ತೇ ಇರಲಿಲ್ಲ. ಇನ್ನಷ್ಟು ಬೇಕಾದರೆ ಸುಗ್ಗಿ ಆದ ಮೇಲೆ ಬಾ. ಈ ಸಲ ಪೈರು ಚೆನ್ನಾಗಿದೆ.

ಸಾವ್ಕಾರ : ತುಸು ಹೊತ್ತು ಇಲ್ಲೇ ಇರು. ಗಾಡಿ ತಂದು ತಗೊಂಡು ಹೋಗ್ತೀನಿ. ಹುಷಾರು ತಮ್ಮಾ, ಯಾರಾದರೂ ಚೀಲಕ್ಕೆ ಕೈ ಹಾಕಿಯಾರು. ನೀನೂ ಅಷ್ಟೇ, ಕೈ ಹಾಕಬೇಡ. (ಸಾವ್ಕಾರ ಓಡಿ ಹೋಗುವನು. ಇನ್ನೊಂದು ಕಡೆಯಿಂದ ಕೋಡಂಗಿ ಮತ್ತು ಸರದಾರ ಸೋಮಣ್ಣ ಬರುವರು)

ಸರದಾರ : ಏನೋ ತಮ್ಮಾ! ನೀನು ತಯಾರಿಸಿದ ಜವಾನರನ್ನು ನೋಡಿ ನಿಜವಾಗ್ಲೂ ಆಶ್ಚರ್ಯ, ಸಂತೋಷ ಆಯ್ತಪ್ಪ, ಜವಾನರನ್ನು ಹುಟ್ಟಿಸೋ ವಿದ್ಯೆ ನಿನ್ನ ಹತ್ತಿರ ಇದೆ ಅಂತ ಗೊತ್ತಿದ್ದಿದ್ದರೆ ನಾನೇ ರಾಜ ನಾಗಿರುತ್ತಿದ್ದೆ. ನೀನು ಹೇಳಲೇ ಇಲ್ಲ. ನಾನೂ ಕೇಳಲೇ ಇಲ್ಲ ಅಂತಿಟ್ಟುಕೋ. ಇರಲಿ, ಆಗಳೆ ಇದ್ದರಲ್ಲ, ಆ ಜವಾನರೆಲ್ಲ ಎಲ್ಲಿ?

ಬೋಳೇಶಂಕರ : ಹಾಡಿದರು, ಕುಣಿದರು, ಹೊರಟೋದರು.

ಸರದಾರ : ಎಲ್ಲಿಗೆ?

ಬೋಳೇಶಂಕರ : ಮೂಲದಲ್ಲಿ ಏನಿದ್ದರೋ ಆ ಅವಸ್ಥೆಗೆ.

ಸರದಾರ : ಜವಾನರು ಹಾಗೆ ಇರಬೇಕೇಳು. ಸೇನಾಪತಿ ಹೇಳಿದ ಹಾಗೆ ಕೇಳಬೇಕು. ಅವರನ್ನು ಹ್ಯಾಗೆ ಮಾಡಿದೆ?

ಬೋಳೇಶಂಕರ : ಅದರಿಂದ ನಿನಗೇನಾಗಬೇಕಾಗಿದೆ?

ಸರದಾರ : ಒಳ್ಳೆ ಪ್ರಶ್ನೆ, ಜವಾನರಿದ್ದರೆ ಏನೂ ಆಗಬಹುದು, ಏನೂ ಮಾಡಬಹುದು, ಬೇಕಾದರೆ ರಾಜ್ಯ ಕಟ್ಟಬಹುದು, ರಾಜ್ಯ ಗೆಲ್ಲಬಹುದು.

ಬೋಳೇಶಂಕರ : ಹೌದ! ಹಾಗಿದ್ದರೆ ನನಗೆ ಮೊದಲೇ ಯಾಕೆ ಹೇಳಲಿಲ್ಲ? ನಿನಗೆಷ್ಟು ಬೇಕೋ ಅಷ್ಟು ಜವಾನರನ್ನು ಮಾಡಿಕೊಡ್ತೇನೆ. ಈ ಸಲ ಹುಲ್ಲೂ ಹುಲುಸಾಗಿ ಬೆಳೆದಿದೆ, ಎಷ್ಟು ಜನ ಜವಾನರು ಬೇಕು?

ಸರದಾರ : ಸದ್ಯಕ್ಕೆ ಕೆಲವು ಸಾವಿರ ಜವಾನರು ಸಾಕು.

ಬೋಳೇಶಂಕರ : ಕೊಟ್ಟೇನು, ಆದರೆ ನಾನು ನಿನಗೆ ಜವಾನರನ್ನು ಮಾಡಿಕೊಟ್ಟ ತಕ್ಷಣ ನೀನು ಅವರನ್ನು ಕರೆದು ಕೊಂಡು ಈ ಹಳ್ಳಿಯಿಂದ ಹೊರಟು ಬಿಡಬೇಕು. ಅವರಿಗೇನಾದರು ಹೊಟ್ಟೆಗೆ ಹಾಕಬೇಕಾಗಿ ಬಂದರೆ ಕಷ್ಟ. ಒಂದೇ ದಿನದಲ್ಲಿ ಅವರು ಶಿವಾಪುರವನ್ನೆಲ್ಲಾ ತಿಂದು ಬಿಡುತ್ತಾರೆ.

ಸರದಾರ : ನಾನಾದರೂ ಇಲ್ಲಿದ್ದು ಮಾಡೋದೇನಿದೆ? ಆ ಕ್ಷಣವೇ ಹೊರಟು ಬಿಡ್ತೀನಿ.

ಬೋಳೇಶಂಕರ : ಹಾಗಿದ್ದರೆ, ಇಕೋ; (ಹುಲ್ಲು ತಗೊಂಡು ನಿಲ್ಲಿಸಿ)

**ಹಂಡೋಲ್ ಬಂಡೋಲ್ ಚಿಗರಿ**
**ಚಿಕಲಕ ಬಕಲಕ**
**ಸಾಲಕುದರಿ ಹನುಮಂತರಾಯಾ**
**ಹುಲ್ಲಿನೆಸಳು ಜವಾನರಾಗ್ಲಿ ಬಚ್ಚಾಬೋಲ್**
**ಬೋಲಾತಿ ಬೋಲ್ ಹ್ರಾಂ ಲಂಗೋಟಿ ಕೋಲ್.**

(ಜವಾನರು ಮಾರ್ಚ್ ಫಾಸ್ಟ್ ಮಾಡುತ್ತ ಬರುತ್ತಾರೆ)

ಬೋಳೇಶಂಕರ : ಇಷ್ಟು ಜನ ಸಾಕೆ?

ಸರದಾರ : ಸಾಕು ಸಾಕು. ತುಂಬಾ ಉಪಕಾರವಾಯ್ತು! ಬೆಪ್ತಕ್ಕಡಿ ನೋಡ್ತಾ ಇರು

ಪ್ರಪಂಚಾನೆಲ್ಲ ಗೆದ್ದು ತಲೆ ಮೇಲೆ ಕಿರೀಟ ಇಟ್ಟುಕೊಂಡು ಬಂದು ನಿನ್ನನ್ನ ನನ್ನ ದರ್ಬಾರಿಗೆ ಕರೆಸಿ ಪ್ರಶಸ್ತಿ ನೀಡತೀನಿ.

ಬೋಳೇಶಂಕರ : ಸರಿಯಪ್ಪ, ನಿನಗೆ ಇನ್ನೂ ಜವಾನರು ಬೇಕಾದರೆ ಮತ್ತೆ ಬಾ, ಮಾಡಿಕೊಡುತ್ತೇನೆ. ಆದರೆ ಮುಂದಿನ ಸಲ ಹುಲ್ಲನ್ನು ನೀನೇ ತರಬೇಕು, ಅಷ್ಟೆ.

ಸರದಾರ : ಖಂಡಿತ ಆಗಲಪ್ಪ.

ಬೋಳೇಶಂಕರ : ಹೋಗಿ ಬಾ. ಶಿವ ನಿನಗೆ ಒಳ್ಳೇದ್ಮಾಡ್ಲಿ. (ಸೈನಿಕರೊಂದಿಗೆ ಸರದಾರ ಹೋಗುವನು)

## ಕತ್ತಲೆಯ ನಿಜ ಜನಕ ಬಂದನು

ಕೋಡಂಗಿ : ಏನು ಭಾಗವತರೇ ಈ ಪರಿ ಗಾಳಿ ಬೀಸ್ತಿದೆ. ಇದು ನಿಮ್ಮ ಕಥೆಯಲ್ಲಿ ಬೀಸ್ತಿದೆಯಾ? ನಿಜವಾಗಿ ಬೀಸ್ತಿದೆಯಾ?

ಭಾಗವತ : ಬಿರುಗಾಳಿ ಬೀಸ್ತ ಇದೆ. ನದಿ ಹರಿಯೋದನ್ನ ನಿಲ್ಲಿಸಿ ಯಾರದೊ ಪಿಸುದನಿ ಕೇಳಿಸಿಕೊಳ್ತ ಇದೆ. ಅಕಾ, ಕಾಲು ಭೂಮಿ ಮ್ಯಾಲಿದ್ದರೂ ಮೋಡಗಳಲ್ಲಿ ಯಾರದೋ ತಲೆ ಕಂಡ ಹಾಗಾಯ್ತು, ಕಂಡೆಯಾ?

ಕೋಡಂಗಿ : ಇಲ್ಲವೆ!

ಭಾಗವತ : ಲೋಕ ಕುಟ್ಟಿ ಕೆಡಹುವ ಹಾಗೆ ಹೆಜ್ಜೆಯಿಡುತ್ತ ಯಾರೋ ಬರ್ತಿದಾರೆ, ಹೆಜ್ಜೆ ಸಪ್ಪಳ ಕೇಳಿಸ್ತ?

ಕೋಡಂಗಿ : ಇಲ್ಲವೆ!

ಭಾಗವತ : ಸೈತಾನ ಬರ್ತಿದಾನಯ್ಯ.

ಕೋಡಂಗಿ : ಸೈತಾನ ಅಂದರೆ ಬಣ್ಣದ ವೇಷ ತಾನೆ? ಅದನ್ನಾದರೂ ತರಿಸಿ ಮಾರಾಯರೆ, ಕಣ್ತುಂಬ ನೋಡೋಣ, ಅದೇನು ಕಥೆಗಾರಿಕೆಯೋ, ಬಡವನ್ನ ತೆಗಳ್ತೀರಿ, ಶ್ರೀಮಂತನ್ನ ಹೊಗಳ್ತೀರಿ, ಬಡವ ಬಂದರೆ ದುಃಖದ ರಾಗ ತಗೀತೀರಿ. ರಾಜ ಬಂದರೆ ಆನಂದದ ರಾಗ ಬಿಚ್ಚುತ್ತೀರಿ, ಹಳ್ಳಿ ಅಂದರೆ ಲಬೋ ಲಬೋ ಅಂತೀರಿ ಸಿಟಿ ಅಂದರೆ ಹಾಹಾ ಅಂತೀರಿ.

ಭಾಗವತ : ನನಗೆ ಎಲ್ಲರೂ ಅಷ್ಟೆ ಕಣಪ್ಪ, ಯಾಕೆಂದರೆ ನಾನು ಕಥೆಗಾರ.

ಕೋಡಂಗಿ : ನಿಮ್ಮ ಕಥೆಯಲ್ಲಿ ನಿಮಗೇ ಗೊತ್ತಿಲ್ಲದೆ ಎಷ್ಟೆಷ್ಟೋ ಬದಲಾವಣೆ ಆಗಿವೆ ಗೊತ್ತ? ಬೋಳೇಶಂಕರ ಬೇಕೂಫಾಗಿದಾನೆ, ಅಣ್ಣಂದಿರು

ಮಹಾರಾಜರಾಗಿದ್ದಾರೆ. ಕಥೆಗಾರ ಕಥೆ ಮರ್‍ತಿದಾನೆ. ರಾಜಕುಮಾರಿ ಸಾಮಾನ್ಯನ್ನ ಮದುವೆ ಆಗಿದ್ದಾಳೆ, ರಾಜಾ ಕೂಲಿ ಆಗಿದಾನೆ....

ಭಾಗವತ : ಪರವಾ ಇಲ್ಲ ನಿನಗೂ ವಿಷಯ ಗೊತ್ತಾಗಿದೆ, ಮುಂದಿನ ಕಥೆ ಇನ್ನು ಮೇಲೆ ನೀನೇ ಹೇಳಬಹುದು.

ಕೋಡಂಗಿ : ಹೇಳೋ ಹಾಗಿದ್ದರೆ ಇಲ್ಲೀತನಕ ಹೇಳುತ್ತಿದ್ದೆ. ಈಗ ಸೈತಾನ ಬರ್‍ತಿದಾನೆ ಅಂದಿರಲ್ಲ, ಇನ್ನು ಮೇಲೆ ಸಾಧ್ಯವಿಲ್ಲ ಸ್ವಾಮಿ. ಸೈತಾನನ್ನ ನಂಬೋದು ಕಷ್ಟ, ಯಾಕೆಂದರೆ ಯಾವ ಕಥೆಯಲ್ಲೂ ಅವನು ನನ್ನ ಮಾತು ಕೇಳಿಲ್ಲ.

ಭಾಗವತ : ಕೇಳದಿದ್ದರೆ ರಂಗದ ಮೇಲೆ ಕರೆತಂದು ಥಾಥಯ್ಯಾ ಹಾಡಿ ಎರಡು ಗಂಟೆಕುಣಿಸು; ತಾನೇ ದಾರಿಗೆ ಬರ್‍ತಾನೆ.

ಕೋಡಂಗಿ : ರಾಕ್ಷಸರ ಸಹವಾಸ ಬ್ಯಾಡಿ ಭಾಗವತರೇ, ಎರಡೇನು ಹತ್ತು ಗಂಟೆ ಕುಣಿಸಿದರೂ ಮತ್ತೆ ಏರಿ ಬರ್‍ತಾರೆ. ಅಕಾ ಬಣ್ಣದ ವೇಷ ಆರ್ಭಟ ಮಾಡ್ತ ಇದೆ ಗಂಟಲು ಹರಿಯೋ ಹಾಗೆ, ಹಾಡಿ ಮತ್ತೆ.

ಭಾಗವತ : **ಬಂದನೋ ಸೈತಾನ ಬಂದನು**
**ಸರ್ವ ಕೆಡುಕಿನ ಒಡೆಯ ಬಂದನು**
**ತನ್ನ ಚಿನ್ನದ ಹಲ್ಲು ಸಿಡಿವಂತವಗಡಿಸಿ ನಗುತ**
**ಚಿತ್ತದಲಿ ನರಕಗಳ ಸೃಷ್ಟಿಸಿ**
**ಬತ್ತಿಸುತ್ತಲಿ ಜೀವರಸಗಳ**
**ಕತ್ತಲೆಯ ನಿಜಜನಕ ಬಂದನು ಬೆಳಕನೋಡಿಸುತ**

(ಕುಣಿಯುತ್ತ ಸೈತಾನ ಬರುವನು)

ಅಯ್ಯಾ ಬಂದಂಥವರು ತಾವು ಧಾರು?

ಸೈತಾನ : ಅಯ್ಯಾ ಉರ್ವಿಯಲ್ಲಿ ಸರ್ವರಿಗೆ ಬಲು ಗರ್ವ ಕೊಟ್ಟು ಅವರಿಗೆ ದುರ್ವ್ಯಸನವಂಟಿಸಿ ನಿರ್ವಂಶ ಮಾಡುತ್ತ, ಸೃಷ್ಟಿಯ ಹಾಳು ಮಾಡಿ ತುಷ್ಟಿಯ ಪಡುವಂಥ, ಸುಳ್ಳಿಗೆ ಹಳಬ, ಸತ್ಯಕ್ಕೆ ಹೊಸಬನಾಗಿರುವಂಥ ಬಗೆಬಗೆಯ ಭ್ರಮೆಗಳನ್ನು ಸೃಷ್ಟಿಸಿ ಸುಂದರ ಸುಳ್ಳುಗಳ ಸಾಗರದಲ್ಲಿ ಮಾನವರನ್ನು ಅದ್ದುತ್ತ ಅವರ ನಾಶವನ್ನೆ ಜೀವನಾಧಾರ ಮಾಡಿಕೊಂಡಿರುವಂಥ ಧೀಮಂತ ಯಾರೆಂದು ಬಲ್ಲಿರಿ?

ಭಾಗವತ : ಇಪ್ಪತ್ತೆಂಟು ನರಕಗಳ ಅಧಿಪತಿ ಸೈತಾನ ಮಹಾರಾಜರೇ ಸೈ.

ಸೈತಾನ : ಅವರೇ ನಾವೆಂದು ಭಾವಿಸೈ ಭಾಗವತ. ನೀನಾಗೈ ನನ್ನ ತುತ್ತೂರಿಯ ಸದ್ದು.

ಭಾಗವತ : ಬಂದಂಥ ಕಾರಣ?

ಸೈತಾನ : ಅಯ್ಯಾ ಭಾಗವತ, ಶಿವಪುರದಲ್ಲಿರುವಂಥಾ ಬೆಪ್ತಕ್ಕಡಿ ಬೋಳೇಶಂಕರ ಮತ್ತು ಅವನ ಸೋದರರ ಮಧ್ಯೆ ವಿರಸವ ತಂದು, ಛಲದಿಂದ ಕಲಹವಾಡಿ, ಪರಸ್ಪರ ಅವಗಡಿಸಿ, ಅವಮಾನಿಸಿ, ಕಿವಿ, ಮೂಗು, ಕಣ್ಣು, ಹಲ್ಲುಗಳ ಕಿತ್ತು ಆತ್ಮಗಳ ಕೊಳೆಯಾಗಿಸಿ ಸಾಯಿಸಲೆಂದು ಮೂರು ಪಿಶಾಚಿಗಳಿಗೆ ಆಜ್ಞೆಯ ನೀಡಿ ಕಳುಹಿಸಲಾಗಿ, ಅವರಿಂದ ಏನೊಂದೂ ಸುದ್ದಿ ಬಾರದೆ, ಹುಸಿ ಹೋದ ಬಾಣದ ಹಾಗೆ ಅವರ ವಿಚಾರವೇ ಗೊತ್ತಾಗದಾಗಿ ಖುದ್ದಾಗಿ ವಿಚಾರಿಸಿ ತಿಳಿದ ಬರೋಣ ವೆಂದು ಇಲ್ಲಿಗೆ ಬಂದೆವಯ್ಯಾ ಭಾಗವತಾ ನಿನ್ನ ಮಾತು ಮಜಭೂತ.

ಭಾಗವತ : ವಿಚಾರ ತಿಳಿಯಿತ?

ಸೈತಾನ : ತಿಳಿಯಿತು. ಮೂವರೂ ಪಿಶಾಚಿಗಳು ಬೆಪ್ತಕ್ಕಡಿಗೆ ಸೋತು ಕೈಯಲ್ಲಿದ್ದ ವರಗಳನ್ನು ಆಟಿಕೆಗಳಂತೆ ಬಳಸಿ ಕಳೆದುಕೊಂಡು ಸತ್ತು ಹೋಗಿದ್ದಾರೆ. ಈ ಮಧ್ಯೆ ಭೂಲೋಕ ಬೇಕಾದಷ್ಟು ಸಲ ತಿರುಗಿ, ಹೊಸ ಹೊಸ ವಾಯುಮಂಡಲಗಳು ಬೀಸಿ, ಕೆಳಗಿನದು ಮ್ಯಾಲೆ, ಮ್ಯಾಲಿನದು ಕೆಳಗಾಗಿ, ಅರಸು ಆಳಾಗಿ ಆಳು ಅರಸಾಗಿ ಮೆರೆಯುತ್ತಿದ್ದಾರೆ. ಬೆಪ್ತಕ್ಕಡಿಯ ಅಣ್ಣಂದಿರು ರಾಜರಾಗಿದ್ದಾರೆಂದರೆ ಈ ಕಡೆ– ಈ ಬೆಪ್ತಕ್ಕಡಿಯೂ–ಅವನ ಸುದೈವಕ್ಕೆ ಬೆಂಕಿಬೀಳಲಿ– ಕಿರೀಟವಿಲ್ಲದ ರಾಜನಾಗಿದ್ದಾನೆ, ಬೇಕೂಫ! ಇಪ್ಪತ್ತೆಂಟು ನರಕಗಳ ದೊರೆಯಾದ ನನಗೆ ಈ ಬೆಪ್ತಕ್ಕಡಿ ಬೋಳೇಶಂಕರ ಜೀರ್ಣವಾಗುತ್ತಿಲ್ಲವಲ್ಲ!

ಕೋಡಂಗಿ : ನನ್ನ ಹತ್ತಿರ ಜಾಪಾಳ ಮಾತ್ರೆ ಇದೆ, ಬೇಕ?

ಸೈತಾನ : ಈ ಬೋಳೇಶಂಕರನನ್ನು ಹಾಳು ಮಾಡಲೇಬೇಕಲ್ಲಾ, ಏನು ಮಾಡಲಿ?

ಕೋಡಂಗಿ : ಬೊಬ್ಬೆ ಹೊಡಿ.

ಸೈತಾನ : ಹುಷಾರಾಗಿ ಮೈತುಂಬ ಕಣ್ಣಾಗಿ ವ್ಯವಹರಿಸಬೇಕಾದ ವ್ಯಕ್ತಿಯೀತ!

ಕೋಡಂಗಿ : ಹಿಂಗ ಬಾ ದಾರಿಗೆ

.ಸೈತಾನ : ಬೆಪ್ತಕ್ಕಡಿಯ ಅಣ್ಣಂದಿರಿಬ್ಬರಿಗೂ ದುರಾಸೆಯ ಕಾಯಿಲೆ ಹಚ್ಚಿ ಅವರು ಆತ್ಮನಾಶ ಮಾಡಿಕೊಳ್ಳೋ ಹಾಗೆ ಮಾಡಿದ್ದೇನೆ. ಹಿರಿಯವನು ಸರದಾರ ಸೋಮಣ್ಣ, ಕಿರೀಟಗಳನ್ನು ಕೂಡಿಡುವ ಹವ್ಯಾಸದವನು. ಆಗಲೇ ಆನೇಕ ರಾಜರನ್ನು ಸೋಲಿಸಿ ಅವರ ಕಿರೀಟಗಳನ್ನು

ಸಂಗ್ರಹಿಸಿದರೂ ಅವನಿಗೆ ತೃಪ್ತಿ ಇಲ್ಲ. ನರಕದ ಆಣೆಮಾಡಿ ಹೇಳುತ್ತೇನೆ ಅವನು ಇಂದ್ರನ ಕಿರೀಟ ಸಿಕ್ಕುವ ತನಕ ಸುಮ್ಮನಿರೋ ಪೈಕಿ ಅಲ್ಲ. ಅವನಾಗಲೇ ದೇವರ ಹಾಗೆ ನಿಲ್ಲುವುದಕ್ಕೆ ಕಲಿಯುತ್ತಿದ್ದ. ನಾನವನಿಗೆ ಬುದ್ಧಿ ಹೇಳಿ ದೇವರ ಹಾಗಲ್ಲ ಸ್ವಾಮಿ ದೇವರೂ ಹೆದರಿ ನಡುಗಬೇಕು ಅಂಥಾ ಸೈತಾನ ಶೈಲಿಯನ್ನು ಅಭ್ಯಾಸಮಾಡಿ ಅಂದೆ. ಅದನ್ನೇ ಕಲೀತಿದ್ದಾನೆ. ಬರಲಿ ಅಯ್ಯಾ ಭಾಗವತರೇ ಸರದಾರ ಸೋಮಣ್ಣನ್ನ ಕರೆಸಿ.(ಭಾಗವತ ಥಾಥಯ್ಯಾ ಹಾಡುವನು. ಸೋಮಣ್ಣ ಕುಣಿಯುತ್ತ ಬರುವನು)

ಸೈತಾನ : (ಭಾಗವತನಿಗೆ) ನಿಮಗೆ ನನ್ನ ನಿಜರೂಪದಲ್ಲಿ ಕಂಡಂತೆ ಅವನ ಕಣ್ಣಿಗೆ ನಾನೀಗ ಅವನ ಸೇನಾಪತಿಯಂತೆ ಕಾಣಬಲ್ಲೆ. (ಸೋಮಣ್ಣನಿಗೆ) ಸ್ವಾಮಿ.

ಸೋಮಣ್ಣ : ಅಯ್ಯಾ ಸೇನಾಪತಿ, ನನ್ನ ಪರಾಕ್ರಮದಿಂದ ಅತಳವಿತಳ ಪಾತಾಳ ರಸಾತಳದ ಅನೇಕ ರಾಜರನ್ನು ಮಣ್ಣು ಮುಕ್ಕಿಸಿ ಅವರ ಕಿರೀಟಗಳನ್ನು ಕಸಿದುಕೊಂಡು ಸಾಮಂತರನ್ನಾಗಿ ಮಾಡಿದ್ದಾಗಿದೆ. ಇನ್ನೂ ಅನೇಕ ರಾಜರು ಕಿರೀಟಗಳನ್ನುಳ್ಳ ತಮ್ಮ ತಲೆಯನ್ನು ನನಗೆ ಬಾಗಿಸದೆ ಮಲೆತುಕೊಂಡು ಹಾಗೇ ಇದ್ದಾರೆ. ಅವರೂ ನನಗೆ ತಲೆಬಾಗುವಂತೆ ಮಾಡುವ ಉಪಾಯವೇನಾದರೂ ಇದ್ದರೆ ಹೇಳಯ್ಯಾ ಸೇನಾಪತಿ.

ಸೈತಾನ : ಪ್ರಭು, ಅನೇಕ ರಾಜರು ರತ್ನಖಚಿತವಾದ ಕಿರೀಟಗಳನ್ನು ಧರಿಸಿಕೊಂಡು ನಿಮ್ಮಿಂದ ಸ್ವತಂತ್ರರಾಗಿ ಬದುಕುತ್ತಿರುವುದು ನಿಜ. ನೀವು ಈತನಕ ಕ್ಷುದ್ರವೆಂದು ತಿಳಿದಿದ್ದ ನಿಮ್ಮ ಸೋದರ ಬೆಪ್ತಕ್ಕಡಿ ಬೋಳೇಶಂಕರ ಕೂಡ ರಾಜನಾಗಿದ್ದಾನೆ. ಹೀಗಿರುವಲ್ಲಿ ತಾವು ಇವರ ಮೇಲೆ ದಾಳಿ ಮಾಡಿ ಕಿರೀಟ ಕಸಿಯಬೇಕಾದರೆ–ಸೊರಗಿರುವ ನಮ್ಮ ಸೈನ್ಯ ಹತ್ತುಪಟ್ಟು ಹೆಚ್ಚಾಗಬೇಕು. ಪಿಶಾಚಿಗಳನ್ನು ನವೀಕರಿಸಬೇಕು. ಏಕಕಾಲಕ್ಕೆ ನೂರು ಗುಂಡು ಹಾರಿಸಬಲ್ಲ ಬಂದೂಕುಗಳನ್ನು, ಬರೀ ರಾಜಧಾನಿ ಮಾತ್ರವಲ್ಲ ಇಡೀ ರಾಜ್ಯವನ್ನೇ ಮೇಲಿನಿಂದ ಸಿಡಿದು ಅರೆಕ್ಷಣದಲ್ಲಿ ಧ್ವಂಸ ಮಾಡಬಲ್ಲ ಬಾಂಬುಗಳನ್ನು, ಆಕಾಶದಲ್ಲಿದ್ದುಕೊಂಡು ಕಾವಲುಕಾಯುವ ಸಿಡಿದಲೆಗಳನ್ನು ಮಾಡಬೇಕು.

ಸರದಾರ : ಹತ್ತು ಪಟ್ಟು ಸೈನ್ಯ ಎಲ್ಲಿಂದ ತರೋದು?

ಸೈತಾನ : ತಾವು ತಮ್ಮ ಸಾವ್ಕಾರ ತಮ್ಮನೊಂದಿಗೆ ಒಪ್ಪಂದ ಮಾಡಿಕೊಂಡರೆ ಅನುಕೂಲ. ನಿಮಗೆ ಸೈನ್ಯ ಬೇಕು. ಅದನ್ನು ನಿಭಾಯಿಸಲು ತಮ್ಮನಿಂದ ಹಣವೂ ಬೇಕು. ಎರಡನ್ನೂ ಮಾಡಿಕೊಡೋನು ಬೋಳೇಶಂಕರ. ಒಳ್ಳೆ ಮಾತುಗಳಲ್ಲಿ ಮಾಡಿಕೊಟ್ಟರೆ ಸರಿ;

ಇಲ್ಲದಿದ್ದರೆ ಅವನ ರಾಜ್ಯವನ್ನು ನಿಮ್ಮದಕ್ಕೆ ಸೇರಿಸಿಕೊಂಡರೆ ತಾನೇ ದಾರಿಗೆ ಬರುತ್ತಾನೆ.

ಸರದಾರ : ನಿಜ, ಬೋಳೇಶಂಕರನ ಧಡ್ಡತನವನ್ನು ಸೈನ್ಯವಾಗಿ ಮಾರ್ಪಡಿಸ ಬಹುದು. ಕೂಡಲೇ ನನ್ನ ಸಾವ್ಕಾರ ತಮ್ಮನೊಂದಿಗೆ ಭೇಟಿ ಏರ್ಪಡಿಸು.

ಸೈತಾನ : ಆಗಲಿ ಪ್ರಭೋ ಅಲ್ಲೀತನಕ ತಾವು ವಿಶ್ರಾಂತಿ ತಗೊಳ್ಳಿ. (ಸರದಾರ ಹೋಗುವನು)

ನೋಡಿದಿರಾ ಭಾಗವತರೇ

ಭಾಗವತ : ನಿಮ್ಮ ಮಹಿಮೆ ಅಗಾಧವಾದದ್ದು ಸ್ವಾಮಿ.

ಸೈತಾನ : ಇನ್ನೊಬ್ಬನಿದ್ದಾನಲ್ಲ, ಅವನನ್ನೂ ಕರೆಯಿರಿ.(ಭಾಗವತ ಥಾಥಯ್ಯಾ ಹಾಡುವನು, ಸಾವ್ಕಾರ ಬರುವನು)

ಸಾವ್ಕಾರ : ಅಯ್ಯಾ ಮಂತ್ರಿ

ಸೈತಾನ : (ಭಾಗವತನಿಗೆ) ನಿಮಗೆ ನನ್ನ ನಿಜರೂಪದಲ್ಲಿ ಕಂಡ ಹಾಗೆ ಅವನಿಗೆ ನಾನೀಗ ಮಂತ್ರಿಯ ಹಾಗೆ ಕಾಣಿಸುತ್ತಿದ್ದೇನೆ. ಗೊಂದಲ ಮಾಡಿಕೋ ಬೇಡಿ.

ಕೋಡಂಗಿ : ನಮಗೆ ಕಾಣಿಸೋದಾದರೂ ನಿನ್ನ ನಿಜ ತಾನೆ?

ಸೈತಾನ : ಪ್ರಭು.

ಸಾವ್ಕಾರ : ಅಯ್ಯಾ ಮಂತ್ರಿ ನನ್ನ ತಮ್ಮ ಬೋಳೇಶಂಕರನೂ ರಾಜನಾಗಿ ಚರಿತ್ರೆಯ ಮುಖಕ್ಕೆ ಮಸಿ ಬಳಿದನಲ್ಲಯ್ಯಾ! ಅವನು ರಾಜನಾದಾಗಿನಿಂದ ನನ್ನ ರಾಜ್ಯದಲ್ಲಿಯ ಧಡ್ಡರೆಲ್ಲ ಅವನ ರಾಜ್ಯಕ್ಕೆ ವಲಸೆ ಹೋಗುತ್ತಿದ್ದಾರೆ. ನನ್ನ ರಾಜ್ಯದಲ್ಲಿ ಎಲ್ಲಿ ನೋಡಿದಲ್ಲಿ ಖಾಲೀ ಮನೆಗಳೇ ಕಾಣುತ್ತಿವೆ.

ಸೈತಾನ : ಹಾಗೆಯೇ ಬೋಳೇಶಂಕರನ ರಾಜ್ಯದ ಬುದ್ಧಿಜೀವಿಗಳು ತಮ್ಮ ರಾಜ್ಯಕ್ಕೆ ವಲಸೆ ಬರುತ್ತಿದ್ದಾರಲ್ಲ ಪ್ರಭು.

ಸಾವ್ಕಾರ : ಬುದ್ಧಿಜೀವಿಗಳಿದ್ದರೆಷ್ಟು ಬಿಟ್ಟರೆಷ್ಟು, ಅವರು ತೆರಿಗೆ ಕೊಡೋ ಜನಗಳಲ್ಲವಯ್ಯಾ. ತೆರಿಗೆ ಕೊಡೋ ದಡ್ಡರೆಲ್ಲ ವಲಸೆ ಹೋದರೆ ನಾನೆಷ್ಟು ದಿನ ರಾಜ್ಯಭಾರ ಮಾಡಲಾದೀತು? ಭಂಡಾರವಾಗಲೇ ಖಾಲಿ ಆಗಿದೆ.

ಸೈತಾನ : ತಾವು ಸರದಾರ ಸೋಮಣ್ಣನವರೊಂದಿಗೆ ಒಪ್ಪಂದ ಮಾಡಿಕೊಂಡರೆ ಒಳ್ಳೆಯದು. ಅವರ ಜೊತೆ ಹೋದರೆ ಇಲ್ಲ ಅನ್ನಲಾರ.

ಸಾವ್ಕಾರ : ಅದೇ ಸೈ. ಕೂಡಲೇ ಸರದಾರ ಸೋಮಣ್ಣನ ಜೊತೆ ಭೇಟಿ ಏರ್ಪಡಿಸು.

## ವಾಸಿಯಾದ ರೋಗ

**(ಬೋಳೇಶಂಕರ ಮತ್ತು ಅವನ ರಾಣಿ ಹೊಲದಲ್ಲಿ ಕೆಲಸ ಮಾಡುತ್ತಿದ್ದಾರೆ)**

ರಾಜಕುಮಾರಿ : ಸ್ವಾಮಿ ನೀವೇನೋ ಹೇಳುತ್ತಿದ್ದಿರಿ.

ಬೋಳೇಶಂಕರ : ಅದೇ ಆ ದಿನ ಅರಮನೆಗೆ ಬಂದಾಗ ನೀವು ಹಾಸಿಗೆಯಲ್ಲೊರಗಿ ಹೊಟ್ಟೆನೋವಿನಿಂದ ಸಂಕಟ ಪಡುತ್ತಿದ್ದಿರಿ.

ರಾಜಕುಮಾರಿ : ಹೌದು, ಆಮೇಲೆ?

ಬೋಳೇಶಂಕರ : ಪ್ರೇಮಿಗಳು ಅಂದರೆ–

ರಾಜಕುಮಾರಿ : ಪ್ರೇಮಿಗಳು ಅಂದಿರಿ, ನಿಮ್ಮಲ್ಲಿ ಪ್ರೇಮವೇ ಇಲ್ಲ.

ಬೋಳೇಶಂಕರ : ಯಾಕಿಲ್ಲ? ಇದೆ.

ರಾಜಕುಮಾರಿ : ಮತ್ತೆ ಒಮ್ಮೆಯೂ ಹಾಗಂತ ಹೇಳಲೇ ಇಲ್ಲವಲ್ಲ.

ಬೋಳೇಶಂಕರ : ಹೇಳಿದೆನಲ್ಲ.

ರಾಜಕುಮಾರಿ : ಏನಂತ?

ಬೋಳೇಶಂಕರ : ಇದೆ ಅಂತ.

ರಾಜಕುಮಾರಿ : ಏನಿದೆ ಅಂತ.

ಬೋಳೇಶಂಕರ : ಅದನ್ನೇ ಹೇಳೋಣಾಂತ ಬಂದೆ. ಆ ದಿನ ಏನಾಯ್ತು ಕೇಳಿ.

ರಾಜಕುಮಾರಿ : ಆ ದಿನ ಏನಾಯ್ತು?

ಬೋಳೇಶಂಕರ : ಅರಮನೆಗೆ ನಾನು ಮದ್ದಿನೊಂದಿಗೆ ಬಂದಾಗ ನೀವು ಹಾಸಿಗೆಯಲ್ಲೊರಗಿ ಹೊಟ್ಟೆನೋವಿನಿಂದ ಸಂಕಟ ಪಡುತ್ತಿದ್ದಿರಿ.

ರಾಜಕುಮಾರಿ : ಹೌದು, ಆಮೇಲೆ?

ಬೋಳೇಶಂಕರ : ಬಾಡಿದ ಹೂವಿನಂಥ ನಿಮ್ಮ ಮುಖ ನೋಡಿದೆ.

ರಾಣಿ : ನಾನು ಸಂಕಟ ಪಡುತ್ತಿದ್ದರೆ ಮುಖ ಹೂವಿನ ಹಾಗೆ ಕಂಡಿತ?

ಬೋಳೇಶಂಕರ : ಬಾಡಿದ ಹೂವಿನ ಹಾಗೆ.

ರಾಜಕುಮಾರಿ : ಇಷ್ಟೇನಾ, ಇನ್ನೇನಾದರು ವಿಶೇಷ ಇದೆಯಾ?

ಬೋಳೇಶಂಕರ : ಓಹೋ ಬೇಕಾದಷ್ಟಿದೆ. ನಾಡಿ ನೋಡುವ ನೆಪದಲ್ಲಿ ನಿಮ್ಮ ಕೈಹಿಡಿದು ರೋಮಾಂಚನಗೊಂಡೆ.

ರಾಜಕುಮಾರಿ : ಆಮೇಲೆ?

ಬೋಳೇಶಂಕರ : ಬೇಕಾದಷ್ಟು ಸಲ ನಿಮ್ಮನ್ನೋಡಿದೆ.

ರಾಜಕುಮಾರಿ : ಆಮೇಲೆ

ಬೋಳೇಶಂಕರ : ನಾನು ಆಗಲೇ ನಿಶ್ಚಯಿಸಿಬಿಟ್ಟೆ, ಏನಪ್ಪಾ ಅಂದರೆ. . . . .

ರಾಜಕುಮಾರಿ : ಗೊತ್ತಾಯ್ತು ಬಿಡಿ, ಹೇಳಬೇಡಿ, ನನಗೆ ನಾಚಿಕೆ ಬರುತ್ತೆ.

ಬೋಳೇಶಂಕರ : ಏನನ್ನ ನಿಶ್ಚಯ ಮಾಡಿದೆ ಅಂತ ಹೇಳಬೇಡವಾ?

ರಾಜಕುಮಾರಿ : ನನಗಾಗಲೇ ಗೊತ್ತು.

ಬೋಳೇಶಂಕರ : ಏನು ಹೇಳಿ,

ರಾಜಕುಮಾರಿ : ಇವಳನ್ನೇ ಪ್ರೀತಿಸಬೇಕು ಅಂತ.

ಬೋಳೇಶಂಕರ : ಅಲ್ಲ, ಇವಳನ್ನು ಪ್ರೀತಿಸಬಾರದು ಅಂತ.

ರಾಜಕುಮಾರಿ : ಯಾಕೆ ಹೇಳಿ, ನಾನಷ್ಟು ಕೆಟ್ಟವಳ?

ಬೋಳೇಶಂಕರ : ಸಮಸ್ಯೆ ಬಂದಿರೋದು ನೀವು ಜಾಸ್ತಿ ಒಳ್ಳೆಯವರಾದುದರಿಂದ. ನೀವಾದರೆ ಹೂವಿನಂಥವರು, ನಾನೋ ಒಬ್ಬ ಹುಂಬ ಬೆಪ್ತಕ್ಕಡಿ ರೈತ. ಎಲ್ಲಿದೆಲ್ಲಿಯ ಜೋಡಿ ಅಂತ.

ರಾಜಕುಮಾರಿ : ನೀವು ಹೀಗೆಲ್ಲ ಮಾತಾಡಿದರೆ ಒಂದು ಒಳ್ಳೇ ದಿನ ನೋಡಿ ನಾನು ಸತ್ತು ಬಿಡುತ್ತೇನಷ್ಟೆ.

ಬೋಳೇಶಂಕರ : ದಯವಿಟ್ಟು ಹಾಗೆ ಹೇಳಬೇಡಿ; ನನಗೆ ನೋವಾಗುತ್ತೆ.

ಕೋಡಂಗಿ : (ಬರುವನು) ಏನಯ್ಯಾ ಮಿತ್ರಾ ರಾಜನಾಗಿ ಅರಮನೆಯಲ್ಲಿ ಆರಾಮಾಗಿರೋದನ್ನ ಬಿಟ್ಟು ಸಾಮಾನ್ಯ ರೈತನ ಹಾಗೆ ಹೊಲದಲ್ಲಿ ಕೆಲಸ ಮಾಡ್ತೀಯಲ್ಲಾ.

ಬೋಳೇಶಂಕರ : ಬಾರಯ್ಯಾ ಕೋಡಂಗಿ, ನೀನು ರಾಜನೇ ಆಗಿರು, ರೈತನೇ ಅಗಿರು ಯಾರಾಗಿದ್ದರೂ ಉಂಡ ಅನ್ನ ಮೈಗೆ ಹತ್ತಬೇಕಾದರೆ ಮೈಮುರಿದು ದುಡೀಬೇಕಪ್ಪ, ಕೂತು ಉಂಡರೆ ರಾಜ್ಯ ನಡೀತದ?

ಕೋಡಂಗಿ : ಮಹಾರಾಣಿಯವರಿಗೆ ನಮಸ್ಕಾರ. ದೇಶದ ಮಹಾರಾಣಿಯಾಗಿ ಅರಮನೆಯಲ್ಲಿರೋದನ್ನ ಬಿಟ್ಟು ಸಾಮಾನ್ಯರ ಹಾಗೆ ಕೆಲಸ

ಮಾಡಬಹುದೇ?

ರಾಜಕುಮಾರಿ : ಮಲ್ಲಿಗೆ ಇದ್ದಲ್ಲಿ ನಾರು, ಅವರಿದ್ದಲ್ಲಿ ನಾನು.

ಕೋಡಂಗಿ : (ತನ್ನಲ್ಲಿ) ಇಬ್ಬರಲ್ಲಿ ಯಾರು. ಜಾಸ್ತಿ ದಡ್ಡರು ಅಂಥ ಸ್ಪರ್ಧೆ ನಡೀತಿರಬೇಕಾದರೆ ನಾನೂ ಒಬ್ಬ ಸ್ಪರ್ಧಿಯಾಗಿ ಸೇರದಿರೋದೇ ಮೇಲು, ಬಂದ ಕಾರಣ ಹೇಳುತ್ತೇನೆ. (ಪ್ರಕಾಶ) ಅಯ್ಯಾ ಮಿತ್ರಾ, ಸೈತಾನನಿಂದ ಪ್ರಚೋದಿತರಾಗಿ ನಿನ್ನ ಅಣ್ಣಂದಿರಿಬ್ಬರು ನಿನ್ನ ನೋಡೋದಕ್ಕೆ ಬಂದಿದ್ದಾರೆ. ಬರಹೇಳಲಾ?

ಬೋಳೇಶಂಕರ : ಇಲ್ಲೇ ನೋಡುತ್ತಾರಂತೋ? ಮನೆಯಲ್ಲೋ?

ಕೋಡಂಗಿ : ಇಲ್ಲೇ ಈಗಲೇ.

ಬೋಳೇಶಂಕರ : ಬರಲೇಳು ಅದಕ್ಕೇನಂತೆ, ದೇವಿ ನೀನು ಗುಡಿಸಲಲ್ಲಿರು. (ಒಳಹೋಗುವಳು)

ಕೋಡಂಗಿ : ಆದರೂ ಒಂದು ಮಾತನ್ನು ಹೇಳಲೇಬೇಕು; ನಿನ್ನ ಔದಾರ್ಯಕ್ಕೆ ನೀನೇ ಮೋಸ ಹೋಗುವುದು ಸರಿಯಲ್ಲ ಮಾರಾಯಾ. (ಸರದಾರ ಮತ್ತು ಸಾವ್ಕಾರ ಇಬ್ಬರನ್ನೂ ಕರೆತಂದು ಮರೆಯಾಗುವನು)

ಸಾವ್ಕಾರ : ನಮಸ್ಕಾರ ತಮ್ಮಾ, ನೀನು ರಾಜನಾದದ್ದನ್ನು ಕೇಳಿ ನಾನೇ ರಾಜನಾದಷ್ಟು ಸಂತೋಷವಾಯ್ತು ನನಗೆ.

ಸರದಾರ : ತಮ್ಮಾ ನೀನು ರಾಜನಾದದ್ದನ್ನು ಕೇಳಿ ನನಗೆ ಇನ್ನೊಂದು ಕಿರೀಟ ಸಿಕ್ಕಷ್ಟು ಸಂತೋಷವಾಯ್ತು.

ಬೋಳೇಶಂಕರ : ಆಗಲೇಳಿ, ಆಗಾಗ ಸಂತೋಷಪಡೋದು ಆರೋಗ್ಯಕ್ಕೆ ಒಳ್ಳೆಯದು.

ಸಾವ್ಕಾರ : ಇದೇ ಏನಪ್ಪ ನಿನ್ನ ದರ್ಬಾರು?

ಬೋಳೇಶಂಕರ : ಜನ ಎಲ್ಲಿ ಸೇರಿದರೆ ಅಲ್ಲೇ ದರ್ಬಾರು.

ಸರದಾರ : ಅಣ್ಣಂದಿರು ಅಂತ ಇಬ್ಬರಿದ್ದೇವೆ. ಪಟ್ಟಾಭಿಷೇಕದ ಕಾಲಕ್ಕೆ ಒಂದು ಮಾತು ಹೇಳಿಕಳಿಸಿದ್ದರೆ ನಾವು ಬರುತ್ತಿರಲ್ಲವೇನಪ್ಪ?

ಬೋಳೇಶಂಕರ : ಪಟ್ಟಾಭೀಷೇಕ ಅಂತ ಒಂದು ಸಮಾರಂಭ ನಡೆದಿದ್ದರಲ್ಲವೇ?

ಸಾವ್ಕಾರ : ಮದುವೆ ಅಂತಾದರೂ ಒಂದು ಆಯ್ತಲ್ಲಪ್ಪ.

ಬೋಳೇಶಂಕರ : ಧಡ್ಡರ ಮದುವೆಗೆ ರಾಜಮಹಾರಾಜರ್‍ಯಾಕೆ ಅಂತ ಹೇಳಿ ಕಳಿಸಲಿಲ್ಲ.

ಸಾವ್ಕಾರ : ಅಯ್ಯಾ ಬೋಳೇಶಂಕರಾ, ನೀನು ಅದೆಂಥದೋ ಸೈನ್ಯ, ನಾಣ್ಯ, ತೆರಿಗೆ ಇಲ್ಲದ ರಾಜ್ಯಭಾರ ಮಾಡ್ತಿದ್ದೀಯಂತೆ ಹೌದ?

ಬೋಳೇಶಂಕರ : ಹೌದು.

ಸರದಾರ : ನೀನೇನೋ ಧಡ್ಡರ ರಾಜ್ಯ ಕಟ್ಟಿ ಇತಿಹಾಸಕ್ಕೆ ಅಪಹಾಸ್ಯ ಮಾಡಬಹುದಪ್ಪ, ನಾನು ಹಾಗೆ ಮಾಡಲಿಕ್ಕಾಗುತ್ತ? ಸೈನ್ಯ ಹಣ ಎಲ್ಲಾ ಬೇಕು. ಈಗ ನಾನು ಬಂದ ಕಾರಣವೂ ಅದೇ. ನನ್ನ ಬಳಿ ಸಾಕಾಗುವಷ್ಟು ಜವಾನರಿಲ್ಲ. ಹುಲ್ಲಿನ ಒಂದೆರಡು ಬಣಿವೆಯಷ್ಟು ಜವಾನರನ್ನು ಮಾಡಿಕೊಡು. ಇಡೀ ಪ್ರಪಂಚದ ರಾಜರನ್ನೆಲ್ಲ ಗೆದ್ದು ನೀನು ನನ್ನ ಬಗ್ಗೆ ಅಭಿಮಾನ ಪಡೋಹಾಗೇ ಮಾಡುತ್ತೇನೆ.

ಬೋಳೇಶಂಕರ : ಅದಾಗದು. ನಿನಗೆ ಒಬ್ಬನೇ ಒಬ್ಬ ಜವಾನನನ್ನು ಮಾಡಿಕೊಡುವುದಿಲ್ಲ.

ಸರದಾರ : ಯಾಕೆ, ಹಿಂದೆ ಇನ್ನೂ ಜವಾನರು ಬೇಕಿದ್ದರೆ ಬಾ ಅಂತ ಮಾತು ಕೊಟ್ಟಿರಲಿಲ್ಲವೇನೋ ಬೆಪ್ತಕ್ಕಡಿ?

ಬೋಳೇಶಂಕರ : ಬೆಪ್ತಕ್ಕಡಿ ಅಲ್ಲದೆ ಬೇರೆ ಯಾರಾಗಿದ್ದರೂ ಜವಾನರನ್ನು ಮಾಡಿಕೊಡುವುದು ಸಾಧ್ಯವಿತ್ತೇ? ಜವಾನರು ಹಾಡಿಕೊಂಡು ಸಾಲಾಗಿ ಕುಣಿಯುತ್ತಾರೆ ಅಂತ ಮಾತ್ರ ನಾನು ತಿಳಿದಿದ್ದೆ. ಆದರೆ ಇಲ್ಲಿ ನೋಡಿದರೆ ನಿನ್ನ ಜವಾನರು ಬೇರೆಯವರನ್ನು ಕೊಲ್ಲುತ್ತಿದ್ದಾರೆ. ನಿನ್ನ ಜವಾನರಿಂದಾಗಿ ಎಷ್ಟು ಜನ ಮಕ್ಕಳು, ವಯಸ್ಸಾದವರು ಅನಾಥರಾಗಿದ್ದಾರೆ ಗೊತ್ತೇನು? ದಿನ ಬೆಳಗಾದರೆ ಜವಾನರನ್ನ ಮಾಡಿಕೊಡೋದು ಇನ್ನೂ ಭಯಂಕರ ಮೂರ್ಖತನ.

ಸಾವ್ಕಾರ : ನೋಡು ಬೋಳೇಶಂಕರಾ, ನಾನು ನಿನ್ನ ಹಿತೈಷಿ ಅಂತ ಸಾರಿಸಾರಿ ಹೇಳುತ್ತೇನೆ. ನನಗಾದರೂ ಮೊದಲೇ ಮಾತು ಕೊಟ್ಟಿದ್ದಂತೆ ಹತ್ತೆಂಟು ಲಾರಿ ಚಿನ್ನದ ನಾಣ್ಯ ಮಾಡಿಕೊಡುತ್ತಿ ತಾನೆ?

ಬೋಳೇಶಂಕರ : ಖಂಡಿತ ಇಲ್ಲ, ನಿನ್ನ ತೆರಿಗೆ ಭಾರ ಸಹಿಸದೆ ಜನ ತಮ್ಮಲ್ಲಿಯ ಹಸು ಕರು ಮಾರಿ ತೆರಿಗೆ ಕಟ್ಟಿ ನನ್ನ ರಾಜ್ಯಕ್ಕೆ ವಲಸೆ ಬರುತ್ತಿದ್ದಾರೆ. ನಿನ್ನ ಕಾರ್ಖಾನೆಗಳ ಹೊಗೆ ನುಂಗಲಾರದೆ ಜನ ಓಡಿ ಬರುತ್ತಿದ್ದಾರೆ. ಬೆಳೆಯೋ ಮಕ್ಕಳಿಗೆ ಹಸುವಿನ ಹಾಲು ಸಿಕ್ಕೋದಿಲ್ಲ ಅಂದರೆ ಇದೇನೋ ನೀವು ರಾಜ್ಯಭಾರ ಮಾಡೋ ರೀತಿ?

ಸಾವ್ಕಾರ : ಲೋ ಬೆಪ್ತಕ್ಕಡಿ ಬುದ್ಧಿ ಇದ್ದವರ ಹಾಗೆ ಮಾತಾಡಿ ದಾರಿಯ ಜಗಳ ಮನೆಗೆ ಸೇರಿಸ್ಕೊಬೇಡ.

ಸರದಾರ : ನಮ್ಮ ಬೋಳೇಶಂಕರ ಒಳ್ಳೆಯವನೆ; ಸ್ವಲ್ಪ ಧಡ್ಡ ಅಷ್ಟೆ, ಇಲ್ಲದಿದ್ದರೆ ಬುದ್ಧಿವಂತಿಕೆಯ ಮೊದಲ ಸ್ಪರ್ಶಕ್ಕೇ ಇಷ್ಟು ಹಿಗ್ಗುತ್ತಿರಲಿಲ್ಲ.

ಬೋಳೇಶಂಕರ :ಬುದ್ಧಿವಂತಿಕೆ ಹೌದು ಎಂದಾದರೆ ನೀವು ನನ್ನ ಮಾತು ಕೇಳಿ.

ನಿಮ್ಮಿಬ್ಬರಿಗೂ ಅತಿಯಾಸೆಯ ರೋಗ ಹಿಡಿದಿದೆ. ಯಾವ ಮದ್ದಿನಿಂದಲೂ ವಾಸಿಯಾಗದ ರೋಗ ಅದು. ಸಾವಿನತನಕ ನಿಮ್ಮನ್ನದು ಬಿಡೋದಿಲ್ಲ. ರೋಗಿಯಾಗಿ ಸಾಯಬೇಕೆಂದು ಒಮ್ಮತದಿಂದ ನೀವು ತೀರ್ಮಾನಿಸಿದ್ದರೆ ಅದು ನಿಮ್ಮ ಆಯ್ಕೆ. ಆದರೆ ಬಲ್ಲವರು ಹೇಳುತ್ತಾರೆ; ಅದೊಮ್ಮೆ ರೋಗ ಅಂತ ಗೊತ್ತಾದರೆ ಅದಕ್ಕೆ ಮದ್ದು ಮಾಡುವುದು ಒಳ್ಳೆಯದು ಅಂತ.

ಸೈತಾನ : ಇದು ಬಿಟ್ಟಿ ಉಪದೇಶ ತಾನೆ?

ಬೋಳೇಶಂಕರ : ಖಂಡಿತ

ಸೈತಾನ : ಹಾಗಿದ್ದರೆ ಇನ್ನಷ್ಟು ಹೇಳು

ಬೋಳೇಶಂಕರ : ನಿಮ್ಮಿಬ್ಬರ ಮಧ್ಯೆ ಇಗೋ ಈ ಸೈತಾನ ಸಲಹೆಗಾರನಾಗಿ ನಿಂತಿದ್ದಾನೆ. ನಿಮ್ಮ ತಲೆಯಲ್ಲಿ ಭಯಂಕರ ಕನಸುಗಳನ್ನು ಹಾಕಿದ್ದಾನೆ. ಆ ಕನಸುಗಳಿಗೆ ಕೊಳ್ಳಿಯಿಟ್ಟು ನಿಮ್ಮಾತ್ಮ ಪೂರ್ತಿ ಸುಡೋ ಹಾಗೆ ಸೀಮೆಎಣ್ಣೆ ಸುರಿಯುತ್ತಿದ್ದಾನೆ. ಸಮಯ ಮೀರಿಲ್ಲ. ಈಗಲಾದರೂ ಹುಷಾರಾಗಿ.

ಸಾವ್ಕಾರ : ಎಣಿಸೋದಕ್ಕೆ ಬೆರಳುಪಯೋಗಿಸೋನು ನನಗೆ ಬುದ್ಧಿ ಹೇಳಬಂದನೆ?

ಬೋಳೇಶಂಕರ : ಕೇಳೋದಾದರೆ.

ಸಾವ್ಕಾರ : ಲೋ ಬೆಪ್ತಕ್ಕಡಿ ತೆರಿಗೆ ಕೊಡುವ ನನ್ನ ಪ್ರಜೆಗಳಿಗೆ ಸುಳ್ಳು ಆಮಿಷ ತೋರಿಸಿ ನಿನ್ನ ರಾಜ್ಯ ಭರ್ತಿ ಮಾಡಿಕೊಳ್ತ ಇದ್ದೀಯಲ್ಲ, ಇದೊಂದೇ ಕಾರಣ ಸಾಕು ನಿನ್ನನ್ನ ನೂರು ವರ್ಷ ಸೆರೆಮನೆಗೆ ಕಳಿಸಲಿಕ್ಕೆ. ಒಳ್ಳೆ ಮಾತಿನಿಂದ ಹತ್ತೆಂಟು ಲಾರಿ ಚಿನ್ನ ಮಾಡಿಕೊಡು. ಬೇಕಾದರೆ ಧಾನ್ಯ ನಾನೇ ಕೊಡುತ್ತೇನೆ.

ಸರದಾರ : ಅಯ್ಯಾ ಬೆಪ್ತಕ್ಕಡಿ ಕಿರೀಟ ಸಂಗ್ರಹಿಸುವ ನನ್ನ ಆಸೆಯ ಮೇಲೆ ತಣ್ಣೀರೆರಚಬೇಡ. ಒಳ್ಳೆ ಮಾತಿನಿಂದ ಎರಡು ಬಣಿವೆಯಷ್ಟು ಜವಾನರನ್ನು ಮಾಡಿಕೊಡು. ಬೇಕಾದರೆ ಪ್ರತಿಯಾಗಿ ಹತ್ತು ಬಣಿವೆಯಷ್ಟು ಹುಲ್ಲು ಕೊಡೋಣ.

ಬೋಳೇಶಂಕರ : ಅದಾಗದಿದ್ದರೆ?

ಸೈತಾನ : ನಿನ್ನ ರಾಜ್ಯ ಭಸ್ಮವಾಗುತ್ತದೆ. ನಿನ್ನಷ್ಟೇ ಧಡ್ಡಿಯಾದ ಆ ನಿನ್ನ ರಾಣಿ ನಮ್ಮ ರಾಜ್ಯದಲ್ಲಿ ಭಿಕ್ಷೆ ಎತ್ತಬೇಕಾಗುತ್ತದೆ. ನೀನು ಹೊಟ್ಟೆಪಾಡಿಗಾಗಿ ನಮ್ಮ ಜವಾನರ ಮುಂದೆ ಲಾಗ ಹಾಕಿ ಮನರಂಜನೆ

ಒದಗಿಸಬೇಕಾಗುತ್ತದೆ.

ಬೋಳೇಶಂಕರ : ಶಿವನಿಚ್ಛೆ.

ಸೈತಾನ : ಏನಂದೆ?

ಬೋಳೇಶಂಕರ : ಶಿವನಿಚ್ಛೆ ಹಾಗಿದ್ದರೆ ಹಾಗೇ ಆಗಲೇಳು ಅಂದೆ.

ಸರದಾರ : ನನಗೆ ಕೋಪ ಬರುತ್ತಿದೆ.

ಬೋಳೇಶಂಕರ : ಆ ಕೋಪವನ್ನು ಯಾವ ದರಿದ್ರ ಸೈತಾನನಿಂದ ಪಡೆದೆಯೋ ಅದನ್ನ ಅವನಿಗೇ ವಾಪಸ್ ಕೊಡು.

ಸಾವ್ಕಾರ : ಬೋಳೇಶಂಕರಾ ನನ್ನ ಮಾತು ಕೇಳು.

ಬೋಳೇಶಂಕರ : ಈ ತನಕ ಬೇಕಾದಷ್ಟು ಕೇಳಿದ್ದಾಗಿದೆ. ನಿಮ್ಮ ರೋಗಾಣು ನನ್ನ ರಾಜ್ಯದಲ್ಲಿ ಹರಡುವ ಮೊದಲೇ ಇಲ್ಲಿಂದ ಹೊರಡಿ.( ಬೋಳೇಶಂಕರ ಹೋಗುವನು)

## ಹಸಿರ ತುಳಿದರೋ

ಭಾಗವತ : **ಅಣ್ಣತಮ್ಮರು ಸೇರಿ ಗರ್ದಿ ಗಮ್ಮತ್ತಿನಲ್ಲಿ**
**ಸಂಚ ಮಾಡಿ ಪೂರಾ**
**ಶಿವಶಿವ। ಸ್ವಂತ ತಮ್ಮನ ಮ್ಯಾಲಾ**
**ಹರಹರ। ಹಿರಿದಾರ ಹತ್ಯಾರಾ**
**ಏನಮಾಡಿದಾ, ಬೋಳೆ ಶಂಕರಾ**
**ಅಂದಾನ ಹರೋಹರಾ**
**ಬರಿಗೈಲಿ ಮಾಡ್ಯಾನ ನಮಸ್ಕಾರ॥**
**ದಂಡು ದಳಾಯಿ ಬಂದು**
**ಹಸಿರ ತುಳಿದರೋ**
**ಹಾಳ ಮಾಡಿ ಪೂರಾ**
**ಎದ್ದಾವ। ಮುಗಿಲೆತ್ತರ ಧೂಳಾ**
**ಜನಗಳು। ಆದಾರ ಬೇಖಬರಾ**
**ಏನ ಮಾಡಿದಾ, ಬೋಳೇಶಂಕರಾ**
**ಅಂದಾನ. ಹರೋಹರಾ**
**ಬರಿಗೈಲಿ ಮಾಡ್ಯಾನ ನಮಸ್ಕಾರ.**

(ಈ ಹಾಡು ಮುಗಿಯುತ್ತಿರುವಂತೆ ಸೈನಿಕರು ಈಗ ಸೇನಾಪತಿಯ ವೇಷದಲ್ಲಿರುವ

ಸೈತಾನನ ನೇತೃತ್ವದಲ್ಲಿ ಬರುತ್ತಾರೆ)

ಸೈತಾನ : ನಿಂತುಕೊ. (ಸೈನಿಕರು ನಿಲ್ಲುವರು.)
ನೀವು ಹೋಗಿ ಪ್ರತಿಭಟನೆ ಇದೆಯೋ ನೋಡಿ. ಬೆಪ್ತಕ್ಕಡಿಯ ಹಳ್ಳಿಗಳಲ್ಲಿ ಇಲ್ಲದ ಪ್ರತಿಭಟನೆ ರಾಜಧಾನಿಯಲ್ಲಿರಬಹುದು. ಅಲ್ಲಿಲ್ಲದ ಸೈನ್ಯ ಇಲ್ಲಿರಬಹುದು. ಸುಳಿವು ಸಿಕ್ಕ ತಕ್ಷಣವೇ ನಮಗೆ ತಿಳಿಸಿ, ಹೋಗಿ. ಉಳಿದವರು ಕೋವಿಯ ಹಾಡು ಹೇಳಿ.

ಸೈನಿಕ : (ಬಂದು ನಮಸ್ಕರಿಸಿ) ಸ್ವಾಮಿ ನಾವಿಲ್ಲಿ ಯುದ್ಧಮಾಡುವುದು ಸಾಧ್ಯವೇ ಇಲ್ಲ. ಊರಲ್ಲೆಲ್ಲೂ ಸೈನಿಕರ ಸುಳಿವಿಲ್ಲ. ಜನ ನಮ್ಮನ್ನ ಹಳೇ ಸ್ನೇಹಿತರಂತೆ ಪ್ರೀತಿಯಿಂದ ನೋಡ್ತಾರೆ. ಊಟ ತಿಂಡಿ ಕೊಡ್ತಾರೆ. ಹಿಂದೆ ಬೋಳೇಶಂಕರನ ಮೆರವಣಿಗೆಯಲ್ಲಿದ್ದವರು ನೀವಲ್ಲವೇ ನೀವಲ್ಲವೇ? ಅಂತ ಗುರುತು ಹಿಡಿಯುತ್ತಾರೆ. ಇಲ್ಲಿ ಯುದ್ಧ ಮಾಡುವುದು ಸಾಧ್ಯವಿಲ್ಲ ಸ್ವಾಮಿ.

ಸೈತಾನ : ಇವು ಸೈನಿಕನಾಡುವ ಮಾತುಗಳೇನೋ? ಕೈಯಲ್ಲಿ ಬಂದೂಕಿದ್ದರೂ ಒಂದು ಕ್ಷುದ್ರ ಜಗಳ ಕೂಡ ಆಡಿ ಬರದವನು ಸೈನಿಕನೆ?

ಸೈನಿಕ : ನಾವು ಜಗಳದ ಭಾಷೆ ಆಡಿದರೆ ಅವರು ಸ್ನೇಹದ ಭಾಷೆ ಆಡುತ್ತಾರೆ. ನಿಜ ಹೇಳುತ್ತೇನೆ, ಇರುವೆಗೆ ಸಿಟ್ಟಿರಬಹುದು, ಈ ಜನಗಳಲ್ಲಿಲ್ಲ ಸ್ವಾಮಿೊ.

ಸೈತಾನ : ಅವರ ಮನೆಗಳನ್ನು ಲೂಟಿ ಮಾಡಬೇಕಿತ್ತು.

ಸೈನಿಕ : ಏನು ಕೇಳಿದರೂ ಅವರಾಗೇ ಕೊಡುತ್ತಾರೆ. ನಿರ್ಲಕ್ಷದಿಂದ ಏನನ್ನಾದರೂ ಹಾಳು ಮಾಡಿದರೆ ಒಳ್ಳೆಯ ವಸ್ತುಗಳನ್ನೇಕೆ ಹಾಳು ಮಾಡುತ್ತೀರಿ, ನೀವೇ ತೆಗೆದುಕೊಂಡು ಹೋಗಿ ಎನ್ನುತ್ತಾರೆ. ಮಾತ್ರವಲ್ಲ, ನಿಮ್ಮ ಸ್ವಂತ ದೇಶದಲ್ಲಿ ಜೀವನ ನಡೆಸೋದು ಕಷ್ಟವಾಗಿದ್ದರೆ ನಮ್ಮ ಜೊತೆಯಲ್ಲೇ ಇದ್ದು ಬಿಡಿ ಅನ್ನುತ್ತಾರೆ, ಇಂಥವರ ಜೊತೆ.

ಸೈತಾನ : ಮೂರ್ಖ, ಈ ಜನರ ಒಳ್ಳೆಯತನ ನಿಮ್ಮ ಶೌರ್ಯವನ್ನ ಹೀರದಿರಲಿ. ಅವರನ್ನ ಎಲ್ಲ ಅನುಕೂಲಗಳಿಂದ ದೂರ ಇಡಿ. ಮನೆ ಜನ ದನಗಳಿಗೆ ಬೆಂಕಿ ಹಚ್ಚಿ. ಶಿವಪೂರಿನ ಸತ್ಕೀರ್ತಿಯನ್ನ ಕದಿಯಲಾಗದಿದ್ದರೆ ಕೊನೇಪಕ್ಷ ಅದರ ಮುಖಕ್ಕೆ ಮಸಿಯಾದರು ಬಳಿದು ನಿಮ್ಮ ಮರ್ಯಾದೆ ಉಳಿಸಿಕೊಳ್ಳಿ.

ಸೈನಿಕ : ಇದು ಸಾಧ್ಯವಾಗದ ಮಾತು ಸ್ವಾಮಿ.

ಸೈತಾನ : ನನ್ನ ಮಾತು ಕೇಳದವರನ್ನು ಸುಡುತ್ತೇನೆ. ಹೂಂ ತೊಲಗಿ ಈಗಲೇ.
. . (ಸೈನಿಕರು ಅವರ ಹಿಂದಿನಿಂದ ಸೈತಾನ ಹೋಗುವರು)

## ಬರಿಗೈಲಿ ಮಾಡ್ಯಾನ ನಮಸ್ಕಾರ

**(ಬೋಳೇಶಂಕರ ಮತ್ತು ಜನ)**

ಒಬ್ಬ : (ಓಡಿಬಂದು) ಸ್ವಾಮಿ ನಮ್ಮ ತಪ್ಪಿಲ್ಲದಿದ್ದರೂ ನಿಮ್ಮ ಅಣ್ಣನ ಸೈನಿಕರು ಬಂದು ನಮ್ಮ ಮನೆಗಳಿಗೆ ಬೆಂಕಿಯಿಡುತ್ತಿದ್ದಾರೆ.

ಇನ್ನೊಬ್ಬ : (ಓಡಿಬಂದು) ಸ್ವಾಮಿ ನಿಮಗೆ ಬೇಕಿದ್ದರೆ ತಗೊಂಡು ಹೋಗಿರೆಂದರೂ ಕೇಳುತ್ತಿಲ್ಲ ಸೈನಿಕರು ದನಗಳನ್ನು ಕಡಿದು ಕಡಿದು ಚೆಲ್ಲುತ್ತಿದ್ದಾರೆ.

ಮತ್ತೊಬ್ಬ : (ಓಡಿಬಂದು) ಸ್ವಾಮಿ ಸೈನಿಕರು ನನ್ನ ತೋಟಕ್ಕೆ ಬಂದು ಬೇಕಾದಷ್ಟು ಎಳೆನೀರು ಕುಡಿದರು. ಬೇಕಿದ್ದರೆ ಇನ್ನೂ ಕುಡಿಯಿರೆಂದೆ. ಸಾಕಾದಷ್ಟು ಕುಡಿದ ಮೇಲೆ ಮರಗಳನ್ನು ಹಾಗೆ ಹಾಗೇ ಕಡಿದು ಉರುಳಿಸುತ್ತಿದ್ದಾರೆ. ನನ್ನ ಹಸಿರು ಗದ್ದೆಗೆ ಬೆಂಕಿಯಿಟ್ಟಿದ್ದಾರೆ.

ಮಗುದೊಬ್ಬ: (ಓಡಿಬಂದು) ನಿಮಗೇನು ಬೇಕು ಹೇಳಿ ಎಂದೆವು ಅಥವಾ ಹೇಳದೆಯೋ ತೆಗೆದುಕೊಂಡು ಹೋದರೂ ಸರಿಯೆ ಅಂದೆವು. ಅಥವಾ ನಿಮ್ಮ ಕೋಪಕ್ಕೆ ಕಾರಣವಾದರು ಏನೆಂದು ಕೇಳಿದೆವು ಅಥವಾ ನಾವೇನು ಮಾಡಿದರೆ ನಿಮಗೆ ಸಮಾಧಾನವಾಗುತ್ತದೆ–ಅದನ್ನಾದರೂ ಹೇಳಿ ಎಂದೆವು. "ಗೊತ್ತಿದ್ದರೆ ಹೇಳುತ್ತಿರಲಿಲ್ಲವೇನ್ರಯ್ಯಾ" ಅಂತ ಹೇಳಿ ಪುನಃ ಅದೇ ಕಾಯಕ ಸುರುಮಾಡಿದರು. ಕೂದಲಿಗೊಂದು ಗಾದೆ ಬಲ್ಲ ನೀವೇ ನಮಗೆ ದಾರಿ ತೋರಬೇಕು.

ಬೋಳೇಶಂಕರ : ಆಗಲೇಳಿ, ಅವರಿಗೆ ಆತ್ಮ ಇಲ್ಲ ಅಂತ ಖಾತ್ರಿಯಾದ ಮೇಲೆ ನಮ್ಮ ಆತ್ಮಗಳನ್ನಾದರೂ ನಾವು ಉಳಿಸಿಕೊಳ್ಳಬೇಕಲ್ಲ.

ಮತ್ತೊಬ್ಬ : ಅಗೋ ಸೈನಿಕರು ಬಂದರು.

ಬೋಳೇಶಂಕರ : ಬರಲೇಳಿ, ಈ ಸಿಪಾಯಿಗಳು ಬಡಪಾಯಿಗಳು, ಇವರಿಗ್ಯಾಕೆ ಹೆದರುತ್ತೀರಿ? (ಜವಾನರು ಬೋಳೇಶಂಕರಹಾಗೂ ಅವನ ಜನರನ್ನ ಮಧ್ಯೆ ಹಾಕಿ ಸುತ್ತುವರೆಯುವರು. ತಮ್ಮ ಬಂದ ೂಕುಗಳನ್ನು ಜನ ಹಾಗೂ ಬೋಳೇಶಂಕರ ನಿಗೆ ಗುರಿ ಹಿಡಿಯವರು) ಆಯ್ತು ಸ್ವಾಮಿ, ನಿಮಗೇನು ಬೇಕು?

ಸೈನಿಕ : ನಿನ್ನ ಹಾಗೂ ನಿನ್ನ ಜನರ ರಕ್ತ.

ಬೋಳೇಶಂಕರ : ಆಗಲೇಳಿ,

**ಕಲಕಚಿ ಕಲಕಚಿ ರಿಗಚಿ ಲಂಡೋ ಬರಾಯಾ**
**ಸಾಲಕುದರಿ ಹನುಮಂತರಾಯಾ ಬಚ್ಚಾಬೋಲ್**
**ಜವಾನರೆಲ್ಲಾ ಹುಲ್ಲೆಸಳಾಗಿ ನಿಲ್ಲ ಬೇಕಣ್ಣಾ**
**ನಿಲ್ಲದಿದ್ದರೆ ಎಲ್ಲರ ಶಾಪ ನಿನ್ನ ಮೇಲಣ್ಣಾ**

(ಜವಾನರೆಲ್ಲ ಹುಲ್ಲೆಸಳಾಗಿ ಬೀಳುತ್ತಾರೆ. ಸೈತಾನ ಇದನ್ನು ನೋಡಲಾರದೆ ಓಡುತ್ತಾನೆ, ಜನ ಆಶ್ಚರ್ಯದಿಂದ ಹುಲ್ಲೆಸಳನ್ನು ಹಿಡಿದು ನೋಯಿಸ್ತ ಆನಂದಪಡುತ್ತಾರೆ.) ಯಾರು ಹುಲ್ಲೆಸಳಾಗೋದಿಲ್ಲವೋ, ಅವರನ್ನ ಶಿವನ ಹೆಸರಿನಲ್ಲಿ ಕರೆತಂದು ಉಪಚಾರ ಮಾಡಿ.

**ಕಸಿಯೋವಂಥಾ ಅಧಿಕಾರ ದೇವರಂಥಾ ದೇವರಿಗಿಲ್ಲ.**

ಕೋಡಂಗಿ : ಹೋಯ್ ಭಾಗವತರೇ

ಭಾಗವತ : ಯಾಕಯ್ಯಾ ಕೋಡಂಗೀ

ಕೋಡಂಗಿ : ಗೊತ್ತಾಯ್ತಾ ವಿಷಯ?

ಭಾಗವತ : ಏನಪ್ಪಾ?

ಕೋಡಂಗಿ : ನನಗೆ ಅದು ಬಂದು ಬಿಟ್ಟಿತಲ್ಲ.

ಭಾಗವತ : ಏನದು?

ಕೊಡಂಗಿ : ಅದೇ ಬುದ್ದಿ.

ಭಾಗವತ : ಯಾವಾಗ ಬಂತು?

ಕೋಡಂಗಿ : ಆಗಲೇ ಸೈತಾನನ್ನ ನೋಡಿದ ಮೇಲೆ.

ಭಾಗವತ : ಸೈತಾನನ್ನ ನೋಡಿದರೆ ಭಯ ಬರ್ತದೆ; ನಿನಗೆ ಬುದ್ಧಿ ಬಂದಿದೆಯಲ್ಲಯ್ಯಾ.

ಕೋಡಂಗಿ : ನನಗೆ ಬಂದದ್ದೂ ಭಯವೆ. ಆಮೇಲೆ ಅದನ್ನು ಬುದ್ಧಿಯಾಗಿ ಪರಿವರ್ತಿಸಿಕೊಂಡೆ.

ಭಾಗವತ : ಭೇಷ್ ಒಳ್ಳೆ ಕೆಲಸ ಮಾಡಿದೆ. ಹಾಗಿದ್ದರೆ ನನಗಷ್ಟು ಬುದ್ದಿ ಹೇಳಪ್ಪಾ.

ಕೋಡಂಗಿ : ಕಳ್ಳರನ್ನ ಕಂಡಾಗ ಕೊನೇಪಕ್ಷ ಬೊಗಳಬೇಕು.

ಭಾಗವತ : ಸರಿಯೇ.

ಕೋಡಂಗಿ : ವೊವೊವೊವೊ

ಭಾಗವತ : ಯಾಕಯ್ಯಾ ಬೊಗಳಿದೆ?

ಕೋಡಂಗಿ : ಕಳ್ಳರು ಬಂದಿದ್ದಾರೆ ಸ್ವಾಮಿ.

ಭಾಗವತ : ಯಾರಂತೆ ಹೋಗಿ ವಿಚಾರಿಸಿಕೊಂಡು ಬಾ.

ಕೋಡಂಗಿ : (ಹೋಗಿ ನೋಡಿಬಂದು) ಅದೇ ಆ ಜುಜುಬಿ ಸುಲ್ತಾನ ಅಲ್ಲ ಸೈತಾನ.

ಭಾಗವತ : ಯಾಕ್ಬಂದಾನಂತೆ?

ಕೋಡಂಗಿ : (ಹೋಗಿ ಬಂದು)ಅವನಿಗೆ ಹಸಿವಂತೆ, ಸೈತಾನನಾದರೂ ವರ್ಷದಲ್ಲಿ ಒಂದು ದಿವಸ ನಮ್ಮ ನಿಮ್ಮ ಹಾಗೆ ಊಟ ಮಾಡಬೇಕಂತೆ. ಅವನ ದುರ್ದೈವಕ್ಕೆ ಆ ಹಸಿವೆಯ ದಿನ ಇವತ್ತೇ ಅಂತೆ.

ಭಾಗವತ : ಏನು ಊಟ ಮಾಡ್ತಾನಂತೆ?

ಕೋಡಂಗಿ : ಅದನ್ನೇ ಕೇಳಿದೆ; ದೆವ್ವ ಭೂತ, ಗಾಳಿ, ಪಿಶಾಚಿಗಳ, ಗುರು ಅಲ್ಲವ? ಅದಕ್ಕೇ ಸೆಗಣಿ ತಿಂತೀರಾ ಸ್ವಾಮಿ ಅಂದೆ, ಇಲ್ಲವಂತೆ, ಅನ್ನವೇ ಆಗಬೇಕಂತೆ.

ಭಾಗವತ : ಅದಕ್ಕೇನಂತೆ ಕೊಡೋಣ, ಕರಕೊಂಬಾರಯ್ಯಾ.(ಕೋಡಂಗಿ ಹೋಗುವನು, ಸೈತಾನ ಈಗ ಬೇರೆ ವೇಷದಲ್ಲಿ ಬರುವನು. ಜನರೂ ಬರುವರು.)

ಸೈತಾನ : ನನಗೀಗ ಹಸಿವೆಯಾಗಿದೆ. ಅನ್ನಕೊಡಿ. ಪುಕ್ಕಟೆ ಬೇಡ. ಚಿನ್ನದ ನಾಣ್ಯ ಕೊಡುತ್ತೇನೆ.

ಒಬ್ಬ : ಚಿನ್ನ ತಗೊಂಡು ಅನ್ನ ಕೊಡೋದು ಹ್ಯಾಗೆ ಸಾಧ್ಯ? ತೋರಿಸು ನೋಡೋಣ.(ತೋರಿಸುವನು)

ಇನ್ನೊಬ್ಬ : ನಮ್ಮ ರಾಜರು ಮಕ್ಕಳ ಮನರಂಜನೆಗೆ ಆಗಾಗ ಧಾನ್ಯದಿಂದ ಮಾಡುತ್ತಾರಲ್ಲ, ಅವೇ ಅಲ್ಲವೇ ಇವು?

ಒಬ್ಬ : ಹೌದು, ನನ್ನ ಮನೇಲಿ ಮಕ್ಕಳು ಆಡಿಬಿಟ್ಟ ನಾಣ್ಯಗಳೇ ಬೊಗಸೆ ತುಂಬಾ ಇವೆ.

ಇನ್ನೊಬ್ಬ : ಇವನ್ನ ಇಟ್ಕೊಂಡು ಆಡೋದಕ್ಕೆ ನನಗೆ ಸಣ್ಮಕ್ಕಳೇ ಇಲ್ಲ. ನನ್ನ ಹತ್ತಿರ ಆಗಲೇ ಇಂಥ ನಾಣ್ಯಗಳು ಮೂರಿವೆ. ಹಾಗಂತ ನೀನು ನಿರಾಸೆ ಹೊಂದುವುದು ಬೇಡ. ದೇವರ ಹೆಸರಲ್ಲಿ ಒಂದು ಹೊತ್ತು ಊಟ

| | | |
|---|---|---|
| | | ಹಾಕ್ತೇನೆ ಬಾ. |
| ಸೈತಾನ | : | ಥೂ ನನಗೆ ಯಾರದೋ ಹೆಸರಿನಲ್ಲಿ ಊಟ ಬೇಡ್ರಯ್ಯಾ. |
| ಒಬ್ಬ | : | ಪ್ರತಿಯಾಗಿ ಏನನ್ನಾದರೂ ತಗೊಂಡು ಬಾ, ಅದಾಗದಿದ್ದಲ್ಲಿ ಒಪ್ಪತ್ತು ಕೆಲಸ ಮಾಡಿ ಊಟ ಮಾಡು. |
| ಸೈತಾನ | : | ನೀವು ಕೇಳಿದಷ್ಟು ಚಿನ್ನದ ನಾಣ್ಯ ಕೋಡುತ್ತೇನೆ ಸಾಲದೆ? |
| ಇನ್ನೊಬ್ಬ | : | ನಾಣ್ಯ ತಗೊಂಡು ನಾವು ಮಾಡಬೇಕಾದ್ದೇನಿದೆ? ನಮ್ಮಲ್ಲಿ ತೆರಿಗೆಗಳಿಲ್ಲ. ಕೆಲಸದಿಂದ ಕೆಲಸ. ಅನುಕೂಲಗಳನ್ನು ವಿನಿಮಯ ಮಾಡಿಕೊಳ್ತೇವೆ. ಉಪಯೋಗವಿಲ್ಲದ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಂಡು ಮಾಡೋದೇನು? |
| ಸೈತಾನ | : | ದಯವಿಟ್ಟು ಒಂದು ಉಪಕಾರ ಮಾಡ್ತಿರಾ? |
| ಒಬ್ಬ | : | ಖಂಡಿತ, ಅದೇನು ಹೇಳಪ್ಪಾ. |
| ಸೈತಾನ | : | ನನ್ನ ಪಾಡಿಗೆ ನನ್ನ ಬಿಟ್ಟು ಹೊರಟ್ಹೋಗ್ತೀರಾ? |
| ಇನ್ನೊಬ್ಬ | : | ಹೋಗೋಣಂತೆ, ಅದೇನು ಅಸಾಧ್ಯದ ಕೆಲಸ ಅಲ್ಲ, ಆದರೆ ನೀನಾದರೂ ಯಾಕೆ ಹಸಿದಿರಬೇಕು? |
| ಸೈತಾನ | : | ನನ್ನನ್ನ ಸಾಯೋದಕ್ಕಾದರೂ ಬಿಡರಯ್ಯಾ |
| ಇನ್ನೊಬ್ಬ | : | ಎಲ್ಲಾದರೂ ಉಂಟೆ? ನೋಡಯ್ಯಾ, ಬದುಕಿನಲ್ಲಿ ಸಾಯೋದೇನು ಹೊಸದೆ? ಹಾಗೆ ನೋಡಿದರೆ ಬದುಕೂ ಹೊಸದಲ್ಲ. ಎರಡರಲ್ಲಿ ಯಾವುದನ್ನು ಮಾಡಿದರೂ ಊಟ ಮಾಡಿದ ಮೇಲೆ ಮಾಡಬಹುದಲ್ಲ. ನಮ್ಮಲ್ಲಾದರು ಊಟ ಮಾಡು, ಇಲ್ಲವೆ ಬೋಳೇಶಂಕರ ರಾಜರಲ್ಲಾದರೂ ಊಟ ಮಾಡು. |
| ಸೈತಾನ | : | ನೀವು ಹೀಗೇ ಮಾತಾಡ್ತಿದ್ದರೆ ನಾನು ಸತ್ತು ಹೋಗ್ತೇನೆ. |
| ಒಬ್ಬ | : | ಮಾತಾಡದಿದ್ದರೆ ಬದುಕಿರ್ತೀಯಪ್ಪ? ಹಾಗೇ ಆಗಲೇಳು, ಮಾತಾಡೋದಿಲ್ಲ. |
| ಸೈತಾನ | : | ನೀವಿಲ್ಲೇ ಕೂತಿದ್ರೆ ಸಾಯ್ತೀನಿ. |
| ಇನ್ನೋಬ್ಬ | : | ಆಗಲೇಳು, ನಾವು ಹೊರಟೋಗತೀವಿ, ಆದರೆ ಸಾಯಬೇಡ ಅಷ್ಟೆ. |

(ಒಬ್ಬನಿಗೆ) ಬಾರಯ್ಯಾ ಮಹಾರಾಜರಲ್ಲಿಗೆ ಹೋಗಿ ಇವನ ವಿಷಯ ಹೇಳೋಣ.

## ಕೇಳಿ ತಿಳಕೊ ಏನ ಸುದ್ದಿ ಹೇಳಿ ನಮಗಂತ

(ಅರಮನೆ ಬೋಳೇಶಂಕರ, ರಾಣಿ ಊಟದ ಪಂಕ್ತಿಯಲ್ಲಿ ಕೂತ ಜನ)

ಒಬ್ಬ : (ಬಂದು)ಸ್ವಾಮೀ ನಾವೇನು ಮಾಡಬೇಕೋ ತಿಳಿಯುತ್ತಿಲ್ಲ. ಅವನ್ಯಾವನೋ ದೊಡ್ಡಮನುಷ್ಯನೇ ಇರಬೇಕು. ಚೆನ್ನಾಗಿ ಉಂಡು ತಿಂದು ಕುಡಿದು ಒಳ್ಳೆ ಬಟ್ಟೆಬರೆಯಲ್ಲಿ ಇರಬೇಕಂತ ಬಯಸುತ್ತಾನೆ. ಆದರೆ ಕೆಲಸ ಮಾಡೋದಿಲ್ಲ. ದೇವರ ಹೆಸರಿನಲ್ಲಿ ಊಟ ಮಾಡೋದಕ್ಕೂ ನಿರಾಕರಿಸಿದ. ಪುಕ್ಕಟೆ ಬೇಡ, ಪ್ರತಿಯಾಗಿ ಚಿನ್ನಕೊಡ್ತೇನೆ, ಅನ್ನ ಕೊಡಿ ಅಂತಾನೆ. ನಮ್ಮ ಮಕ್ಕಳ ಹತ್ತಿರ ನೀವು ಧಾನ್ಯದಿಂದ ಮಾಡಿಕೊಟ್ಟ ಚಿನ್ನದ ಚೂರುಗಳೇ ಬೇಕಾದಷ್ಟಿವೆ. ಇವನ ಚಿನ್ನ ತಗೊಂಡೇನು ಮಾಡೋಣ? ಆದರೆ ಹೀಗೇ ಬಿಟ್ಟರೆ ಆತ ಹಸಿವೆಯಿಂದ ಸಾಯೋದಂತೂ ನಿಶ್ಚಿತ.

ಬೋಳೇಶಂಕರ : ಆಗಲೇಳಿ, ನಾವು ಅವನಿಗೆ ಅನ್ನ ಹಾಕಲೇಬೇಕು.

ಇನ್ನೊಬ್ಬ : ಅಗೋ ಕೋಡಂಗಿ ಅವನನ್ನ ನಿಮ್ಮಲ್ಲಿಗೇ ಕರೆತರುತ್ತಿದ್ದಾನೆ. (ಸೈತಾನ ಕೋಡಂಗಿಯ ಜೊತೆ ಬರುತ್ತಾನೆ)

ಬೋಳೇಶಂಕರ : ನೋಡಣ್ಣಾ, ನೀನು ಯಾವುದೇ ಮುಜಗರ ಇಲ್ಲದೆ ನಮ್ಮ ಮನೆಯಲ್ಲಿ ಊಟ ಮಾಡಬಹುದು. ಕೋಡಂಗಿ, ಕರೆದುಕೊಂಡು ಹೋಗಿ ಪಂಕ್ತಿಯಲ್ಲಿ ಕೂರಿಸು. (ಕೋಡಂಗಿ ಸೈತಾನನನ್ನು ಊಟದ ಪಂಕ್ತಿಯಲ್ಲಿ ಕೂರಿಸುವನು. ರಾಣಿ ಊಟ ಬಡಿಸುತ್ತ ಬರುವಳು. ಸೈತಾನ ಬಂದೊಡನೆ ನಿಲ್ಲುವಳು)

ರಾಜಕುಮಾರಿ : ಅಯ್ಯಾ ಎಲ್ಲಿ ನಿನ್ನ ಕೈತೋರಿಸು, ನೋಡೋಣ, (ಸೈತಾನ ಎರಡು ಕೈ ತೋರಿಸುವನು)ತಪ್ಪು ತಿಳೀ ಬೇಡಪ್ಪ, ಸ್ವಲ್ಪ ನಿಧಾನಿಸಿ ಆಮೇಲಿನ ಪಂಕ್ತಿಯಲ್ಲಿ ಕೂರು. ಈ ಜನ ಊಟ ಮಾಡಿದ ಮೇಲೆ ನಿನ್ನ ಸರದಿ.

ಬೋಳೇಶಂಕರ : ಯಾರ ಕೈ ಕೆಲಸ ಮಾಡಿ ಜಡ್ಡುಗಟ್ಟಿಲ್ಲವೋ ಅವರ ಊಟ ಆಮೇಲೆ. ಕೆಲಸ ಮಾಡಿದವರು ಊಟ ಮಾಡಿದನಂತರ ಸೋಮಾರಿಗಳ ಊಟ. ನನ್ನ ಹೆಂಡತಿ ನಿನಗೆ ಅದನ್ನೆ ಹೇಳಿದಳು. ಯೋಚನೆ ಬೇಡ, ಆಮೇಲಿನ ಸರದಿ ನಿನ್ನದೇ.

ಸೈತಾನ : ನೀವೆಲ್ಲ ಹಂದಿಗಳ ಹಾಗೆ ವಾಸ ಮಾಡುತ್ತಿದ್ದೀರಿ, ಮನುಷ್ಯರ ಥರ ಜೀವಿಸೋದು ಹ್ಯಾಗೆಂದು ನಿಮಗೆ ಗೊತ್ತೇ ಇಲ್ಲ.

ಬೋಳೇಶಂಕರ : ಹೌದ? ಯಾಕಯ್ಯಾ ಹಾಗಂದೆ?

ಸೈತಾನ : ಪ್ರತಿಯೊಬ್ಬನೂ ತನ್ನ ಕೈಯಿಂದಲೇ ಕೆಲಸ ಮಾಡಬೇಕಂತ ಕಾನೂನು ಮಾಡಿದ್ದು ಈ ನಿನ್ನ ಬೆಪ್ತಕ್ಕಡಿ ರಾಜ್ಯದಲ್ಲಿ ಮಾತ್ರ. ಜನ ಕೈಯಿಂದ ಮಾತ್ರ ಕೆಲಸ ಮಾಡಬೇಕೆ? ಬುದ್ಧಿವಂತರು ಯಾವುದರಿಂದ ಕೆಲಸ ಮಾಡ್ತಾರೇಂತ ನಿನಗೇನಾದರೂ ಗೊತ್ತಿದೆಯಾ?

ಬೋಳೇಶಂಕರ: ನಾವು ಬೆಪ್ತಕ್ಕಡಿಗಳು, ನಮಗೆ ಹ್ಯಾಗೆ ತಿಳೀಬೇಕು? ನಮ್ಮ ಬಹುಪಾಲಿನ ಕೆಲಸವನ್ನೆಲ್ಲಾ ಕೈಗಳಿಂದ, ಬೆನ್ನಿನಿಂದ ಮಾಡುತ್ತೇವೆ.

ಸೈತಾನ : ನೀವು ಬೆಪ್ತಕ್ಕಡಿಗಳಾಗಿರೋದೇ ಅದಕ್ಕೆ ಕಾರಣ. ಆದರೆ ತಲೆಯಿಂದ ಕೆಲಸ ಮಾಡುವುದು ಹೇಗೆಂದು ನಿಮಗೆ ಹೇಳಿಕೊಡುತ್ತೇನೆ. ಆಗ ನಿಮಗೆ ಗೊತ್ತಾಗುತ್ತದೆ. ಕೈಗಳಿಗಿಂತ ತಲೆಯಿಂದ ಕೆಲಸ ಮಾಡುವುದು ಹೆಚ್ಚು ಲಾಭಕರ ಎಂದು.

ಬೋಳೇಶಂಕರ : ಹಾಗಿದ್ದರೆ ನಾವು ಬೆಪ್ತಕ್ಕಡಿಗಳೆನ್ನುವುದು ನಿಜ ಅಂದಂತಾಯ್ತು.

ಸೈತಾನ : ಸಂದೇಹವೇನು? ಕೆಲಸ ಮಾಡಿ ನನ್ನ ಕೈ ಜಿಡ್ಡುಗಟ್ಟಿಲ್ಲವೆಂದು ನನ್ನನ್ನ ಊಟಕ್ಕೆ ಕರೆಸಲಿಲ್ಲ, ಅಲ್ಲವೆ? ಆದರೆ ತಲೆಯಿಂದ ಕೆಲಸ ಮಾಡುವುದು ಅದಕ್ಕಿಂತ ಹೆಚ್ಚು ಕಷ್ಟಕರವಾದದ್ದು. ಕೆಲವು ಸಲ ತಲೆ ಪೂರ್ತಿ ಸಿಡಿದೇ ಹೋಗಬಹುದು.

ಬೋಳೇಶಂಕರ : ಅದೇನೋ ಸರಿಯೇ. ಆದರೆ ಅದ್ಯಾಕಣ್ಣಾ ನಿನಗೆ ನೀನೇ ಅಷ್ಟು ಚಿತ್ರಹಿಂಸೆ ಕೊಟ್ಟುಕೊಳ್ಳುತ್ತೀಯಾ? ತಲೆ ಸಿಡಿದರೆ ಅದೇನು ಸಂತೋಷಕರವೇ? ಕೈಬೆರಳುಗಳಿಂದ ಎಷ್ಟು ಹೊತ್ತು ಕೆಲಸ ಮಾಡಿದರೂ ಅವು ಸಿಡಿಯುವುದಿಲ್ಲ ಗೊತ್ತ? ಹಾಗಿದ್ದಾಗ ಕೈಬೆರಳುಗಳನ್ನೇ ಯಾಕೆ ಉಪಯೋಗಿಸಬಾರದು?

ಸೈತಾನ : ತಲೆ ಸಿಡಿದರೂ ಪರವಾಗಿಲ್ಲ. ಬೆಪ್ಪತಕ್ಕಡಿಗಳಾದ ನಿಮ್ಮ ಮೇಲಿನ ಮರುಕದಿಂದಲೇ ಅದನ್ನೆಲ್ಲಾ ನಾನು ಮಾಡುವುದು. ನಾನು ಅಷ್ಟು ಚಿತ್ರಹಿಂಸೆ ಕೊಟ್ಟುಕೊಳ್ಳದಿದ್ದರೆ ನೀವು ಕೊನೆಯುವರೆಗೂ ಬೆಪ್ತಕ್ಕಡಿಗಳಾಗೇ ಇರುತ್ತೀರಿ. ಆದರೆ ನಾನು ಸ್ವತಃ ತಲೆಯಿಂದ ಕೆಲಸ ಮಾಡುವ ಮೂಲಕ ನಿಮಗೆ ಕಲಿಸಿಕೊಡಬಲ್ಲೆ.

ಬೋಳೇಶಂಕರ : ಅಗತ್ಯವಾಗಿ ಕಲಿಸಿಕೊಡು ಮಾರಾಯಾ. ಛಳಿಗಾಲದಲ್ಲಿ ನಮ್ಮ ಕೈ

ಸೆಟೆದುಕೊಂಡಾಗ ಕೈಗೆ ಬದಲು ತಲೆಯಿಂದ ಕೆಲಸ ಮಾಡಬಹುದು. ಅಯ್ಯಾ ಕೋಡಂಗಿ, ನಮ್ಮ ರಾಜ್ಯಕ್ಕೊಬ್ಬ ದೊಡ್ಡ ಮನುಷ್ಯ ಬಂದಿದ್ದಾನೆ. ತಲೆಯಿಂದ ಕೆಲಸ ಮಾಡೋದನ್ನ ಕಲಿಸಿಕೊಡ್ತಾನೆ. ಜನ ಎಲ್ಲರೂ ಊರಾಚೆ ಎತ್ತರವಾದ ಗೋಪುರ ಇದೆಯಲ್ಲಾ, ಅಲ್ಲಿ ಸೇರಬೇಕೆಂದು ಡಂಗುರ ಸಾರು.

ಕೋಡಂಗಿ : ಅಗಲಿ.

## ಜಯಾ ಜಯಾ ಶಿವಪೂರಿಗೆ

(ಎತ್ತರವಾದ ಗೋಪುರದ ಮೇಲೆ ಸೈತಾನ ನಿಂತಿದ್ದಾನೆ. ಕೆಳಗೆ ಬೋಳೇಶಂಕರ, ರಾಜಕುಮಾರಿ ಮತ್ತು ಜನ)

ಸೈತಾನ : ನನ್ನ ಪ್ರೀತಿಯ ಬೆಪ್ತಕ್ಕಡಿಗಳೇ ಕೇಳಿ, ಮನುಷ್ಯ ಬರೀ ಕೈಯಿಂದಲೇ ಕೆಲಸ ಮಾಡಿ ಬದುಕ ಬೇಕಾದ್ದಿಲ್ಲ. ನಿಮಗೊಂದು ತಲೆ ಇದೆ–ಅನ್ನೋದನ್ನ ಮರೆಯಬೇಡಿ. ದುರ್ದೈವದ ಸಂಗತಿ ಯೆಂದರೆ ತಲೆ ಖಾಲೀ ಇಟ್ಟುಕೊಳ್ಳೋದೇ ನಿಮ್ಮಲ್ಲಿ ಫ್ಯಾಶನ್ನಾಗಿಬಿಟ್ಟಿದೆ.

ಒಬ್ಬ : ತಲೆಯಿಂದ ಕೆಲಸ ಮಾಡೋದೇನೋ ಸರಿ. ಹಾಗೆ ಕೆಲಸ ಮಾಡುತ್ತ ನಡೀಬೇಕಾದರೆ ಕಾಲಿನಿಂದ ನಡೀಬೇಕ? ತಲೆಯಿಂದ ನಡೀಬೇಕ?

ಇನ್ನೊಬ್ಬ : ಹ್ಯಾಗೋ ಆ ದೊಡ್ಡಮನುಷ್ಯ ತೋರಿಸೋನಿದ್ದಾನಲ್ಲವ? ನೋಡೋಣ ಇರು.

ಕೋಡಂಗಿ : ಇದು ತಲೆ ಅಂತ ನಿನಗೆ ಗೊತ್ತಿದೆಯಲ್ಲ, ಅದೇನೂ ಸಣ್ಣ ಸಾಧನೆ ಅಲ್ಲ. ಆದರೆ ಅದನ್ನು ಉಪಯೋಗಿಸಬೇಕು ಅಂತಾನಲ್ಲ ಅದು ಸಮಸ್ಯೆ.

ಮತ್ತೊಬ್ಬ : ನನ್ನ ಹತ್ತಿರ ಕೈ ಇದೆ, ಉಪಯೋಗಿಸ್ತೀನಿ. ಆ ದೊಡ್ಡ ಮನುಷ್ಯನ ಹತ್ತಿರ ತಲೆ ಇದೆ ಉಪಯೋಗಿಸ್ತಾನೆ. ಇದರಲ್ಲಿ ಭಿನ್ನಾಭಿಪ್ರಾಯ ಯಾಕೆ ಬರಬೇಕು?

ಸೈತಾನ : ಕೆಳಗೆ ಯಾಕೆ ಗಲಾಟೆ ಮಾಡ್ತಿದ್ದೀರಿ?

ಕೋಡಂಗಿ : ಗಲಾಟೆ ಅಲ್ಲ ನಮ್ಮ ನಮ್ಮ ಅಭಿಪ್ರಾಯ ಹೇಳ್ತಾ ಇದ್ದೀವಿ. ನಾಲ್ಕು ಜನ ಅಂದಮೇಲೆ ಭಿನ್ನಾಭಿಪ್ರಾಯ ಇರಬಹುದಲ್ಲ?

ಸೈತಾನ : ಅದನ್ನ ಆಮೇಲೆ ವಿನಿಯೋಗಿಸಿಕೊಳ್ಳಿ, ಮೊದಲು ಲಕ್ಷವಿಟ್ಟು ನನ್ನ ಮಾತು ಕೇಳಿ, ಹತ್ತು ಚೀಲ ಜೋಳ ಅಂದರೆ ಇಬ್ಬರು ರೈತರ ಆರು

ತಿಂಗಳ ಶ್ರಮ ಅಲ್ಲವೇ? ತಲೆಯ ಉಪಯೋಗ ಇರೋದೇ ಇಲ್ಲಿ. ನೀವು ನಾಣ್ಯಗಳನ್ನು ಬಳಕೆಗೆ ತಂದರೆ ಹತ್ತು ಚೀಲ ಧಾನ್ಯವನ್ನು ಕೈಬೆರಳೆಣಿಕೆಯಷ್ಟು ನಾಣ್ಯವಾಗಿ ಪರಿವರ್ತಿಸಿಬಹುದು. ಆ ನಾಣ್ಯಗಳನ್ನ ಚಲಾವಣೆಗೆ ತಂದರೆ ಬೊಗಸೆಯಷ್ಟು ನಾಣ್ಯದಲ್ಲಿ ಸಾವಿರ ಜನರ ಒಂದು ವರ್ಷದ ಶ್ರಮ ಕೊಳ್ಳಬಹುದು. ಶ್ರಮವನ್ನು ಅಗ್ಗವಾಗಿ ಕೊಳ್ಳುವ ಹಾಗೂ ಮಾರುವ ಫ್ಯಾಕ್ಟರಿಗಳನ್ನ ಮಾಡಿ ಜನಕೋಟಿಯನ್ನ ಕೈಯಲ್ಲಿಟ್ಟು ಕೊಳ್ಳಬಹುದು. ಇದೆಲ್ಲ ನೀವು ನಿಮ್ಮ ತಲೆಯಲ್ಲಿಯ ಬುದ್ಧಿ ಉಪಯೋಗಿಸೋದರಿಂದ ಸಾಧ್ಯ.

ಮಗದೊಬ್ಬ : ನಮ್ಮ ಬೋಳೇಶಂಕರ ಮಹಾರಾಜರು ಹೇಳೋದೇನು? ಕೈಯಿಂದ ಕೆಲಸ ಮಾಡೋದರಿಂದ ಬುದ್ದಿ ಬರ್ತದೆ, ಬೆವರೂ ಬರ್ತದೆ, ಬೆವರು ಒರೆಸಿಕೊಂಡು ಬುದ್ದಿ ಕಲಿಯೋನು ಜಾಣ ಅಂತ ಅಲ್ಲವ? ಅವರ ಮಾತು ತಿಳಿದ ಹಾಗೆ ಈ ದೊಡ್ಡ ಮನುಷ್ಯನ ಮಾತು ತಿಳಿಯೋದಿಲ್ಲವಲ್ಲ, ಯಾಕಿದ್ದೀತು?

ಕೋಡಂಗಿ : ಯಾಕೆಂದರೆ ನಿನಗೆ ತಲೆ ಇದೆ; ಆದರೇನೂ ತಿಳಿಯೋದಿಲ್ಲ ಅದಕ್ಕೆ.

ಒಬ್ಬ : ಈ ದೊಡ್ಡ ಮನುಷ್ಯ ತಲೆಯಿಂದ ಕೆಲಸ ಮಾಡೋದಕ್ಕೆ ಇನ್ನೂ ಸುರು ಮಾಡಿಲ್ಲವೆ?

ಮತ್ತೊಬ್ಬ : ಇನ್ನೂ ಇಲ್ಲ. ಅವನಿನ್ನೂ ಮಾತು ಸುರಿಸುತ್ತಿದ್ದಾನೆ.

ಸೈತಾನ : ಬೆಪ್ತಕ್ಕಡಿ ಬಂಧುಗಳೇ, ನನ್ನ ಮಾತುಗಳನ್ನ ಕೇಳಿ. ನಗರದ ಸುಖಗಳಿಂದ ನೀವೆಲ್ಲ ವಂಚಿತರಾಗಿದ್ದಿರಿ, ನೀವು ಒಮ್ಮೆ ತಲೆಯ ಬೆಲೆ ತಿಳಿದಿರಾದರೆ ಸ್ವರ್ಗದ ಸುಖಗಳನ್ನ ಸೂರೆ ಮಾಡುವ ಸಿಟಿ ಕಟ್ಟಬಹುದು. ಸುಖಗಳ ಸಂಖ್ಯೆ ಹಾಗೂ ದಾಹಗಳನ್ನು ದಿನದಿನಕ್ಕೆ ಹೆಚ್ಚಿಸುವ ಸಿಟಿ ಕಟ್ಟ ಬಹುದು. ಶ್ರಮವನ್ನೇ ವಿನಿಯೋಗಿಸೋದು ಅಂದರೆ ನಾಗರಿಕತೆಯನ್ನು ಆದಿಮ ಸ್ಥಿತಿಗೆ ಒಯ್ಯೋದು. ಬಂಧುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ, ಹಿಂದೆ ಹಿಂದಲ್ಲ. ನಿಮ್ಮ ಬೆಪ್ತಕ್ಕಡಿ ರಾಜನಿಗೆ ತಲೆ ಇಲ್ಲವಾದುದರಿಂದ ಇವೆಲ್ಲ ಮಾತು ತಿಳಿಯವುದಿಲ್ಲ. ತನಗಿಲ್ಲದ ತಲೆ ನಿಮಗೂ ಇರದ ಹಾಗೆ ಮಾಡಿದ್ದು ಅವನ ವಿಶೇಷ ಸಾಧನೆ. ಆದರೆ ನೀವು ಜಾಣರಾಗಬೇಕು. ನನ್ನ ಮಾತು ತಿಳಿಯುತ್ತಿವೆಯ?

ಮತ್ತೊಬ್ಬ : ತಿಳಿಯುತ್ತಿವೆ. ಆದರೆ ನೀವು ತಲೆಯಿಂದ ಕೆಲಸ ಸುರು ಮಾಡೋದು ಯಾವಾಗ?

ಒಬ್ಬ : ಮಾತು ನಿಲ್ಲಿಸಿ ಬೇಗ ಕೆಲಸ ಸುರು ಮಾಡಿ, ನಾವು ನಿಂತು ಬಹಳ ಹೊತ್ತಾಯಿತು. ನಾನಿನ್ನೂ ದನಕ್ಕೆ ನೀರು ಕುಡಿಸಬೇಕು.

ಸೈತಾನ : ಬಂಧುಗಳೇ ನನ್ನ ಮಾತನ್ನು ಕೇಳಿ, ತಾರಾಸಮರದಿಂದ ಮಾನವ ಕೋಟಿಯನ್ನು ಗುಲಾಮರನ್ನಾಗಿಸುವ ಸುಖ ಬೇಕೆ? ಅಂತರಿಕ್ಷದಲ್ಲಿ ತಾರಾನಿವಹಗಳ, ಗೂಢವರಿಯುತ್ತ ಅಲ್ಲಿಂದಲೇ ಇಲ್ಲಿಯ ಇಡೀ ಮಾನವಕುಲ ನಿಮ್ಮ ದಯದಲ್ಲಿ ಬದುಕುವ ಹಾಗೆ ಮಾಡಬೇಕೇ? ಕೂತಲ್ಲೇ ಬಟನ್ನೊತ್ತಿ ಜಗತ್ತನ್ನು ನಾಶಪಡಿಸುವ ಇಲ್ಲವೆ ನಿಯಂತ್ರಿಸುವ ಸಾಮಾರ್ಥ್ಯ ಬೇಕೆ? ಹಾಗಿದ್ದರೆ ಈಗಿನಿಂದಲೇ ತಲೆಯನ್ನು ಉಪಯೋಗಿಸುವ ವಿದ್ಯೆ ಕಲಿತುಕೊಳ್ಳಿ.

ಮತ್ತೊಬ್ಬ : ನೀನು ಹೇಳಿಕೊಟ್ಟರೆ ತಾನೆ? ಬರೀ ಭಾಷಣ ಮಾಡುತ್ತಿದ್ದೀಯಪ್ಪ. ನಿನ್ನ ತಲೆ ಕೆಲಸ ನೋಡಿ ನಾನಿನ್ನೂ ಹೊಲಕ್ಕೆ ಹೋಗಬೇಕು. ಬೇಗ ಹೇಳಿಕೊಡಬಾರದೆ?

ಒಬ್ಬ : ತಲೆಯಿಂದ ಕೆಲಸ ಮಾಡೋದಕ್ಕೆ ಮುಂಚೆ ಹೀಗೆ ಭಾಷಣ ಮಾಡಬೇಕೊ ಏನೊ.

ಸೈತಾನ : ನಿಮಗೆ ಹ್ಯಾಗೆ ತಿಳಿಸಿ ಹೇಳಲಿ?

ಮತ್ತೊಬ್ಬ : ನಮಗೆಲ್ಲ ತಿಳಿದಿದೆ. ಈಗ ತಲೆಯಿಂದ ಕೆಲಸ ಮಾಡೋದನ್ನ ತೋರಿಸಪ್ಪ ಅಂದರೆ

ಸೈತಾನ : ನಿಮಗೆ ಹೇಳಿ ಹೇಳಿ ನನ್ನ ತಲೆ ಖಾಲಿ ಅಯಿತಷ್ಟೆ

ಬೋಳೇಶಂಕರ : ಕೆಲಸಾನೇ ಸುರು ಮಾಡಿಲ್ಲವಲ್ಲ ಮಾರಾಯಾ.

ಸೈತಾನ : ನಿಮಗೆ ಹೇಳಬಹುದು ಅಂತ ಅಂದುಕೊಂಡೆನಲ್ಲ, ನನ್ನ ಮೂರ್ಖತನಕ್ಕೆ ಮಿತಿ ಇದೆಯೆ?

ಕೋಡಂಗಿ : ಅದು ಕೂಡ ನಿನಗೇ ಗೊತ್ತು.

ಸೈತಾನ : ಅಯ್ಯಾ ಅಯ್ಯಾ ಬೆಪ್ಪಕ್ಕಡಿಗಳಾ. . . . .(ತಲೆ ತಲೆ ಚಚ್ಚಿಕೊಳ್ಳುವನು)

ಕೋಡಂಗಿ : ಅಗೊ ನೋಡಿ ತಲೆಯಿಂದ ಕೆಲಸ ಮಾಡೋದಕ್ಕೆ ಶುರು ಮಾಡಿದ!

ಒಬ್ಬ : ಅಗೋ ಅವನ ತಲೆಯಿಂದ ನೆತ್ತರು ಸೋರುತ್ತಿದೆ!

ಬೋಳೇಶಂಕರ : ಅಯ್ಯಾ ಗೆಳೆಯಾ, ಯಾಕಿಷ್ಟು ಚಿತ್ರಹಿಂಸೆ ಮಾಡಿಕೊಳ್ಳುತ್ತೀಯಾ? ತಲೆಯಿಂದ ಕೆಲಸ ಮಾಡೋದು ಹೀಗೆ ತಾನೆ? ಗೊತ್ತಾಯ್ತು ಬಿಡು. ಇಂಥ ಭಯಂಕರ ವಿದ್ಯೆ ಹೇಳಿಕೊಟ್ಟದ್ದಕ್ಕಾಗಿ ನಿನಗೆ ವಂದನೆಗಳು,

ಹೇಳಿಕೊಟ್ಟ ಮಾತ್ರಕ್ಕೆ ನಾವು ತಲೆಯಿಂದ ಕೆಲಸ ಮಾಡಲೇ ಬೇಕಂತ ಕಡ್ಡಾಯವೇನಿಲ್ಲವಲ್ಲ! ಶಿವ ನಿನಗೆ ಒಳ್ಳೇದ್ಮಾಡಲಿ.

ಸೈತಾನ : ಏನಂದೆ?

ಬೋಳೇಶಂಕರ : ಶಿವ ನಿನಗೆ ಒಳ್ಳೇದ್ಮಾಡಲಿ ಅಂದೆ.

ಸೈತಾನ : ಥೂ ಚಂಡಾಲ ಎಂಥಾ ಮಾತನ್ನಾಡಿದೆ. . . . .

ಕೋಡಂಗಿ : ಆಗೋ ಮಿತ್ರ, ಅಲ್ಲಿ ನೋಡು ನೆತ್ತರಾಡುವ ಅವನ ಮುಖದಲ್ಲಿ ಕೋರೆಹಲ್ಲು ಕೊಂಬು ಮೂಡುತ್ತಿವೆ!

ಬೋಳೇಶಂಕರ : ಇವನು ಹಿಂದಿನ ಪಿಶಾಚಿಗಳ ತಂದೆ ಅಲ್ಲವೇನಯ್ಯಾ?

ಕೋಡಂಗಿ : ಹೌದು! ಶಿವಶಿವ ಶಂಕರ, ಬೋಳೇಶಂಕರ ಬೋಂ ಭೋಂ ಶಂಕರ.

ಜನ : ಬೋಂ ಭೋಂ ಶಂಕರ ಬೋಳೇಶಂಕರ .

ಸೈತಾನ : (ತಿರುಗಿ ತಿರುಗಿ) ನಿಲ್ಲಿಸ್ರೋ ನಿಲ್ಲಿಸ್ರೋ.(ಕಿರುಚುತ್ತಲೇ ಅಲ್ಲಿಂದ ನೆಲಕ್ಕೆ ಬೀಳುವನು).

ಬೋಳೇಶಂಕರ : ನೋಡಿದಿರಾ ಬಂದುಗಳೇ,ತಲೆಯಿಂದ ಕೆಲಸ ಮಾಡಬಹುದು ಅನ್ನೊದನ್ನ ಈ ಮನುಷ್ಯ ತೋರಿದ್ದೇನೋ ಸರಿಯೆ, ಆದರೆ ತಲೆಯಿಂದ ಕೆಲಸ ಮಾಡಿದರೆ, ನೀವೇ ನೋಡಿದರಲ್ಲ, ತಲೆ ಸಿಡಿಯುತ್ತದೆ. ಆದ್ದರಿಂದ ನಾವು ಮೊದಲಿನ ಹಾಗೆ ಕೈ ಮತ್ತು ಬೆನ್ನುಗಳಿಂದ ಕೆಲಸ ಮಾಡೋದೇ ವಾಸಿ.

ಒಬ್ಬ : ಇದರಲ್ಲಿ ಅನುಮಾನವೇ ಇಲ್ಲ, ನಿಮ್ಮ ತಕರಾರಿಲ್ಲವಾದರೆ ನೀವು ಸೈನಿಕರಿಗೆ ಕಲಿಸಿದ ನಮ್ಮೂರಿನ ಹಾಡು ಹೇಳಬಹುದೊ?

ಬೋಳೇಶಂಕರ : ಆಗಲೇಳಿ, ಅದಕ್ಕೇನಂತೆ

ಇನ್ನೊಬ್ಬ : ಅಲ್ಲಿ ಇಬ್ಬರು ನಿಂತಿದ್ದಾರಲ್ಲ ಈ ಕಡೆ ಬೆನ್ನು ತಿರುಗಿಸಿ. ಅವರನ್ನೂ ಸೇರಿಸಿ ಕೊಳ್ಳೋಣವೆ?

ಬೋಳೇಶಂಕರ : ಯಾರವರು?

ಕೋಡಂಗಿ : ರಾಜ್ಯ ಕಳೆದುಕೊಂಡ ನಿನ್ನ ಅಣ್ಣಂದಿರು. ನಿಮ್ಮೂರಿಗೆ ಬರೋಣವೇ ಅಂತ ಕೇಳುತ್ತಿದ್ದಾರೆ.

ಬೋಳೇಶಂಕರ : ಆಗಲೇಳಿ, ಅವರೂ ನಮ್ಮೊಟ್ಟಿಗಿರಲಿ, ಎಲ್ಲರೂ ಕೂಡಿ ಹಾಡೋಣ, ಎಲ್ಲಿ ಹಾಡು ಸುರು ಮಾಡಿ.

ಎಲ್ಲರು : **ಜಯ ಜಯಾ ಶಿವಪೂರಿಗೆ**
**ಹಸಿರಿನ ತವರೂರಿಗೆ**
**ಹಾಡು ಬೆಳೆವ ಕಾಡಿಗೆ**
**ನಮ್ಮ ಛಳಿಗೆ ಬಿಸಿಯಾಗುವ**
**ಯೌವನವನು ಕಾಪಾಡುವ**
**ಮುಳ್ಳಿನಲ್ಲು ಹೂಹೂಗಳ**
**ನಗೆಯ ನಗುವ ಸೀಮೆಗೆ**
**ಜಯ ಜಯ ಶಿವಪೂರಿಗೆ**

## ನಾಟಕ–ನಾಟಕಕಾರರು: ಡಾ. ಚಂದ್ರಶೇಖರ ಕಂಬಾರ (೧೯೩೭)



ಡಾ. ಚಂದ್ರಶೇಖರ ಕಂಬಾರರ ಹುಟ್ಟೂರು ಬೆಳಗಾವಿ ಜಿಲ್ಲೆಯ ಘೋಡಗೇರಿ. ತಂದೆ ಬಸವಣ್ಣೆಪ್ಪ ಕಂಬಾರ, ತಾಯಿ ಚೆನ್ನಮ್ಮ. ತಮ್ಮ ವಿಶಿಷ್ಟ ಸಾಹಿತ್ಯ ರಚನೆಯ ಮೂಲಕ ಕನ್ನಡನಾಡಿನ ಗಮನ ಸೆಳೆದಿರುವ ಕಂಬಾರರು ದ.ರಾ.ಬೇಂದ್ರೆಯವರ ನಂತರ ಉತ್ತರ ಕರ್ನಾಟಕ ಭಾಗದ ಜಾನಪದ ಭಾಷೆಯ ಸೊಗಡನ್ನು ತಮ್ಮ ಕೃತಿಗಳ ಮೂಲಕ ಕನ್ನಡಿಗರಿಗೆ ಉಣಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದ ಇವರು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿ, ಕರ್ನಾಟಕ ನಾಟಕ ಅಕಾಡಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೊಟ್ಟಮೊದಲ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯದ ಸ್ಥಿತ್ಯಂತರ ಹಾಗು ಚಳವಳಿಗಳ ದೃಷ್ಟಿ–ಧೋರಣೆಗಳನ್ನು ಕರಗತ ಮಾಡಿಕೊಂಡು ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮ ಛಾಪನ್ನು ಅಚ್ಚೊತ್ತಿದ್ದಾರೆ. ಕಂಬಾರರು ಕವಿ, ನಾಟಕಕಾರ, ನಟ, ಚಲನಚಿತ್ರ ಹಾಗೂ ಸಂಗೀತ ನಿರ್ದೇಶಕ, ಜಾನಪದ ತಜ್ಞ, ಉತ್ತಮ ಆಡಳಿತಗಾರ. ಜೊತೆಗೆ ಅಧ್ಯಾಪಕರು.

ಅಣ್ಣತಂಗಿ, ಕರಿಮಾಯಿ, ಜಿಕೆ ಮಾಸ್ತರ ಪ್ರಣಯ ಪ್ರಸಂಗ, ಶಿಖರ ಸೂರ್ಯ ಸಿಂಗಾರವ್ವ ಮತ್ತು ಅರಮನೆ – ಇವರ ಕಾದಂಬರಿಗಳು. ಮುಗುಳು, ಹೇಳತೇನ ಕೇಳಾ, ತಕರಾರಿನವರು, ಬೆಳ್ಳಿಮೀನು, ಅಕ್ಕಕ್ಕು ಹಾಡುಗಳು ಇವರ ಕವನ ಸಂಕಲನಗಳು. ಋಷ್ಯಶೃಂಗ, ಹರಕೆಯಕುರಿ, ಸಂಗ್ಯಾಬಾಳ್ಯ, ನಾರ್ಸಿಸಿಸ್, ಜೋಕುಮಾರಸ್ವಾಮಿ, ಪುಷ್ಪರಾಣಿ, ಸಿರಿಸಂಪಿಗೆ, ಜೈಸಿದನಾಯ್ಕ, ಬೆಂಬೆತ್ತಿದ್ದ ಕಣ್ಣು ಮುಂತಾದ ನಾಟಕಗಳನ್ನು ಬರೆದಿದ್ದಾರೆ, ಜಾನಪದ, ರಂಗಭೂಮಿ, ಸಾಹಿತ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ

ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ. 'ಚಕೋರಿ' ಎಂಬ ಮಹಾಕಾವ್ಯವನ್ನೂ ರಚಿಸಿದ್ದಾರೆ. ಕರಿಮಾಯಿ, ಸಂಗೀತಾ, ಕಾಡು–ಕುದುರೆ, ಸಿಂಗಾರೆವ್ವ ಮತ್ತು ಅರಮನೆ ಚಲನಚಿತ್ರಗಳಿಗೆ ಸಂಗೀತ ಸಂಯೋಜಿಸಿ, ನಿರ್ದೇಶಿಸಿರುವುದು ಇವರ ಸೃಜನಶೀಲತೆಯ ದ್ಯೋತಕ.

ನಾಡೋಜ, ಪದ್ಮಶ್ರೀ, ಕುಮಾರನ್ ಆಶನ್, ಠ್ಯಾಗೋರ್ ಹಾಗೂ ಕಬೀರ ಸಮ್ಮಾನ್ ಪ್ರಶಸ್ತಿ ಪಡೆದಿರುವ ಇವರು ತಮ್ಮ ಸಮಗ್ರ ಸಾಹಿತ್ಯ ರಚನೆಗಾಗಿ ೨೦೧೧ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿದ್ದಾರೆ. ೨೦೦೪ ರಿಂದ ೨೦೧೦ ರ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ನೇಮಕಗೊಂಡಿದ್ದರು.

**ಪದಕೋಶ:**

ಬೋಳೆ–ಮುಗ್ಧ, ಸಾಧು(ಮುಕ್ತ ವ್ಯಕ್ತಿತ್ವ ಹೊಂದಿದ); ಐಲೀಕಡೆ–ಇತ್ತೀಚೆಗೆ; ಬೆಪ್ಪಕ್ಕಡಿ–ತಿಳಿಗೇಡಿ, ಧಡ್ಡ; ಆದಿಮ– ಮೂಲದ, ಆದಿಕಾಲದ; ಮಜಬೂತ–ಸೊಗಸಾದುದು, ಬಲವಾದುದು; ಕಿಲುಬು–ಕೊಳೆ, ಹೊಲಸು; ಮೆಳೆ–ಪೊದೆ; ಮರಡಿ–ಗುಡ್ಡ; ಗಿಟ್ಟು–ಗಳಿಸು, ಪಡೆ; ಪೈಕಿ–ಕಡೆ, ಸಂಬಂಧಿಸಿದವ; ದ್ರಾಬೆ–ಮೂರ್ಖ, ದುರ್ಬಲ ವ್ಯಕ್ತಿ, ನಿಷ್ಪ್ರಯೋಜಕ; ತಂತ್ರಿ–ಉಪಾಯಗಾರ, ಪಿತೂರಿಗಾರ; ಹಂಗಾಮು–ಹಾವಳಿ, ಗಲಾಟೆ; ಸೊಲಗಿ–ಅಳತೆಯ ಸಾಧನ; ಐಷಾರಾಮ–ವಿಲಾಸಿ; ಗಳೆಸಾಮಾನು– ಬೇಸಾಯದ ಪರಿಕರಗಳು; ರುಂಭಾಲು–ರುಮಾಲು, ಪೇಟ; ಲಫಂಗ–ಪುಂಡ, ದುರಾಚಾರಿ; ಸಗ್ಗುವ–ಕುಗ್ಗುವ; ಮಜಕೂರು–ಸುದ್ದಿ; ಜಾಪಾಳಮಾತ್ರೆ–ಭೇದಿಮಾತ್ರೆ; ಮಲೆತು–ಗರ್ವದಿಂದ; ಗರ್ದಿಗಮ್ಮತ್ತು–ಗತ್ತುಗೈರತ್ತು; ಹತ್ಯರ–ಆಯುಧ; ಬೇಖಬರಾ–ಅರಿವಿಲ್ಲದ.

**I. ಸಂದರ್ಭ ಸೂಚಿಸಿ ವಿವರಿಸಿ:**

೧. ಬ್ಯಾಂಕಿನಲ್ಲಿ ಕೂಡಿಸಿಟ್ಟು ಮದುವೆ ಆದ ಮೇಲೆ ಹೆಂಡತಿಗೆ ಕೊಡ್ತೀನಿ.

೨. ಇವನಿಗೇನು ಹೆಂಡತೀನೇ? ಮಕ್ಕಳೆ?

೩. ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು.

೪. ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ನಾನೇನು ಸಾಯುವುದಿಲ್ಲ.

೫. ನಾನೇನಾದರೂ ರಾಜನಾದರೆ ನಿಮ್ಮಂಥ ಸೋಂಬೇರಿಗಳಿಗೆ ಊಟ ಹಾಕೋದೇ ಇಲ್ಲ.

೬. ಹೆಣ್ಣಿದ್ದ ಮನೆಯ ಸೌಭಾಗ್ಯವೇ ಬೇರೆ.

೭. ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ ಕಾಣಯ್ಯ ನಾನು

೮. ರಾಜಕುಮಾರಿಗೆ ಬಂದಿರೋದು, ರಾಜರೋಗ.

೯. ರಾಜರಾಣಿಯರಿಂದ ಹಿಡಿದು ಎಲ್ಲರೂ ದುಡಿಯುತ್ತಾರೆ.

೧೦. ದಾರಿತಪ್ಪಿದವರಿಗೆ ಗಾದೆ ಬಲ್ಲವರು ಬುದ್ಧಿ ಹೇಳುತ್ತಾರೆ.

೧೧. ಚಿನ್ನ ತಿಂದು ಬದುಕಲಾಗುತ್ತ!

೧೨. ಜನ ಎಲ್ಲಿ ಸೇರಿದರೆ ಅಲ್ಲೇ ದರ್ಬಾರು.

೧೩. ನಾವು ಜಗಳದ ಭಾಷೆ ಆಡಿದರೆ ಅವರು ಸ್ನೇಹದ ಭಾಷೆ ಆಡುತ್ತಾರೆ.

೧೪. ಕೆಲಸ ಮಾಡಿದವರು ಊಟ ಮಾಡಿದ ನಂತರ ಸೋಮಾರಿಗಳ ಊಟ

೧೫. ತಲೆಯಿಂದ ಕೆಲಸ ಮಾಡುವುದು ಹೇಗೆಂದು ನಿಮಗೆ ಹೇಳಿಕೊಡುತ್ತೇನೆ.

೧೬. ಬಂಧುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ ಹಿಂದೆ ಹಿಂದಲ್ಲ.

## II. ಒಂದು ವಾಕ್ಯದಲ್ಲಿ ಉತ್ತರಿಸಿ:

೧. ಬೋಳೇಶಂಕರನ ಊರು ಯಾವುದು?

೨. ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಉಂಟಾದ ಆಸೆ ಯಾವುದು?

೩. ಪಿಶಾಚಿಗಳು ಮನುಷ್ಯರನ್ನು ಯಾವುದರ ಮೂಲಕ ಪ್ರವೇಶಿಸುತ್ತವೆ?

೪. 'ಬದುಕಿನ ಬಗ್ಗೆ ಅವನಿಗೆ ಒಂದೂ ತಕರಾರಿಲ್ಲ' ಎಂದು ಪಿಶಾಚಿಯು ಯಾರ ಬಗ್ಗೆ ಹೇಳುತ್ತದೆ?

೫. ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ?

೬. ಬೋಳೇಶಂಕರನ ಹೊಟ್ಟೆನೋವು ಯಾವುದರಿಂದ ಮಾಯವಾಯಿತು?

೭. ಬೋಳೇಶಂಕರ ಎಲ್ಲಿ ಕುಳಿತು ಊಟ ಮಾಡಬೇಕೆಂದು ಅವನ ಅತ್ತಿಗೆ ಹೇಳುತ್ತಾಳೆ?

೮. ಬೋಳೇಶಂಕರನಿಂದ ಬೇರು ಕಿತ್ತು ಕೊಳ್ಳಲು ಪಿಶಾಚಿ ಯಾವ ವೇಷದಲ್ಲಿ ಬರುತ್ತದೆ?

೯. ರಾಜಕುಮಾರಿಗೆ ಬಂದ ರೋಗ ಯಾವುದು?

೧೦. ಹುಡುಗಿಯರ ಹಾಡಿಗೆ ಬೋಳೇಶಂಕರ ಬಹುಮಾನವಾಗಿ ಏನನ್ನು ಕೊಡುವನು?

೧೧. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?

೧೨. ಕತ್ತಲೆಯ ನಿಜ ಜನಕನು ಯಾರು?

೧೩. ಅಣ್ಣಂದಿರಿಗೆ ಯಾವ ರೋಗ ಹಿಡಿದಿದೆ ಎಂದು ಬೋಳೇಶಂಕರ ಹೇಳುತ್ತಾನೆ?

## IV. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:

೧. ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?

೨. ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?

೩. ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?

೪. ಕೋಡಂಗಿಯು ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?

೫. ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?

೬. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?

೭. ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ?

೮. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?

೯. ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

೧೦. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

## V.. ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:

೧. ಬೊಳೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೇಗೆ ಪರಿಚಯಿಸುತ್ತಾರೆ?

೨. ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು?

೩. ಬೋಳೇಶಂಕರನ ನಾಣ್ಯ ಹಾಗು ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ.

೪. ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ತಿಳಿಸಿ.

೫. ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?

೬. ಸೈನಿಕರು ಹಾಡಿದ ಸಿಟಿ ಹಾಡಿನ ಸಾರಾಂಶವೇನು?

೭. ಸೈತಾನನು ತನ್ನ ಪರಿಚಯ ಮಾಡಿಕೊಂಡ ಬಗೆ ಹಾಗೂ ಬಂದಂಥ ಕಾರಣವನ್ನು ತಿಳಿಸಿ.

೮. ಬೋಳೇಶಂಕರ ತನ್ನ ಅಣ್ಣಂದಿರಿಗೆ ಸಿಪಾಯಿ ಮತ್ತು ನಾಣ್ಯಗಳನ್ನು ಮಾಡಿಕೊಡಲು ಏಕೆ ನಿರಾಕರಿಸುತ್ತಾನೆ?

೯. ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ?

೧೦. ಸೈನಿಕರು ಏನೇನನ್ನು ನಾಶ ಮಾಡಿದರು ಎಂದು ಶಿವಪುರದ ಜನರು ಹೇಳುತ್ತಾರೆ?

೧೧. ಚಿನ್ನ ತೆಗೆದುಕೊಂಡು ಅನ್ನ ಕೊಡಿ ಎಂದ ಸೈತಾನನಿಗೆ ಶಿವಪುರದ ಜನರು ಹೇಗೆ ಪ್ರತಿಕ್ರಯಿಸಿದರು?

೧೨. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.

೧೩. "ಶ್ರಮಜೀವನ ಹಾಗೂ ಸರಳ ಬದುಕನ್ನು ರೂಢಿಸಿಕೊಂಡವರಿಗೆ ಪಿಶಾಚಿಗಳು ಏನು ಮಾಡಲಾರವು" ಎಂಬುದು ನಾಟಕದಲ್ಲಿ ಹೇಗೆ ಮೂಡಿ ಬಂದಿದೆ?

೧೪. 'ಹಸಿರೇ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟ ಪಡಿಸಿದ್ದಾರೆ? ವಿಮರ್ಶಿಸಿ.

**ಹೆಚ್ಚಿನ ಓದು :** **ಕಂಬಾರರ ಎಲ್ಲ ನಾಟಕಗಳು**
**ಐವಾನ್ ದ ಈಡಿಯೆಟ್ – ಅನು: ಎಲ್. ಗುಂಡಪ್ಪ**
**(ಟಾಲ್‌ಸ್ಟಾಯ್ ಕಥೆಗಳು)**

**ದುಡಿಮೆಯೇ ದೇವರು – ಗಾದೆ**

# ತಂಬಾಕು ದುಷ್ಪರಿಣಾಮಗಳು-ಆರೋಗ್ಯ ಜೀವನದ ಅಪ್ಪುಗೆ

ಅಪಾರವಾದ ಮಾಹಿತಿ ಇದ್ದಾಗಲೂ, ನಿರಂತರ ತಂಬಾಕು ಬಳಕೆಯಿಂದಾಗುತ್ತಿರುವ ಸಾವುಗಳು ವ್ಯಾಪಕವಾಗಿ ಹೆಚ್ಚಾಗುತ್ತಿವೆ.

ಅಂತರಾಷ್ಟ್ರೀಯ ರೋಗಗಳ ವರ್ಗೀಕರಣ (ICD) ವಿಭಾಗದ ಪ್ರಕಾರ ತಂಬಾಕು ಬಳಕೆಯನ್ನು ಇನ್ನೆಂದು ಒಂದು ಹವ್ಯಾಸ ಎಂದುಕೊಳ್ಳದೆ ಇದೊಂದು ಆರೋಗ್ಯದ ಸಮಸ್ಯೆ ಎಂದು ವರ್ಗೀಕರಿಸಿದೆ.

ಅತ್ಯಲ್ಪ ಪ್ರಮಾಣದ ತಂಬಾಕು ಕೂಡ ಸುರಕ್ಷಿತವಲ್ಲ. ಒಬ್ಬ ತಂಬಾಕು ವ್ಯಸನಿಯು ತಂಬಾಕು ಸಂಬಂಧಿ ಖಾಯಿಲೆಗೆ ಒಳಗಾದಲ್ಲಿ 50%ರಷ್ಟು ಅವನು ಅವಧಿಗೂ ಮುನ್ನ ಸಾಯುವ ಸಂಭವವಿದೆ. ಪ್ರತಿವರ್ಷ ತಂಬಾಕಿನಿಂದಾಗಿ ಸುಮಾರು 40 ಲಕ್ಷ ಜನರು ಅವಧಿಗೂ ಮುನ್ನ ಸಾವನ್ನಪ್ಪಿದ್ದಾರೆ. ಈ ಸಾಂಕ್ರಮಿಕ ಮಾರಿ 25 ಕೋಟಿಯಷ್ಟು ಜೀವಂತವಾಗಿರುವ ಮಕ್ಕಳು ಹಾಗೂ ವಯಸ್ಕರನ್ನು ಕೊಲ್ಲುವ

ಅಮೇರಿಕಾದ ವೈದ್ಯಕೀಯ ಒಕ್ಕೂಟದ ಪ್ರಕಾರ: ತಂಬಾಕಿನ ಮೇಲೆ ಅತಿಯಾಗಿ ಅವಲಂಬಿತವಾಗಿರುವುದು, ಅಧಿಕ ರಕ್ತದೊತ್ತಡ ಅಥವಾ ಮಧುಮೇಹದಂತಹ ದೀರ್ಘಕಾಲದ ಅನಾರೋಗ್ಯಕ್ಕೆ ಇಡುಮಾಡುವುದು ಮತ್ತು ಒಬ್ಬ ರೋಗಿಗೆ ಇದರಿಂದ ಯಶಸ್ವಿಯಾಗಿ ಗುಣಮುಖವಾಗಲು, ವೈದ್ಯರಿಗೂ ಕೂಡ ರೋಗಿಗೆ ದೀರ್ಘಕಾಲದ ಚಿಕಿತ್ಸೆ ನೀಡುವುದು ಅನಿವಾರ್ಯವಾಗುವುದು.

ತಂಬಾಕು ಅನೇಕ ಪ್ರಕಾರಗಳಲ್ಲಿ ಬಳಸಲ್ಪಡುತ್ತದೆ. ಅವೆಂದರೆ ಧೂಮಪಾನ– ಸೀಗರೇಟು, ಬೀಡಿ; ಜಗಿಯುವ–ಪಾನ್, ಖೈನಿ; ಹಲ್ಲುಗಳಿಗೆ ಅಥವಾ ಮೂಗಿಗೆ ಹಚ್ಚಿಕೊಳ್ಳುವ–ಮಶೇರಿ, ನಾಸಿಪುಡಿ ಅಥವಾ ನಸ್ಯ.

ತಂಬಾಕು 4000ರಕ್ಕಿಂತಲೂ ಅಧಿಕ ರಾಸಯನಿಕಗಳನ್ನು ಒಳಗೊಂಡಿದ್ದು ಇದರಲ್ಲಿ 60ಕ್ಕೂ ಅಧಿಕ ರಾಸಯನಿಕಗಳು ಕ್ಯಾನ್ಸರ್ ರೋಗಕಾರಕವಾಗಿವೆ. ಇವುಗಳಲ್ಲಿ ಕೆಲವೊಂದು ಪಾಲಿಸೈಕ್ಲಿಕ್ ಆರೋಮ್ಯಾಟಿಕ್ ಹೈಡ್ರೋಕಾರ್ಬನಗಳು (PAH) ಬೆಂಜೋ (a) ಪೈರೀನ್, ತಂಬಾಕು ಸೀಮಿತ – ನೈಟ್ರೋಸಮೈನ್ – ನೈಟ್ರೊಸೊನೊರೊನಿಕೊಟಿನ್ – ಬೆನೆಜ್, ಲೋಹಗಳು ಮತ್ತು ಅಸಾವಯವ ಸಂಯುಕ್ತಗಳು – ಆರ್ಸೇನಿಕ್, ನಿಕ್ಕೆಲ್, ಕ್ರೋಮಿಯಂ, ಕ್ಯಾಡ್‌ಮಿಯಂ, ಪೊಲೆನಿಯಮ್–210

ಹರಿ ಹರೆಯದ ಪ್ರಾಯದ ಯುವಕರು ಈ ದುಶ್ಚಟಕ್ಕೆ ಬಲಿಯಾಗುವುದಲ್ಲದೆ ಆರೋಗ್ಯದ ಮೇಲುಂಟಾಗುವ ಪರಿಣಾಮಗಳ ಅರಿವಿಲ್ಲದೆ ಅತಿಯಾದ ಒತ್ತಡಕ್ಕೆ ಒಳಗಾಗುತ್ತಾರೆ. ಜಗತ್ತಿನಲ್ಲಿ ತಡೆಯಬಹುದಾದ ಸಾವುಗಳಲ್ಲಿ ತಂಬಾಕು ಕಾರಣವೇ ಒಂದು ಅತ್ಯಂತ ದೊಡ್ಡ ಕಾರಣವಾಗಿದೆ. ತಂಬಾಕು ಬಳಕೆಯ ಪ್ರತಿಕೂಲವು ದೇಹದ ಪ್ರತಿಯೊಂದು ಜೀವಕೋಶದ ಮೇಲೆ ಪರಿಣಾಮ ಬೀರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಖಾಯಿಲೆಗಳೆಂದರೆ ಕ್ಯಾನ್ಸರ್, ಹೃದಯಾಘಾತ, ಹೊಡೆತಗಳು, ತೀರ್ವತಡೆ ಒಡ್ಡುವ ಶ್ವಾಸಕೋಶ ಸಂಬಂಧಿ ರೋಗಗಳು, ಬಾಹ್ಯ ನಳೀಯ ರೋಗಗಳು ಮತ್ತು ಅಧಿಕ ರಕ್ತದೊತ್ತಡ.

ಪ್ರತಿ ಘಂಟೆಗೆ ಕ್ಯಾನ್ಸರ್ ರೋಗದಿಂದಾಗಿ ಕಡಿಮೆಯೆಂದರೂ 50 ಜನ ಭಾರತದಲ್ಲಿ ಕೊಲ್ಲಲ್ಪಡುತ್ತಾರೆ ಮತ್ತು 100 ಹೊಸ ರೋಗಿಗಳನ್ನು ಪಡೆಯುತ್ತದೆ. ಭಾರತವು ಜಗಿಯುವ ತಂಬಾಕನಿಂದಾಗುವ ಬಾಯಿ ಕ್ಯಾನ್ಸರ್ ರೋಗದ ಭಾರಿ ಸಂಖ್ಯೆಯ ರೋಗಿಗಳನ್ನು ಒಳಗೊಂಡಿದೆ.

ಸರಿಸಮವಾಗಿ ಸೇದಿಬಿಟ್ಟ ಹೊಗೆ ಅಥವ ನಿಷ್ಕ್ರೀಯ ಧೂಮಪಾನವು ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಇದನ್ನು ಸೇವಿಸಿದ ಅನೇಕರು ಧೂಮಪಾನಿಗಳು ಸೇವಿಸುವ ಪ್ರಮಾಣದಷ್ಟೆ ರಾಸಯನಿಕಗಳನ್ನು ಸೇವಿಸುತ್ತಾರೆ. ಹಾಗಾಗಿ ಸಾರ್ವಜನಿಕ ಪ್ರದೇಶಗಳಲ್ಲಿ ಸರ್ಕಾರವು ಮೇಲಿನ ಚಿತ್ರವು ಧ್ವನಿಪೆಟ್ಟಿಗೆಯನ್ನು ಕಳೆದುಕೊಂಡ ಮಹಿಳೆಗೆ ಸೇರಿದ್ದಾಗಿದೆ. ತಮ್ಮ ಕಾರ್ಯಸ್ಥಾನ(ಕಚೇರಿಯಲ್ಲಿ)ದಲ್ಲಿ ನಿರಂತರ ಸೇದಿಬಿಟ್ಟ ಹೊಗೆ ಅಥವಾ ನಿಷ್ಕ್ರೀಯ ಧೂಮಪಾನ ಸೇವಿಸುವುದೇ ಪ್ರಮುಖ ಕಾರಣ ಎಂದು ಕಂಡುಬಂದಿದೆ.



**BEFORE**





**AFTER**

